ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ಸಾಧನೆ

ಸಂಪುಟ 23 ಸಂಚಿಕೆ 3–4

ಜುಲೈ –ಡಿಸೆಂಬರ್ 1994

ಸಾಧನೆ

— ೧. ೪. ೧೯೯೫

ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

SADHANE : Kannada Quarterly of the Bangalore University, Bangalore. Vol. 23 Nos. 3-4 July—December 1994

ವಾರ್ಷಿಕ ಚಂದಾ :	ರೂ. 15-00	
ವಿದ್ಯಾರ್ಥಿಗಳಿಗೆ	ರೂ. 10-00	(ದೃಢೀಕರಣ ಪತ್ರವನ್ನು ಕಳುಹಿಸಬೇಕು)
ಆಜೀವ ಸದಸ್ಯತ್ವ	ರೂ. 150-00	

ಪ್ರಕಾಶಕರು :
ಎಸ್. ಕೆಂಡಗಣ್ಣಸ್ವಾಮಿ
ನಿರ್ದೇಶಕ
ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ
ಜ್ಞಾನಭಾರತಿ, ಬೆಂಗಳೂರು

ಮುದ್ರಣ :
ಎಸ್. ಎಂ. ಹೊನ್ನಪ್ಪ
ಕಾರ್ಯನಿರ್ವಾಹಕ ನಿರ್ದೇಶಕ
ಬೆಂಗಳೂರು ವಿಶ್ವವಿದ್ಯಾಲಯ ಮುದ್ರಣಾಲಯ

ಮುನ್ನುಡಿ

ಸಾಧನೆಯು ಈ ಸಂಚಿಕೆಯ ಮುನ್ನುಡಿಯನ್ನು ಆರಂಭಿಸುವಲ್ಲಿ ಸಂತಸ ಮತ್ತು ವಿಷಾದಗಳೆರಡೂ ಒಟ್ಟಿಗೆ ಆಗುತ್ತದೆ. ಏಕೆಂದರೆ ಕಳೆದ ವರ್ಷ ಕನ್ನಡದ ಕೆಲವು ಮಹತ್ವ ಲೇಖಕರು ಪ್ರಶಸ್ತಿ ಗಳಿಸಿಕೊಂಡದ್ದು ಸಂತಸದ ವಿಷಯವಾದರೆ, ಇನ್ನು ಕೆಲವು ಧೀಮಂತ ಲೇಖಕರು ನಮ್ಮನ್ನು ಅಗಲಿರುವುದು ವಿಷಾದದ ಸಂಗತಿಯಾಗಿದೆ.

ಕನ್ನಡ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಹಲವು ಬಗೆಗಳಲ್ಲಿ ಸಾಹಿತ್ಯ ಕೃಷಿ ಯಲ್ಲಿ ಸಾಧನೆಗಳನ್ನು ಮಾಡಿ ನಮ್ಮನ್ನಗಲಿದ್ದಾರೆ. ಅವರಲ್ಲಿ ಜನಸಾಮಾನ್ಯರಿಗೂ ಮೆಚ್ಚಿಗೆಯಾಗುವಂತಹ ಸಾಮಾಜಿಕ ನಾಟಕಗಳನ್ನು ರಚಿಸಿ ಕಾಲೇಜು ರಂಗಭೂಮಿಗೆ ಹೊಸ ಚಾಲನೆಯನ್ನು ನೀಡಿದ ಶ್ರೀ ಪರ್ವತವಾಣಿ, ತಮ್ಮ ಸಾಮಾಜಿಕ ಕಾದಂಬರಿಗಳ ಮೂಲಕ ಜನಪ್ರಿಯತೆಯನ್ನು ಪಡೆದ ಶ್ರೀಮತಿ ಎಂ. ಕೆ. ಇಂದಿರಾ, ಕಾದಂಬರಿ, ಸಂಶೋಧನೆ, ವಿಮರ್ಶಾ ವಲಯಗಳಲ್ಲಿ ಮಹತ್ವದ ಕೃತಿಗಳನ್ನು ಬರೆದು ಖ್ಯಾತರಾದ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತ ಡಾ॥ ಎಚ್. ತಿಪ್ಪೇರುದ್ರಸ್ವಾಮಿ, ಕನ್ನಡ ಕವಿಗಳ ಕವನಗಳನ್ನು ತಮ್ಮ ಭಾವಪೂರ್ಣ ಗಾಯನದಿಂದ ಕರ್ನಾಟಕದ ಮನೆಮನೆಗೆ ತಲುಪಿಸಿದ ಮೈಸೂರು ಅನಂತಸ್ವಾಮಿ ಇವರೆಲ್ಲ ಕಣ್ಮರೆಯಾಗಿರುವುದು ದುಃಖದ ಸಂಗತಿಯಾಗಿದೆ.

ಇವೆಲ್ಲಕ್ಕಿಂತ ಹೆಚ್ಚಾಗಿ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಗೆ ತಮ್ಮ ಬರವಣಿಗೆ, ಆಲೋಚನೆ ಮತ್ತು ಕ್ರಿಯಾಶೀಲತೆಗಳ ಮೂಲಕ ಜೀವ ತುಂಬಿದ ಕನ್ನಡದ ವಿಶ್ವಕವಿ ಯುಗದಕವಿ 'ಜ್ಞಾನಪೀಠ ಪ್ರಶಸ್ತಿ ವಿಜೇತರಾದಂತಹ ಶ್ರೀ ಕುವೆಂಪುರವರು ನಮ್ಮಿಂದ ಅಗಲಿರುವುದು ತುಂಬ ವಿಷಾದವಾದ ಸಂಗತಿಯಾಗಿದೆ. ಕಾವ್ಯ, ನಾಟಕ, ಕಾದಂಬರಿ, ಸಣ್ಣಕತೆ, ವಿಮರ್ಶೆ, ಪ್ರಬಂಧ, ಆತ್ಮಚರಿತ್ರೆ, ಅನುವಾದ ಹೀಗೆ ಆಡುಮುಟ್ಟದ ಸೊಪ್ಪಿಲ್ಲ'ವೆನ್ನುವಂತೆ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲೂ ಸಾಹಿತ್ಯಕೃಷಿ ಮಾಡಿ ತಮ್ಮ ಪ್ರತಿಭೆಯ ಮಿಂಚನ್ನು ಹರಿಸಿದ ಹಾಗೂ ವಿಶ್ವಮಾನವ ಸಂದೇಶವನ್ನು ಜಗತ್ತಿಗೇ ಸಾರುತ್ತಲೇ ಆ ಶಾಂತಿ ಮಂತ್ರದ ಮೌನದಲ್ಲಿ ಅನಿಕೇತನವಾದರು. ಶ್ರೀರಾಮಾಯಣ ದರ್ಶನಂ, ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು, ಬೆರಳ್ಗೆ–ಕೊರಳ್, ಶೂದ್ರತಪಸ್ವಿ, ವಿಭೂತಿ ಪೂಜೆ. ತಪೋನಂದನ ಹಾಗೂ ಇನ್ನಿತರ ಅಮೂಲ್ಯ ಅನನ್ಯ ಕೃತಿಗಳನ್ನು ಕನ್ನಡಿಗರಿಗೆ ಬಿಟ್ಟು ಹೋದರು. ಕನ್ನಡ ನಾಡು–ನುಡಿಯ ಅಭಿಮಾನ, ನಿಷ್ಠೆ, ಗೌರವಗಳನ್ನು ತಮ್ಮ ಅನೇಕ ಶಕ್ತಿಶಾಲೀ ಕವನ,

ಭಾಷಣಗಳ ಮೂಲಕ ವ್ಯಕ್ತಪಡಿಸಿದರು. ಕನ್ನಡ ಸಾಹಿತ್ಯ ಲೋಕದ ಈ ಅಗ್ರ ಕವಿಯನ್ನು ಅರಸಿಕೊಂಡು ಅನೇಕ ಪ್ರಶಸ್ತಿಗಳು ಬಂದವು. ಜ್ಞಾನಪೀಠ, ಪಂಪ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ವಿಶ್ವವಿದ್ಯಾಲಯಗಳ ಗೌರವ ಡಾಕ್ಟರೇಟ್‌ಗಳು, ಪದ್ಮಭೂಷಣ, ಪದ್ಮವಿಭೂಷಣ, ಕರ್ನಾಟಕರತ್ನ ಇವುಗಳನ್ನು ಹೆಸರಿಸಬಹುದು.

ನಿಧನರಾದ ಈ ಲೇಖಕರಿಗೆ, ಹಿರಿಯರಿಗೆ ಸಾಧನೆ ಶ್ರದ್ಧಾಂಜಲಿ ಅರ್ಪಿಸುತ್ತದೆ.

* * *

ಕನ್ನಡದ ಲೇಖಕರು ಇತರ ಭಾರತೀಯ ಭಾಷೆಗಳ ಲೇಖಕರಿಗಿಂತ ಹೆಚ್ಚಾಗಿ ಪ್ರಶಸ್ತಿ, ಗೌರವ ಅಭಿನಂದನೆಗಳಿಗೆ ಪಾತ್ರರಾಗುತ್ತಿರುವುದು ಹೆಚ್ಚು ಸಂತೋಷ ತರುವ ಸುದ್ದಿಯಾಗಿದೆ. ಹಾಗೂ ಇದರ ಜೊತೆ ಕನ್ನಡ ಸಾಹಿತ್ಯಲೋಕ ಹೆಚ್ಚು ಕ್ರಿಯಾಶೀಲವಾಗಿದೆ ಎಂಬುದನ್ನು ತೋರಿಸುತ್ತದೆ.

ಭಾರತದ ಸಾಹಿತ್ಯ ಕ್ಷೇತ್ರದ ಅತ್ಯುನ್ನತ ಪ್ರಶಸ್ತಿಯಾದ 'ಜ್ಞಾನಪೀಠ' ಈ ಬಾರಿ ಕನ್ನಡದ ಇತ್ತೀಚಿನ ಮುಖ್ಯ ಲೇಖಕರು ಹಾಗೂ ವಿಮರ್ಶಕರಾದ ಡಾ॥ ಯು. ಆರ್. ಅನಂತಮೂರ್ತಿಯವರಿಗೆ ಬಂದಿರುವುದು ಸಂತಸದ ಸುದ್ದಿ. 'ಸಂಸ್ಕಾರ', ಅವಸ್ಥೆ, ಭಾರತೀಪುರ, ಕಾದಂಬರಿಗಳು ಹಾಗೂ ಸನ್ನಿವೇಶ, ಸಮಕ್ಷಮ, ಪೂರ್ವಾಪರ, "ಪ್ರಜ್ಞೆ ಮತ್ತು ಪರಿಸರ"—ವಿಮರ್ಶಾ ಸಂಕಲನಗಳ ಮೂಲಕ ಮತ್ತು ಸಮಾಜವಾದೀ ಚಿಂತನೆಗಳ ಮೂಲಕ ಕನ್ನಡದ ಬೌದ್ಧಿಕ ಜಗತ್ತನ್ನು ವಿಸ್ತರಿಸಿದ್ದಾರೆ. ಕನ್ನಡದ ಇನ್ನೊಬ್ಬ ಮುಖ್ಯ ಬರಹಗಾರರಾದಂತಹ ಹಾಗೂ ಜ್ಞಾನಪೀಠ ಪ್ರಶಸ್ತಿ ವಿಜೇತರಾದಂತಹ ಡಾ॥ ಶಿವರಾಮ ಕಾರಂತರಿಗೆ ವೃಕ್ಷಮಿತ್ರ ಪ್ರಶಸ್ತಿ ಹಾಗೂ ಉತ್ತಮ ರಂಗ ನಿರ್ದೇಶಕರಾದಂತಹ ಬಿ. ವಿ. ಕಾರಂತರಿಗೆ ಕಾಳಿದಾಸ ಸಮ್ಮಾನ್ ಹೆಸರಾಂತ ನಾಟಕಕಾರರಾದಂತಹ ಗಿರೀಶ್ ಕಾರ್ನಾಡ್‌ರವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಹಾಗೂ ಕೊಗ್ಗ ಕಾಮತರಿಗೆ ತುಳಸಿ ಸಮ್ಮಾನ್, ಹೀಗೆ ಇನ್ನು ಕೆಲವು ಪ್ರಶಸ್ತಿ ಪಡೆದುಕೊಂಡ ಲೇಖಕರು, ವಿಮರ್ಶಕರು ಇವರೆಲ್ಲ ಹಲವು ಪ್ರಶಸ್ತಿ ಪಡೆದು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಸೃಷ್ಟಿಶೀಲ ಸಾಧ್ಯತೆಗಳನ್ನು ಹೆಚ್ಚಿಸಿದ ಈ ಎಲ್ಲ ಲೇಖಕರಿಗೆ ಹಿರಿಯರಿಗೆ ಈ ಸಂದರ್ಭದಲ್ಲಿ ಸಾಧನೆ ಅಭಿನಂದಿಸುತ್ತದೆ.

ಸಂಪಾದಕೀಯ

ಪರಿವಿಡಿ ಪುಟ

ಆಧುನಿಕ ವಾಲ್ಮೀಕಿಗೆ

ದೊಡ್ಡರಂಗೇಗೌಡ

ಸೌಂದರ್ಯದ ಸನ್ನಿಧಿಯಲಿ
ಸೃಜನ ಸಿರಿಯ ಕಂಡ ಕವಿಯೇ,
ಶಾರದೆಯ ನಿಜ ಕೃಪೆಯಲಿ
ಸಾಹಿತ್ಯ ಸಿದ್ಧಿ ಪಡೆದ ಕವಿಯೇ,
ಬಣ್ಣನೆಗೆಟುಕದ ವ್ಯಕ್ತಿತ್ವ ನಿಮ್ಮದು
ನಿಮ್ಮಭಿಮಾನಿಯ ಕಂಬನಿ ನಿಲ್ಲದು !

ಬರಹದಲಿ ನೀವು ನಡೆದುದೇ ಹಾದಿ
ಹರಿಯಿತು ನಿಮ್ಮಿಂದ ಪ್ರತಿಭಾ ನದಿ,
ಮಿನುಗಿತು ಸೊಗಸಿಂದ ಸಾಹಿತ್ಯ ನಿಧಿ
ಬೆಳೆಯಿತು ಕಾವ್ಯದ ಕಲ್ಪನಾ–ಪರಿಧಿ !
"ಯುಗದ ಕವಿಯೇ ಜಗದ ಕವಿಯೇ"
ಕಂಡಿತು ನಿಮ್ಮಿಂದ ನಾಡು ತನ್ನಯ ಘನತೆ.

ನಿತ್ಯ ನಿತ್ಯ ನುಡಿದಿರಿ ನೀವು
ಮಾನವೀಯತೆಯ ಮಹಾನ್ ಮಂತ್ರ,
ಸಿಡಿದೊಡೆಯದಂತೆ ಜಗದ ಇರವು
ಸಾರಿದಿರಿ ವಿಶ್ವ ಮಾನವ ಸೂತ್ರ ;

ಓ ! ಪವಿತ್ರ ಪ್ರೇಮ ಪ್ರವಾದಿ
ನಿಮಗಿಂತ ಸಲ್ಮೆಯ ಹಾಡುಗಾರರುಂಟೇ ?
ಮಾತಿನಲೆ ಅಲೆಯಲ್ಲಿ ಧ್ವನಿ ಮೂಡಿಸಿದ ಹೃದಯ ಸ್ಪಂದಿ
ನಿಮಗಿಂತ ಮಿಗಿಲು ಆಚಾರ್ಯರುಂಟೇ ?

ಮಣ್ಣಲ್ಲೂ ಮುಗಿಲಲ್ಲೂ
ಮಲೆಯಲ್ಲೂ ಶಿಲೆಯಲ್ಲೂ
ಹೂವಲ್ಲೂ ಹಣ್ಣಲ್ಲೂ
ಹಕ್ಕಿಯಲೂ ಚುಕ್ಕಿಯಲೂ
ನುಡಿನಂದನಂಗಳ ನಿರ್ಮಿಸಿದ ನೂತನ ಬ್ರಹ್ಮ ನೀವು

ಪರಿ ಪರಿ ಪಾಡಲ್ಲೂ ಪುಟವಿಟ್ಟ ಚಿನ್ನವಾದ
ರಾಮು ನಿಮ್ಮ ಲೇಖನಿಯಲ್ಲಿ ಪುರುಷೋತ್ತಮನಾದ

ಪುಟ ಪುಟದ ಪಂಕ್ತಿಯಲೂ ಆದರ್ಶದ ಮೇರುವಾದ
ಹೂವಯ್ಯ ನಿಮ್ಮ ಆಲೋಚನೆಯಲ್ಲಿ ಅನುಪಮನಾದ

ನುಡಿ ನುಡಿಯು ಒಡಲಲ್ಲೂ ಗುರುವನೇ ಮೀರಿಸಿದ
ಏಕಲವ್ಯ ನಿಮ್ಮ ಲಹರಿಯಲ್ಲಿ ಮಾದರಿಯ ಮನುಜನಾದ

ನಿಮ್ಮಿಂದ ಮಲೆನಾಡ ಕಣ ಕಣಕ್ಕೂ ಮಹತ್ವ
ಚಿರಂತನ ಕಾವ್ಯದಲಿ ಚೆಲುವಿಕೆಯ ಅಸ್ತಿತ್ವ

ನಿಮ್ಮ ಬರಹಕ್ಕೆ ನಿಮ್ಮದೇ ಗಂಭೀರ ವ್ಯಕ್ತಿತ್ವ
ನೀವಿತ್ತಿರಿ ನಿಮ್ಮ ಅಭಿವ್ಯಕ್ತಿಗೆ ಪರಂಪರೆಯ ಸತ್ವ,

ನಿಮ್ಮಂಥ ಹಿರಿಯರು ಬರುವರೇನು ಮತ್ತೆ ?
ನಿಮ್ಮಂಥ ರಸಋಷಿಗಳು ಸಿಗುವರೇನು ಮತ್ತೆ ?

ಕನ್ನಡವೇ ಸತ್ಯವೆಂದು
ಕನ್ನಡವೇ ನಿತ್ಯವೆಂದು
ಕಾಮಧೇನು ಕಲ್ಪವೃಕ್ಷ ಎಲ್ಲ ಕನ್ನಡವೆಂದು
ಶ್ರದ್ಧೆಯಲಿ ಸಾಹಿತ್ಯ ಗದ್ದೆ ಗೆಯ್ದು
ಭಾವಗೀತೆಯ ಬತ್ತ ಬಿತ್ತಿ ಬೆಳೆದು
ಮಹಾಕಾವ್ಯ ಮಂಡಲದ ಪ್ರಶಸ್ತಿಯನ್ನ ಪಡೆದು

ಮುತ್ತಾದಿರಿ ಸ್ವತ್ತಾದಿರಿ ಕನ್ನಡಕ್ಕೆ
ಹೊನ್ನಾದಿರಿ ಕಣ್ಣಾದಿರಿ ಕನ್ನಡಕ್ಕೆ

ನ್ಯಾಯವಾದ ನಡೆ ನುಡಿಗೆ ನೇಹವಾಗಿ
ಕಲಾ ಸಂಶೋಧನೆಗೆ ಕಟ್ಟಾಳು ಕಣ್ಮಣಿಯಾಗಿ

ವಿಶ್ವ ಗೀತೆಯ ಉಲಿದುಲಿದ ಬಾನಾಡಿ ನೀವು !
ವಿಶ್ವಮೈತ್ರಿಯ ಅನುರಣಿಸಿದ ಕಾಜಾಣ ನೀವು !

ಕವಿಗಳ ಕವಿಯಾದ ಕುವೆಂಪು ಗುರುವೇ
ಎಂದೆಂದೂ ನಿಮ್ಮ ಕಾವ್ಯ ಕನ್ನಡಕ್ಕೆ ವರವೇ

ನಿಮ್ಮ ಅಭಿಲಾಶೆ ನಿಮ್ಮ ಮಹತ್ವಾಕಾಂಕ್ಷೆ
ಕ್ಷಣ ಕ್ಷಣ ಕನ್ನಡಿಸಿದೆ ನಿಮ್ಮ ಅಭಿಜಾತ ಭಾವ ಪರಿಷೆ !

ಸಹ್ಯಾದ್ರಿ ಸಾರವನೇ ಹೀರಿ
ಕಾಲ ಧರ್ಮಕೆ ತಕ್ಕ ಶೃತಿ ತೋರಿ

ಸಾವಿರದ ಹೃದಯಗಳ ಎಚ್ಚರಿಸಿದಿರಿ
ವಿನೂತನ ವಿಚಾರಗಳ ಉಚ್ಚರಿಸಿದಿರಿ

ಕತ್ತಿಯ ಮೊನೆ ಕಾಣದ್ದ ಕಂಡರಿಸಿದಿರಿ
ಅವಿಚಾರ ಅಕ್ರಮವ ತುಂಡರಿಸಿದಿರಿ

ಅನಂತಾನಂತ ಅರಿವಿಗೆ ತೆರೆದುಕೊಂಡಿರಿ
ಜ್ಞಾನ ಕಡಲ ಅಪಾರಜಲ ಸುರಿದು ಕೊಂಡಿರಿ

ಅಪೂರ್ವ ಅಗಸ್ತ್ಯ ನೀವು
ಸಂಸ್ಕೃತಿಯ ಸಿರಿ ಸೂರ್ಯ ನೀವು

ಎನಿತೆನಿತು ಬಣ್ಣಿಸಿದರೂ ಮುಗಿಯದು ಕನ್ನಡದ ಪುಣ್ಯ
ನೀವೆಮಗೆ ಕರುನಾಡ ಶ್ರೇಷ್ಠ ಚೈತನ್ಯ

ನೀವಿಲ್ಲದಾ ನಾಡಿಂದು ಎಲ್ಲ ಇದ್ದೂ ಬರಡು
ನೀವಿಲ್ಲದೆ ನಮಗೀಗ ಕಣ್ಣಿದ್ದೂ ಕುರುಡು
ಓ ! ಕುವೆಂಪು ನಿಮ್ಮಿಂದ ಕನ್ನಡಕ್ಕೆ ಸಕಲ ಹುರುಡು !
ನಿಮ್ಮಿಂದ ಭಾರತಕ್ಕೂ ಜ್ಞಾನಪೀಠ ಕೀರ್ತಿಕೋಡು !

"ಸಾಕ್ಷಿಯಲ್ಲಿ ಆದರ್ಶಗಳ ಅಪಮೌಲ್ಯ"

ಡಾ|| ಬಸವರಾಜ ನಾಯ್ಕರ

ಬೈರಪ್ಪನವರ ಕಾದಂಬರಿಯಾದ "ಸಾಕ್ಷಿ" (1986) ಅತ್ಯಂತ ಮಹತ್ವಪೂರ್ಣ ಕೃತಿಯಾಗಿದೆ. ಈ ಕಾದಂಬರಿಯಲ್ಲಿ ಭೈರಪ್ಪನವರು ಯಥಾಪ್ರಕಾರ ಅತ್ಯಂತ ಗಂಭೀರವಾದ ತಾತ್ವಿಕ ಸಮಸ್ಯೆಯನ್ನೇ ಎತ್ತಿಕೊಂಡು ವಾಸ್ತವತಾವಾದಿ ಶೈಲಿಯಲ್ಲಿ ಚಿತ್ರಿಸಿದ್ದಾರೆ. ಆದರೆ ವಾಸ್ತವತಾವಾದಿ ವಸ್ತುವನ್ನೊಳಗೊಂಡ ಈ ಕಾದಂಬರಿಗೆ ಪೌರಾಣಿಕ ಚೌಕಟ್ಟನ್ನು ಕೂಡ್ರಿಸಿದ್ದು ಹೊಸ ತಂತ್ರವಾಗಿದೆ. ಭಾರತೀಯ ಪುರಾಣಗಳಲ್ಲಿರುವಂತೆ ಈ ಕಾದಂಬರಿಯು ಪ್ರಾರಂಭದಲ್ಲಿ ಯಮಲೋಕದ ಸನ್ನಿವೇಶವಿದೆ. ಪರಮೇಶ್ವರಯ್ಯನ ಪ್ರೇತವು ಮರ್ತ್ಯಲೋಕದ ರಾಗ-ದ್ವೇಷಗಳಿಂದ ಮುಕ್ತಗೊಂಡು ಸಾಕ್ಷಿಯಂತೆ ನಿರ್ಲಿಪ್ತ ಭಾವನೆಯಿಂದ ತನ್ನ ಜೀವನವನ್ನೇ ಅವಲೋಕಿಸಲು ನಿಯಂತೃವಿನಿಂದ ಆದೇಶಿಸಲ್ಪಟ್ಟಿದೆ. ನಂತರ ವರ್ಣಿಸಲ್ಪಟ್ಟ ಘಟನಾವಳಿಯೆಲ್ಲ ಹಿಂಬೆಳಕಿನಲ್ಲಿ (flash back) ನಡೆದಂತೆ ಚಿತ್ರಿತವಾಗಿದೆ. ಕಾದಂಬರಿಯು ಕೊನೆಗೆ ಮತ್ತೆ ಯಮಲೋಕದ ಸನ್ನಿವೇಶವೇ ಮರಳಿಬರುತ್ತದೆ. ಅದರಲ್ಲಿ ಪರಮೇಶ್ವರಯ್ಯ, ಜಾನಕಮ್ಮ ಮತ್ತು ಮಂಜಯ್ಯಗಳ ಪ್ರೇತಗಳು ತಮ್ಮಂತರಂಗದ ಭಾವನೆಗಳನ್ನು ಯಾವ ಮುಚ್ಚುಮರೆಯಿಲ್ಲದೆ ಒಪ್ಪಿಕೊಳ್ಳುತ್ತವೆ. ಹೀಗೆ ಕಾದಂಬರಿಯ ಪ್ರಾರಂಭ ಮತ್ತು ಕೊನೆಯಲ್ಲಿ ಬರುವ ಮರಣೋತ್ತರ ಸನ್ನಿವೇಶಗಳು ಭಾರತೀಯ ಪುರಾಣಗಳಲ್ಲಿ ಅದರಂತೆ ದಾಂತೆಯ "ದಿವ್ಯ ಪ್ರಹಸನ" (The Divine Comedy) ದಲ್ಲಿ ಬರುವ eschatalogical ದರ್ಶನವನ್ನು ನೆನಪಿಗೆ ತರುತ್ತವೆ. ಇವೆರಡು ಸಾಂಕೇತಿಕ ಸನ್ನಿವೇಶಗಳನ್ನು ಬಿಟ್ಟರೆ ಅವೆರಡರ ನಡುವೆ ನಡೆಯುವ ಘಟನೆಗಳಲ್ಲಿ ವಾಸ್ತವದ ನೆಲೆಯಲ್ಲಿಯೆ ನಡೆಯುತ್ತವೆ. ಇವೆಲ್ಲ ಭೈರಪ್ಪನವರ ಪ್ರಯೋಗಶೀಲತೆಗೆ ಸಾಕ್ಷಿಯಾಗಿದೆ.

ಭೈರಪ್ಪನವರು ತಮ್ಮ ಕಾದಂಬರಿಗಾಗಿ ಯಾವುದೇ ವಸ್ತುವನ್ನು ಆಯ್ದುಕೊಂಡರೂ ಅದನ್ನು ಅತ್ಯಂತ ಗಂಭೀರವಾಗಿ ಸ್ವೀಕರಿಸಿ, ಅತ್ಯಂತ ವಿವರವಾಗಿ ಮತ್ತು ಶಿಸ್ತಿನಿಂದ ಚಿತ್ರಿಸುತ್ತಾರೆ. ಸ್ವತಃ ತತ್ವಜ್ಞಾನದ ಪ್ರಾಧ್ಯಾಪಕರಾದ ಅವರು ತತ್ವ

ಜ್ಞಾನಕ್ಕೆ ಸಂಬಂಧಿಸಿದ ವಿಷಯಗಳನ್ನೇ ಆಯ್ದುಕೊಂಡು ಕಲಾತ್ಮಕವಾಗಿ ಚಿತ್ರಿಸಲು ಪ್ರಯತ್ನಿಸುತ್ತಾರೆ. ಭಾರತೀಯ ವೇದಾಂತದಲ್ಲಿ ಮನುಷ್ಯನ ಆತ್ಮವು ದೇಹದೊಂದಿಗೆ ತಾದಾತ್ಮ್ಯ ಹೊಂದದೆ, ದೇಹ ಬೇರೆ ನಾನು ಬೇರೆಂಬ ನಿರ್ಲಿಪ್ತ ಭಾವನೆಯಿಂದ ತನ್ನ ಕ್ರಿಯೆಗಳನ್ನು ನೋಡುತ್ತಿರಬೇಕೆಂದೂ, ಆತ್ಮವು ದೇಹದ ಕರ್ಮಗಳಿಗೆ ಸಾಕ್ಷಿಯಾಗಿರ ಬೇಕೆಂದೂ ಬೋಧಿಸಲ್ಪಟ್ಟಿದೆಯಷ್ಟೆ. ಇದೇ ವೇದಾಂತದ ಸೂತ್ರವನ್ನು ಪಯೋಗಿಸಿ ಕೊಂಡು ಇಂಥ ನಿರ್ಲಿಪ್ತತೆಯನ್ನು ಸಾಧಿಸುವುದೆಷ್ಟು ಕಷ್ಟವೆಂಬುದನ್ನು ಬದಲಾಗು ತ್ತಿರುವ ಸಾಮಾಜಿಕ ಹಿನ್ನೆಲೆಯಲ್ಲಿ ಚಿತ್ರಿಸಿದ್ದಾರೆ.

ಪರಮೇಶ್ವರಯ್ಯನು ಕಾದಂಬರಿಯ ಕಥಾನಾಯಕನಾಗಿದ್ದರೂ ಆತನಿಗೆ ಸಂಬಂಧಿಸಿದವರೆಲ್ಲ ಅಂದರೆ ಹೆಂಡತಿ, ಮಗಳು, ಅಳಿಯ, ಮೊಮ್ಮಗ ಮುಂತಾದವ ರೆಲ್ಲರ ಜೀವನಗಳೂ ಆತನ ಜೀವನದೊಂದಿಗೆ ಹೊಸೆದುಕೊಂಡಿವೆ. ಪರಮೇಶ್ವರಯ್ಯನು ಕೋರ್ಟಿನಲ್ಲಿ ಸುಳ್ಳುಸಾಕ್ಷಿ ಹೇಳಿ, ಅಳಿಯನಾದ ಮಂಜಯ್ಯನನ್ನು ಬಿಡುಗಡೆ ಮಾಡಿ ದೊಡನೆ ಆತನ ಅಂತಃಸಾಕ್ಷಿ ಜಾಗೃತವಾಗಿ ಆತನನ್ನು ಕಾಡತೊಡಗುತ್ತದೆ. ಆದ್ದರಿಂದ ಸಾಕ್ಷಿ ಮತ್ತು ಅಂತಃಸಾಕ್ಷಿಗಳ ನಡುವಿನ ಸಂಘರ್ಷವೇ ಈ ಕಾದಂಬರಿಯ ಕೇಂದ್ರ ವಸ್ತುವಾಗುತ್ತದೆ. ಜೀವಂತವಿದ್ದಾಗ ಸಾಕ್ಷಿಯ ನಿರ್ಲಿಪ್ತತೆ ಮತ್ತು ನಿರ್ಭಯಗಳನ್ನು ಸಾಧಿಸಲಾರದ ಈ ಪಾತ್ರಗಳು ಯಮಲೋಕಕ್ಕೆ ಹೋದನಂತರ ಅವುಗಳನ್ನು ಸಾಧಿಸಲು ಶಕ್ಯವಾಗುತ್ತದೆ. ಆದ್ದರಿಂದಲೆ ಅವೆಲ್ಲ ತಮ್ಮ ಮರಣದ ನಂತರ ಆತ್ಮ ವಿಮರ್ಶೆ ಮಾಡಿಕೊಂಡು, ಸಾಂಸ್ಕೃತಿಕ ಕಟ್ಟುನಿಟ್ಟುಗಳ ಭಿಡೆಯಿಲ್ಲದೆ ತಮ್ಮ ಮೂಲ ಭೂತವಾದ ವಾಸನಾ ಪ್ರಪಂಚವನ್ನು ಬಹಿರಂಗಗೊಳಿಸುತ್ತವೆ. ಈ ಪಾತ್ರಗಳೆಲ್ಲ ಒಪ್ಪಿಕೊಳ್ಳುವ ಪಾಪಗಳನ್ನು ಫ್ರಾಯ್ಡನ ಮನೋವೈಜ್ಞಾನಿಕ ಕಲ್ಪನೆಯಾದ ಆದಿಕಾಮ (libido)ದ ಆವಿಷ್ಕಾರವೆಂದು ಕರೆಯಬಹುದು.

ಪರಮೇಶ್ವರಯ್ಯನು ಅಳಿಯನಾದ ಮಂಜಯ್ಯನನ್ನು ಗಂಡಾಂತರದಿಂದ ಉಳಿಸು ವುದಕ್ಕಾಗಿ ಕೋರ್ಟಿನಲ್ಲಿ ಸುಳ್ಳುಸಾಕ್ಷಿ ಹೇಳಿದ ನಂತರ ಆತನ ಆತ್ಮಸಾಕ್ಷಿ ಜಾಗೃತವಾಗಿ ಆತನಂತರಂಗದಲ್ಲಿ ತಳಮಳವೇರ್ಪಡುತ್ತದೆ. ಜೀವನದಲ್ಲಿ ಎಂದೂ ಸುಳ್ಳು ಹೇಳದ ಆತ ಸುಳ್ಳುಹೇಳಬೇಕಾಗಿ ಬಂದ ಅನಿವಾರ್ಯತೆಯನ್ನು ಸ್ವೀಕರಿಸಿ, ಅನಂತರ ಅದನ್ನು ಸಹಿಸಲಾರದೆ ಬಳಿಕೆರೆಯ ಶಿವಾಲಯದೆದುರಿಗಿನ ಆಲದ ಮರದ ಕೊಂಬೆಗೆ ನೇಣು ಹಾಕಿಕೊಂಡು ಸಾಯುತ್ತಾನೆ. ಈ ಪಾಪ ಪ್ರಜ್ಞೆಯಿಂದಾಗಿ ಆತ ತನ್ನ ಜೀವನವನ್ನು ಕೊನೆಗೊಳಿಸುತ್ತಾನೆ. ಆತನ ಅನಿರೀಕ್ಷಿತ ಸಾವಿನ ಬಗೆಗೆ ಆತನ ಮಗ ರಾಮಕೃಷ್ಣ, ಮಗಳು ಸಾವಿತ್ರಿ, ಹಿರಿಯ ಅಳಿಯ ಮತ್ತೀಕೆರೆ ಸತ್ಯನಾರಾಯಣ ಮುಂತಾದವರೆಲ್ಲರ ಮನಸ್ಸಿಗೆ ಖೇದವುಂಟಾಗುತ್ತದೆ. ಅವರೆಲ್ಲ ಪರಮೇಶ್ವರಯ್ಯನ ವೈಕುಂಠದ ದಿನವನ್ನು ವಿಧಿವತ್ತಾಗಿ ಆಚರಿಸುತ್ತಾರೆ. ಪರಮೇಶ್ವರಯ್ಯನ ಸಾವಿನ ಕಾರಣ ಗೂಢವಾಗಿಯೇ

ಉಳಿಯುತ್ತದೆ. ಭೈರಪ್ಪನವರು ಈ ಗೂಢತೆಯನ್ನು ಕಾದಂಬರಿಯ ಕೊನೆಯವರೆಗೆ ಬಹಿರಂಗಗೊಳಿಸದೆ ಓದುಗರ ಕುತೂಹಲವನ್ನು ಕೆರಳಿಸುತ್ತ ಹೋಗುತ್ತಾರೆ. ಈ ದಿಶೆಯಲ್ಲಿ ಭೈರಪ್ಪನವರನ್ನು ಬ್ರಿಟಿಷ್ ಕಾದಂಬರಿಕಾರರಾದ ಗ್ರಹಾವ್ ಗೀನರಿಗೆ ಹೋಲಿಸಬಹುದು.

ಪರಮೇಶ್ವರಯ್ಯನ ಸಾವಿಗೆ ಆತನಳಿಯನಾದ ಮಂಜಯ್ಯನೇ ಮುಖ್ಯ ಕಾರಣ ನಾಗಿದ್ದನೆಂಬುದು ಕಾದಂಬರಿಯ ಕೊನೆಯ ಭಾಗದಲ್ಲಿ ಸಂಪೂರ್ಣವಾಗಿ ಗೋಚರಿಸು ತ್ತದೆ. ಅತ್ಯಂತ ಸಾತ್ವಿಕನಾದ ಪರಮೇಶ್ವರಯ್ಯನ ಅಳಿಯನು ಮಾವನಿಗೆ ತದ್ವಿರುದ್ಧ ವಾದ ಪಾತ್ರವಾಗಿದ್ದಾನೆ. ಮಂಜಯ್ಯನನ್ನೇ ಮಾಡಿಕೊಳ್ಳುತ್ತೇನೆಂದು ಸಾವಿತ್ರಿ ಹಟ ಹಿಡಿದದ್ದು, ಅದಕ್ಕೆ ತಂದೆ, ತಮ್ಮ ಮುಂತಾದವರೆಲ್ಲರೂ ವಿರೋಧಿಸಿದ್ದನ್ನೆಲ್ಲ ಕಾದಂಬರಿಕಾರರು ಹಿಂಬೆಳಕಿನಲ್ಲಿ ತೋರಿಸಿದ್ದಾರೆ. ಮಂಜಯ್ಯನೆಂದರೆ ಒಬ್ಬ ನಿರ್ಲಜ್ಜ ನಾದ ಕಾಮುಕನೆಂದು ಪ್ರಸಿದ್ಧನಾಗಿದ್ದಾನೆ. ಆತನ ಕಾಮುಕ ಪ್ರವೃತ್ತಿಯ ಅರಿವಿದ್ದೂ ಸಾವಿತ್ರಿ ಆತನನ್ನು ಮದುವೆಯಾಗುತ್ತಾಳೆ. ಮದುವೆಯಾದ ನಂತರ ಆತ ಹೊರಗಿನ ಚಟವನ್ನು ನಿಲ್ಲಿಸಬಹುದೆಂಬುದು ಅವಳ ನಂಬುಗೆ. ಆದರೆ ಆತನ ಹಳೆಯ ಚಾಳಿ ಅವ್ಯಾಹತವಾಗಿ ಮುಂದುವರಿಯುತ್ತದೆ. ಮದುವೆಯಾದ ಹೊಸದರಲ್ಲಿಯೇ ಆತ ತೋಟದ ಗುಡಿಸಲಿನಲ್ಲಿ ಮಧ್ಯಾನ್ಹದಲ್ಲಿ ಮಲ್ಲಿ ಎಂಬುವಳನ್ನು ಕರೆದುಕೊಂಡು ಸುರತ ವಾಡುವದನ್ನು ಸಾವಿತ್ರಿ ಸ್ವತಃ ಬಂದು ಗಮನಿಸಿ ಅಸಹ್ಯಪಟ್ಟುಕೊಳ್ಳುತ್ತಾಳೆ. ಒಂದುದಿನ ಸತ್ಯಪ್ಪನು ಚನ್ನರಾಯಪಟ್ಟಣಕ್ಕೆ ಹೋದಾಗ ಅಲ್ಲಿ ಮಂಜಯ್ಯನು ಚಂದ್ರಿಕೆಯೆಂಬ ತರುಣಿಯನ್ನು ತನ್ನ ಕೋಣೆಗೆ ಕರೆಯಿಸಿ ತನ್ನ ಕಾಮಪಿಪಾಸೆಯನ್ನು ತೀರಿಸಿಕೊಳ್ಳುತ್ತಾನೆ. ಅಲ್ಲದೆ ಬೇಕಾದರೆ ಸತ್ಯಪ್ಪನಿಗೂ ಅವಳ ರುಚಿನೋಡಲು ಪ್ರಚೋದಿಸುತ್ತಾನೆ. ಆದರೆ ನಾಚಿಕೆಯ ಸ್ವಭಾವದವನಾದ ಸತ್ಯಪ್ಪ ಅದಕ್ಕೊಪ್ಪುವ ದಿಲ್ಲ. ಮಂಜಯ್ಯನು ಮಾವ ಸತ್ತ ಹದಿನಾಲ್ಕನೆಯ ದಿನವೇ ಚಂದ್ರಿಕೆಯೊಂದಿಗೆ ಕಾಮಕೇಳಿಯಲ್ಲಿ ತೊಡಗಿದರೆ, ಅದಕ್ಕಿಂತಲೂ ಮೊದಲೇ, ಅಂದರೆ ಮಾವ ಸತ್ತ ಎರಡನೆಯ ದಿನವೇ ಸಿದ್ದಿಯೆಂಬ ಹೆಣ್ಣನ್ನು ಕರೆಸಿ ಭೋಗಿಸಿದ್ದಾನೆ. ಕೆಲವು ದಿನಗಳ ನಂತರ ತೋಟದಲ್ಲಿ ಕಂಚಿಯನ್ನು ಕೊಂದು ಆತನ ಕಳ್ಳತನಕ್ಕೆ ಪೂರ್ಣವಿರಾಮ ವನ್ನಿತ್ತರೂ ಸೂತಕದ ಅವಧಿ ಮುಗಿಯುವ ಮೊದಲೇ ಕಂಚಿಯ ಹೆಂಡತಿಯಾದ ಲಕ್ಕುವನ್ನು ಉಪಾಯದಿಂದ ಮುಸ್ಸಂಜೆಯ ಸಮಯಕ್ಕೆ ಊರಹೊರಗೆ ಕರೆದು ತನ್ನ ಕಾಮಜ್ಞಾನವನ್ನೆಲ್ಲ ಉಪಯೋಗಿಸಿ ಅವಳನ್ನು ಭೋಗಿಸಿ ಅವಳ ಹೃದಯವನ್ನು ಗೆದ್ದುಬಿಡುತ್ತಾನೆ. ನಂತರ ಅವಳಿಂದಲೇ ಕೋರ್ಟಿನಲ್ಲಿ ಸಾಕ್ಷಿಹೇಳಿಸಿ ಅವಳ ಗಂಡನ ಕೊಲೆಯ ಅಪರಾಧ ಪ್ರಕರಣದಿಂದ ಪಾರಾಗಿಬಿಡುತ್ತಾನೆ. ಕೆಲವು ದಿನಗಳ ನಂತರ ಆತನ ಕಾಮದಕಣ್ಣು ಸರೋಜಾಕ್ಷಿಯ ಮೇಲೂ ಬೀಳುತ್ತದೆ. ಅವಳೊಂದಿಗೆ ಮೊದಲು ದುಡುಕಿ ಸುರತದ ಪ್ರಯತ್ನದಲ್ಲಿ ವಿಫಲನಾದರೂ, ಅವಳ ಹೃದಯವನ್ನು

ಆಕರ್ಷಿಸಿ ಬಿಟ್ಟಿದ್ದಾನೆ. ಆದ್ದರಿಂದಲೇ ಅವಳು ತನ್ನ ಗಂಡನ ಸಸ್‌ಪೆನ್‌ಶನ್‌ಗೆ ಕಾರಣನಾದ ಮಂಜಯ್ಯನನ್ನು ತಾನೇ ಆಮಂತ್ರಿಸಿ ಸುರತಸುಖವನ್ನು ನೀಡಬಯಸು ತ್ತಾಳೆ. ಆದರೆ ಅದಕ್ಕೆ ತೊಡಗುವ ಸಮಯದಲ್ಲಿ ಆತನಿಗೆ ಲಕ್ವಾ ಹೊಡೆದಂತಾಗಿ ಆತ ನಾಚಿಕೆಯಿಂದ ಅಲ್ಲಿಂದ ಓಡಿಬಿಡುತ್ತಾನೆ. ಕೆಲವು ದಿನಗಳ ನಂತರ ಆತ ಲಕ್ಕು ವನ್ನು ಭೇಟಿಯಾಗಿ ಅವಳನ್ನು 'ಕೂಡಿಕೆ' ಮಾಡಿಕೊಳ್ಳುವೆನೆಂದು ಭರವಸೆಹುಟ್ಟಿಸಿ ಅವಳೊಂದಿಗೆ ರಹಸ್ಯವಾಗಿ ಸುಖ ಪಡೆಯಲಾರಂಭಿಸುತ್ತಾನೆ. ಅವಳ ಮಗಳಾದ ಲತಾ ಹಾಸನದಲ್ಲಿ ಕಾಲೇಜು ಓದುತ್ತಿರುತ್ತಾಳೆ. ತಾಯಿಗೆ ಗೊತ್ತಿಲ್ಲದಂತೆ ಲತಾಳನ್ನೂ ಮಂಜಯ್ಯ ಭೋಗಿಸಿ ಬಸಿರು ಮಾಡಿರುತ್ತಾನೆ. ಆತನ ಈ ಹೇಯಕೃತ್ಯವನ್ನು ತಿಳಿದ ಲಕ್ಕು ರೊಚ್ಚಿನಿಂದ ಕುದಿಯುತ್ತಾಳೆ. ಆದ್ದರಿಂದಲೇ ಆತನನ್ನು ಉಪಾಯದಿಂದ ಸುರತಕ್ಕೆ ಆಮಂತ್ರಿಸಿ, ಆತನನ್ನು ಕಂಬಕ್ಕೆ ಬಂಧಿಸಿ, ಆತನ ಶಿಶ್ನವನ್ನು ಕುಡುಗೋಲಿ ನಿಂದ ಕತ್ತರಿಸಿ, ಆತ ರಕ್ತಸೋರಿ ಸಾಯುವಂತೆ ಮಾಡುತ್ತಾಳೆ. ಕಾದಂಬರಿಯ ಕೊನೆಗೆ ಹಿಂಬೆಳಕಿನ ಮೂಲಕ ತಿಳಿಯುವುದೇನೆಂದರೆ ಮಂಜಯ್ಯನು ಇಪ್ಪತ್ನಾಲ್ಕು ವರುಷದವ ನಿರುವಾಗಲೇ ತನಗಿಂತ ಹತ್ತುವರುಷ ಹಿರಿಯಳಾದ ಜಾನಕಮ್ಮನೊಡನೆ ಲೈಂಗಿಕ ಸಂಬಂಧವನ್ನು ಹೊಂದಿದ್ದನಂತೆ.ಹೀಗೆ ಒಟ್ಟಿನಲ್ಲಿ ಹೇಳುವುದಾದರೆ ಮಂಜಯ್ಯನೊಬ್ಬ ಅತ್ಯಂತ ಯಶಸ್ವಿಯಾದ ಕಾಮಕಲಾ ವಿಶಾರದನಾಗಿದ್ದು, ತನ್ನ ದೃಷ್ಟಿಗೆ ಬಿದ್ದ ಹೆಣ್ಣು ಗಳನ್ನು ತನ್ನ ರಸಿಕತನದಿಂದ ಗೆದ್ದುಕೊಂಡು ಬಿಡುವ ಸ್ವಭಾವದವನಾಗಿದ್ದಾನೆ. ಆತನಿಗೆ ಯಾವ ಹೆಣ್ಣಾದರೂ ಒಂದೇ. ತನಗಿಂತ ಹಿರಿಯಳಾದ ಜಾನಕಮ್ಮಳಾಗಲಿ, ಮಗಳ ವಯಸ್ಸಿನ ಲತಾಳಾಗಲಿ : ಸರೋಜಾಕ್ಷಿ, ಲಕ್ಕುವಿನಂಥ ವಿವಾಹಿತೆಯರಾಗಿರಲಿ, ಚಂದ್ರಿಕೆಯಂಥ ಅವಿವಾಹಿತೆಯರಾಗಿರಲಿ: ತನ್ನ ಜಾತಿಯ ಹೆಣ್ಣುಗಳಾಗಲಿ ಇಲ್ಲವೆ ಕೆಳಜಾತಿಯ ಹೆಣ್ಣುಗಳಾಗಲಿ ಎಲ್ಲರೂ ಆತನ ದೃಷ್ಟಿಯಲ್ಲಿ ಸಮಾನರೇ ಆಗಿರುತ್ತಾರೆ. ಆತನಿಗೆ ಹೆಣ್ಣಿನ ಹೃದಯದ ಬಯಕೆಗಳನ್ನು ಅರ್ಥಮಾಡಿಕೊಂಡು, ಅವರನ್ನು. ಅತ್ಯಂತ ನಯವಾಗಿ ತನ್ನ ಬಲೆಯಲ್ಲಿ ಸಿಕ್ಕಿಸಿಕೊಳ್ಳುವ ವಿದ್ಯೆ ಕರಗತವಾಗಿದೆ. ಆದರೆ ಆತ ಆ ವೃತ್ತಿಯನ್ನೇ ಅತಿಯಾಗಿ ಪಾಲಿಸಿದಾಗ ಆತನಿಗೆ ಶಿಕ್ಷೆಯಾಗುತ್ತದೆ. ಆತ ಹೆಣ್ಣಿನ ಬೇಟೆಯಲ್ಲಿ ಹೆಚ್ಚಾಗಿ ಸಫಲನಾಗಿರುತ್ತಿದ್ದ. ಆದರೆ ಸರೋಜಾಕ್ಷಿಯೊಡನೆ ಸುರತವಾಡಲು ಅಸಫಲನಾದಾಗ ಅವಳ ವಿರುದ್ಧ ಸೇಡು ತೀರಿಸಿಕೊಳ್ಳಲು ಆಕೆಯ ಗಂಡನಾದ ಅಪ್ಪಾಜಪ್ಪನನ್ನು ನೌಕರಿಯಿಂದ ಸಸ್ಪೆಂಡು ಮಾಡಿಸುತ್ತಾನೆ. ಆದರೆ ಲೈಂಗಿಕ ವ್ಯವಹಾರದಲ್ಲಿ ಆತನಿಗಿಂತ ಚತುರೆಯಾದ ಸರೋಜಾಕ್ಷಿ ತನ್ನ ಹಳೆಯ ಪ್ರಿಯತಮನಾದ ಸುಬ್ಬಯ್ಯನಿಗೆ ಎಲ್ಲ ವಿಷಯವನ್ನು ವಿವರಿಸಿ ಕೊನೆಗೆ ಮಂಜಯ್ಯನ ನೌಕರಿಯನ್ನೇ ಕಳೆದುಬಿಡುತ್ತಾಳೆ. ಹೀಗೆ ಆತನಿಗೆ ತಕ್ಕ ಶಿಕ್ಷೆಯಾಗುತ್ತದೆ. ಅದೇ ರೀತಿ ಆತ ತಾಯಿ ಮತ್ತು ಮಗಳು ಇಬ್ಬರನ್ನೂ ಭೋಗಿಸುವ ನಿರ್ಲಜ್ಜನಾದು ದರಿಂದ ಲಕ್ಕು ಆತನ ಶಿಶ್ನವನ್ನೇ ಕತ್ತರಿಸಿ ಆತನ ಸಾವಿಗೆ ಕಾರಣಳಾಗುತ್ತಾಳೆ. ಅಲ್ಲಿಯೂ ಆತನ ಕಾಮದ ಅತಿರೇಕಕ್ಕೆ ತಕ್ಕ ಶಿಕ್ಷೆಯಾಗುತ್ತದೆ. ಆತನ ಜೀವನದಲ್ಲಿ

ಸುರತವೆಂಬುವುದೇ ಪರಮ ಪೌಲ್ಯವಾಗಿದೆ. ಕಾಮವನ್ನು ಹತ್ತಿಕ್ಕದೇ ಅದರಾಶೆಯಾದಾಗ ಅದನ್ನು ಆಗಿಂದಾಗ ತೀರಿಸಿಕೊಂಡುಬಿಡಬೇಕೆನ್ನುವುದು ಆತನ ಸಿದ್ಧಾಂತವಾಗಿದೆ. ಆತ ಸತ್ಯಪ್ಪನಿಗೂ ಅದೇ ಸಿದ್ಧಾಂತವನ್ನು ಬೋಧಿಸಿದ್ದಾನೆ. ಮಂಜಯ್ಯನು ನಿಜವಾದ ಮಂಜುನಾಥಯ್ಯನೆಂಬ ಶಾನುಭೋಗನ ಹೆಂಡತಿಯನ್ನು ಭೋಗಿಸಿದ್ದು ಸರಿಯೆ ಎಂದು ಸತ್ಯಪ್ಪ ಕೇಳಿದಾಗ ಅದಕ್ಕುತ್ತರವಾಗಿ ಮಂಜಯ್ಯ ತನ್ನ ಸಿದ್ಧಾಂತವನ್ನು ಮಂಡಿಸುತ್ತಾನೆ :

> ಇನ್ನು ಅವನ ಹೆಂಡತಿಯ ಪಾತಿವ್ರತ್ಯ ನಾನು ಏನೂ ಮಾಡಲಿಲ್ಲ. ಹೆಂಗಸು ಅಂದರೆ ಪಾತಿವ್ರತ್ಯದ ಅಪ್ಪಟ ಮುರುಕು ಅಂತ ನಿಮ್ಮಂಥೋರು ತಿಳಕಂಡಿರ್ತೀರ. ಒಂದು ಅರ್ಥ ಮಾಡ್ಕಳಿ ; ಹೆಂಗಸರಿಗೂ ನಮ್ಮ ಹಾಗೆ ಆಶೆ ಇರುತ್ತೆ. ಚೆನ್ನಾದ ಯಾವ ಗಂಡಸನ್ನ ಕಂಡರೂ ಒಳಗಿನಿಂದ ಒಸರುತ್ತೆ. ಎಷ್ಟೋ ಗಂಡಸರಿಗೆ ಇದು ಅರ್ಥವಾಗುಲ್ಲ. ಸಂಗೆ ಆಗುತ್ತೆ. ನಾನು ಯಾವತ್ತೂ ಯಾವ ಹೆಂಗಸನ್ನೂ ಬಲಾತ್ಕಾರ ಮಾಡಿಲ್ಲ. ನಾನು ಬೀರಗುಂದ ಬಿಟ್ಟು ಬರುವಾಗ ಆ ಮಂಜುನಾಥಯ್ಯನ ಹೆಂಡತಿ ಹೋಗ-ಬ್ಯಾಡಿ ಅಂತ ಅಂಗಲಾಚಿದಳು, ತಿಳ್ಕಳಿ. (ಪು. 75)

ಇದು ಮಂಜಯ್ಯ ತನ್ನ ವೈಯಕ್ತಿಕಾನುಭವದಿಂದ ರೂಪಿಸಿಕೊಂಡ ಸಿದ್ಧಾಂತ. ತನ್ನ ಈ ಕೃಷ್ಣಲೀಲೆಯಿಂದ ಆ ಹೆಣ್ಣುಗಳಿಗೆ ಅಥವಾ ಅವರ ಗಂಡಂದಿರಿಗೆ ಇಲ್ಲವೆ ತಂದೆತಾಯಿಗಳಿಗೆ ಎಷ್ಟೊಂದು ತೊಂದರೆ, ಅವಮಾನ ಮತ್ತು ಮಾನಸಿಕ ಹಿಂಸೆಯಾಗುತ್ತದೆಂಬುದನ್ನು ತಿಳಿದುಕೊಳ್ಳುವ ಗೋಜಿಗೆ ಆತ ಹೋಗುವುದಿಲ್ಲ. ಆತನಿಗೆ ಸಾಂಪ್ರದಾಯಕ ನೀತಿಯಲ್ಲಿ ನಂಬುಗೆಯಿಲ್ಲ. ಲೈಂಗಿಕ ವಿಷಯದಲ್ಲಿ ಹೇಗೋ ಹಾಗೆಯೇ ತನ್ನ ವೃತ್ತಿ ಜೀವನದಲ್ಲಿಯೂ ಕೂಡ 'ಏನಕೇನ ಪ್ರಕಾರೇಣ' ತನ್ನ ಕಾರ್ಯ ಸಾಧಿಸಿಕೊಂಡುಬಿಡುವದು ಆತನ ಅಭ್ಯಾಸವಾಗಿ ಬಿಟ್ಟಿದೆ. ಈ ಕಾರ್ಯದಲ್ಲಿ ಅತಿರೇಕಕ್ಕೆ ಹೋದಾಗ ತನಗಾಗಬಹುದಾದ ಶಿಕ್ಷೆಗೂ ಆತ ಸಿದ್ಧನಾಗಿಯೇ ಇದ್ದಾನೆ. ಆದರೆ ಆತನ ಹೃದಯದಲ್ಲಿ ಪಶ್ಚಾತ್ತಾಪಕ್ಕೆ ಮಾತ್ರ ಸ್ಥಾನವೇ ಇಲ್ಲ. ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದರೂ ಆತ ತನ್ನ ಜೀವನದ ಪ್ರತಿಯೊಂದು ಹಂತದಲ್ಲಿಯೂ ಬ್ರಾಹ್ಮಣ್ಯದ ಪಾವಿತ್ರ್ಯವನ್ನು ಕೊಲೆ ಮಾಡುತ್ತಲೇ ಹೋಗುತ್ತಾನೆ. ಕೊನೆಗೆ ಅದಕ್ಕೆ ಪೂರ್ಣ ವಿರಾಮ ಹಾಕುವವಳು ಬ್ರಾಹ್ಮಣೇತರ ಜಾತಿಯ ಲಕ್ಕು ಮಾತ್ರ.

ಕಾದಂಬರಿಗೆ ಚೌಕಟ್ಟನ್ನೊದಗಿಸಿದ ಪರಮೇಶ್ವರಯ್ಯ ಮಾತ್ರ ಧರ್ಮ ಸಂಕಟದಲ್ಲಿ ಸಿಲುಕಿ ಆ ದ್ವಂದ್ವದಿಂದ ಪಾರಾಗದೆ ಆತ್ಮಹತ್ಯೆ ಮಾಡಿಕೊಂಡು ಸಾಯುತ್ತಾನೆ. ಮಂಜಯ್ಯನ ಪರವಾಗಿ ಕೋರ್ಟಿನಲ್ಲಿ ಸುಳ್ಳುಸಾಕ್ಷಿ ಹೇಳಿದ ನಂತರ ಅವನಲ್ಲಿ ಅಪರಾಧ ಪ್ರಜ್ಞೆ ಜಾಗೃತವಾಗಿ ಆತನನ್ನು ಪ್ರತಿನಿಮಿಷ ಚುಚ್ಚತೊಡಗುತ್ತದೆ :

> ನ್ಯಾಯಪೀಠವು ನನಗೆ ಅಂತಸ್ಸಾಕ್ಷಿಯ ಹೆಸರಿನಲ್ಲಿ ಪ್ರಮಾಣ ವಚನ ಬೋಧಿಸಿದಾಗ ಸೌಮ್ಯವಾಗಿ ಮಿನುಗುವ ಜ್ಯೋತಿಯು ದಪ್ಪ ಉರಿಯಾಗಿ ಉಳಿದುದೆಲ್ಲವನ್ನು ದಹಿಸಲು ಪ್ರಾರಂಭಿಸಿರುವ ಭಾವವುಂಟಾಯಿತೆಂದು ಹೇಳಿದೆ. ವಾಸ್ತವವಾಗಿ ಆದದ್ದೇನೆಂದರೆ : ನ್ಯಾಯಮೂರ್ತಿಗಳು ಅಂತಸ್ಸಾಕ್ಷಿಯನ್ನು ಆಹ್ವಾನಿಸಿದಾಗ ಒಳಗೇ ಶಾಖಹತ್ತಿ ಕವರಿಕೊಂಡು ಹೊಗೆ ತುಂಬಿಕೊಳ್ಳಲು ಶುರುವಾಯಿತು. ಸರ್ಕಾರಿ ವಕೀಲರು ಮತ್ತೆ ಅದನ್ನೇ ಗುರಿ ಇಟ್ಟು ಸಂಬೋಧಿಸಿದಾಗ ಭುಗ್ ಅಂತ ಹೊತ್ತಿಕೊಂಡಿತು. ನನಗೆ ಕಣ್ಣುಗತ್ತಲು ಬಂತು. ಕಳಲಿಕೆ ಬಂತು. ಕಟಕಟೆಯನ್ನು ಗಟ್ಟಿಯಾಗಿ ಹಿಡಿದು ಆಸರೆಯಾಗಿಸಿಕೊಂಡೆ. ಹೊರಗಿನದೇನೂ ಕೇಳಿಸದಂತಹ, ಕಿವಿಯೊಳಗೆಲ್ಲ ತಣ್ಣನೆಯ ನೀರು ತುಂಬಿಕೊಂಡು ಘೂಂಗುಡುತ್ತಿರುವ ಅನುಭವ......ನಾನು ಕೋರ್ಟಿನ ಆವರಣದಿಂದ ಹೊರಗೆಬಂದು ಓಡ ತೊಡಗಿದೆ. ನಾಯಿ ಅಟ್ಟಿಸಿಕೊಂಡು ಬಂದವರು ದಿಕ್ಕುಗಾಣದೆ ಓಡುವಂತೆ, ಒಂದೇ ಸಮನೆ ಓಡ ತೊಡಗಿದೆ. ಬೆವರು ಏದುಸಿರು ಎದೆಯ ಮೇಲೆದ್ದು ಬರುವ ಬಡಿತಗಳ ಅರಿವೂ ಇಲ್ಲದೆ. ಓಡಲು ಇನ್ನು ಸಾಧ್ಯವಿಲ್ಲವೆಂಬಷ್ಟು ಸುಸ್ತಾದಾಗ ಜೋರುನಡಿಗೆಗೆ ಇಳಿದು ಅದೂ ಅಸಾಧ್ಯವಾದಾಗ ನಿಧಾನ ಹೆಜ್ಜೆಗೆ ತಿರುಗಿ ಪಾದ ಎಳೆಗಳ ಚಲನೆಯು ತಪ್ಪಿಹಾಕಿಕೊಂಡು ಮುಲುಕಿದ್ದಾಗ ಒಂದು ಮರದಡಿಯ ಹುಲ್ಲುಹಾಸಿನ ಮೇಲೆ ಮಲಗಿಬಿಟ್ಟೆ. ನಿದ್ದೆಬಂತು. ಎಂತಹ ನಿದ್ದೆ. ಹೆಂಡತಿ ಸತ್ತಾಗಿನಿಂದ ಇದುವರೆಗೆ ಒಮ್ಮೆಯೂ ಬಾರದಿದ್ದ ಗಾಢ, ದೀರ್ಘನಿದ್ದೆ, ಕನಸಿನ ರೂಪವಾಗಿಯೂ ಹೊರದೃಶ್ಯಗಳು ಸುಳಿಯದ, ಸಂಪೂರ್ಣ ನನ್ನೊಳಗೆ ನಾನಿರುವಂತೆ ಭಾಸವಾದ, ಹಂಗು ತೊರೆದ ನಿದ್ದೆ.

ತನ್ನಳಿಯನಾದ ಮಂಜಯ್ಯ ಕಚ್ಚೆಹರುಕನಾಗಿದ್ದರೂ, ಕಂಚಿಯನ್ನು ಕೊಂದ ಆತನ ಧೈರ್ಯವನ್ನು ಮೆಚ್ಚಬೇಕೆಂದೂ, ಗಂಡಾಂತರದಲ್ಲಿ ಸಿಲುಕಿದ ತನ್ನಳಿಯನನ್ನು ಪಾರುಮಾಡುವದು ತನ್ನ ಲೌಕಿಕ ಧರ್ಮವೆಂದೂ ಸ್ನೇಹಿತರೆಲ್ಲ ಆತನಿಗೆ ಒತ್ತಾಯಿಸಿದಾಗ ಮಾತ್ರ ಪರಮೇಶ್ವರಯ್ಯನು ಅವರ ಒತ್ತಾಯಕ್ಕೆ ಮಣಿದು ಕೋರ್ಟಿನಲ್ಲಿ ಸುಳ್ಳುಸಾಕ್ಷಿ ಹೇಳಿದ. ಧರ್ಮ ಧರ್ಮಗಳ ಬಗೆಗೆ ಅತ್ಯಂತ ಸೂಕ್ಷ್ಮ ಪ್ರಜ್ಞೆ ಹೊಂದಿದ ಪರಮೇಶ್ವರಯ್ಯನಿಗೆ ತನ್ನ ಅಂತಸ್ಸಾಕ್ಷಿಯನ್ನು ಮೋಸಗೊಳಿಸುವದು ಸಾಧ್ಯವಾಗಲಿಲ್ಲ.

ಆದರೆ ಅದಕ್ಕಿಂತಲೂ ಬಹುಮೊದಲೇ, ಅನೇಕ ವರುಷಗಳ ಹಿಂದೆ ಆತ ಇನ್ನೊಂದು ಮುಖ್ಯವಾದ ಅವಸಾನವನ್ನು ಸಾಕ್ಷಿಯಾಗಿ ನೋಡಿದ್ದ. ಅದರಿಂದುಂಟಾದ ಆಘಾತವನ್ನು ತನ್ನಲ್ಲಿ ಅನೇಕ ವರುಷಗಳ ವರೆಗೆ ಅದುಮಿಟ್ಟುಕೊಂಡಿದ್ದ. ಅದುವೆ

ಪಾತಿವ್ರತ್ಯದ ಮೌಲ್ಯ. ತನ್ನ ಪತ್ನಿ ಜಾನಕಿಯು ಪರಮ ಪತಿವ್ರತೆಯೆಂದು ಆತ ನಂಬಿದ್ದು, ಸುಖಜೀವನವನ್ನೇ ಕಳೆಯುತ್ತಿದ್ದ. ಆತನಿಗಾಗಲೆ ಇಬ್ಬರು ಮಕ್ಕಳೂ ಇದ್ದರು. ಆದರೆ ಒಂದು ದಿನ ಆ ನಂಬುಗೆ ಬುಡಮೇಲಾದದ್ದು ತಿಳಿದುಬಂದಿತು.

ಗಂಡನಿಗೆ ಅನುಕೂಲೆಯಾಗಿ ಮಕ್ಕಳಿಗೆ ಪ್ರೇಮಮಯಿಯಾದ ಹೆಂಡತಿಯನ್ನು ಯಾವ ಸಾಧಾರಣ ಮನಸ್ಸಿನ ಗಂಡ ಸಂಶಯಿಸುತ್ತಾನೆ ? ದಿನಾ ಅತಿಥಿಗಳ ಭೋಜನವಾಗಿ ಅವರೊಡನೆ ನನ್ನದೂ ಊಟವಾದ ಮೇಲೆ ತುಸುಹೊತ್ತು ವಿಶ್ರಮಿಸಿ ತೋಟಕ್ಕೆ ಹೋಗುತ್ತಿದ್ದೆ. ಹೊತ್ತು ಮುಳುಗಿ ಹಕ್ಕಿಗಳು ಗೂಡುಸೇರುವವರೆಗೂ ಕೆಲಸಮಾಡಿ ಮನೆಗೆ ಹಿಂದಿರುಗುತ್ತಿದ್ದೆ. ಒಂದುದಿನ ಮಧ್ಯಾಹ್ನ ಊಟವಾದ ಮೇಲೆ ತೋಟಕ್ಕೆ ಹೋದಾಗ ಕೂಲಿಯವನು ಇಪ್ಪತ್ತು ರೂಪಾಯಿ ಮುಂಗಡ ಕೇಳಿದ. ಹೆಂಡತಿ ಕಾಯಿಲೆ, ಈಗಲೇ ಬೇಕು ಎಂದು ಅಂಗಲಾಚಿದ. ಹಣ ತರಲು ಮನೆಗೆ ಹೋದೆ. ಯಾವಾಗಲೂ ನನಗೆ ಗಟ್ಟಿಯಾಗಿ ಕೂಗಿ ಅಭ್ಯಾಸವಿಲ್ಲ. ಮುಂದಿನ ಬಾಗಿಲನ್ನು ನೂಕಿದೆ. ಒಳಗಿನಿಂದ ಚಿಲಕ ಹಾಕಿತ್ತು. ಹಿತ್ತಲಲ್ಲಿ ಪಾತ್ರೆ ತೊಳೆಯುತ್ತಿರಬಹುದೆಂದು ಪಕ್ಕದ ಹಿತ್ತಿಲು ತದ್ದಲನ್ನು ಸರಗಿಸಿ ಹಿಂಬದಿಗೆ ಹೋದೆ, ಅವಳಿರಲಿಲ್ಲ. ನಿದ್ದೆಮಾಡುತ್ತಿರಬಹುದು, ಎಚ್ಚರಿಸುವದು ಬೇಡವೆಂದು ಒಂದು ನಿಮಿಷ ಹಾಗೆಯೇ ನಿಂತೆ. ಕೂಲಿಯವನ ಹೆಂಡತಿಗೆ ಕಾಯಿಲೆ. ಬೇಗ ಹಣ ಕೊಡಬೇಕು. ಒಂದು ಉಪಾಯ ಹೊಳೆಯಿತು. ಹಿಂದಿನ ಬಾಗಿಲಿಗೆ ಹಾಕುತ್ತಿದ್ದ ಚಿಲಕವನ್ನು ಬೆರಳಿನಿಂದ ಉಪಾಯವಾಗಿ ಎತ್ತಿ ತೆಗೆಯಬಹುದಾಗಿತ್ತು. ರಾತ್ರಿಯವೇಳೆ ಚಿಲಕ ತೆಗೆದು ಒಳಗೆ ಬಿರಿಹಾಕುತ್ತಿದ್ದೆವು. ನಾನು ಬೆರಳಿನಿಂದ ಚಿಲಕತೆಗೆದು ಒಳಗೆ ಬಂದು ನೇರವಾಗಿ ಒಳಗೆ ಹೋದೆ. ನಿದ್ರಿಸುವ ಅವಳಿಗೆ ಎಚ್ಚರವಾಗ ಬಾರದೆಂದು ನಿಶ್ಯಬ್ದವಾಗಿ ಇಷ್ಟೆಲ್ಲ ಮಾಡಿದೆ. ಅಷ್ಟೇ ನಿಶ್ಯಬ್ದವಾಗಿ ಕೋಣೆಯ ಬಾಗಿಲು ನೂಕಿ ಒಳಕ್ಕೆ ತಲೆಹಾಕಿ ನೋಡುತ್ತೇನೆ. ಅವಳು, ಮೂವತ್ತೈದು ವರ್ಷದ, ಐದನ್ನು ಹೆತ್ತು ಮೂರನ್ನು ಉಳಿಸಿಕೊಂಡಿರುವ ನನ್ನ ಹೆಂಡತಿ, ಅವಳ ಹಿರಿಯ ಮಗನಿಗಿಂತ ತುಸು ದೊಡ್ಡವನಾದ ಮಂಜಯ್ಯನೊಡನೆ ಕಾಮಕ್ರೀಡೆಯ ಉತ್ಕಟತೆಯಲ್ಲಿದ್ದಾಳೆ. ನನ್ನನ್ನು ನೋಡಿದ ಅವಳು ಹೇಗೆ ನಿಸ್ತೇಜಳಾದಳು, ಮಂಜಯ್ಯ ಹೇಗೆ ಮಿಂಚಿನಲ್ಲಿ ಮೇಲೆದ್ದು ಕದದ ಸಂದಿಯಲ್ಲಿ ಮರೆಯಾದ. ಅನಂತರ ತುಸು ಜಾಗಸಿಕ್ಕಿದ ತಕ್ಷಣ ನನ್ನನ್ನು ನೂಕಿಕೊಂಡು ಹೊರಗೆ ಓಡಿಹೋದ ಎಂಬ ವಿವರವೆಲ್ಲ ಇಲ್ಲಿ ಅಸಂಬದ್ಧವಾದದ್ದು. ಈ ಘಟನೆ ನನ್ನನ್ನು ಪುಡಿಪುಡಿ ಮಾಡಿಬಿಟ್ಟಿತು. ನಂಬಿಕೆಯೇ ಸಂಬಂಧದ ಮೂಲಧಾರ. ನಿಜವು ನಂಬಿಕೆಯ ಮೂಲತಂತು.

> ಇವೆರಡೂ ಭಗ್ನವಾದವನ ಜೀವನದಲ್ಲಿ ಬದುಕುವ ಯಾವ ಸಮರ್ಥನೆ ಉಳಿಯಬೇಕು ? ಇದಾದ ಮೂರನೆಯದಿನ ಹೆಂಡತಿಯು ಕೆರೆಯ ಮಡುವಿನಲ್ಲಿ ಸತ್ತು ಹೋದಳು. ಮಕ್ಕಳನ್ನು ಸಾಕಿ ದಡಮುಟ್ಟಿಸಬೇಕಾದರೆ ನಾನು ಬದುಕಲೇಬೇಕಾಗಿತ್ತು. (ಪು.404–5)

ಹೀಗೆ ಪರಮೇಶ್ವರಯ್ಯನಿಗೆ ಜಾನಕಮ್ಮನ ಪಾತಿವ್ರತ್ಯದಲ್ಲಿದ್ದ ನಂಬುಗೆ ನಾಶವಾಗಿ, ಅವಳ ರಹಸ್ಯ ವ್ಯಭಿಚಾರದ ಗುಟ್ಟು ರಟ್ಟಾದಾಗ ಆತನಿಗೆಂಥ ಆಘಾತ ವಾಗಿರಬೇಕೆಂಬುದನ್ನು ನಾವೇ ಊಹಿಸಿಕೊಳ್ಳಬೇಕು. ಈ ನಂಬುಗೆಯ ಬುಡಮೇಲಾದದ್ದರ ಪರಿಣಾಮವಾಗಿ ಆತನಿಗೆ ಜೀವನವು ಅರ್ಥಹೀನವಾದಂತೆ ನಿಸಿತು. ಆದರೆ ಸೂಕ್ಷ್ಮ ಸ್ವಭಾವದವನಾದ ಆತ ಜಾನಕಮ್ಮನಿಗೆ ಏನೂ ಬಯ್ಯಲೂ ಇಲ್ಲ, ಮಾತನಾಡಲೂ ಇಲ್ಲ. ಕೊನೆಗೆ ಎಂಟನೆಯ ದಿನ ಜಾನಕಿ ತಾನು ಯಾವ ಸ್ಥಳದಲ್ಲಿ ಮೊದಲು ಮಂಜಯ್ಯನನ್ನು ಭೇಟಿಯಾಗಿದ್ದಳೋ ಅದೇಸ್ಥಾನದಲ್ಲಿ ನೀರಿನಲ್ಲಿ ಮುಳುಗಿ ಪ್ರಾಣಬಿಟ್ಟಳು. ಪರಮ ಪ್ರಾತಿವ್ರತ್ಯದ ಸಾಕಾರಮೂರ್ತಿಯಾದ ರಾಮಾಯಣದ ಜಾನಕಿಗೂ ಈ ಕಾದಂಬರಿಯ ಜಾನಕಿಗೂ ಎಷ್ಟು ವ್ಯತ್ಯಾಸವಲ್ಲವೆ! ಜೀವನದ ಅರ್ಥಹೀನತೆಯನ್ನು ಕಂಡುಕೊಂಡಮೇಲೆ ಪರಮೇಶ್ವರಯ್ಯನು ತನಗಾದ ಅವಮಾನವನ್ನು ತಾಳಲಾರದೆ ಸಾಯಬಹುದಾಗಿತ್ತು. ಆದರೆ ಆತ ತನ್ನಿಚ್ಛೆಯಂತೆ ಸಾಯಲೂ ಆಗಲಿಲ್ಲ. ಪರಮೇಶ್ವರನ ಇನ್ನೊಂದು ಹೆಸರು ವಿಷಕಂಠನಲ್ಲವೆ. ಆತ ವಿಷಕಂಠನಂತೆ ತನ್ನ ದುಃಖವನ್ನು ತನ್ನಲ್ಲಿಯೆ ಬಚ್ಚಿಟ್ಟುಕೊಳ್ಳುತ್ತಾನೆ. ತನ್ನ ಚಿಕ್ಕಮಕ್ಕಳನ್ನು ಬೆಳೆಸಿ ಒಂದು ದಡಕ್ಕೆ ಹಚ್ಚಬೇಕಾದ ಅವಶ್ಯಕತೆ ತೀವ್ರವಾಗಿದೆ. ಈ ಬಿಕ್ಕಟ್ಟಿನಲ್ಲಿ (Predicament) ಸಿಲುಕಿದ ಆತನಿಗೆ ಬೇರೆ ದಾರಿ ತೋಚುವದಿಲ್ಲ. ಆದ್ದರಿಂದ ಆತ ಒಂದು ತರಹದ ನಿರ್ಲಿಪ್ತತೆಯನ್ನು ಬೆಳೆಸಿಕೊಂಡು, ತನ್ನ ದುಃಖದ ಕಾರಣವನ್ನು ಮಕ್ಕಳಿಗಾರಿಗೂ ಹೇಳದೆ, ಮೌನ ವಾಗಿಯೆ ಜೀವಿಸಿದ. ತನ್ನ ನಂಬುಗೆ ಬುಡಮೇಲಾದಂತೆ ತನ್ನ ಮಕ್ಕಳ ನಂಬುಗೆಯೂ ಬುಡಮೇಲಾದರೆ ಅವರಿಗೂ ಆಘಾತ ಮತ್ತು ಅವಮಾನವಾಗಬಹುದೆಂದು ಆತ ಆ ವಿಷಯವನ್ನು ಗುಪ್ತವಾಗಿಯೇ ಇಡುತ್ತಾನೆ. ಮುಂದೆ ತನ್ನ ಮಗಳು ಸಾವಿತ್ರಿ ಕೂಡ ಮಂಜಯ್ಯನನ್ನು ತನ್ನ ತಾಯಿ ಭೇಟಿಯಾದ ಸ್ಥಳದಲ್ಲಿಯೇ ಭೇಟಿಯಾಗಿ ಆತನಿಂದ ಮೋಹಿತಳಾಗಿ, ಆತನನ್ನೇ ಮದುವೆಯಾಗುತ್ತೇನೆಂದು ಹಟ ಹಿಡಿದಾಗ, ಪರಮೇಶ್ವರಯ್ಯನಿಗೆ ಎಲ್ಲಿಲ್ಲದ ಸಿಟ್ಟುಬಂದು, ಅವಳನ್ನು ಕೋಲಿನಿಂದ ಬಡಿಯು ತ್ತಾನೆಯೇ ಹೊರತು ಅವಳಿಗೆ ನಿಜವಾದ ಕಾರಣ ಹೇಳುವುದಿಲ್ಲ. ಅದರಂತೆ ಮಗನಿಗೂ ಅದರ ನಿಜವಾದ ಕಾರಣ ಹೇಳುವುದಿಲ್ಲ. ತನ್ನ ಪತ್ನಿಯ ಶೀಲವನ್ನು ಕೆಡಿಸಿ, ತನ್ನ ಮಗಳ ಜೀವನವನ್ನು ಹಾಳುಮಾಡಿದ ಮಂಜಯ್ಯನನ್ನೆ ಮತ್ತೆ ಕೋರ್ಟಿನಲ್ಲಿ ಸುಳ್ಳು ಸಾಕ್ಷಿ ಹೇಳುವುದರ ಮೂಲಕ ರಕ್ಷಿಸಿದ ಪರಮೇಶ್ವರಯ್ಯನಿಗೆ ಸಹಿಸಲಸಾಧ್ಯವಾದ ನೋವುಂಟಾಗಿ ಆತ ಆತ್ಮಹತ್ಯೆ ಮಾಡಿಕೊಳ್ಳುವ ಪ್ರಸಂಗ ಬರುತ್ತದೆ.

ಕಾದಂಬರಿಯಲ್ಲಿ ಸತ್ಯಪ್ಪನ ಪಾತ್ರವು ಮಂಜಯ್ಯನಂಥ ಲೈಂಗಿಕ ವಿಶಾರದನಿಗೆ ಒಳ್ಳೆಯ ವಿರೋಧ (contrast) ವನ್ನುಂಟುಮಾಡುತ್ತದೆ. ಗಾಂಧಿವಾದಿಯಾದ ಈತ ಕಟ್ಟಾಬ್ರಹ್ಮಚಾರಿಯಾಗಿ ಶಿಸ್ತಿನ ಜೀವನವನ್ನು ನಡೆಸುತ್ತಾನೆ. ಆದರೆ ಒಮ್ಮೆ ಮಂಜಯ್ಯನ ಸಹವಾಸದಲ್ಲಿ ಬಂದಾಗ ಮಂಜಯ್ಯನು ಆತನ ಗಾಂಧಿವಾದವನ್ನೂ, ಬ್ರಹ್ಮಚರ್ಯೆಯನ್ನೂ ಗೇಲಿಮಾಡಿ, ಚಂದ್ರಿಕಾ ಎಂಬ ವೇಶ್ಯೆಯೊಡನೆ ಸಂಗಮಾಡಲು ಪುಸಲಾಯಿಸುತ್ತಾನೆ. ಆದರೆ ತತ್ವಬದ್ಧನಾದ ಸತ್ಯಪ್ಪ ಅದನ್ನು ನಿರಾಕರಿಸುತ್ತಾನೆ. ಆಗ ಮಂಜಯ್ಯನು ಸಾಂದರ್ಭಿಕವಾಗಿ ತನ್ನ ಸಿದ್ಧಾಂತವನ್ನು ಮಂಡಿಸುತ್ತಾನೆ. "ಅಂಥ ಬಳೆ ಚಂದ್ರಿಕಾನ ಬ್ಯಾಡ ಅಂತ ಕಳಿಸಿದಮೇಲೆ ನಿದ್ದೆ ಹ್ಯಾಗೆ ಬರುತ್ತೆ ? ಇಂಥ ಆಶೆಗಳನ್ನೆಲ್ಲ ಅವು ಬಂದಹಾಗೆ ಪೂರೈಸಿ ಮುಗಿಸಬೇಕು. ಇಲ್ಲದಿದ್ದರೆ ಒಳಗೇ ಉಳಿದು ಅಲ್ಲೋಲ ಕಲ್ಲೋಲ ಮಾಡ್ತವೆ. ನೆಗಡಿಯಾಗಿ ಮೂಗುಕಟ್ಟಿದರೆ ಏನು ಮಾಡ್ತೀವಿ? ಶಿಂಬಳ ಸೀತುಹಾಕ್ತೀವಿ. ಹಾಗೆಯೇ ಬಿಡುಕ್ಕಾಗುತ್ತೆಯೆ ?" (ಪು. 129). ಆತನ ಸಿದ್ಧಾಂತವನ್ನು ಕೇಳಿ ತಿಳಿದಮೇಲೂ ಸತ್ಯಪ್ಪನ ಚಿತ್ತ ಚಂಚಲವಾಗಲಿಲ್ಲ. ಆದರೂ ಸಹಿತ ಮನುಷ್ಯನ ಮೂಲಭೂತ ಆಶೆಗಳ ಅರಿವಿದ್ದ ಮಂಜಯ್ಯ ಆತನಿಗೆ ಮನ ವೊಲಿಸುವಂತೆ ಪ್ರಶ್ನೆ ಕೇಳಿ ಆಮಂತ್ರಿಸುತ್ತಾನೆ.

> ನಿಮ್ಮನ್ನೊಂದು ಪ್ರಶ್ನೆ ಕೇಳ್ತೀನಿ, ಪ್ರಮಾಣಪೂರ್ವಕವಾಗಿ ಉತ್ತರ ಹೇಳ್ತೀರಾ ? ಚಿಕ್ಕವಯಸ್ಸಿಗೇ ನಿಮ್ಮ ಹೆಂಡತಿ ಸತ್ತರು. ಅವತ್ತಿನಿಂದ ಇವತ್ತಿನವರೆಗೆ ನೀವು ಹೆಂಗಸಿನ ಮೈಮುಟ್ಟಿಲ್ಲ ಅಂತೀರಾ ? ನಿಮ್ಮ ಮಾತನ್ನು ನಾನು ನಂಬುತೀನಿ. ಹಾಗಿದ್ದು ಏನು ಸಾಧಿಸಿದಿರಿ ? ಮಗನಿಗೆ ಮದುವೆ ಮಾಡಿದಿರಿ. ಆಯ್ತು. ಹೆಂಗಸಿನ ಸವಾಸ ಮಾಡಿದ್ದರೂ ಆ ಕೆಲಸ ಮಾಡಬೌದಾಗಿತ್ತು. ಅದಕ್ಕೂ ಇದಕ್ಕೂ ಏನು ಸಂಬಂಧ ? ಸತ್ಯನಾರಾಯಣಪ್ಪನೋರೂ ಅಂದರೆ ಮಹಾತ್ಮಾ ಗಾಂಧಿ ಮುರುಕು ಅಂತ ಒಬ್ಬಬ್ಬರ ಕೈಲಿ ಕರೆಸ್ಕಳೂದು ಬಿಟ್ಟು ಏನು ಸಾಧಿಸಿದಿರಿ ? ನಿಮಗೆ ಒಂದು ಸಲವೂ ಆಶೆ ಆಗೂದೇ ಇಲ್ಲವೆ ? ಸನ್ಯಾಸಿಗಳ ಹಂಗೆ ಊಟ ತಿಂಡಿ ಬಿಗಿಮಾಡಿ ಆಶೆ ಹುಟ್ಟದ ಹಾಗೆ ಶರೀರಾನ ಬತ್ತಿಸಿ, ಇಲ್ಲವೆ ಏನು? ನನ್ನ ಮಾತು ಕೇಳಿ. ಈ ಮಂಜಯ್ಯ ಸ್ನೇಹಕ್ಕೆ ಎರಡು ಬಗೆದಿಲ್ಲ. ನಾನು ಯಾರ ಕೈಲೂ ಹೇಳುಲ್ಲ. ನಿಮ್ಮ ಕೈಮುಟ್ಟಿ ಆಣೆ ಮಾಡ್ತೀನಿ. ನಾಳೆ ಯಾದರೂ ಸರಿ. ಇನ್ನು ಯಾವತ್ತಲಾದರೂ ಸರಿ. ಸುಮ್ಮನೆ ನನ್ನ ಹತ್ತಿರ ಬನ್ನಿ. ಬಿಳಿಕೆರೆ, ಚನ್ನರಾಯಪಟ್ಟಣ, ಹಾಸನ ಯಾವ ಊರ ಲ್ಲಾದರೂ ಆಗಬೌದು. ಯಾರಿಗೂ ಗೊತ್ತಾಗದ ಹಾಗೆ ಒಬ್ಬಳನ್ನು, ನೀವು ಒಪ್ಪಿದೋಳನ್ನ ಕರಸ್ತೀನಿ. ಒಂದು ರಾತ್ರಿ ಸುಖಪಡಿ. ಆಮ್ಯಾಲೆ ಬ್ಯಾಡ ಅನ್ನಿಸಿದರೆ ಬ್ಯಾಡ. ಆ ರಾತ್ರಿಗೆ ಮೊದಲು ನಿಮ್ಮ ತೂಕ

> ನೋಡ್ಕಳಿ. ಆ ರಾತ್ರಿ ಕಳೆದ ಮೇಲೆ ಇನ್ನೊಂದು ಸಲ ನೋಡ್ಕಳಿ. ಏನೂ ಇಳಿದಿರುಲ್ಲ. ವಾಸ್ತವಾಗಿ ಹೆಚ್ಚಿರುತ್ತೆ. ನೀವು ಇಲ್ಲದ ಭ್ರಮೇಲಿ, ಉಪ್ಪಿಲ್ಲದ ಊಟ ಉಂಡಹಾಗೆ......
>
> (ಪು. 132)

ಮಂಜಯ್ಯನ ಉಪದೇಶಕ್ಕೆ ಕಿವಿಗೊಡದೆ ಸತ್ಯಪ್ಪ ಊರಿಗೆ ಹಿಂದಿರುಗುತ್ತಾನೆ. ಆದರೆ ಹಲವು ದಿನಗಳು ಕಳೆದನಂತರ ಅತನಲ್ಲಿ ಕಾಮಪಿಪಾಸೆ ಕ್ರಮೇಣ ಹೆಚ್ಚಾಗತೊಡಗುತ್ತದೆ. ಅವನ ಈ ಪ್ರಾಕೃತಿಕ ಬಯಕೆಯು ಅತನ ಸಾತ್ವಿಕ ಸ್ವಭಾವವನ್ನು ವಿಕಾರಿ ಬೆಳೆಯತೊಡಗುತ್ತದೆ. ಅದು ಅವನನ್ನು ಹಗಲೂ ರಾತ್ರಿ ಕಾಡತೊಡಗುತ್ತದೆ. ಹೀಗಾಗಿ ಆತನಿಗೆ ಬೇರೆದಾರಿ ಕಾಣದೆ ಆತ ಮಂಜಯ್ಯನ ಹತ್ತಿರ ಹೋಗುತ್ತಾನೆ. ಮಾನವ ಸ್ವಭಾವದ ಸೂಕ್ಷ್ಮಪ್ರಜ್ಞೆಯುಳ್ಳ ಮಂಜಯ್ಯ ಅವನ ಸಮಸ್ಯೆಯನ್ನರಿತುಕೊಂಡು ತೋಟದ ಗುಡಿಸಲಲ್ಲಿ ನಾಗಿಯೆಂಬ ತರುಣಿಯನ್ನೊಪ್ಪಿಸುತ್ತಾನೆ. ಕೊನೆಗೆ ಸತ್ಯಪ್ಪ ಆ ಗುಡಿಸಿಲಿನಲ್ಲಿ ಪ್ರವೇಶಿಸಿದಾಗ ನಾಗಿ ಸಂಕೋಚವಿಲ್ಲದೆ ಆತನನ್ನು ಬರಮಾಡಿಕೊಂಡು ಸುರತದಲ್ಲಿ ತೊಡಗುತ್ತಾಳೆ. ಆದರೆ ಸತ್ಯಪ್ಪನಿಗೆ ಮಾತ್ರ ಕಾಮಬಾಧೆಯನ್ನು ಪರಿಹರಿಸಿಕೊಂಡರೂ ಈ ಸಂಗದ ಬಗೆಗೆ ಹೇಸಿಕೆಯುಂಟಾಗುತ್ತದೆ. ಹೀಗಾಗಿ ಆತ ಅಲ್ಲಿಂದ ಬೇಗ ಮೇಲೆದ್ದು ಹೊರಗೆ ನಡೆಯುತ್ತಾನೆ. ತಾನೊಂದು ಅಪರಾಧವನ್ನೆಸಗಿದ್ದೇನೆಂಬ ಪ್ರಜ್ಞೆ ಆತನನ್ನು ಕಾಡ ಕಾಡತೊಡಗುತ್ತದೆ. ಅದಕ್ಕಿಂತ ಹೆಚ್ಚಾಗಿ ದೈಹಿಕ ಅನಾರೋಗ್ಯವೇ ಅವನನ್ನು ಭೂತದಂತೆ ಬೆನ್ನತ್ತಿ ಕಾಡುತ್ತದೆ. ನಾಗಿಯೊಡನೆ ಸಂಗಮಾಡಿ ಬಂದಮೇಲೆ ಆತನ ಮರ್ಮಾಂಗದ ಮೇಲೆ ಗುಳ್ಳೆಗಳು ಕಾಣಿಸಿಕೊಂಡು, ಕ್ರಮೇಣ ತುರಿಕೆ ಹೆಚ್ಚಾಗಿ ಉರಿಯತೊಡಗುತ್ತದೆ. ಆತ ಒಂದು ಸಮಸ್ಯೆಯನ್ನು ಪರಿಹರಿಸಿಕೊಳ್ಳುವುದರೊಳಗೆ ಮತ್ತೊಂದು ದೊಡ್ಡ ಸಮಸ್ಯೆಯ ಸುಳಿಯೊಳಗೆ ಸಿಲುಕಿಕೊಳ್ಳುತ್ತಾನೆ. ಬರಬರುತ್ತ ರೋಗ ಉಲ್ಬಣಗೊಂಡಂತೆ ಸತ್ಯಪ್ಪನಿಗೆ ದಿಕ್ಕುತೋಚದಂತಾಗುತ್ತದೆ. ಹೀಗಾಗಿ ಅವಸರದಿಂದ ಡಾ॥ ಪ್ರಕಾಶನೆಂಬವನನ್ನು ಭೇಟಿಯಾಗುತ್ತಾನೆ. ಆತ ವಿಪರೀತ (3000 ರೂ.) ಹಣ ಕೇಳಿದಾಗ ಸತ್ಯಪ್ಪನಿಗೆ ಮತ್ತೆ ದಿಗ್ಭ್ರಮೆಯಾಗುತ್ತದೆ. ಲೈಂಗಿಕ ಸಮಸ್ಯೆಯೊಂದಿಗೆ ಹಣಕಾಸಿನ ಸಮಸ್ಯೆಯೂ ಸೇರಿಕೊಳ್ಳುತ್ತದೆ. ಹೇಗಾದರೂ ಮಾಡಿ ಹಣ ಕೂಡಿಸಬೇಕೆಂದು ಮಂಡಿ ನಾಗಪ್ಪನವರ ಕಡೆ ಹೋದರೆ ಅವರು ಲೆಕ್ಕವೆಲ್ಲ ಅವರ ಮಗನ ಹೆಸರಿನಲ್ಲಿರುವುದರಿಂದ ಆತನ ಒಪ್ಪಿಗೆ ಅಥವಾ ಸಹಿ ಬೇಕೆಂದು ಹೇಳಿಕಳಿಸುತ್ತಾರೆ. ಹೀಗೆ ಮಾನಸಿಕ, ದೈಹಿಕ ಮತ್ತು ಆರ್ಥಿಕ ಸಮಸ್ಯೆಗಳೆಲ್ಲವೂ ಸೇರಿಕೊಂಡು ಆತನನ್ನು ಹಿಂಡಿ ಹಿಪ್ಪೆಮಾಡುತ್ತವೆ. ಆತ ದಾರಿಯಲ್ಲಿ ಮಂಜಯ್ಯನನ್ನು ಭೇಟಿಯಾಗಿ ಹಣ ಕೇಳಿದಾಗ ಆತನೂ ಒಂದು ಉಪದೇಶಕೊಟ್ಟು ಪಾರಾಗಿಬಿಡುತ್ತಾನೆ. ಹೀಗಾಗಿ ದಿಕ್ಕುತೋಚದ ಸತ್ಯಪ್ಪ ಆತ್ಮಹತ್ಯೆ ಮಾಡಿಕೊಳ್ಳ

ಬೇಕೆಂದು ನಿರ್ಧರಿಸಿ, ಹಗ್ಗವನ್ನು ತೆಗೆದುಕೊಂಡು ಊರಹೊರಗಿನ ಗಿಡದ ಹತ್ತಿರ ನಡೆಯುತ್ತಾನೆ. ಆತನ ಮನಸ್ಸಿನಲ್ಲಿ ಸಾಕಷ್ಟು ತೊಳಲಾಟ ನಡೆಯುತ್ತದೆ. ಕೊನೆಗೆ ಮತ್ತೆ ಜೀವಿಸುವ ನಿರ್ಧಾರ ಕೈಕೊಂಡು ಮನೆಗೆ ಹಿಂದಿರುಗಿ ಮಗನೊಂದಿಗೆ ಹುಚ್ಚುಚ್ಚಾರ ಮಾತನಾಡಿ, ತನ್ನ ಗುಪ್ತ ಸಮಸ್ಯೆಯನ್ನು ಬಹಿರಂಗಪಡಿಸಿ, ಹಣ ವನ್ನಿಸಿದುಕೊಳ್ಳುತ್ತಾನೆ. ಆ ಹಣದ ಸಹಾಯದಿಂದಲೇ ಹಕೀಮ್ ಡಾಕ್ಟರನ ಹತ್ತಿರ ಚಿಕಿತ್ಸೆ ಪಡೆದು ಕ್ರಮೇಣ ಲೈಂಗಿಕ ರೋಗದಿಂದ ಮುಕ್ತನಾಗುತ್ತಾನೆ. ಅನಂತರ ಆತ ಸಾವಿತ್ರಿಯ ಮನೆಯಲ್ಲಿ ಆಶ್ರಯ ಪಡೆದು ಆತ್ಮವಿಮರ್ಶೆ ಮಾಡಿಕೊಳ್ಳುತ್ತಾನೆ. ಹಲವು ದಿನಗಳು ಕಳೆದ ನಂತರ ಸಾವಿತ್ರಿಗೆ ತನ್ನ ತಾಯಿಯ ಸಾವಿನ ಕಾರಣ ತಿಳಿದು, ನಾಚಿಕೆಯಿಂದ ಆತ್ಮಹತ್ಯೆ ಮಾಡಿಕೊಳ್ಳಲು ರಾತ್ರಿ ಕೆರೆಯ ಬಂಡೆಗಲ್ಲಿಗೆ ಹೋದಾಗ ಸತ್ಯಪ್ಪ ಅವಳನ್ನು ರಕ್ಷಿಸಿ ಅವಳನ್ನು ಮದುವೆಯಾಗುವ ಅಭಯವನ್ನೀಯುತ್ತಾನೆ.

ಹೀಗೆ ಸತ್ಯಪ್ಪನ ಮೌಲ್ಯಗಳು ಮಂಜಯ್ಯನ ಮೌಲ್ಯಗಳಿಗೆ ವಿರುದ್ಧವಾಗಿವೆ. ಅವರಿಬ್ಬರೂ ತಮ್ಮ ಮೌಲ್ಯಗಳನ್ನು ತಾವೇ ಆರಿಸಿಕೊಂಡು ಅವುಗಳ ಅನುಷ್ಠಾನದಲ್ಲಿ ತೊಡಗುತ್ತಾರೆ. ಗಾಂಧಿವಾದಿಯೂ, ಹೆಂಡತಿಯನ್ನು ಕಳೆದುಕೊಂಡು ಬ್ರಹ್ಮಚರ್ಯ ಜೀವನವನ್ನು ನಡೆಸುವಂಥ ಸಾತ್ವಿಕ ವ್ಯಕ್ತಿಯೂ ಆದಂಥ ಸತ್ಯಪ್ಪನಿಗೆ ಕಾಮದ ಬಾಧೆ ಕಾಡಿಸದೆ ಬಿಡಲಿಲ್ಲ. ಕ್ಷಣಿಕ ಲೈಂಗಿಕ ಸುಖಕ್ಕಿಳಿಸಿದ ಆತ ರೋಗವನ್ನು ತಗುಲಿಸಿಕೊಂಡು, ಅದಕ್ಕಾಗಿ ಅತ್ತಿತ್ತ ಪರದಾಡಿ, ಗುಣಮಾಡಿಕೊಂಡು, ಪಶ್ಚಾತ್ತಾಪಪಟ್ಟು, ತನ್ನ ಜೀವನವನ್ನು ಹಸನಾಗಿ ಮಾಡಿಕೊಳ್ಳಬೇಕಾದರೆ ಸಾಕುಸಾಕಾಗಿಹೋಗುತ್ತದೆ. ಆದರೂ ಆತನ ಪ್ರಾಮಾಣಿಕತೆಯ ಪರಿಚಯವಿದ್ದ ಸಾವಿತ್ರಿ ಕೊನೆಗೆ ಆತನನ್ನು ಮದುವೆ ಯಾಗಲು ಒಪ್ಪಿಕೊಳ್ಳುತ್ತಾಳೆ.

ಸರೋಜಾಕ್ಷಿ ಈ ಕಾದಂಬರಿಯಲ್ಲಿ ಬರುವ ಇನ್ನೊಂದು ಪ್ರಮುಖ ಪಾತ್ರ. ಇವಳು ಮಹಿಳಾ ಸ್ವಾತಂತ್ರ್ಯದ ಒಂದಂಗವಾದ ಲೈಗಿಂಕ ಸ್ವಾತಂತ್ರ್ಯವನ್ನು ಸದ್ದುಗದ್ದಲ ವಿಲ್ಲದೆ, ಅತ್ಯಂತ ಚಾಣಾಕ್ಷತನದಿಂದ ಮತ್ತು ದಕ್ಷತೆಯಿಂದ ಅನುಭವಿಸುತ್ತಾಳೆ. ಭೋಳೇ ಸ್ವಭಾವದ ಗಂಡನಿಂದಾಗಿ ಅವಳು ತನ್ನ ವ್ಯಭಿಚಾರವನ್ನು ಗುಪ್ತವಾಗಿ ಆದರೆ ಸುವ್ಯವಸ್ಥಿತವಾಗಿ ನಡೆಸುತ್ತಾಳೆ. ಫಾರೆಸ್ಟ್ ಆಫೀಸಿನಲ್ಲಿ ಕೆಲಸ ಮಾಡುತ್ತಿರುವ ಅವಳ ಗಂಡ ಅಪ್ಪಾಜಪ್ಪ ಒಂದು ತರಹದ ಹುಚ್ಚನೆಂದೇ ಹೇಳಬೇಕು. ಹೀಗಾಗಿ ಸರೋಜಾಕ್ಷಿಗೆ ಪಾತಿವ್ರತ್ಯವೆಂಬ ಕಠಿಣ ಆದರ್ಶದ ಹಂಗೇ ಇರುವುದಿಲ್ಲ. ಅವಳ ಜಾರತನಕ್ಕೆ ಅವಳ ಪರಿಸ್ಥಿತಿಯೂ ಅನುಕೂಲಕರವಾಗಿದೆ. ನೋಡಲಿಕ್ಕೆ ರೂಪವತಿಯಾಗಿರದಿದ್ದರೂ ಅವಳಲ್ಲಿ ಸಾಕಷ್ಟು ಜೀವನೋತ್ಸಾಹವಿದೆ. ಅದರೊಂದಿಗೆ ರಸಿಕತನವೂ ಇದೆ. ಹೆಣ್ಣಾಳ್ಯನಂಥ ಗಂಡನನ್ನು ಮಾಡಿಕೊಂಡ ಅವಳಿಗೆ ನಿಜವಾದ, ಗಡುಸಾದ, ಅಧಿಕಾರ ಚಲಾಯಿಸುವ ಗಂಡಸಿನೊಂದಿಗೆ ಪ್ರಪಂಚ ಮಾಡಬೇಕೆಂಬ ಬಲವಾದ,

ಗುಪ್ತ ಆಶೆಯಿದೆ, ಅದೇ ಕಾರಣದಿಂದಾಗಿಯೇ ಅವಳು ತರುಣ ಅಧಿಕಾರಿಯಾದ ಲಕ್ಕಪ್ಪನೊಂದಿಗೆ ಪ್ರಣಯ ವ್ಯವಹಾರ ಸಾಗಿಸಿ, ಅವನಿಂದ ಶಶಿಕಾಂತನೆಂಬ ಮಗುವನ್ನು ಪಡೆದಳು. ಹಲವು ವರುಷಗಳ ನಂತರ ಅವಳು ಫಾರೆಸ್ಟ್ ಆಫೀಸರ್ ನಾದ ಸುಬ್ಬಯ್ಯನ ಸಹವಾಸದಲ್ಲಿ ಬಂದಾಗ, ಆತನೊಂದಿಗೆ ಬೆಂಗಳೂರಿನ ಲಾಜುಗಳಲ್ಲಿ ಚಕ್ಕಂದವಾಡಿ, ಆತನಿಂದ ವೈಜಯಂತಿಯೆಂಬ ಮಗಳನ್ನು ಪಡೆದಳು. ಅವೆರಡೂ ಮಕ್ಕಳನ್ನು ಭೋಳೀ ಸ್ವಭಾವದ ಅಪ್ಪಾಜಪ್ಪ ತನ್ನ ಮಕ್ಕಳೆಂದೇ ನಂಬಿಬಿಟ್ಟಿದ್ದಾನೆ. ಸಾವಿತ್ರಿಯ ಈ ಪ್ರಣಯದ ಚರಿತ್ರೆಯನ್ನು ತಿಳಿದುಕೊಂಡ ಮಂಜಯ್ಯನು ಅವಳಿಗೆ ಕೈಹಚ್ಚುತ್ತಾನೆ. ಮೊದಲನೆಯ ಸಲ ದುಡುಕಿ, ಅವಳನ್ನು ಸುರತಕ್ಕೆಳೆದಾಗ ಆವಳಿಂದ ಕಪಾಳಕ್ಕೆ ಹೊಡೆಸಿಕೊಂಡು, ಅವಮಾನಗೊಂಡು, ಅವಳ ಗಂಡನನ್ನು ನೌಕರಿಯಿಂದ ಸಸ್ಪೆಂಡ್ ಮಾಡಿಸಿ, ಸೇಡುತೀರಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಆದರೆ ಸರೋಜಾಕ್ಷಿ ತನ್ನ ಹಳೆಯ ಪ್ರಿಯತಮನಾದ, ಸದ್ಯ ಚೀಫ್ ಕಂಜರ್ವೇಟಿವ್‌ನಾದ ಸುಬ್ಬಯ್ಯನನ್ನು ಭೇಟಿಯಾಗಿ ತನ್ನ ಗಂಡನ ನೌಕರಿಯನ್ನು ಮತ್ತೆ ಖಾಯಂಗೊಳಿಸುತ್ತಾಳೆ. ಆಗ ಮಂಜಯ್ಯ ಅನಿವಾರ್ಯವಾಗಿ ತನ್ನ ಗುತ್ತಿಗೆದಾರ ನೌಕರಿಯನ್ನು ಕಳೆದುಕೊಳ್ಳ ಬೇಕಾಗುತ್ತದೆ. ತನ್ನ ಗಂಡನ ಅವಮಾನಕ್ಕೆಗೆ ಕಾರಣನಾದ ಮಂಜಯ್ಯನ ಬಗೆಗೆ ತಾತ್ಕಾಲಿಕವಾಗಿ ಸೇಡಿನ ಭಾವನೆಯುಂಟಾದರೂ, ಆತನ ಬಗೆಗಿದ್ದ ಅವಳ ಗುಪ್ತ ಆಕರ್ಷಣೆ ಕಡಿಮೆಯಾಗಿಲ್ಲ. ಅದ್ದರಿಂದಲೇ ಆತನಿಗೆ ಮತ್ತೆ ಹೇಳಿಕಳಿಸುತ್ತಾಳೆ. ಅವಳಾಮಂತ್ರಣದಿಂದ ಪ್ರಚೋದಿತನಾದ ಮಂಜಯ್ಯ ಅವಳನ್ನು ಭೇಟಿಯಾದಾಗ 'ನನ್ನ ಮನಸ್ಸೆಲ್ಲ ನಿನ್ನ ಮೇಲಿದೆ. ನನ್ನ ಮಟ್ಟಿಗೆ ನೀನೇ ಗಂಡ. ನೀನೊಬ್ಬನೆ ಗಂಡು' (ಪು. 363). ಎಂದು ತನ್ನ ಪ್ರೇಮವನ್ನು ಪ್ರಕಟಿಸುತ್ತಾಳೆ. ಆತನನ್ನು ಪ್ರಚೋದಿಸಿ ಸುರತಕ್ಕೆಳೆಯುತ್ತಾಳೆ. ಆದರೆ ಮಂಜಯ್ಯನಿಗೆ ಲಕ್ವಾ ಹೊಡೆದಂತಾಗಿ ಅಂಥ ಕಾಮಕಲಾವಿಶಾರದೆಯ ಪ್ರಚೋದನೆಯಿಂದಲೂ ಪುಲಕಿತನಾಗದೆ, ಬಟ್ಟೆಧರಿಸಿ ಅಲ್ಲಿಂದ ಬಾಗಿಲು ತೆಗೆದು ಹೊರಗೆ ಹೋಗಿಬಿಡುತ್ತಾನೆ.

ಈ ಕಾದಂಬರಿಯಲ್ಲಿ ಸರೋಜಾಕ್ಷಿಯ ಪಾತ್ರ ಸಾವಿತ್ರಿಯ ಪಾತ್ರಕ್ಕೆ ಒಳ್ಳೆಯ ವಿರೋಧವನ್ನೊದಗಿಸುತ್ತದೆ. ಪಾತಿವ್ರತ್ಯದ ಪಾವಿತ್ರ್ಯದಲ್ಲಿ ಅಪಾರ ನಂಬುಗೆಯುಳ್ಳ ಸಾವಿತ್ರಿಯೊಂದಿಗೆ ಅವಳ ಗಂಡನಾದ ಮಂಜಯ್ಯ ಅನೇಕ ವರುಷಗಳ ಅಂತರದ ನಂತರ ಅವಳೊಡನೆ ಬಲಾತ್ಕಾರವಾಗಿ ಸಂಭೋಗಿಸಿದಾಗ, ಅವಮಾನಪಟ್ಟು ಡಾಕ್ಟರರ ಹತ್ತಿರ ಚಿಕಿತ್ಸೆ ಪಡೆಯಲು ಹಂಬಲಿಸುವ ಸಾವಿತ್ರಿಗೂ, ಗಂಡನಿದ್ದೂ ಸುವ್ಯವಸ್ಥಿತ ವಾಗಿ ಹಾದರ ಮಾಡುವ ಸರೋಜಾಕ್ಷಿಗೂ ಅಜಗಜಾಂತರ ಅಂತರವಿದೆ. ಇಬ್ಬರಿಗೂ ಅವರವರವೇ ಆದ ಮೌಲ್ಯಗಳಿದ್ದು ಅದನ್ನವರು ಸ್ವಯಂಪ್ರೇರಣೆಯಿಂದಲೇ ಪಾಲಿಸುತ್ತಾರೆ. ಸಾವಿತ್ರಿಗೆ ಪಾತಿವ್ರತ್ಯದ ಬಗೆಗಿದ್ದ ಪವಿತ್ರ ಭಾವನೆ ಸರೋಜಾಕ್ಷಿಗಿಲ್ಲ. ಪಾತಿವ್ರತ್ಯವೆಂಬ ಆದರ್ಶದ ಅಪಮೌಲ್ಯವಾದ ವ್ಯಭಿಚಾರವೇ ಅವಳಿಗೆ ಪರಮ

ಮೌಲ್ಯವಾಗಿದೆ. ಪಾತಿವ್ರತ್ಯವೆಂಬುದು ನೈತಿಕಾದರ್ಶವಾದರೂ, ಸರೋಜಾಕ್ಷಿಯ ಜೀವನದಲ್ಲಿ ಅದನ್ನು ಪಾಲಿಸದಿರುವುದರಿಂದಲೇ ಹೆಚ್ಚು ಸುಖಸಂತೋಷ, ಲಾಭ ಮತ್ತು ರಂಜನೆ ದೊರೆತಿವೆ. ಆದರೆ ಸಾವಿತ್ರಿಗೆ ತನ್ನ ಪಾತಿವ್ರತ್ಯವಷ್ಟೇ ಅಲ್ಲ, ತನ್ನ ತಾಯಿಯ ಪಾತಿವ್ರತ್ಯವೂ ಕೂಡ ಮುಖ್ಯವಾಗಿದೆ. ತನ್ನ ತಾಯಿಯ ಪಾತಿವ್ರತ್ಯಕ್ಕೂ ಚ್ಯುತಿಯುಂಟಾಗಿತ್ತೆಂದು ಅನೇಕ ವರುಷಗಳ ನಂತರ ತಿಳಿದಾಗಲೂ ಆಕೆ ನಾಚಿ ಮುದುರುತ್ತಾಳೆ. ಅಷ್ಟೇ ಅಲ್ಲ, ಆತ್ಮಹತ್ಯೆಗೂ ಪ್ರಯತ್ನಿಸುತ್ತಾಳೆ. ಹೀಗೆ ಪಾತಿವ್ರತ್ಯದ ಆದರ್ಶವನ್ನು ಅಪಮೌಲ್ಯಗೊಳಿಸಿದಾಗ ಸರೋಜಾಕ್ಷಿಯ ಜೀವನದಲ್ಲಿ ಸುಖವುಂಟಾದರೆ, ಸಾವಿತ್ರಿಯ ಜೀವನದಲ್ಲಿ ದುಃಖವುಂಟಾಗುತ್ತದೆ.

ಒಟ್ಟಿನಮೇಲೆ ಹೇಳಬೇಕೆಂದರೆ "ಸಾಕ್ಷಿ" ಕಾದಂಬರಿಯಲ್ಲಿ ಭೈರಪ್ಪನವರು ಮನುಷ್ಯನ ಅಂತಃಸಾಕ್ಷಿ ಜಾಗೃತವಾದಾಗ ಆತ ಯಾವ ಯಾವ ತೊಂದರೆಗಳನ್ನು ಮತ್ತು ದ್ವಂದ್ವಗಳನ್ನು ಅನುಭವಿಸಬೇಕಾಗುತ್ತದೆಂಬುದನ್ನು ಅತ್ಯಂತ ಸೊಗಸಾಗಿ, ಸೂಕ್ಷ್ಮವಾಗಿ ಮತ್ತು ಸುವಿಸ್ತಾರವಾಗಿ ಚಿತ್ರಿಸಿದ್ದಾರೆ. ಪರಮೇಶ್ವರಯ್ಯ, ಸತ್ಯಪ್ಪ ಮತ್ತು ಸಾವಿತ್ರಿಯಂಥವರಿಗೆ ಅದು ಜಾಗೃತವಾದರೆ, ಮಂಜಯ್ಯ, ಸರೋಜಾಕ್ಷಿ ಮುಂತಾದವರಿಗೆ ಅದು ಜಾಗೃತವೇ ಆಗುವುದಿಲ್ಲ. ಏಕೆಂದರೆ ಅವರು ಅಂಥ ಸಾತ್ವಿಕ ಮೌಲ್ಯಗಳಲ್ಲಿ ನಂಬಿರುವುದೇ ಇಲ್ಲ. ಅವಕಾಶವಾದಿಗಳಾದ ಅವರು ಸಮಯ ಸಿಕ್ಕಾಗ ಐಹಿಕ ಸುಖವನ್ನನುಭವಿಸುತ್ತ ಹೋಗುತ್ತಾರೆ. ಆದರ್ಶವಾದಿಗಳಾದ ಪರಮೇಶ್ವರಯ್ಯ ಮತ್ತು ಸತ್ಯಪ್ಪರಂಥವರಿಗೆ ಮಾತ್ರ ತಮ್ಮ ಆದರ್ಶಗಳು ಬುಡ ಮೇಲಾದಾಗ ನಾಚಿಕೆ (guilt) ಮತ್ತು ಅಪರಾಧಪ್ರಜ್ಞೆ (shame) ಯಿಂದ ಕಸಿವಿಸಿ ಗೊಳ್ಳಬೇಕಾಗುತ್ತದೆ. ಒಂದು ಸಮಾಜದಲ್ಲಿ ಬದಲಾವಣೆಯಾಗುತ್ತಲಿದ್ದಾಗ ಪಾತಿ ವ್ರತ್ಯ (ಅಥವಾ ಪತ್ನಿವ್ರತ್ಯ) ತನ್ನ ಮಹತ್ವವನ್ನು ಕಳೆದುಕೊಳ್ಳುವ ಕಾಲದಲ್ಲಿ ಹಳೆಯ ಮತ್ತು ಹೊಸ ಪೀಳಿಗೆಯವರಲ್ಲಿ ಅಥವಾ ಒಂದೇ ಪೀಳಿಗೆಯವರಾದರೂ ಹಳೆಯ ಮೌಲ್ಯ ಮತ್ತು ಹೊಸ ಮೌಲ್ಯಗಳಲ್ಲಿ ನಂಬುಗೆಯಿರುವವರ ಮಧ್ಯದಲ್ಲಿ ತರಹದ ಸಂಘರ್ಷವೇರ್ಪಡುತ್ತದೆ. ಹೊಸ ಮೌಲ್ಯಗಳನ್ನು ಸ್ವೀಕರಿಸಲಾರದಂಥ ಪರಮೇಶ್ವರಯ್ಯನಿಗೆ ಉಳಿದುದೊಂದೇ ಹಾದಿ : ಆತ್ಮಹತ್ಯೆ. ಈ ಕಾದಂಬರಿಯು ಸೀಮಿತಾರ್ಥದಲ್ಲಿ ಬ್ರಾಹ್ಮಣ ಸಮಾಜದ ಅವನತಿಯನ್ನೂ, ವಿಸ್ತೃತಾರ್ಥದಲ್ಲಿ ಭಾರತೀಯ ಅಥವಾ ಮಾನವ ಜೀವನದ ಅವನತಿಯನ್ನೂ ಚಿತ್ರಿಸುತ್ತದೆ. ಇದಕ್ಕೆ ಅವನತಿಯೆನ್ನಬೇಕೊ ಅಥವಾ ಪ್ರಗತಿಯೆನ್ನಬೇಕೊ ಎನ್ನುವದೂ ಒಂದು ಪ್ರಶ್ನೆ ಯಾಗಿಯೇ ಉಳಿಯುತ್ತದೆ. ಈ ಕೃತಿಯ ಮೂಲಕ ಭೈರಪ್ಪನವರು ಓದುಗರಲ್ಲಿ ಮೂಲಭೂತ ನೈತಿಕ ಪ್ರಶ್ನೆಗಳನ್ನು ಕೆರಳಿಸಿ ಚಿಂತನೆಗೆ ತೊಡಗಿಸುತ್ತಾರೆ. ಅಂತಃಸಾಕ್ಷಿ ಯೆಂಬುದು ನೈತಿಕ ಸಮಸ್ಯೆಯಾಗಿದ್ದು ಅದು ಹೊಂದಿರುವ ಧರ್ಮಾಧರ್ಮಪ್ರಜ್ಞೆಯು ಸಾಂಸ್ಕೃತಿಕವಾಗಿ ಆತನಲ್ಲಿ ರೂಪಿಸಲ್ಪಟ್ಟಿರುತ್ತದೆ. ಆದರೆ ಸಾಮಾಜಿಕ ಸ್ತರದಲ್ಲಿ ಅದ

ಕ್ಕೇನು ಅಷ್ಟು ಹೆಚ್ಚಿನ ಮಹತ್ವವಿರುವುದಿಲ್ಲ. ಬದಲಾಗುತ್ತಿರುವ ಸಮಾಜದಲ್ಲಿ ಹೊಸ ಮೌಲ್ಯಗಳು ಪ್ರಬಲವಾಗತ್ತ ನಡೆದಂತೆ, ಅವುಗಳನ್ನೇ ಪಾಲಿಸುತ್ತ ಹೋಗುವ ಸರೋಜಾಕ್ಷಿ, ಸುಬ್ಬಯ್ಯ, ಮಂಜಯ್ಯನಂಥವರಿಗೆ ತಮ್ಮ ಅನೈತಿಕ ಕೃತ್ಯಗಳ ಬಗೆಗೆ ಎಳ್ಳಷ್ಟೂ ನಾಚಿಕೆಯಾಗುವುದಿಲ್ಲ. ಅಂದಮೇಲೆ ನೀತಿಯಾಚರಣೆ ಸಂಪೂರ್ಣವಾಗಿ ಸ್ವಯಂಪ್ರೇರಿತವಾಗಿರಬೇಕೊ ಅಥವಾ ಅವು ಸಮಾಜದಿಂದ ವ್ಯಕ್ತಿಗಳ ಮೇಲೆ ಹೇರಲ್ಪಟ್ಟಿರುತ್ತವೆಯೊ ಎಂಬುದು ಅತ್ಯಂತ ಜಟಿಲ ಪ್ರಶ್ನೆಯಾಗಿ ಉಳಿಯುತ್ತದೆ. ಇಂಥ ಪ್ರಶ್ನೆ ಸದ್ಯ ಭಾರತೀಯ ಜೀವನದಲ್ಲಿ ಅತ್ಯಂತ ಜ್ವಲಂತ ಮತ್ತು ಔಚಿತ್ಯಪೂರ್ಣವಾದದ್ದಾಗಿರುತ್ತದೆ. ಈ ಕಾದಂಬರಿಯಲ್ಲಿ ಭೈರಪ್ಪನವರು ಇಂಥ ತಾತ್ವಿಕ ಸಮಸ್ಯೆಯನ್ನು ಭಾರತೀಯ ಸಮಾಜದ ಹಿನ್ನೆಲೆಯಲ್ಲಿ ಅತ್ಯಂತ ಸೂಕ್ಷ್ಮವಾಗಿ, ಸುದೀರ್ಘವಾಗಿ ಮತ್ತು ಧೈರ್ಯದಿಂದ ಚಿತ್ರಿಸಿದ್ದಾರೆ. ಇದೊಂದು ತಾತ್ವಿಕ ಕಾದಂಬರಿಯಾದುದರಿಂದ ಇದರಲ್ಲಿ ಪಾತ್ರಗಳು ತಮ್ಮ ಜೀವನದ ಸಮಸ್ಯೆಗಳ ಬಗೆಗೆ ಗಂಭೀರವಾಗಿ ಚಿಂತಿಸುತ್ತವೆ. ಸ್ವತಃ ಕಾದಂಬರಿಕಾರರೇ ತತ್ವಜ್ಞಾನದ ಪ್ರಾಧ್ಯಾಪಕರಾದ್ದರಿಂದ ಅವರು ತಾತ್ವಿಕ ಸಮಸ್ಯೆಗಳನ್ನು ಆಯ್ದುಕೊಂಡು, ತಾತ್ವಿಕ ಸಮಸ್ಯೆಗಳುದ್ಭವಿಸುವ ಸಂದರ್ಭಗಳನ್ನು ಕಲಾಮಾಧ್ಯಮದ ಮೂಲಕ ಚಿತ್ರಿಸುತ್ತ ಹೋಗುವದು ಅನಿವಾರ್ಯವಾಗುತ್ತದೆ. ಹೀಗಾಗಿ ಅವರ ಕಾದಂಬರಿಯಲ್ಲಿ ಘಟನಾವಳಿಯ ನಿರೂಪಣೆಯೊಂದಿಗೆ ಚಿಂತನಪರ ಭಾವನೆಗಳಿಗೂ ಸಮನಾದ ಮಹತ್ವವನ್ನು ಕೊಟ್ಟಿರುವದು ಕಂಡುಬರುತ್ತದೆ. ಆದರೆ ಒಮ್ಮೊಮ್ಮೆ ಅವರ ಜ್ಞಾನದ ವಿಫುಲತೆಯಿಂದಾಗುವ ದೋಷಗಳೂ ಕಾದಂಬರಿಯಲ್ಲಿ ಕಾಣಿಸಿಕೊಳ್ಳುತ್ತವೆ. ಅವರು ವಸ್ತುವಿನ ಚಿತ್ರಣಕ್ಕೆ ಬೇಕಾಗುವುದಕ್ಕಿಂತ ಹೆಚ್ಚಿನ ವಿವರಗಳನ್ನು ಕೊಡುವುದರಿಂದ ಕಲಾತ್ಮಕತೆಗೆ ಅಲ್ಲಲ್ಲಿ ಚ್ಯುತಿ ಬರುತ್ತದೆ. ಉದಾಹರಣೆಗೆ ತಿಪಟೂರಿನ ನಾಗಪ್ಪನವರ ಕಂಜೂಸುತನ ಮತ್ತು ಅವರ ಜೀವನ ಚಿತ್ರವೆಲ್ಲ ಕಾದಂಬರಿಯ ಕೇಂದ್ರ ವಸ್ತುವಿನ ಬೆಳವಣಿಗೆಗೆ ಅವಶ್ಯವಿಲ್ಲ. ಲೇಖಕರು ಅವನ್ನು ಸರಳವಾಗಿ ಕತ್ತರಿಸಿ ಇಲ್ಲವೆ ಸಂಕ್ಷಿಪ್ತಗೊಳಿಸಬಹುದಾಗಿತ್ತು.

ಇನ್ನು ಭಾಷೆಯ ಬಗೆಗೆ ಒಂದು ಮಾತು ಹೇಳಬೇಕೆಂದರೆ, ಕಾದಂಬರಿಯಲ್ಲಿ ಲೇಖಕರು ಬಳಸಿದ ಭಾಷೆ ಎರಡು ತೆರನಾಗಿದೆ. ಲೇಖಕರ ನಿರೂಪಣೆಯಲ್ಲಿ ಸಾಮಾನ್ಯ (standard) ಕನ್ನಡವನ್ನು ಬಳಸಿದ್ದರೆ, ಪಾತ್ರಗಳ ಸಂಭಾಷಣೆಯಲ್ಲಿ ಹಳೆಯ ಮೈಸೂರು ಪ್ರದೇಶದ ಗ್ರಾಮ್ಯಭಾಷೆಯನ್ನೇ ಬಳಸಲಾಗಿದೆ. ಭೈರಪ್ಪನಂಥವರ ಗಂಭೀರ ಸ್ವರೂಪದ ಕಾದಂಬರಿಕಾರರು ಭಾರತದ ಇತರ ಭಾಷೆಗಳಲ್ಲಿ ದೊರಕುತ್ತಾರೊ ಹೇಗೆಂಬುದನ್ನು ಹೇಳುವದು ಬಹು ಕಷ್ಟದ ಕೆಲಸ.

ಸಾಹಿತ್ಯ ರಚನೆಯಲ್ಲಿ ಬ್ರಾಹ್ಮಣರು ಸಿಂಹಪಾಲನ್ನು ಪಡೆದುಕೊಳ್ಳಲು ಸಾಧ್ಯವಾದದ್ದು ·ಅವರೇ ರಚಿಸಿದ ರಚನಾಸೂತ್ರಗಳ ಬೆಂಬಲದಿಂದ. ಕಾವ್ಯ ಮೀಮಾಂಸೆಯ ಐದು ಪ್ರಸ್ಥಾನಗಳಲ್ಲಿ ನಾಲ್ಕು ಭಾಷಾವಿಷಯಗಳಿಗೆ ಸಂಬಂಧಿಸಿವೆ.[3] ಕಾವ್ಯದ 'ವಿಷಯ'ಕ್ಕಿಂತಲೂ 'ಮಾಧ್ಯಮ'ವೇ ಪ್ರಧಾನವಾದದ್ದು ಈ ಹಿನ್ನೆಲೆಯಲ್ಲಿಯೇ. ಭಾಷೆಯನ್ನೇ ಬಂಡವಾಳ ಮಾಡಿಕೊಂಡ ಕವಿಗಳು ಭಾಷಾಭಿವ್ಯಕ್ತಿಗೆ ಹೆಚ್ಚಿನ ಮಹತ್ವ ಕೊಟ್ಟದ್ದು ಸಹಜವೇ ಆಗಿದೆ. ಇದನ್ನು ಅವರು ಸಾಧಿಸಿದ್ದು ಎರಡು ನೆಲೆಗಳಲ್ಲಿ. ಒಂದು ಯಾರೂ ಮಾತನಾಡದ ಸಂಸ್ಕೃತ ಭಾಷೆಯಲ್ಲಿ ಕೃತಿ ರಚನೆಗೆ ತೊಡಗುವುದರ ಮೂಲಕ, ಮತ್ತೊಂದು ನೆಲೆಯಲ್ಲಿ ಶೂದ್ರರಿಗೆ ವೇದಾಧ್ಯಯನದ ಅಧಿಕಾರವಿಲ್ಲ ಅದನ್ನು ಕೇಳಿಸಿಕೊಳ್ಳುವ ಹಾಗೂ ಇಲ್ಲ ಎಂಬ ನಿಬಂಧನೆಗಳನ್ನು ಹೇರುವುದರ ಮೂಲಕ.

ಮೇಲಿನ ಪರಿಸ್ಥಿತಿಯೇ ಎಲ್ಲಾ .ಕಾಲದಲ್ಲಿ ಇತ್ತು ಎಂದಾಗಲೂ, ಸಾಹಿತ್ಯ ರಚನೆಯಲ್ಲಿ ಶೂದ್ರರೂ ಪಾಲ್ಗೊಳ್ಳಲು ಸಾಧ್ಯವಾದದ್ದು 12ನೇ ಶತಮಾನದಲ್ಲಿ. ವಚನಕಾರರು ಆರಂಭಿಸಿದ ಸಾಮಾಜಿಕ ಆಂದೋಲನ ಬಸವಣ್ಣ, ಪ್ರಭು ದೇವನಂಥವರಿಂದ ಸಂಘಟಿತವಾಗಿದ್ದು, ಈ ಚಳುವಳಿ ತನ್ನ ಕಾರ್ಯಕ್ರಮಗಳನ್ನು ಶೂದ್ರನೆಲೆಯಿಂದಲೇ ಪ್ರಾರಂಭಿಸಿತು. ಇದರಿಂದಾಗಿ ಅದುವರೆಗೆ ಬರವಣಿಗೆಯಲ್ಲಿ ತನ್ನನ್ನೂ ತೊಡಗಿಸಿಕೊಳ್ಳಲಾರದ ಸ್ಥಿತಿಯಲ್ಲಿದ್ದ ಶೂದ್ರಾತಿ ಶೂದ್ರರು ಸಾಹಿತ್ಯ ರಚನೆಯಲ್ಲಿ ಪಾಲುಗೊಂಡದ್ದು ಆಶ್ಚರ್ಯವಿಲ್ಲ—ಅವರನ್ನೂ ಬಿಗಿದಿಟ್ಟಿರುವ ಶೃಂಕಲೆಗಳನ್ನು ಸಡಲಿಸಿದಲ್ಲಿ ಎಂತಹ ಅದ್ಭುತ ಚೈತನ್ಯಶೀಲ ಪ್ರತಿಭೆಯನ್ನು ಅವರು ತೋರಬಲ್ಲರು ಎಂಬುದಕ್ಕೆ ಸಾಕ್ಷಿಯಾಗುತ್ತದೆ.

ಬರವಣಿಗೆ ಸಾಹಿತ್ಯ ರಚನೆ (ಶಿಷ್ಟ ಸಾಹಿತ್ಯ)ಯಲ್ಲಿ ಶೂದ್ರರು ಹಿಂದೆ ಬೀಳುವುದಕ್ಕೆ ಅವರ ಮೇಲೆ ಮುಗಿಬಿದ್ದ ಸಾಮಾಜಿಕ, ರಾಜಕೀಯ ಅಸಮಾನತೆಯ ಧೋರಣೆಗಳೇ ಕಾರಣವಾಗಿವೆ. ಶತಮಾನಗಳ ಉದ್ದಕ್ಕೂ ಶೂದ್ರರ ಕೈ ಬಾಯಿಗಳನ್ನು ಹೀಗೆ ಕಟ್ಟಿದ್ದರೂ 'ಮೌಖಿಕ ಪರಂಪರೆಯಲ್ಲಿ ಕ್ರಿಯಾತ್ಮಕವಾಗಿ ತಮ್ಮನ್ನೂ ತೊಡಗಿಸಿಕೊಂಡದ್ದು ಅವರ ಸೃಷ್ಟ್ಯಾತ್ಮಕ ಪ್ರತಿಭೆ ಜೀವಂತ ನೆಲೆ' ಎಂಬುದನ್ನು ಸಾಬೀತು ಪಡಿಸಿದೆ. ಜಾನಪದದ ಬಹುಪಾಲು ಸೃಷ್ಟಿ ಶ್ರಮಿಕ ವರ್ಗದ ಪ್ರತಿಭಾವದಿಂದಲೇ

---

3 ...of the five leading schools of critical theory in Sanskrit atleast four were primarily concerned with the linguistic aspects of poetry...

—V.N. Dhavale. Meaning in Poetry and Indian Poetics-Literary criticism European and Indian Traditions Eds. by University of Mysore 1965-Page 139.

ಆದದ್ದು. ಜನಪದ ಗೀತೆಯ ಎಷ್ಟೋ ಪ್ರಕಾರಗಳನ್ನು ಇಂದಿಗೂ ಹಾಡಿನ ರೂಪದಲ್ಲಿ ಉಳಿಸಿಕೊಂಡು ಬಂದಿರುವವರು ಕೆಳವರ್ಗದ ಹೆಣ್ಣು ಮಕ್ಕಳೇ. 'ಪಿರಿಯಾಪಟ್ಟಣದ ಜಗಳ' —ಹರಿಜನರಲ್ಲಿ ಈ ಕಥೆ ತನಿಯಾಗಿ, ಗುಂಭವಾಗಿ ವಾಸ್ತವತೆಗೆ ತೀರಾ ಹತ್ತಿರವಾಗಿ ಕೃತಕತೆಗೆ ಅವಕಾಶಕೊಡದೆ ಉಳಿದಿರುವುದರಿಂದ ಇದರ ಸೃಷ್ಟಿಕರ್ತರು ಹರಿಜನರು.[4]

'ಕುಮಾರ ರಾಮನ ಕಥೆ' ಹಾಡಿನ ರೂಪದಲ್ಲಿ ಇಂದಿಗೂ ಉಳಿದುಬಂದಿರುವುದು ಹರಿಜನರಲ್ಲಿಯೇ.[5] ನಿರ್ದಿಷ್ಟ ಸಂದರ್ಭಗಳಲ್ಲಿ ಮಾತ್ರ ಹಾಡುವ 'ಕಾಳಿಂಗರಾಯನ ಕಥೆ' —ಮೂರು ದಿನಗಳಲ್ಲಿ ಹಾಡಿ ಮುಗಿಸುವ ಜನಪದ ಕಾವ್ಯ. ಬಳ್ಳಾರಿ ಜಿಲ್ಲೆಯ ರಾಮಸಾಗರ, ಮೆಟ್ರಿ, ಕುಡುತಿನಿ ಮತ್ತು ಮುದೇನೂರು ಗ್ರಾಮಗಳ ಹರಿಜನರಲ್ಲಿ ಈ ಹಾಡು ಪ್ರಚಲಿತವಲ್ಲಿದೆ. ಸನ್ನಿವೇಶಕ್ಕೆ ಹೊಂದುವಂತೆ ಬೇರೆ ಬೇರೆ ಧಾಟಿ, ದರುವುಗಳಿಂದ ಭಾವಪೂರ್ಣವಾಗಿ ಹಾಡುವವರು ಹರಿಜನರು ಮಾತ್ರ ಎಂಬುದು ಈ ಭಾಗದ ಜನರ ಅಭಿಪ್ರಾಯವಾಗಿದೆ. ಎಷ್ಟೋ ಜನಪದ ಹಾಡುಗಳಿಗೆ ಹರಿಜನರೇ ಸೃಷ್ಟಿಕರ್ತರಾಗಿರಲು ಸಾಧ್ಯ. ಏಕೆಂದರೆ ಯಾವುದೇ ಜನಪದ ಹಾಡು ಇತರರಿಂದ ಹರಿಜನರಿಗೆ ಬರುವುದು ಅಪರೂಪ; ಹರಿಜನರಿಂದ ಇತರರಿಗೆ ಹೋಗುವುದು ಸಲೀಸು.[6] ಕೇವಲ ಹರಿಜನರು ಮಾತ್ರ ಹೀಗೆ ಮೌಖಿಕ ಪರಂಪರೆಯಲ್ಲಿ ಕ್ರಿಯಾತ್ಮಕವಾಗಿ ತೊಡಗಿಕೊಂಡರೆಂಬುದು ಇಲ್ಲಿನ ಅಭಿಪ್ರಾಯವಲ್ಲ. ವಿದ್ಯೆಯಿಂದ ಕಡೆಗಣಿಸಲ್ಪಟ್ಟ ಬ್ರಾಹ್ಮಣೇತರ ಕುರುಬ, ಬೇಡ, ಗೊಲ್ಲ, ಒಕ್ಕಲಿಗ, ಕೊರವ, ಒಡ್ಡ, ಕಂಬಾರ–ಮುಂತಾದ ಜಾತಿಗಳ ಜನ ಜಾನಪದದ ಸೃಷ್ಟಿ ಮತ್ತು ಪ್ರಸಾರಣೆಯಲ್ಲಿ ಭಾಗಿಗಳಾಗಿದ್ದಾರೆ ಎಂಬುದೂ ಇಲ್ಲಿ ಲಕ್ಷ್ಯ.

ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲೂ ಜಾತಿ ಆಧಾರಿತ ದೃಷ್ಟಿಕೋನಗಳ ಮೇಲೆಯೇ ಸಾಹಿತ್ಯ ರಚನೆಗೊಂಡ ಉದಾಹರಣೆಗಳು ಸಿಕ್ಕುತ್ತವೆ. ಪು.ತಿ.ನ. ಅವರ 'ಶ್ರೀಹರಿ ಚರಿತೆ', ವಿನಾಯಕರ 'ಭಾರತ ಸಿಂಧುರಶ್ಮಿ' ಭೂಸನೂರುಮಠರ ಭವ್ಯ ಮಾನವ–ಇವೆಲ್ಲವೂ ಕ್ರಮವಾಗಿ ಭಾಗವತ, ವೈದಿಕ ಮತ್ತು ವೀರಶೈವ ಮತಧರ್ಮಗಳ ಹಿನ್ನೆಲೆಯಿಂದಲೇ ರಚನೆಗೊಂಡಿವೆ.*

---

4 ಲಿಂಗಯ್ಯ ಡಿ. (ಸಂ) ಪಿರಿಯಾ ಪಟ್ಟಣದ ಜಗಳ ಪ್ರಸ್ತಾವನೆ : ಪುಟ xx.

5 ಬಳ್ಳಾರಿ ತಾಲೂಕಿನ ಕಪ್ಪಗಲ್ಲು ಗ್ರಾಮದ ಈರಮ್ಮ ಅಜ್ಜಿಗೆ ಈಗ ಅರವತ್ತು ದಾಟಿದ್ದರೂ ಕಂಚಿನ ಕಂಠದಲ್ಲಿ ಕುಮಾರ ರಾಮನ ಕಥೆಯನ್ನು ಹಾಡುತ್ತಾಳೆ. ಒಂದು ಕಾಲಕ್ಕೆ ಬಯಲಾಟ ನಟಿಯಾಗಿ ಬಯಲಾಟ ಆಟವನ್ನು ಬೆಳಗಿದ ಈ ಕಲಾವಿದೆ ಇಂದು ಭಿಕ್ಷೆ ಬೇಡಿ ಜೀವನ ಸಾಗಿಸುತ್ತಿದ್ದಾಳೆ–ಸ್ಥಳ ಸಂದರ್ಶನ– 4–5–91.

6 ಲಿಂಗಯ್ಯ ಡಿ. (ಸಂ) ಪಿರಿಯಾ ಪಟ್ಟಣದ ಜಗಳ–ಪ್ರಸ್ತಾವನೆ, ಪುಟ xx.

* ಈ ಅಂಶದ ಕಡೆ ಗಮನ ಸೆಳೆದವರು ಪ್ರೊ. ನೀಲಗಿರಿ ತಳವಾರರು.

ಸಾಹಿತ್ಯ ರಚನೆಯಲ್ಲಿ ಬ್ರಾಹ್ಮಣರು ಸಿಂಹಪಾಲನ್ನು ಪಡೆದುಕೊಳ್ಳಲು ಸಾಧ್ಯವಾದದ್ದು ಅವರೇ ರಚಿಸಿದ ರಚನಾಸೂತ್ರಗಳ ಬೆಂಬಲದಿಂದ. ಕಾವ್ಯ ಮೀಮಾಂಸೆಯ ಐದು ಪ್ರಸ್ಥಾನಗಳಲ್ಲಿ ನಾಲ್ಕು ಭಾಷಾವಿಷಯಗಳಿಗೆ ಸಂಬಂಧಿಸಿವೆ.[3] ಕಾವ್ಯದ 'ವಿಷಯ'ಕ್ಕಿಂತಲೂ 'ಮಾಧ್ಯಮ'ವೇ ಪ್ರಧಾನವಾದದ್ದು ಈ ಹಿನ್ನೆಲೆಯಲ್ಲಿಯೇ. ಭಾಷೆಯನ್ನೇ ಬಂಡವಾಳ ಮಾಡಿಕೊಂಡ ಕವಿಗಳು ಭಾಷಾಭಿವ್ಯಕ್ತಿಗೆ ಹೆಚ್ಚಿನ ಮಹತ್ವ ಕೊಟ್ಟದ್ದು ಸಹಜವೇ ಆಗಿದೆ. ಇದನ್ನು ಅವರು ಸಾಧಿಸಿದ್ದು ಎರಡು ನೆಲೆಗಳಲ್ಲಿ. ಒಂದು ಯಾರೂ ಮಾತನಾಡದ ಸಂಸ್ಕೃತ ಭಾಷೆಯಲ್ಲಿ ಕೃತಿ ರಚನೆಗೆ ತೊಡಗುವುದರ ಮೂಲಕ. ಮತ್ತೊಂದು ನೆಲೆಯಲ್ಲಿ ಶೂದ್ರರಿಗೆ ವೇದಾಧ್ಯಯನದ ಅಧಿಕಾರವಿಲ್ಲ ಅದನ್ನು ಕೇಳಿಸಿಕೊಳ್ಳುವ ಹಾಗೂ ಇಲ್ಲ ಎಂಬ ನಿಬಂಧನೆಗಳನ್ನು ಹೇರುವುದರ ಮೂಲಕ.

ಮೇಲಿನ ಪರಿಸ್ಥಿತಿಯೇ ಎಲ್ಲಾ ಕಾಲದಲ್ಲಿ ಇತ್ತು ಎಂದಾಗಲೂ, ಸಾಹಿತ್ಯ ರಚನೆಯಲ್ಲಿ ಶೂದ್ರರೂ ಪಾಲ್ಗೊಳ್ಳಲು ಸಾಧ್ಯವಾದದ್ದು 12ನೇ ಶತಮಾನದಲ್ಲಿ. ವಚನಕಾರರು ಆರಂಭಿಸಿದ ಸಾಮಾಜಿಕ ಆಂದೋಲನ ಬಸವಣ್ಣ, ಪ್ರಭು ದೇವನಂಥವರಿಂದ ಸಂಘಟಿತವಾಗಿದ್ದು. ಈ ಚಳುವಳಿ ತನ್ನ ಕಾರ್ಯಕ್ರಮಗಳನ್ನು ಶೂದ್ರನೆಲೆಯಿಂದಲೇ ಪ್ರಾರಂಭಿಸಿತು. ಇದರಿಂದಾಗಿ ಅದುವರೆಗೆ ಬರವಣಿಗೆಯಲ್ಲಿ ತನ್ನನ್ನು ತೊಡಗಿಸಿಕೊಳ್ಳಲಾರದ ಸ್ಥಿತಿಯಲ್ಲಿದ್ದ ಶೂದ್ರಾತಿ ಶೂದ್ರರು ಸಾಹಿತ್ಯ ರಚನೆಯಲ್ಲಿ ಪಾಲುಗೊಂಡದ್ದು ಆಶ್ಚರ್ಯವಿಲ್ಲ—ಅವರನ್ನು ಬಿಗಿದಿಟ್ಟಿರುವ ಶೃಂಕಲೆಗಳನ್ನು ಸಡಲಿಸಿದಲ್ಲಿ ಎಂತಹ ಅದ್ಭುತ ಚೈತನ್ಯಶೀಲ ಪ್ರತಿಭೆಯನ್ನು ಅವರು ತೋರಬಲ್ಲರು ಎಂಬುದಕ್ಕೆ ಸಾಕ್ಷಿಯಾಗುತ್ತದೆ.

ಬರವಣಿಗೆ ಸಾಹಿತ್ಯ ರಚನೆ (ಶಿಷ್ಟ ಸಾಹಿತ್ಯ)ಯಲ್ಲಿ ಶೂದ್ರರು ಹಿಂದೆ ಬೀಳುವುದಕ್ಕೆ ಅವರ ಮೇಲೆ ಮುಗಿಬಿದ್ದ ಸಾಮಾಜಿಕ, ರಾಜಕೀಯ ಅಸಮಾನತೆಯ ಧೋರಣೆಗಳೇ ಕಾರಣವಾಗಿವೆ. ಶತಮಾನಗಳ ಉದ್ದಕ್ಕೂ ಶೂದ್ರರ ಕೈ ಬಾಯಿಗಳನ್ನು ಹೀಗೆ ಕಟ್ಟಿದ್ದರೂ 'ಮೌಖಿಕ ಪರಂಪರೆಯಲ್ಲಿ ಕ್ರಿಯಾತ್ಮಕವಾಗಿ ತಮ್ಮನ್ನು ತೊಡಗಿಸಿಕೊಂಡದ್ದು ಅವರ ಸೃಷ್ಟ್ಯಾತ್ಮಕ ಪ್ರತಿಭೆ ಜೀವಂತ ನೆಲೆ' ಎಂಬುದನ್ನು ಸಾಬೀತುಪಡಿಸಿದೆ. ಜಾನಪದದ ಬಹುಪಾಲು ಸೃಷ್ಟಿ ಶ್ರಮಿಕ ವರ್ಗದ ಪ್ರತಿಭಾವದಿಂದಲೇ

---

3 ...of the five leading schools of critical theory in Sanskrit atleast four were primarily concerned with the linguistic aspects of poetry...

—V.N. Dhavale. Meaning in Poetry and Indian Poetics-Literary criticism European and Indian Traditions Eds. by University of Mysore 1965-Page 139.

ಆದದ್ದು. ಜನಪದ ಗೀತೆಯ ಎಷ್ಟೋ ಪ್ರಕಾರಗಳನ್ನು ಇಂದಿಗೂ ಹಾಡಿನ ರೂಪದಲ್ಲಿ ಉಳಿಸಿಕೊಂಡು ಬಂದಿರುವವರು ಕೆಳವರ್ಗದ ಹೆಣ್ಣು ಮಕ್ಕಳೇ. 'ಪಿರಿಯಾಪಟ್ಟಣದ ಜಗಳ' —ಹರಿಜನರಲ್ಲಿ ಈ ಕಥೆ ತನಿಯಾಗಿ, ಗುಂಭವಾಗಿ ವಾಸ್ತವತೆಗೆ ತೀರಾ ಹತ್ತಿರವಾಗಿ ಕೃತಕತೆಗೆ ಅವಕಾಶಕೊಡದೆ ಉಳಿದಿರುವುದರಿಂದ ಇದರ ಸೃಷ್ಟಿಕರ್ತರು ಹರಿಜನರು.[4]

'ಕುಮಾರ ರಾಮನ ಕಥೆ' ಹಾಡಿನ ರೂಪದಲ್ಲಿ ಇಂದಿಗೂ ಉಳಿದುಬಂದಿರುವುದು ಹರಿಜನರಲ್ಲಿಯೇ.[5] ನಿರ್ದಿಷ್ಟ ಸಂದರ್ಭಗಳಲ್ಲಿ ಮಾತ್ರ ಹಾಡುವ 'ಕಾಳಿಂಗರಾಯನ ಕಥೆ' —ಮೂರು ದಿನಗಳಲ್ಲಿ ಹಾಡಿ ಮುಗಿಸುವ ಜನಪದ ಕಾವ್ಯ. ಬಳ್ಳಾರಿ ಜಿಲ್ಲೆಯ ರಾಮಸಾಗರ, ಮೆಟ್ರಿ, ಕುಡುತಿನ ಮತ್ತು ಮುದೇನೂರು ಗ್ರಾಮಗಳ ಹರಿಜನರಲ್ಲಿ ಈ ಹಾಡು ಪ್ರಚಲಿತವಲ್ಲಿದೆ. ಸನ್ನಿವೇಶಕ್ಕೆ ಹೊಂದುವಂತೆ ಬೇರೆ ಬೇರೆ ಧಾಟಿ, ದರುವುಗಳಿಂದ ಭಾವಪೂರ್ಣವಾಗಿ ಹಾಡುವವರು ಹರಿಜನರು ಮಾತ್ರ ಎಂಬುದು ಈ ಭಾಗದ ಜನರ ಅಭಿಪ್ರಾಯವಾಗಿದೆ. ಎಷ್ಟೋ ಜನಪದ ಹಾಡುಗಳಿಗೆ ಹರಿಜನರೇ ಸೃಷ್ಟಿಕರ್ತರಾಗಿರಲು ಸಾಧ್ಯ. ಏಕೆಂದರೆ ಯಾವುದೇ ಜನಪದ ಹಾಡು ಇತರರಿಂದ ಹರಿಜನರಿಗೆ ಬರುವುದು ಅಪರೂಪ; ಹರಿಜನರಿಂದ ಇತರರಿಗೆ ಹೋಗುವುದು ಸಲೀಸು.[6] ಕೇವಲ ಹರಿಜನರು ಮಾತ್ರ ಹೀಗೆ ಮೌಖಿಕ ಪರಂಪರೆಯಲ್ಲಿ ಕ್ರಿಯಾತ್ಮಕವಾಗಿ ತೊಡಗಿಕೊಂಡರೆಂಬುದು ಇಲ್ಲಿನ ಅಭಿಪ್ರಾಯವಲ್ಲ. ವಿದ್ಯೆಯಿಂದ ಕಡೆಗಣಿಸಲ್ಪಟ್ಟ ಬ್ರಾಹ್ಮಣೇತರ ಕುರುಬ, ಬೇಡ, ಗೊಲ್ಲ, ಒಕ್ಕಲಿಗ, ಕೊರವ, ಒಡ್ಡ, ಕಂಬಾರ–ಮುಂತಾದ ಜಾತಿಗಳ ಜನ ಜಾನಪದದ ಸೃಷ್ಟಿ ಮತ್ತು ಪ್ರಸಾರಣೆಯಲ್ಲಿ ಭಾಗಿಗಳಾಗಿದ್ದಾರೆ ಎಂಬುದೂ ಇಲ್ಲಿ ಲಕ್ಷ್ಯ.

ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲೂ ಜಾತಿ ಆಧಾರಿತ ದೃಷ್ಟಿಕೋನಗಳ ಮೇಲೆಯೇ ಸಾಹಿತ್ಯ ರಚನೆಗೊಂಡ ಉದಾಹರಣೆಗಳು ಸಿಕ್ಕುತ್ತವೆ. ಪು.ತಿ.ನ. ಅವರ 'ಶ್ರೀಹರಿ ಚರಿತೆ', ವಿನಾಯಕರ 'ಭಾರತ ಸಿಂಧುರಶ್ಮಿ' ಭೂಸನೂರುಮಠರ ಭವ್ಯ ಮಾನವ–ಇವೆಲ್ಲವೂ ಕ್ರಮವಾಗಿ ಭಾಗವತ, ವೈದಿಕ ಮತ್ತು ವೀರಶೈವ ಮತಧರ್ಮಗಳ ಹಿನ್ನೆಲೆಯಿಂದಲೇ ರಚನೆಗೊಂಡಿವೆ.*

---

4 ಲಿಂಗಯ್ಯ ಡಿ. (ಸಂ) ಪಿರಿಯಾ ಪಟ್ಟಣದ ಜಗಳ ಪ್ರಸ್ತಾವನೆ : ಪುಟ xx.

5 ಬಳ್ಳಾರಿ ತಾಲೂಕಿನ ಕಪ್ಪಗಲ್ಲು ಗ್ರಾಮದ ಈರಮ್ಮ ಅಜ್ಜಿಗೆ ಈಗ ಅರವತ್ತು ದಾಟಿದ್ದರೂ ಕಂಚಿನ ಕಂಠದಲ್ಲಿ ಕುಮಾರ ರಾಮನ ಕಥೆಯನ್ನು ಹಾಡುತ್ತಾಳೆ. ಒಂದು ಕಾಲಕ್ಕೆ ಬಯಲಾಟ ನಟಿಯಾಗಿ ಬಯಲಾಟ ಆಟವನ್ನು ಬೆಳಗಿದ ಈ ಕಲಾವಿದೆ ಇಂದು ಭಿಕ್ಷೆ ಬೇಡಿ ಜೀವನ ಸಾಗಿಸುತ್ತಿದ್ದಾಳೆ–ಸ್ಥಳ ಸಂದರ್ಶನ– 4–5–91.

6 ಲಿಂಗಯ್ಯ ಡಿ. (ಸಂ) ಪಿರಿಯಾ ಪಟ್ಟಣದ ಜಗಳ–ಪ್ರಸ್ತಾವನೆ, ಪುಟ xx.

* ಈ ಅಂಶದ ಕಡೆ ಗಮನ ಸೆಳೆದವರು ಪ್ರೊ. ನೀಲಗಿರಿ ತಳವಾರರು.

ಭಾರತೀಯ ಪರಿಸರದಲ್ಲಿ ಲೇಖಕನೊಬ್ಬ ಹುಟ್ಟಿನ ಜೊತೆಯಲ್ಲಿಯೇ ನಿರ್ದಿಷ್ಟ ಜಾತಿಯೊಂದರ ಪ್ರತಿನಿಧಿಯಾಗಬೇಕಾದ ಅನಿವಾರ್ಯತೆ ಇರುವುದನ್ನು ಅಲ್ಲಗಳೆಯಲು ಬರುವುದಿಲ್ಲ. ಆ ಮೂಲಕ ತಾನು ಹುಟ್ಟಿದ ಜಾತಿಯೊಂದಿಗೇ ಬದುಕುತ್ತಾ ಬೇರೆ ಜಾತಿಯ ಜನಗಳ ಒಳಗಿನ ಬದುಕಿಗಿಂತ ಹೆಚ್ಚಾಗಿ ತನ್ನ ಜಾತಿಯ ಜನಗಳ ಒಳಗಿನ ಬದುಕನ್ನು ಅಂತಿರುತ್ತಾನೆ.[7] –ಎಂಬುದೇನೋ ನಿಜ. 'ಜಾತಿ' ಪ್ರಜ್ಞೆ ಎಂಬುದು, ಕೆಲವರಿಗೆ ಪ್ರತಿಷ್ಠೆಯ ಗೌರವದ ಸೂಚಕವಾಗಿ ಇನ್ನೂ ಕೆಲವರಿಗೆ ನೋವಿನ, ಅಪಮಾನದ ಸಂಕೇತವಾಗಿರುವುದನ್ನು ಗಮನಿಸಬೇಕು. ಸೃಜನಶೀಲ ಬರಹಗಾರ ತನ್ನ 'ಜಾತಿ' ನೆಲೆಯನ್ನು ಪ್ರತಿಷ್ಠೆಯ ಕಣವಾಗಿಸಿಕೊಳ್ಳದೆ ಜಾತಿಯ ಒಳಗಿದ್ದೂ ಅದನ್ನು ಮೀರುವ ಪ್ರಯತ್ನದಿಂದ ಯಶಸ್ವಿಯಾಗುತ್ತಾನೆ. ಸಾಹಿತ್ಯ ಸೃಷ್ಟಿಯ ಮಾಂತ್ರಿಕತೆ ಇರುವುದೇ ಲೇಖಕ ತನ್ನ ಜಾತಿಯ ಮಿತಿಗಳನ್ನು ದಾಟುವುದರಲ್ಲಿ.

ಸಂಶೋಧನೆ

ಸಂಶೋಧನೆಯ ಕ್ಷೇತ್ರವೂ ಇದರಿಂದ ಹೊರತಾಗಿಲ್ಲ. ಸಾಹಿತ್ಯ ಚರಿತ್ರೆಯನ್ನು ಕುರಿತು ಅಧ್ಯಯನ ಮಾಡುವಾಗ ಅನುಸರಿಸಿರುವ ವಿಭಾಗ ಕ್ರಮಗಳಲ್ಲಿ ಜಾತಿ ಅಥವಾ ಮತೀಯ ಆಧಾರಿತ ದೃಷ್ಟಿಕೋನವೂ ಒಂದಾಗಿದೆ.* ಕನ್ನಡ ಸಾಹಿತ್ಯದ ಇತಿಹಾಸವೆಂದರೆ ಮತಧರ್ಮಗಳ ಇತಿಹಾಸವೇ. ಖ್ಯಾತ ಸಂಶೋಧಕರ ಸಂಶೋಧನಾಶಕ್ತಿಗಳು ಅವರವರ ಮತಧರ್ಮಗಳಿಗೇ ಆತುಕೊಂಡಿರುವುದನ್ನು ಗಮನಿಸಬಹುದು. ಮಾರ್ಗದರ್ಶಕರು ಪಿಎಚ್.ಡಿ.ಗಾಗಿ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿಕೊಳ್ಳುವಾಗ ಮೊದಲು ಗಮನಕ್ಕೆ ತೆಗೆದುಕೊಳ್ಳುವುದು ವಿದ್ಯಾರ್ಥಿಯ ಜಾತಿಯೇ. ವಿಶ್ವವಿದ್ಯಾಲಯಗಳು ಇತ್ತೀಚೆಗೆ ಒಬ್ಬೊಬ್ಬ ಮಾರ್ಗದರ್ಶಕ ಕನಿಷ್ಠ ಒಬ್ಬ ಪರಿಶಿಷ್ಟ ಜಾತಿ ಪಂಗಡದ ವಿದ್ಯಾರ್ಥಿಯನ್ನು ತೆಗೆದುಕೊಳ್ಳಬೇಕು ಎಂಬ ನಿಯಮಗಳನ್ನು ಜಾರಿಯಲ್ಲಿ ತಂದವು** ಒತ್ತಾಯಪೂರ್ವಕ ಬೇರೆ ಬೇರೆ ಜಾತಿಯ ವಿದ್ಯಾರ್ಥಿಗಳನ್ನು ತೆಗೆದುಕೊಳ್ಳಬೇಕಾದ ಸಂದರ್ಭ ಬಂದಾಗಲೂ ವಿಷಯದ ಆಯ್ಕೆ ಆಯಾ ವಿದ್ಯಾರ್ಥಿಯ ಜಾತಿಗನುಗುಣವಾಗಿಯೇ ನಡೆಯುವುದು. ವಿದ್ಯಾರ್ಥಿ ಬೇಡ ಜಾತಿಗೆ ಸೇರಿದವನಿದ್ದರೆ 'ಬೇಡರು : ಒಂದು ಅಧ್ಯಯನ', ಹೊಲೆಯನಾಗಿದ್ದರೆ 'ಹೊಲೆಯರು : ಒಂದು

---

7 ಅಶೋಕ ಟಿ.ಪಿ. ಜಾತಿ ಮತ್ತು ಸಾಹಿತ್ಯ. ಸಾಹಿತ್ಯ ಸಂಪರ್ಕ (1986) ಪುಟ 94.

* ಮತಪರ ವಿವೇಚನೆಗೆ ಸ್ಪಷ್ಟರೂಪ ಮತ್ತು ಪ್ರಾಚುರ್ಯಗಳು ಉಂಟಾದದ್ದು ಆರ್. ನರಸಿಂಹಾಚಾರ್ಯರ ಮೂಲಕವಾಗಿ.

—ಡಾ. ಡಿ.ಕೆ. ರಾಜೇಂದ್ರ, ಕನ್ನಡ ಸಾಹಿತ್ಯ ಚರಿತ್ರೆ : ವಿಭಾಗ ಕ್ರಮಗಳು, ಕನ್ನಡ ಅಧ್ಯಯನ ಸಂಸ್ಥೆಯ ಸಾಹಿತ್ಯಾ ಚರಿತ್ರೆ ಮೊದಲ ಸಂಪುಟ. ಪುಟ 44.

** ಗುಲ್ಬರ್ಗಾ ಮತ್ತು ಕರ್ನಾಟಕ ವಿಶ್ವವಿದ್ಯಾಲಯಗಳಲ್ಲಿ ಅಂಥ ನಿಯಮಗಳಿವೆ.

ಅಧ್ಯಯನ' ಮುಂತಾಗಿ ಆಯಾ ಜಾತಿಗೆ ಸೇರಿದ ವಿದ್ಯಾರ್ಥಿ ಆಯಾ ಜಾತಿಯ ಮೇಲೆಯೇ ಸಂಶೋಧನೆ ನಡೆಸಬೇಕು. "ಇಂಥ ಪ್ರಯತ್ನಗಳು ಪೂರ್ಣ ಪ್ರಮಾಣದ ಸಂಶೋಧನೆಗಳಾಗುತ್ತವೆ ಎಂಬ ಮೆಚ್ಚುಗೆಗಳೂ ವ್ಯಕ್ತಗೊಳ್ಳುತ್ತವೆ"[8] ಇದಕ್ಕೆ ಕೊಡುವ ಕಾರಣ ಆಯಾ ಜಾತಿಗೆ ಸೇರಿದ ವಿದ್ಯಾರ್ಥಿ ತನ್ನ ಜಾತಿಯನ್ನು ಸಮೀಪದಿಂದ ಬಲ್ಲವನಾಗಿರುತ್ತಾನೆ. ಇದರಿಂದ ತನ್ನ ತನ್ನ ಜಾತಿಯ ಮೇಲೆ ಅಧ್ಯಯನ ಮಾಡಲು ಸುಲಭವಾಗುತ್ತದೆ. ಅಥವಾ ಬೇರೊಬ್ಬರು ಆ ಜಾತಿಯ ಮೇಲೆ ಸಂಶೋಧನೆ ಕೈಕೊಂಡರೂ ಸಂಶೋಧನೆ ಪೂರ್ಣ ಪ್ರಮಾಣದ್ದಾಗುವುದಿಲ್ಲ. ಕಾರಣ ವೇನೋ ಒಪ್ಪುವಂತಹದೇ. ಆದರೆ ಇದು ಆಯಾ ಜಾತಿಯ ಜನರನ್ನು ಆಯಾ ಜಾತಿಯಲ್ಲಿಯೇ ಕೂಡಿ ಹಾಕುವ ಮಸಲತ್ತು ಎನಿಸುವುದಿಲ್ಲವೆ? ವಿದ್ಯಾರ್ಥಿ ಸ್ವತಃ ಆಸಕ್ತಿಗಳನ್ನು ಜಾತಿಯ ಆಚೆ ವಿಸ್ತರಿಸಿಕೊಳ್ಳಲು ಸಾಧ್ಯವಿಲ್ಲವೆ? ನನ್ನ ಮಿತ್ರ ಪ್ರೊ. ನೀಲಗಿರಿ ತಳವಾರರ ಶರಣ ಸಾಹಿತ್ಯದ ಮೇಲಿನ ಆಸಕ್ತಿಯನ್ನು ಗುರುತಿಸಿ ದಿವಂಗತ ಸಂ. ಶಿ. ಭೂಸನೂರ ಮಠರು 'ಚನ್ನಬಸವಣ್ಣನ ಜೀವನ ಮತ್ತು ತತ್ವಜ್ಞಾನ'ಕುರಿತು ಸಂಶೋಧನೆ ಮಾಡಲು ಸೂಚಿಸಿದ್ದರಂತೆ. ಆ ವಿಷಯದ ಮೇಲೆ ಮಾರ್ಗದರ್ಶನ ಮಾಡಲು ದಿವಂಗತ ಡಾ. ಎಂ. ಬಿ. ಕೊಟ್ರಸೆಟ್ಟಿಯವರೂ ಒಪ್ಪಿದ್ದರಂತೆ. ಆದರೆ ಪೀಠದ ಆಗಿನ (1982ರ) ಮುಖ್ಯಸ್ಥರು ತಳವಾರ ಹೆಸರಿನ ಮೇಲೆಯೇ ಜಾತಿ ಪತ್ತೆ ಹಚ್ಚಿ 'ಇವನಿಗೆಲ್ಲಿಯ ಸಂಸ್ಕಾರ' ಶರಣ ಸಾಹಿತ್ಯದ ಮೇಲೆ ಅಧ್ಯಯನ ಮಾಡಲು ಇವನಿಂದಾಗದು ಎಂದು ನಿರಾಕರಿಸಿದರಂತೆ. ಹುಟ್ಟಿನ ಮೇಲೆ ಸಂಸ್ಕಾರಗಳು ನಿರ್ಧರಿಸಲ್ಪಡುತ್ತವೆಯೇ? ವಿಶ್ವವಿದ್ಯಾಲಯಗಳು ವಿದ್ಯಾಸಂಸ್ಥೆಗಳೇ ಇಲ್ಲವೇ ಮತಧರ್ಮ ಪ್ರಸಾರಣೆಯ ಮಠಗಳೇ. ಬ್ರಾಹ್ಮಣ ಧರ್ಮ ಹುಟ್ಟುಹಾಕಿದ ಪ್ರತ್ಯೇಕತಾವಾದ ಕುಟುಂಬ, ಸಮಾಜ ಮತ್ತು ದೇಶವನ್ನೂ, ಛಿದ್ರ ಛಿದ್ರವಾಗಿಸಿದೆ. ಮನುಷ್ಯ ಮನುಷ್ಯರನ್ನು ಭಾವನಾತ್ಮಕವಾಗಿ ಬೆಸೆಯದೇ ಪ್ರತ್ಯೇಕವಾಗಿ 'ಇರಿಸು'ವುದರಲ್ಲಿಯೇ ಅಂತಹ ಮನೋಧರ್ಮ ಆಸಕ್ತವಾಗುತ್ತದೆ. ಬ್ರಾಹ್ಮಣರ ನಂತರ 'ಲಿಂಗಾಯತ' ದಂತಹ ಪ್ರತಿಷ್ಠಿತ ಜಾತಿಗಳು ಪ್ರತ್ಯೇಕತಾ ವಾದದಲ್ಲಿಯೇ ಆಸಕ್ತಿನೆಟ್ಟುಕೊಂಡಿವೆ.

ಈ ಚರ್ಚೆಯನ್ನು ಹೀಗೆಯೇ ಮುಂದುವರೆಸಲೂಬಹುದು. ಇಂತಹವೇ ನಿದರ್ಶನಗಳು ನಾಡಿನ ಉದ್ದಗಲಕ್ಕೂ ಇದ್ದಾವು. ಇಂದಿಗೂ ಕೂಡ ಜಾತಿಗಳ ನಡುವಿನ ಗೋಡೆಗಳಿಗೆ ಸುಣ್ಣ ಬಣ್ಣ ಹಚ್ಚುವ ಕೆಲಸ ನಡೆದಿದೆಯೇ ವಿನಃ ಅವುಗಳನ್ನು ಒಡೆಯುವ, ಒಡೆದು, ಜಾತಿಗಳ ನಡುವೆ 'ಸ್ನೇಹ' ಬೆಳೆಸುವ ಪ್ರಯತ್ನಗಳು ಕಡಿಮೆ ಯೆಂದೇ ತೋರುತ್ತದೆ.

---

8 ಡಾ. ಕಲಬುರ್ಗಿ ಎಂ.ಎಂ., ಡಾ. ಪಿ. ಕೆ. ಖಂಡೋಬ ಅವರ ಕರ್ನಾಟಕದ ಬಂಜಾರ ಗಳು ಒಂದು ಸಾಂಸ್ಕೃತಿಕ ಅಧ್ಯಯನ–ಪ್ರಬಂಧದ ಕೊನೆಯ ಪುಟ.

ಶ್ರೀರಂಗ ಹಾಗೂ ರಂಗಭೂಮಿ

ಪ್ರೊ॥ ಶ್ರೀಮತಿ ಶಕುಂತಲಾ ಸಿಂಧೂರ

ಆಧುನಿಕ ಕನ್ನಡದ ಪ್ರಸಿದ್ಧ ನಾಟಕಕಾರರಾದ 'ಶ್ರೀರಂಗ' ಎಂಬ ಕಾವ್ಯನಾಮದಿಂದ ಜನಪ್ರಿಯವಾಗಿರುವ ಆದ್ಯ ರಂಗಾಚಾರ್ಯರು ಕನ್ನಡ ರಂಗಭೂಮಿಗೆ ವೈವಿಧ್ಯತೆಯನ್ನು ತಂದುಕೊಟ್ಟವರು. ಆಧುನಿಕ ರಂಗಭೂಮಿಯ ಬಗೆಗೆ ಸತತ ಪ್ರಯೋಗಶೀಲರಾಗಿದ್ದ ಇವರು ಕನ್ನಡ ರಂಗಭೂಮಿಗೆ ಬೌದ್ಧಿಕತೆಯ ಆಯಾಮವನ್ನು ದೊರಕಿಸಿ ಕೊಟ್ಟರು. ತಂತ್ರದ ದೃಷ್ಟಿಯಿಂದ ಇವರಷ್ಟು ಪ್ರಯೋಗಗಳನ್ನು ಮಾಡಿದವರು ಕನ್ನಡ ನಾಟಕ ಕ್ಷೇತ್ರದಲ್ಲಿ ಇಂದಿಗೂ ಇಲ್ಲವೆಂದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ.

ಸಂಸ್ಕೃತ ಕಾವ್ಯ ರಚನೆಯಿಂದ ತಮ್ಮ ಸಾಹಿತ್ಯ ಜೀವನವನ್ನು ಆರಂಭಿಸಿದ ಶ್ರೀರಂಗರ ಮಹತ್ವದ ನಾಟಕಗಳು 'ಉದರ-ವೈರಾಗ್ಯ' 'ಮುಕ್ಕಣ್ಣನ ವಿರಾಟಪುರುಷ', 'ರಂಗ ಭಾರತ', 'ಕತ್ತಲು-ಬೆಳಕು', 'ಕೇಳು–ಜನಮೇಜಯ', 'ಸಂಸಾರಿಗ-ಕಂಸ', 'ಹರಿಜನ್ವಾರ' ಇತ್ಯಾದಿ. ಜಗತ್ತಿನಲ್ಲಿನ ಅಜ್ಞಾನವನ್ನು ಕಂಡರೆ ಅಸಹನೆಯಿಂದ ಸಿಡಿಯುವ ಮನೋಭಾವವನ್ನು ಶ್ರೀರಂಗರ ನಾಟಕಗಳಲ್ಲಿ ಕಾಣಬಹುದು.

ಶ್ರೀರಂಗರ ನಾಟಕಗಳಲ್ಲಿ ಬೌದ್ಧಿಕತೆಗೆ ಹೆಚ್ಚಿನ ಪ್ರಾಧಾನ್ಯತೆ ಮೌಲ್ಯಗಳ ಘರ್ಷಣೆಯೂ ಅವರ ನಾಟಕಗಳಲ್ಲಿ ಪ್ರಧಾನ ಪಾತ್ರವಹಿಸುತ್ತವೆ. ಕನ್ನಡ ನಾಟಕ ಪರಂಪರೆಯಿಂದ ಸಿಡಿದು ದೂರ ಹೋದ ಶ್ರೀರಂಗರು ತಮ್ಮದೇ ಆದ ಸ್ವಯಂಪೂರ್ಣ ನಾಟಕ ಸಂಪ್ರದಾಯವನ್ನು ನಿರ್ಮಿಸಿದರು. ಈವರೆಗೆ ಇವರು 100ಕ್ಕೂ ಹೆಚ್ಚು ನಾಟಕಗಳನ್ನು ಬರೆದಿರುತ್ತಾರೆ.

1968ರಲ್ಲಿ ಇವರಿಗೆ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಫೆಲೋಶಿಪ್ ಗೌರವ ಲಭಿಸಿದ್ದಿತು. 1972ರಲ್ಲಿ ಭಾರತ ಸರ್ಕಾರ 'ಪದ್ಮಭೂಷಣ' ಪ್ರಶಸ್ತಿಯನ್ನಿತ್ತು ಗೌರವಿಸಿತು. ಪಾಶ್ಚಾತ್ಯ ಶಿಕ್ಷಣ ಮತ್ತು ಪರಂಪರೆಯ ಪೂರ್ಣ ಅರಿವಿನಿಂದ ಜನತೆಯನ್ನು ತಿದ್ದಲು ಸಾಧ್ಯವೆಂಬ ಆಧಾರದಿಂದ ಸಾಹಿತ್ಯಸೇವೆ ಸಲ್ಲಿಸಿದ ಶ್ರೀರಂಗರನ್ನು 1955ರಲ್ಲಿ ರಾಯಚೂರಿನಲ್ಲಿ ನಡೆದ 38ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಲನದ ಅಧ್ಯಕ್ಷರನ್ನಾಗಿ ಆರಿಸಿ ಕನ್ನಡ ಜನತೆ ತನ್ನ ಕೃತಜ್ಞತೆಯನ್ನು ಸಲ್ಲಿಸಿತು.

ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಸುಮಾರು ಅರ್ಧಶತಮಾನಕ್ಕಿಂತಲೂ ಹೆಚ್ಚು ಸೇವೆ ಸಲ್ಲಿಸಿ ತಮ್ಮದೇ ಆದ ವಿಶಿಷ್ಟ ಸ್ಥಾನವನ್ನು ಗಳಿಸಿದ ಕನ್ನಡದ ಖ್ಯಾತ ನಾಟಕಕಾರ ಹಾಗೂ ಈ ಶತಮಾನದ ಶ್ರೇಷ್ಠ ವಿಚಾರವಾದಿ ಶ್ರೀರಂಗರು ಇಂಗ್ಲೆಂಡಿನಿಂದ ತಿರುಗಿ ಬಂದ ನಂತರ ಸಮಾಜದಲ್ಲಿ ಕಂಡ ಜೊಳ್ಳು ಸಂಪ್ರದಾಯಗಳನ್ನು ತಮ್ಮ ಹರಿತವಾದ ಲೇಖನಿಯಿಂದ ನಿರ್ದಾಕ್ಷಿಣ್ಯವಾಗಿ ಖಂಡಿಸಿ ನಾಟಕಗಳನ್ನು ರಚಿಸಿದರು. ಜೊತೆಗೆ ಅವುಗಳನ್ನು ಆಡಿಯೂ ತೋರಿಸಿದರು. ಸಂಪ್ರದಾಯಸ್ಥ ಸಮಾಜದ ರೋಷವನ್ನು ಕಡೆಗಣಿಸಿದರು. ಪ್ರಗತಿಶೀಲರ ಗುಂಪಿಗೆ ಧುರೀಣರಾದರು.

ಮಹಾತ್ಮ ಗಾಂಧೀಜಿಯವರು 1933ರ ಸುಮಾರು ಕರ್ನಾಟಕ ಸಂಚಾರದಲ್ಲಿ ಇದ್ದಾಗ ಶ್ರೀರಂಗರು ಅವರನ್ನು ಖುದ್ದಾಗಿ ಕಂಡು ದೇಶದ ಪರಿಸ್ಥಿಯ ಬಗ್ಗೆ ವಿಚಾರ ವಿನಿಮಯ ನಡೆಸಿದರು. ಪ್ರಖರ ಸಾಮಾಜಿಕ ಪ್ರಜ್ಞೆಯ ಶ್ರೀರಂಗರು ತಮ್ಮ ಸುತ್ತ ಮುತ್ತಲಿನ ಸಮಾಜವನ್ನು ತೆರೆದ ಕಣ್ಣುಗಳಿಂದ ವೀಕ್ಷಿಸುತ್ತಿದ್ದರು. ಸಮಾಜದಲ್ಲಿ ಕಂಡುಬರುತ್ತಿದ್ದ ಆಷಾಡಭೂತೀತನ, ಡಂಭಾಚಾರ, ಸ್ವಾರ್ಥಗಳಿಂದ ರೋಸಿಹೋಗಿದ್ದ ಶ್ರೀರಂಗರ ಕುದಿಯುತ್ತಿದ್ದ ಆತ್ಮ ಅಭಿವ್ಯಕ್ತಿಗಾಗಿ ತಹತಹಿಸುತ್ತಿತ್ತು. ಆದರೆ ಯಾವ ಮಾಧ್ಯಮದಿಂದ ತಮ್ಮ ಆತ್ಮದ ಆವಿಷ್ಕಾರ ಅಧಿಕ ಸ್ಫುಟವಾದೀತು ಎಂಬ ಬಗ್ಗೆ ಅವರಿಗೆ ಸ್ಪಷ್ಟವಾದ ಕಲ್ಪನೆ ಇರಲಿಲ್ಲ.

ಉದಯೋನ್ಮುಖ ಸಾಹಿತಿಗಳೆಲ್ಲರಂತೆ ಶ್ರೀರಂಗರೂ ಕವಿತೆಗಳನ್ನು ಬರೆಯಲು ಪ್ರಾರಂಭಿಸಿದರು. ಹಲವಾರು ಕಟ್ಟು ಕವಿತೆಗಳನ್ನು ಬರೆದು ಅದು ತಮಗೆ ಒಗ್ಗುವ ಪ್ರಕಾರವಲ್ಲ ಎಂದು ಕಾವ್ಯಕನ್ನಿಕೆಯನ್ನು ತೊರೆದು ನಾಟಕ ರಚಿಸಲು ಪ್ರಾರಂಭಿಸಿದರು.

1928ರ ಸುಮಾರು ಧಾರವಾಡದಲ್ಲಿ 16 ವಯಸ್ಸಿನ ಯುವತಿಯೊಬ್ಬಳು ಮೂರನೆಯ ಮಗುವಿನ ಹೆರಿಗೆಯ ಕಾಲದಲ್ಲಿ ಸತ್ತುಹೋದಳು. ಬಾಲ್ಯವಿವಾಹ ಒಂದು ಕ್ರೂರ ಪದ್ಧತಿ ಎಂದು ತಿಳಿದಿದ್ದ ಶ್ರೀರಂಗರು ಈ ಘಟನೆಯಿಂದ ತುಂಬ ನೊಂದುಕೊಂಡರು. ತಕ್ಷಣವೇ ಯುವಕ ರಂಗಾಚಾರ್ಯರಿಗೆ ತಮ್ಮ ತಾಯಿಯೂ ಏಳು ಮಕ್ಕಳನ್ನು ಹೆತ್ತು 31ನೇ ವಯಸ್ಸಿಗೇ ಮರಣಕ್ಕೀಡಾಗಿದ್ದು ನೆನಪಾಯಿತು. ಈ ಸಂಗತಿಗಳ ಹಿನ್ನೆಲೆಯಲ್ಲಿ ಅವರು 'ಸಂಸಾರಿಗ ಕಂಸ' ಎಂಬ ನಾಟಕ ಬರೆದರು. ಇನ್ನೂ ಮದುವೆಯಾಗದ ಶ್ರೀರಂಗ, 'ಮಕ್ಕಳು ದೇವರ ಕೊಡುಗೆ' ಎಂದು ನಂಬಿದ್ದ ಸಮಾಜದಲ್ಲಿ ಸಂತತಿ ನಿಯಂತ್ರಣವನ್ನು ಬೆಂಬಲಿಸುವ ಈ ನಾಟಕ ಬರೆದುದಕ್ಕಾಗಿ ಎಲ್ಲರಿಂದ 'ಹುಚ್ಚ' 'ಧರ್ಮಲಂಡ' ಎನ್ನಿಸಿಕೊಳ್ಳಬೇಕಾಯಿತು. ಅದೇಕಾಲಕ್ಕೆ ಮಹಾತ್ಮ ಗಾಂಧಿ ಹರಿಜನರ ಉದ್ಧಾರಕ್ಕಾಗಿ ಉಪವಾಸ ಕೈಗೊಂಡಿದ್ದರು. ಧಾರವಾಡದಲ್ಲಿ ಹರಿಜನರ ಸೇವೆಯಲ್ಲಿ ತೊಡಗಿದ್ದ ಕೆಲವು ಬ್ರಾಹ್ಮಣರು 'ಹರಿಜನರ ಸ್ಪರ್ಶದ ನಂತರ ಸ್ನಾನಮಾಡಿ ಶುಚಿ' ಆಗುತ್ತಿದ್ದುದನ್ನು ಕಂಡ ರಂಗಾಚಾರ್ಯರು 'ಹರಿಜನ್ವಾರ' ನಾಟಕ

ಬರೆದರು. ರಂಗದ ಮೇಲೂ ಯಶಸ್ವಿಯಾದರು. ಈ ನಾಟಕವನ್ನೇ ಕೆಲವರು ವಿರೋಧ ಸಭೆಗಳನ್ನು ಸೇರಿಸಿ ಬಹಿರಂಗವಾಗಿ ಖಂಡಿಸಿ 'ಈತ ನಾಟಕಕಾರ' ಎಂದು ಜಗಜ್ಜಾಹೀರು ಮಾಡಿದರು. ಹೀಗೆ ಸಾಮಾಜಿಕ ಸಮಸ್ಯೆಗಳಿಗೆ ಮುಖಾಮುಖಿಯಾಗಿ ನಿಂತು ಎಳೆಯ ವಯಸ್ಸಿಗೇ ಪ್ರಬುದ್ಧ ನಾಟಕಕಾರರೆನಿಸಿದವರು ಶ್ರೀರಂಗ, ತಮ್ಮ ಕಲಾಜೀವನದ ಕಟು ಅನುಭವಗಳನ್ನೇ ಕುರಿತು ಸಮಾಜದ ಲೋಪ-ದೋಷಗಳನ್ನು ಕುರಿತು ನಾಟಕಗಳನ್ನು ಬರೆಯತೊಡಗಿದರು.

ಮೈಸೂರು ಭಾಗದಲ್ಲಿ ಕೈಲಾಸಂ, ನಾಟಕಕ್ಕೆ ಹೊಸ ಸತ್ವ ತಂದುಕೊಟ್ಟಂತೆ. ಉತ್ತರ ಕರ್ನಾಟಕದಲ್ಲಿ ಶ್ರೀರಂಗರು ನಾಟಕಕ್ಕೆ ಹೊಸ ಸತ್ವ ತಂದುಕೊಟ್ಟರು. ಸುಮಾರು 25 ವರ್ಷಗಳವರೆಗೆ ಶ್ರೀರಂಗರು ತಮ್ಮ ನಾಟಕ ಚಳುವಳಿಯನ್ನು ಮುಂದುವರೆಸಿಕೊಂಡು ಬಂದರು. ಇವರ ನಾಟಕಗಳಿಗೆ ಸನಾತನಿಗಳಿಂದ ಎಲ್ಲಿಲ್ಲದ ಪ್ರತಿಭಟನೆ. ಹೀಗಾಗಿ ಇವರ ಹರಿಜನ್ವಾರ ನಾಟಕಕ್ಕೆ ವಿಪರೀತ ಪುರಸ್ಕಾರ ದೊರೆಯಿತು. ಶ್ರೀರಂಗ ಅವರು ಇಂಥ ಪ್ರತಿಭಟನೆಗಳಿಗೆ ಸೊಪ್ಪು ಹಾಕದೆ ತಮ್ಮ ಕ್ರಾಂತಿಕಾರಿ ಶೈಲಿಯಲ್ಲಿ ನಾಟಕ ಚಟುವಟಿಕೆಗಳನ್ನು ಮುಂದುವರೆಸಿಕೊಂಡು ಬಂದರು. 'ಪ್ರಪಂಚ ಪಾಣಿಪತ್ತು'. 'ದರಿದ್ರ ನಾರಾಯಣ', 'ದಾರಿ ಯಾವುದಯ್ಯ ವೈಕುಂಠಕೆ' ಹೀಗೆ ಪುಂಖಾನುಪುಂಖ ವಾಗಿ ನಾಟಕಗಳು ಬರತೊಡಗಿದವು. 1949ರಿಂದಂತೂ ಶ್ರೀರಂಗರು ನೌಕರಿಯ ತೊಡಕು ಕಳೆದುಕೊಂಡು ತಮ್ಮ ಚಾವಟಿಯನ್ನೆತ್ತಿಕೊಂಡು ಸಮಾಜದ ಬೆನ್ನುಹತ್ತಿ ದರು. ತಮ್ಮ ಅಂತಿಮಕಾಲದವರೆಗೂ ಅವರು ಈ ಉದ್ಯೋಗದಲ್ಲಿ ನಿರತರಾಗಿದ್ದು ಕಂಡುಬರುತ್ತದೆ.

ಅನಕೃ ಅವರು ಶ್ರೀರಂಗ ಹಾಗೂ ಕೈಲಾಸಂರ ಬಗ್ಗೆ ಹೀಗೆ ಹೇಳಿದ್ದಾರೆ. "ಒಬ್ಬ ನಾಟಕ ಬರೆಯಹೋಗಿ ಭಾಷಣ ಮಾಡಿದ, ಇನ್ನೊಬ್ಬ ಭಾಷಣ ಮಾಡಹೊರಟು ನಾಟಕ ಬರೆದ" ಎಂದು ಹೇಳಿದ್ದಾರೆ. "ಹಾಸ್ಯಗಾರ ಕೈಲಾಸಂ ಹೃದಯ ಜೀವೀ, ಹಾಸ್ಯಗಾರ ಶ್ರೀರಂಗ ಬುದ್ಧಿಜೀವಿ" ಎಂಬ ಮಾತನ್ನೂ ಕೂಡಾ ಅನಕೃ ಅವರೇ ಹೇಳಿರು ತ್ತಾರೆ. ಕೈಲಾಸಂ ಶ್ರೀರಂಗ ಇವರೀರ್ವರೂ ಕನ್ನಡ ರಂಗಭೂಮಿಯ ಯುಗಪ್ರವರ್ತಕ ರಾಗಿದ್ದಾರೆ.

ಹೀಗೆ ನಾಟಕಕಾರರೆಂದೇ ಪ್ರಖ್ಯಾತರಾದ ಶ್ರೀರಂಗರು ಹನ್ನೆರಡು ಕಾದಂಬರಿ ಗಳನ್ನು ಬರೆದಿದ್ದಾರೆ. ಅಸ್ಪೃಶ್ಯತಾ ನಿವಾರಣೆಯ ಕೂಗು ಈಗ ಬಲವಾಗಿದ್ದರೂ ಗಾಂಧೀಜಿಯವರು ತಮ್ಮ ಜೀವಮಾನದಲ್ಲಿಯೇ ಅಸ್ಪೃಶ್ಯತೆಯೊಂದು ಕಲಂಕ, ಅದು ತೊಲಗಬೇಕು ಎಂದು ಸಾರಿದ್ದರು. ಅದೇ ರೀತಿ ಶ್ರೀರಂಗರೂ ಕೂಡ ಅರ್ಧಶತ ಮಾನದ ಹಿಂದೆಯೇ ತಮ್ಮ 'ಹರಿಜನ್ವಾರ' ನಾಟಕದಲ್ಲಿ ಅಸ್ಪೃಶ್ಯತಾ ನಿವಾರಣೆ ಹೇಗೆ ಸಾಧ್ಯ ಎಂಬುದನ್ನು ತಮ್ಮದೇ ರೀತಿಯಲ್ಲಿ ವಿವರಿಸಿದ್ದಾರೆ. ಅಂದಿನ ಕಾಲದ ಅವಿಭಕ್ತ

ಕುಟುಂಬದ ಆತಂಕಗಳನ್ನು 'ಪ್ರಪಂಚ ಪಾಣಿಪತ್ತು' ವಿವರಿಸುತ್ತದೆ. ಕುಟುಂಬ ಯೋಜನೆಯನ್ನು ಪ್ರತಿಪಾದಿಸುವ 'ಸಂಸಾರಿಗ ಕಂಸ' ಕೂಡ ಅಷ್ಟು ಹಿಂದಿನ ಕಾಲದಲ್ಲೆ, ಇನ್ನೂ ಆ ಶಬ್ದವೂ ಹುಟ್ಟಿರದಿದ್ದಾಗಲೇ ಮೂಡಿಬಂತು. 'ಜರಾಸಂಧಿ'ಯಲ್ಲಿ ಸಂಪ್ರದಾಯಪ್ರಿಯತೆ ಟೀಕೆಗೊಳಗಾಗುತ್ತದೆ. ಮುಂದೆ ಕ್ರಮೇಣ ರಾಜಕೀಯ ವಿಡಂಬನಾ ನಾಟಕಗಳೂ ಬರತೊಡಗಿದವು. 'ಶೋಕಚಕ್ರ' ಇಂಥವುಗಳಲ್ಲಿ ಒಂದು ಒಳ್ಳೆಯ ನಾಟಕ. ಇದು ಕೇವಲ ದಿಗ್ದರ್ಶನ.

ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ನಾಟಕದ ಲೇಖನ ಕ್ಷೇತ್ರದಲ್ಲಿ ಶ್ರೀರಂಗರಷ್ಟು ಸಂಖ್ಯೆಯಲ್ಲಿ, ಗುಣಮಟ್ಟದಲ್ಲಿ, ನಾಟಕಗಳನ್ನು ರಚಿಸಿದವರು ಇನ್ನೊಬ್ಬರಿಲ್ಲ, ಎಂಬುದು ಸಾಹಿತ್ಯಭ್ಯಾಸಗಳಿಗೆ, ಸಾಹಿತ್ಯ ವಿಮರ್ಶಕರಿಗೆ ಹೊಳೆಯದೇ ಇರಲಾರದು. ಕಥಾವಸ್ತು, ತಂತ್ರ, ವೈವಿಧ್ಯ, ವಿಷಯ ಪ್ರತಿಪಾದನೆ, ಪಾತ್ರರಚನೆ, ಹರಿತ ಸಂಭಾಷಣೆ, ಈ ಎಲ್ಲ ದೃಷ್ಟಿಯಿಂದ ಶ್ರೀರಂಗರ ಎತ್ತರ ಅಳತೆ ಮೀರಿದ್ದು ಎಂದರೆ ತಪ್ಪಾಗಲಾರದು.

ಯುಗಪುರುಷರಾದ ಶ್ರೀರಂಗರು ಹೊಸದೊಂದು ದಾರಿ ಕಡೆಯುವ ಜವಾಬ್ದಾರಿ ಹೊತ್ತವರು. ಹಳೆಯ ಸಮಾಜದ ಮುರುಕು ಗೋಡೆಗಳನ್ನು ಕೆಡವಿ ಹೊಸಮನೆ ಎಬ್ಬಿಸಬೇಕೆಂದು ಹೆಣಗಿದವರು. ಅವರ ಹೆಣಗಾಟವೇ ಅವರ ಬರಹದ ಪ್ರಮುಖ ಲಕ್ಷಣ.

ಶ್ರೀರಂಗರ ಮೊದಲಿನ ನಾಟಕಗಳಲ್ಲಿ ಬ್ರಾಹ್ಮಣ ಸಮಾಜದಲ್ಲಿ ಕಂಡುಬರುವ ಡಾಂಭಿಕತನ, ಅನಾಚಾರ, ದುರಾಚಾರಗಳ ವಿಷಯಗಳೇ ಮುಖ್ಯ ಸನ್ನಿವೇಶಗಳಾಗಿದ್ದವು. ಕೇವಲ ವೈಷ್ಣವ ಬ್ರಾಹ್ಮಣ ಸಮಾಜದ ಲೋಪ-ದೋಷಗಳನ್ನೇ ಏಕೆ ಬೈಲಿಗೆಳೆಯುತ್ತೀರಿ ? ಉಳಿದ ಜಾತಿಗಳ ಸಮಾಜಗಳಲ್ಲಿ ಅಂತಹ ಲೋಪ-ದೋಷಗಳಿರುವದಿಲ್ಲವೆ ? ಎಂದು ಶ್ರೀರಂಗರನ್ನು ಕೇಳಿದಾಗ ಶ್ರೀರಂಗರು ಎಲ್ಲ ಜಾತಿಗಳ ಸಮಾಜಗಳಲ್ಲಿ ಅಂತಹ ಲೋಪ-ದೋಷಗಳಿರುವದು ಪ್ರತ್ಯಕ್ಷ ಕಂಡುಬರುತ್ತಿದ್ದರೂ ಅವುಗಳನ್ನು ಟೀಕಿಸುವದರಿಂದ ಜಾತಿದ್ವೇಷದ ಭಾವನೆಗಳು ಉಂಟಾಗುತ್ತಿದ್ದವು. ಆದರೆ ತಾವು ಬ್ರಾಹ್ಮಣವರ್ಗಕ್ಕೇ ಸೇರಿದವರಾದ್ದರಿಂದ ಆ ಸಮಾಜವನ್ನು ಟೀಕಿಸುವದರಿಂದ ತಪ್ಪು ಕಲ್ಪನೆಗೆ ಅವಕಾಶವಿಲ್ಲವಷ್ಟೇ ಅಲ್ಲ ತಮ್ಮ ಸಮಾಜದ ದೋಷಗಳನ್ನು ಬೈಲಿಗೆಳೆಯುವದು ತಮ್ಮ ಕರ್ತವ್ಯವೇ ಆಗಿರುವದೆಂದು ಶ್ರೀರಂಗರು ಖಂಡತುಂಡವಾಗಿ ಉತ್ತರಿಸಿದ್ದಾರೆ. ಮೊದಲಸಲ ರಂಗಭೂಮಿಗೆ ಬಂದ ಶ್ರೀರಂಗರ 'ಹರಿಜನ್ವಾರ', ನಾಟಕವು ಬ್ರಾಹ್ಮಣ ಸಮಾಜದಲ್ಲಿ ಕೋಲಾಹಲವನ್ನೇ ಉಂಟು ಮಾಡಿರುವದು ಕಂಡುಬರುತ್ತದೆ.

ಸಾರ್ವಜನಿಕ ಬದುಕಿನಲ್ಲಿ ಅಷ್ಟೊಂದು ಪರಿಣಾಮ ಬೀರಿದ್ದರಿಂದಲೇ ಶ್ರೀರಂಗರು ಕೊಂಚ ಹೆಚ್ಚು ಕಹಿಯಶಾಗಿದ್ದರು. ಭ್ರಷ್ಟಾಚಾರ ರಾಜಕೀಯ ಅನಾಚಾರ ಅವರನ್ನು ಅತಿಯಾಗಿ ಸಿಟ್ಟಿಗೆಬ್ಬಿಸುತ್ತಿತ್ತು. ಅವರ 'ಮಡಿವಂತ' ರೋಷ ಅವರನ್ನು ಕಡೆಕಡೆಗೆ ಬಲಪಂಥೀಯ ರಾಜಕೀಯ ಶಕ್ತಿಗಳ ಹತ್ತಿರ ಕೊಂಡೊಯ್ದದ್ದೂ ಇದೆ. ಅಡಿಗರು, ಶ್ರೀರಂಗರು, ಹೀಗೆ ನಮ್ಮ ಅನೇಕ ಲೇಖಕರಿಗೆ ಅವರ ಹೋರಾಟವೇ ಅವರನ್ನು ಬಲಪಂಥೀಯ ರಾಜಕೀಯದತ್ತ ತಳ್ಳಿರುವದು ನಮ್ಮ ಚಾರಿತ್ರಿಕ ಸಂದರ್ಭದ ಒಂದು ವಿರೋಧಾಭಾಸ. ಸ್ವಾತಂತ್ರ್ಯ ನಂತರದ ಭಾರತೀಯ ಬದುಕಿನ ಅಸಹ್ಯಗಳು ಶ್ರೀರಂಗರಲ್ಲಿ ವ್ಯಂಗ್ಯವನ್ನ, ಕಟಕಿಯನ್ನ, ಕೊಂಚ ಹೆಚ್ಚಾಗಿಯೇ ಪ್ರೇರೇಪಿಸಿದ್ದರೆ ಅದಕ್ಕೆ ಅವರು ಕಂಡ ಸಾರ್ವಜನಿಕ ಬದುಕಿನ ದರ್ಶನವೂ ಕಾರಣವಾಗಿರಬಹುದೇನೋ ಎಂಬ ಸಂದೇಹವುಂಟಾಗುತ್ತದೆ.

ಶ್ರೀರಂಗರು ಪ್ರಸ್ತುತರಾಗುವದು ಕನ್ನಡಿಗರಿಗೆ ಮಾತ್ರವೇ ಅಲ್ಲ, ನಾಟಕಕಾರರಾಗಿ ಶ್ರೀರಂಗರು ಇಡೀ ಭಾರತೀಯ ರಂಗಭೂಮಿಗೆ ದಾರಿತೋರಿಸಿದವರು. ಸಮಕಾಲೀನ ಭಾರತೀಯ ರಂಗಭೂಮಿಯ ಮೊದಲಘಟ್ಟ ಗುರುತಿಸುವಾಗ ಕನ್ನಡೇತರ ವಿಮರ್ಶಕರೂ ಕೂಡಾ ಶ್ರೀರಂಗರ 'ಕೇಳು ಜನಮೇಜಯ'ವನ್ನೇ ಉದಾಹರಿಸುತ್ತಾರೆಂಬ ಸಂಗತಿ ಕನ್ನಡಿಗರಿಗೆ ಹೆಮ್ಮೆಯ ವಿಷಯವಾಗಿದೆ.

ಶ್ರೀರಂಗರ ಸಾಹಿತ್ಯದಲ್ಲಿ ಎಲ್ಲವೂ ಒಳ್ಳೆಯದಿಲ್ಲ. ಸಾಕಷ್ಟು ನಾಟಕಗಳಲ್ಲಿ ಒಣಚರ್ಚೆ ಕೊಂಚ ಅತಿಯಾಯಿತೇನೋ ಎನ್ನುವ ಭಾವನೆ ಬರುತ್ತದೆ. ಆದರೆ ಕಳೆದ ಅರ್ಧಶತಮಾನಗಳ ನಮ್ಮ ಸಾಹಿತ್ಯಿಕ ಬೆಳವಣಿಗೆಯ ಎಲ್ಲ ಕಂಪನಗಳೂ ಅಲ್ಲಿ ದಾಖಲಾಗಿವೆ.

ಆದ್ಯ ನಾಟಕಕಾರಾದ ಕೈಲಾಸಂ, ಶ್ರೀರಂಗ, ಹಾಗೂ ಕಾರಂತರು ಕಂಪನಿ ನಾಟಕಗಳ ರಂಗಭೂಮಿಯ ಬಗ್ಗೆ ತೀವ್ರವಾದ ಪ್ರತಿಕ್ರಿಯೆ ತೋರಿಸಿದರು. ಕೈಲಾಸಂರ 'ನಂ ಕಂಪ್ನಿ' ಮತ್ತು ಶ್ರೀರಂಗರ 'ಸಂಪುಷ್ಟ ರಾಮಾಯಣ' ಇವು ಕಂಪನಿಗಳ ರಂಗ ಭೂಮಿಯನ್ನು ತೀಕ್ಷ್ಣವಾಗಿ ವಿಡಂಬಿಸಿ ಬರೆದ ನಾಟಕಗಳಾಗಿವೆ. ಕಂಪನಿ ನಾಟಕಗಳ ಅವಾಸ್ತವತೆಗಳನ್ನು, ಸಂಗೀತದ ಹುಚ್ಚು ವ್ಯಾಮೋಹವನ್ನು ಟೀಕಿಸುವುದು ಇಂಥ ಕೃತಿಗಳ ಮೂಲ ಉದ್ದೇಶವಾಗಿತ್ತು. ಇವರಲ್ಲಿ ಶ್ರೀರಂಗರ ಪ್ರತಿಕ್ರಿಯೆ ಹೆಚ್ಚು ವ್ಯಾಪಕವಾಗಿದ್ದು ಅವರು ಕಾಲಕಾಲಕ್ಕೆ ರಂಗಭೂಮಿಯ ಸಮಸ್ಯೆಗಳನ್ನು ನಿರೂಪಿಸುವ, ಚರ್ಚಿಸುವ, ನಾಟಕಗಳನ್ನು ಬರೆದಿದ್ದಾರೆ. 'ಪೂರ್ವರಂಗ', 'ಉತ್ತರರಂಗ', 'ಕತ್ತಲೆ-ಬೆಳಕು,' 'ಅಪರಾಧಂಗಳ ಕ್ಷಮಿಸೊ', ಇಂಥ ನಾಟಕಗಳು ಬೇರೆ ಬೇರೆ ಪ್ರಕಾರದ ನಾಟಕಗಳನ್ನು ರಂಗಭೂಮಿಯನ್ನು ವಿಡಂಬಿಸುತ್ತವೆ.

ಶ್ರೀರಂಗರ ಪಾತ್ರಗಳು ಹೆಚ್ಚು ಸಂಭಾಷಣೆ ಮಾಡುತ್ತವೆಂದು ವಿಮರ್ಶಕರ ಆಕ್ಷೇಪವಿದೆಯಾದರೂ ಶ್ರೀರಂಗರು ಭಾಷಣಗಳನ್ನು ಹೆಚ್ಚಾಗಿ ವಿಡಂಬನಕ್ಕಾಗಿಯೇ ಉಪಯೋಗಿಸುತ್ತಾರೆಂಬುದನ್ನು ಮರೆಯುವಂತಿಲ್ಲ. ಕೈಲಾಸಂರ ನಾಟಕಗಳಲ್ಲಿ ನಾಟಕಕಾರ–ಪ್ರೇಕ್ಷಕರ ಮೌಲ್ಯಗಳು ಒಂದೇ, ಆದರೆ ಶ್ರೀರಂಗರ ನಾಟಕಗಳಲ್ಲಿ ದೃಷ್ಟಿಗಳ ಘರ್ಷಣೆ ಮೌಲ್ಯಗಳ ಘರ್ಷಣೆ, ಸುಮಾರು 50 ವರ್ಷಗಳಿಂದ ನಾಟಕ ರಚನೆ ಮಾಡುತ್ತಿರುವ ಶ್ರೀರಂಗರ ನಾಟಕಗಳಲ್ಲಿ ಭಾಷೆಯ ಬಳಕೆ ಒಂದೇ ರೀತಿಯದು ಎಂದು ಭಾವಿಸುವದು ತಪ್ಪಾದೀತು. ಶ್ರೀರಂಗರ ಭಾಷೆ ಭಾವಗಳಿಗಿಂತ ಯೋಚನೆಗಳತ್ತ ಮುಖಮಾಡುತ್ತದೆ. ಒಟ್ಟಿನಲ್ಲಿ ಶ್ರೀರಂಗರ ಅಭಿಪ್ರಾಯಗಳ ಘರ್ಷಣೆ ಮುಖ್ಯವಾದ್ದರಿಂದ ಸಂಭಾಷಣೆಯ ಒಂದು ಶಬ್ದ ಇನ್ನೊಂದು ಶಬ್ದಗಳ ತಿಕ್ಕಾಟದಿಂದಲೇ ಮಾತಿನ ಚಕಮಕಿ ಸಾಗುತ್ತದೆ.

ಕೈಲಾಸಂ-ಶ್ರೀರಂಗರು ತಮ್ಮ ನಾಟಕಗಳಿಗೆ ಆರಿಸಿಕೊಂಡದ್ದು ಸಮಕಾಲೀನ ಜೀವನದ ಸಾಮಾಜಿಕ-ರಾಜಕೀಯ ಸಮಸ್ಯೆಗಳನ್ನು. ಆದರೆ ಈ ಸಮಸ್ಯೆಗಳ ನಾಟಕೀಯ ನಿರೂಪಣೆ ಬಹಳ ತೆಳುವಾದದ್ದೆಂದು ಸ್ಪಷ್ಟವಾಗುತ್ತದೆ. ನಗೆ, ಹಾಸ್ಯ, ವಿಡಂಬನೆ, ಇವೇ ಅದರ ನಿರೂಪಣಾ ತಂತ್ರಗಳಾಗಿದ್ದರಿಂದ ಸಮಸ್ಯೆಯ ಆಳಕ್ಕಿಳಿದು ಅದನ್ನು ಪೃಥಕ್ಕರಿಸುವ ಸಾಧ್ಯತೆ ಅವರಿಗೆ ಒದಗಲೇ ಇಲ್ಲ. ಸಮಕಾಲೀನತೆಯ ಗರ್ಭದಲ್ಲಿರುವ ಸರ್ವಕಾಲಿಕತೆಯನ್ನು ಧ್ವನಿಸುವ ತಾಕತ್ತು ಅವರದಾಗಿರಲಿಲ್ಲ. ಶ್ರೀರಂಗರ ಮನೋಭಾವ ತಾತ್ವಿಕವಾದುದು ಅನ್ನಿಸಿದರೂ ಆ ತಾತ್ವಿಕತೆ ಬಹಳ ಸರಳವಾದುದು. ಹೀಗಾಗಿ ಅವರ ಹೆಚ್ಚಿನ ನಾಟಕಗಳಲ್ಲಿ ತಂತ್ರ ವೈವಿಧ್ಯ ಇದ್ದರೂ ವೈಚಾರಿಕ ಏಕತಾನತೆ ಅನಿವಾರ್ಯವಾಗಿ ಬಂದೇ ಬರುತ್ತದೆ. ಇತ್ತೀಚಿನ ನಾಟಕಗಳ ಹೊಸ ತಿರುವಿಗೆ ಅವರ ಕತ್ತಲೆ - ಬೆಳಕು ನಾಟಕದ ತಂತ್ರನಾವೀನ್ಯತೆಯೇ ಅಪರೋಕ್ಷ ಕಾರಣ ಎಂದು ವಿಮರ್ಶಕರು ಸಾಮಾನ್ಯವಾಗಿ ಅಭಿಪ್ರಾಯಪಡುತ್ತಾರೆ.

ಶ್ರೀರಂಗರ ಸಾರಸ್ವತ ಸಂಪತ್ತು ಅಪಾರವಾಗಿದೆ. ಸತ್ವಪೂರ್ಣವಾಗಿದೆ, ವಿಚಾರ ಪ್ರಚೋದಕವಾಗಿದೆ, ವಿಡಂಬನಾತ್ಮಕವೂ ಆಗಿದೆ. ಇವರಿಗೆ ಕೇಂದ್ರಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದುದು ಇವರ ವೈಚಾರಿಕ ಗ್ರಂಥಕ್ಕಾಗಿ. 'ಗೀತಾಗಾಂಭೀರ್ಯ'ಕ್ಕೆ ಆ ಗೌರವ ಲಭಿಸಿದೆ. ಗೀತಾದರ್ಪಣವನ್ನೂ ಬರೆದಿದ್ದಾರೆ. ಅಲ್ಲದೆ ಒಂದೆರಡು ಚರಿತ್ರ ಗ್ರಂಥಗಳನ್ನು ಬರೆದಿದ್ದಾರೆ. ಈ ಗ್ರಂಥಗಳಲ್ಲೂ ಶ್ರೀರಂಗ ವೈಶಿಷ್ಟ್ಯ ಮುದ್ರೆಯನ್ನು ಕಾಣಬಹುದು. 'ಭಾರತ ಸಂವಿಧಾನ'ವನ್ನು ಕನ್ನಡಕ್ಕೆ ಭಾಷಾಂತರಿಸಿದ್ದಾರೆ.

ಇವರ ಇತ್ತೀಚಿನ ಉದ್ಗ್ರಂಥ ಎಂದರೆ ಭರತಮುನಿ ಪ್ರಣೀತ. ಇದು ನಾಟ್ಯ ಶಾಸ್ತ್ರದ ಕನ್ನಡ ಅನುವಾದ. ಶ್ರೀರಂಗರು ತಮ್ಮ ಇಳಿವಯಸ್ಸಿನಲ್ಲೂ ಕೂಡಾ ಹಟದಿಂದ ಮಹಾಗ್ರಂಥದ ಅನುವಾದ ಕಾರ್ಯಪೂರೈಸಿದ್ದು ಇವರ ಅದಮ್ಯ ಆತ್ಮ ಶಕ್ತಿಯ ಕುರುಹಾಗಿದೆ.

ಕನ್ನಡ ಸಾಹಿತ್ಯಲೋಕಕ್ಕೆ 'ಶ್ರೀರಂಗ' ಎಂಬ ಕಾವ್ಯನಾಮದಿಂದ ಚಿರಪರಿಚಿತರಾಗಿದ್ದ ಹಿರಿಯ ಸಾಹಿತಿ ಪ್ರಸಿದ್ಧ ನಾಟಕಕಾರ, ಪದ್ಮಭೂಷಣ ಆದ್ಯರಂಗಾಚಾರ್ಯರು ದಿನಾಂಕ 17-10-1984 ರಂದು ನಿಧನ ಹೊಂದಿದರು.

ಶ್ರೀರಂಗರ ಸಾವಿನಿಂದ ಒಂದು ದೈತ್ಯ ಪ್ರತಿಭೆ, ತೀಕ್ಷ್ಣ ವಿಚಾರಶಕ್ತಿ ಇದ್ದ ಮೆದುಳು ವಶಾಯುವಾಯಿತೆಂಬುದರಲ್ಲಿ ಸಂದೇಹವಿಲ್ಲ. ಕನ್ನಡ ನಾಟಕರಂಗಕ್ಕೆ ಸಾಹಿತ್ಯ, ವಿಚಾರ, ವಿವೇಕಗಳ ಮೂಲಕ ಹಾಸ್ಯ, ವ್ಯಂಗ್ಯ, ಕಟು ವಿಡಂಬನೆ, ಹರಿತ ವಾಗ್ಬಾಣಗಳಿಂದ ಪ್ರಸ್ತುತ ಬದುಕಿಗೆ ಸ್ಪಂದಿಸಿ, ವಜ್ರದಷ್ಟು ಕಠೋರವಾಗಿ ಕಂಡರೂ ಕುಸುಮದಷ್ಟು ಮೃದು ಮನಸಿನ ಹೋರಾಟಗಾರ ಮನೋಭಾವದ ಆದ್ಯರಂಗಾಚಾರ್ಯರ ಸ್ಫೂರ್ತಿ ಚಿರಂತನವಾದುದು. ಆಧುನಿಕ ನಾಟಕಕಾರರಲ್ಲಿ ಶ್ರೀರಂಗರ ಸ್ಥಾನ ಎತ್ತರವಾದುದು. ಇವೆಲ್ಲಕ್ಕಿಂತ ಮಿಗಿಲಾಗಿ ಕನ್ನಡಿಗರ ಮನೆ ಮನೆಗಳಲ್ಲಿ ಎಂದೆಂದಿಗೂ ಅಮರರಾಗಿದ್ದಾರೆ. ಕೊನೆಯ ಉಸಿರಿರುವವರೆಗೂ ಬರಹ ಬಿಟ್ಟಿರದ ಜೀವಂತ ಬರಹಗಾರರು.

ನಂದವಾಡಿಗೆ ಶಾಸನದ ಭಾವನಗಂಧವಾರಣ-ಒಂದು ಸ್ಪಷ್ಟನೆ*

ಡಾ॥ ಚನ್ನಬಸವ ಹಿರೇಮಠ

ಇಂದಿನ ಬಿಜಾಪುರ ಜಿಲ್ಲೆಯ ಹುನಗುಂದ ತಾಲೂಕಿನ ನಂದವಾಡಿಗೆಯು ಪ್ರಾಚೀನ ಕರಡಿಕಲ್ಲು-400 ವಿಭಾಗದ ಒಂದು ಅಗ್ರಹಾರವಾಗಿತ್ತು.[1] ಕಾಲನಿರ್ದೇಶನವಿಲ್ಲದ ಚಾಲುಕ್ಯ ತ್ರೈಲೋಕ್ಯಮಲ್ಲ ಒಂದನೆಯ ಸೋಮೇಶ್ವರ (ಕ್ರಿ.ಶ. 1043-1068)ನ ಆಳ್ವಿಕೆಯಲ್ಲಿ ರಚನೆಯಾದ ಅಲ್ಲಿಯ ಒಂದು ಶಾಸನ ತುಂಬ ಪ್ರಾಮುಖ್ಯತೆಯನ್ನು ಪಡೆದಿದೆ.[2] ನಾಗಲಿಂಗ ದೇವಾಲಯದ ಎದುರಿನ ಕಂಬದ ಮೂರು ಮುಖಗಳಲ್ಲಿ ಕೊರೆಯಲ್ಪಟ್ಟ ಅದರ ಮೊದಲನೆಯ ಭಾಗ ಚಕ್ರವರ್ತಿ ಮತ್ತು ಅಸ್ಪಷ್ಟ ಮಹಾಮಂಡಳೇಶ್ವರರ ಆಳ್ವಿಕೆಯನ್ನು, ಎರಡನೆಯ ಭಾಗ 'ಭಾವನಗಂಧವಾರಣ'ನ ದಾನದ ವಿವರಗಳನ್ನು ಮತ್ತು ಮೂರನೆಯ ಭಾಗವು ಫಲಶ್ರುತಿಯನ್ನು ಒಳಗೊಂಡಿದೆ. ಚಕ್ರವರ್ತಿ ಸೋಮೇಶ್ವರ ಮತ್ತು ಆತನ ಕಾಲದ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯವಿಲ್ಲ. ಆದರೆ ಅಲ್ಲಿಯ ಮಹಾಮಂಡಳೇಶ್ವರ ಮತ್ತು ಭಾವನಗಂಧವಾರಣರು ಒಬ್ಬನೆ ? ಅಥವಾ ಬೇರೆ ಬೇರೆ ವ್ಯಕ್ತಿಗಳೇ ? ಎಂಬ ಬಗ್ಗೆ ಚರ್ಚೆ ನಡೆದಿದೆ.

ಶಾಸನ ಸಂಪಾದಕರು ಇದರ ಕಾಲ ಕ್ರಿ.ಶ. 1070 ಎಂದು ನಿರ್ಣಯಿಸುತ್ತ ಇಲ್ಲಿಯ ಮಹಾಮಂಡಳೇಶ್ವರನ ಹೆಸರಿರುವ ಭಾಗ ತ್ರುಟಿತವಾಗಿದ್ದು, ಭಾವನಗಂಧವಾರಣನೂ ಯಾರೆಂಬುದು ಸ್ಪಷ್ಟವಾಗುವುದಿಲ್ಲ ಎಂದಿದ್ದಾರೆ.[3] ಡಾ॥ ಪಿ. ಬಿ. ದೇಸಾಯಿ ಅವರು ಒಂದು ಹೆಜ್ಜೆ ಮುಂದೆ ಹೋಗಿ ಈ ಮಹಾಮಂಡಳೇಶ್ವರನು 'ಭಾವನಗಂಧವಾರಣ' ಬಿರುದನ್ನು ಧರಿಸಿದ್ದು, ದುರ್ದೈವದಿಂದ ಆತನ ಹೆಸರಿರುವ ಶಾಸನದ ಭಾಗ ತ್ರುಟಿತಗೊಂಡಿದೆ ಎಂದಿದ್ದಾರೆ.[4] ಈಚೆಗೆ ಡಾ. ಹಂಪನಾ ಅವರು ಇಲ್ಲಿಯ ಮಹಾಮಂಡಳೇಶ್ವರ ಚಕ್ರವರ್ತಿ ಒಂದನೆಯ ಸೋಮೇಶ್ವರನ ಮಗ ಎರಡನೆಯ ಸೋಮೇಶ್ವರನೆಂದು ಸರಿಯಾಗಿಯೇ ಗುರುತಿಸಿದ್ದಾರೆ. ಆದರೆ ಇವರೂ ಕೂಡ ಡಾ॥ ಪಿ. ಬಿ. ದೇಸಾಯಿ ಅವರ ಮಾರ್ಗವನ್ನು ಅನುಸರಿಸಿ ಅವನಿಗೆ 'ಭಾವನಗಂಧವಾರಣ' ಬಿರುದಿತ್ತು ಎಂಬ ನಿರ್ಣಯಕ್ಕೆ ಬಂದಿದ್ದಾರೆ.[5]

---

*ಸಂಡೂರಿನಲ್ಲಿ ನಡೆದ 8ನೆಯ ಇತಿಹಾಸ ಸಮ್ಮೇಳನದಲ್ಲಿ ಮಂಡಿಸಿದ ಸಂಪ್ರಬಂಧ

ಚಕ್ರವರ್ತಿ, ರಾಣಿ, ಮಹಾಮಂಡಳೇಶ್ವರ ಮೊದಲಾದವರಿಗೆ ಪ್ರಿಯರಾಗಿದ್ದವರು ಅವರವರ ಅಂಕಕಾರನೆಂದೂ, ಗಂಧವಾರಣನೆಂದೂ ಕರೆದುಕೊಳ್ಳುತ್ತಿದ್ದುದನ್ನು ಶಾಸನಗಳಲ್ಲಿ ಕಾಣುತ್ತೇವೆ.

ಉದಾ : ಮೈಳಲದೇವಿಯಂಕಕಾರ, ತ್ರಿಭುವನಮಲ್ಲನಂಕಕಾರ, ಚಂದಲದೇವಿಯ ಗಂಧವಾರಣ ಇತ್ಯಾದಿ. ಇನ್ನು ಅವರೊಂದಿಗಿನ ತಮ್ಮ ಸಂಬಂಧವನ್ನು ಸೂಚಿಸಲು ಮಾವನಂಕಕಾರ, ಅಮ್ಮನಗಂಧವಾರಣ, ಭಾವನಗಂಧವಾರಣರೆಂದು ಕರೆದುಕೊಂಡಿದ್ದಾರೆ.

ಎರಡನೆಯ ಸೋಮೇಶ್ವರನ ಅನೇಕ ಬಿರುದುಗಳಲ್ಲಿ ಅಮ್ಮನಗಂಧವಾರಣವೂ ಒಂದು.[6] ಆದರೆ ನಂದವಾಡಿಗೆ ಶಾಸನದಲ್ಲಿ ಬಳಕೆಯಾಗಿರುವುದು ಅಮ್ಮನಗಂಧವಾರಣವಲ್ಲ, ಭಾವನಗಂಧವಾರಣ. 'ಅಮ್ಮ' ಎಂದರೆ ತಂದೆ ಎಂದರ್ಥ. ಇನ್ನು 'ಭಾವ' ಪದಕ್ಕೆ ಅಕ್ಕನ ಗಂಡ ಎಂಬರ್ಥವಿದೆ. ಆದ್ದರಿಂದ ಅಮ್ಮನಗಂಧವಾರಣನು ತಂದೆಯ ಅಂಗರಕ್ಷಕನಾಗಿದ್ದರೆ, ಭಾವನಗಂಧವಾರಣನು ಅಕ್ಕನ ಗಂಡನಿಗೆ ಅಂಗರಕ್ಷಕನಾಗಿದ್ದನೆಂದು ಹೇಳಬೇಕಾಗುತ್ತದೆ. ಪಂಪ-ರನ್ನರ ಕಾವ್ಯಗಳಲ್ಲಿ ಅಮ್ಮನಗಂಧವಾರಣವು ಇದೇ ಅರ್ಥದಲ್ಲಿಯೇ ಬಳಕೆಗೊಂಡಿದೆ.[7] ಆದ್ದರಿಂದ ನಂದವಾಡಿಗೆ ಶಾಸನದ ಮಹಾಮಂಡಳೇಶ್ವರ ಮತ್ತು ಭಾವನಗಂಧವಾರಣನು ಎರಡನೆಯ ಸೋಮೇಶ್ವರನೆಂಬ ಹಂಪನಾ ಅವರ ಅಭಿಪ್ರಾಯ ಸರಿಯಲ್ಲ. ಅಂದರೆ ತಂದೆಯು ಮಗನಿಗೆ ಭಾವನಾಗಿರಲು ಸಾಧ್ಯವೇ ಇಲ್ಲ. ಹೀಗಾಗಿ ಇಲ್ಲಿಯ ಭಾವನಗಂಧವಾರಣನು ಬೇರೊಬ್ಬ ವ್ಯಕ್ತಿ ಎಂಬುದು ಸ್ಪಷ್ಟ.

ಬೆಳ್ವೊಲ-300, ಪುಲಿಗೆರೆ-300 ವಿಭಾಗಗಳನ್ನು ಕ್ರಿ.ಶ. 1062 ರಲ್ಲಿ ಮಹಾಮಂಡಳೇಶ್ವರ ಪೆವರ್ಮಾಳ ಮಾದರಸನು ಆಳುತ್ತಿದ್ದನೆಂದು ಮುಳುಗುಂದ ಶಾಸನ ಹೇಳಿದೆ.[8] ಅವನು 'ಸುಬಟ ಮದನ ಮಹೇಶ್ವರ, ತ್ರಿಪುರಹರ ಲಬ್ಧವರಪ್ರಸಾದ, ತ್ಯಾಗವಿನೋದ, ಮುಜುಡಿಯ ಮಂಡಳಿಕ, ಬಿರುದಬಂಗಾರ, ಮೈಳಲದೇವಿಯಂಕಕಾರ, ತ್ರೈಳೋಕ್ಯಮಕರ ಧ್ವಜ, ತ್ರೈಳೋಕ್ಯಮಲ್ಲದೇವರಚಟ್ಟ, ಚಾಳುಕ್ಯ ಸಂತಾರಣ, ಭಾವನಗಂಧವಾರಣ, ಚೋಳಕುಳಕಾಳದಂಡ, ಚೋಳಘರಟ್ಟ, ರಾಜಾಧಿರಾಜ ಚೊಳಂಗೊಣ್ಡ–ಮೊದಲಾದ ಬಿರುದುಗಳನ್ನು ಧರಿಸಿದ್ದನು. ಯರಗುಪ್ಪಿ,[9] ಗದಗ,[10] ನವಲಿ[11] ಶಾಸನಗಳೂ ಅವನನ್ನು ಭಾವನಗಂಧವಾರಣ, ರಾಜಾಧಿರಾಜ ಶಿರಚ್ಛೇದನ ಇತ್ಯಾದಿಯಾಗಿ ಕರೆದಿವೆ. ನಂದವಾಡಿಗೆ ಶಾಸನವೂ ಭಾವನಗಂಧವಾರಣನಿಗೆ 'ಚೋಳಂಗೊಂಡ' ಎಂಬ ಬಿರುದಿದ್ದುದನ್ನು ದಾನದ ಸಂದರ್ಭದಲ್ಲಿ ಹೇಳಿದೆ.[12] ಆದ್ದರಿಂದ ಈ ಶಾಸನದ ಭಾವನಗಂಧವಾರಣನು ಪೆವರ್ಮಾಳಮಾದರಸನೆಂಬುದು ಸ್ಪಷ್ಟ.

ಪೆವರ್ಮಾಳವಣಾದರಸನ ಆಳ್ವಿಕೆಯನ್ನು ಹೇಳುವ ಕೆಲವು ಶಾಸನಗಳು ಚಕ್ರವರ್ತಿ ಸೋಮೇಶ್ವರನ ಪಿರಿಯರಸಿ ಮೈಳಲದೇವಿಯನ್ನು ಉಲ್ಲೇಖಿಸಿವೆ.[13] ಸೋಮೇಶ್ವರನ ರಾಣಿಯರಲ್ಲಿ ಕೆಲವರು ಗಂಗ, ಹೊಯ್ಸಳರಂಥ ಸಾಮಂತರ ಕುಮಾರಿಯರೆಂಬುದು ತಿಳಿದು ಬರುತ್ತದೆ.[14] ಅದರಂತೆ ಮೈಳಲದೇವಿಯೂ ಬಹುಶಃ ಪೆವರ್ಮಾಳವಣಾದರಸನ ಹಿರಿಯ ಸಹೋದರಿಯಾಗಿರಬೇಕು. ಆದ್ದರಿಂದ ಅವನು ಮೈಳಲದೇವಿಯ ಅಂಕಕಾರ, ತ್ರೈಳೋಕ್ಯಮಲ್ಲದೇವರ ಚಟ್ಟನೆನಿಸಿದ್ದನಲ್ಲದೆ ಚಕ್ರವರ್ತಿಯ ಭಾವನಗಂಧವಾರಣನೂ ಆಗಿದ್ದಾನೆ. ಮೈಳಲದೇವಿಯು ಪೆವರ್ಮಾಳಮಾದರಸನ ಸಹೋದರಿ ಎಂದು ಸಮರ್ಥಿಸಲು ಆಧಾರಗಳ ಕೊರತೆ ಎದ್ದು ಕಾಣುತ್ತದೆಯಾದರೂ ಹಾಗೆ ಊಹಿಸಲವಕಾಶವಿದೆ. ಬಹುಶಃ ಈ ಕೌಟುಂಬಿಕ ಸಂಬಂಧ ಕಾರಣವಾಗಿಯೇ ಅವನು ಚೋಳರ ವಿರುದ್ಧ ಸಮರ ಸಾರಿರಬೇಕು.

ದಕ್ಷಿಣದಲ್ಲಿ ಬಲಾಢ್ಯ ಅರಸರೆಂದರೆ ಚೋಳರು. ಇವರಿಗೂ ಚಾಲುಕ್ಯರಿಗೂ ವಂಶಪಾರಂಪರ್ಯದಿಂದ ಜಗಳನಡೆದುಕೊಂಡು ಬಂದಿದೆ. ಒಮ್ಮೆ ಚಾಲುಕ್ಯ ಚಕ್ರವರ್ತಿ ಗೆದ್ದರೆ ಮತ್ತೊಮ್ಮೆ ಚೋಳರು ಗೆಲ್ಲುತ್ತಿದ್ದರು. ಹೀಗೆ ನಡೆದ ಅನೇಕ ಯುದ್ಧಗಳಲ್ಲಿ 'ಕೊಪ್ಪಂ' ಯುದ್ಧವೂ ಒಂದು. ಈ ಸ್ಥಳವು ಇಂದಿನ ರಾಯಚೂರು ಜಿಲ್ಲೆಯ 'ಕೊಪ್ಪಳ'ವೆಂದು ವಿದ್ವಾಂಸರು ಗುರುತಿಸಿದ್ದಾರೆ.[15] ಈ ಕದನದಲ್ಲಿ 1ನೇ ರಾಜಾಧಿರಾಜನು ಯುದ್ಧ ಭೂಮಿಯಲ್ಲಿಯೇ ಸಾಯುತ್ತಾನೆ. ಪೆವರ್ಮಾಳ ವಣಾದರಸನನ್ನು ಶಾಸನಗಳು 'ರಾಜಾಧಿರಾಜ ಚೋಳಂಗೊಂದ', 'ರಾಜಾಧಿರಾಜಚೋಳ ಶಿರಚ್ಛೇದನ' ಎಂದು ಸ್ಪಷ್ಟವಾಗಿ ಕರೆದಿರುವುದರಿಂದ ಕೊಪ್ಪಳ ಯುದ್ಧದಲ್ಲಿ ಅವನು ಭಾಗವಹಿಸಿ ಚಾಲುಕ್ಯರ ಆಜನ್ಮ ವೈರಿಗಳಾದ ಚೋಳರನ್ನು ಹಿಮ್ಮೆಟ್ಟಿಸಿ, ರಾಜಾಧಿರಾಜ ಚೋಳನನ್ನು ಕೊಂದಿರಬೇಕು. ಅವನ ಈ ಹೋರಾಟದ ಸನ್ನಿವೇಶ ಮತ್ತು ಅಪ್ರತಿಮ ಸಾಹಸಗಳನ್ನೇ ನಂದವಾಡಿಗೆ ಶಾಸನ ಹೀಗೆ ಬಣ್ಣಿಸಿದೆ.[16]

ಚಂ॥ ಪದಹತಿಯಿಂನೆಲನ್ನಡುಗೆ ಕರ್ಣ ಚಳಾಚಳದಿಂದ ಮಬ್ಬಿಗ
ಳ್ಗದಗೆ ಕರಾಭಿಘಾತದ ಗುರ್ವ್ವಣೆಯಿಂ ಭಗಣಂ ಧರಾತಳ
ಕ್ಕುದಿರೆ ನಿಶಾತದನ್ತಘನ ಘಟ್ಟಣೆಗಳ್ಕಿದಿ ಶಾಗಜವ್ರಜಂ
ಬೆದಱೆ ವಿರೋಧಿಯಂ ತುಳಿದು ಕೊಲ್ವುದು ಭಾವನಗಂಧವಾರಣಂ

ಚಂ॥ ಪರನರಪಾಳ ಸೈನ್ಯನವರಕ್ತ ಸರೋವರಮಂ ಕಲಂಕಿ ಭೀ
ಕರಸುಭಟಾಂತ್ರ ಜಾಳವಿಪ್ರದು ಪಂಕಜನಾಳಮನುಱ್ಚಿ ಮಸ್ತಕಾಂ
ಬುರುಹ ಮನೊಂದು ಗುಂದದೆ [ಕಿ] ಮುಱ್ಚಿತ ಪ್ರಮದಿಂತಗುಳ್ದು ಸಂ
ಗರ ಜಳಕೇಳಿಯಂ ಮೆಱೆಯುತಿರ್ಪುದು ಭಾವನಗಂಧವಾರಣಂ

ಪ್ರಭುವರ್ಗದವರು ದಾನ-ಧರ್ಮಗಳನ್ನು ಸಾಮಾನ್ಯವಾಗಿ ಪುತ್ರೋತ್ಸವ, ಪಟ್ಟಾಭಿಷೇಕ, ಯುದ್ಧವಿಜಯ-ಮೊದಲಾದ ಸಂದರ್ಭಗಳಲ್ಲಿ ಮಾಡುತ್ತಿದ್ದರು. ಆದ್ದರಿಂದ ಪೆರ್ಮಾಳ ಮಾದರಸನು ರಾಜಾಧಿರಾಜ ಚೋಳನನ್ನು ಯುದ್ಧದಲ್ಲಿ ಸೋಲಿಸಿ-ಕೊಂದು, ವಿಜಯಿಯಾದ ಸ್ಮರಣಾರ್ಥವಾಗಿ ನಾಡಿನ ಅನೇಕ ಭಾಗಗಳಲ್ಲಿ ಶಿವ-ಜಿನದೇವಾಲಯ, ಕೆರೆ-ಕಟ್ಟೆಗಳನ್ನು ಕಟ್ಟಿಸಿರಬೇಕು. ಈ ವಿಜಯ ಸಾಧನೆಯಿಂದ ಸಂತೃಪ್ತಿಗೊಂಡ ಚಕ್ರವರ್ತಿ ಇದುವರೆಗೆ ತನ್ನ ಮಗ ಎರಡನೆಯ ಸೋಮೇಶ್ವರನ ಆಳ್ವಿಕೆಯಲ್ಲಿದ್ದ ಬೆಳ್ವೊಲ-300, ಪುಲಿಗೆರೆ-300 ವಿಭಾಗಗಳ ಒಡೆತನವನ್ನು ಭಾವನ ಗಂಧವಾರಣನಿಗೆ ವಹಿಸಿಕೊಟ್ಟನು.[17] ಈ ಒಡೆತನದ ಜೊತೆಗೆ ಅವನು ಮಹಾ ಮಂಡಲೇಶ್ವರನಾಗಿ ಪದೋನ್ನತಿಯನ್ನೂ ಪಡೆದನು.

ಇನ್ನು ರಾಜಾಧಿರಾಜ ಚೋಳನ 36ನೆಯ ವರ್ಷದ ಉಲ್ಲೇಖದ ಮೇಲಿಂದ ಕೊಪ್ಪಳ ಯುದ್ಧವು ಕ್ರಿ.ಶ. 1054ರ ಆರಂಭದ ತಿಂಗಳಿನಲ್ಲಿ ನಡೆದಿರಬೇಕೆಂದು ವಿದ್ವಾಂಸರು ಗುರುತಿಸಿದ್ದಾರೆ.[18] ಅಂದರೆ ಕ್ರಿ.ಶ. 1054ರಲ್ಲಿ ರಾಜಾಧಿರಾಜನು ಈ ಯುದ್ಧದಲ್ಲಿ ಮಡಿದಿದ್ದಾನೆ. ಆದ್ದರಿಂದ ಪೆರ್ಮಾಳ ಮಾದರಸನು ಈ ವಿಜಯದ ಒಂದು ವರ್ಷದ ಅವಧಿಯಲ್ಲಿಯೇ ದೇವಾಲಯಗಳನ್ನು ನಿರ್ಮಿಸಿ ನಂದವಾಡಿಗೆ ಶಾಸನವನ್ನು ಬರೆಸಿರಬೇಕು. ಹೀಗಾಗಿ ಕ್ರಿ.ಶ. 1070 ನಂದವಾಡಿಗೆ ಶಾಸನದ ಕಾಲವಾಗಿರದೆ ಅದು ಕ್ರಿ.ಶ. 1055 ರಿಂದ 1060ರ ಮಧ್ಯದಲ್ಲಿಯೇ ರಚನೆಗೊಂಡಿರಬೇಕು. ಏಕೆಂದರೆ ನಂದವಾಡಿಗೆ ಶಾಸನ ರಚನೆಗೊಂಡಾಗ ಅವನಿನ್ನೂ ಮಹಾ ಮಂಡಲೇಶ್ವರನಾಗಿ ಪದೋನ್ನತಿ ಪಡೆದಿರಲಿಲ್ಲ. ಆದರೆ ಕ್ರಿ.ಶ. 1060ರ ವೇಳೆಗೆ ಮಹಾಮಂಡಳೇಶ್ವರನಾಗಿ ಪದೋನ್ನತಿ ಪಡೆದಿದ್ದನೆಂದು ಯರಗುಪ್ಪಿ ಶಾಸನ ಹೇಳಿದೆ.[19]

ಒಟ್ಟಿನಲ್ಲಿ ಇದುವರೆಗೆ ವಿದ್ವಾಂಸರ ಚರ್ಚೆಗೆ ಗ್ರಾಸವಾಗಿದ್ದ ನಂದವಾಡಿಗೆ ಶಾಸನದ ಭಾವಗಂಧವಾರಣನು ಚಾಲುಕ್ಯರ ನಿಷ್ಠಾವಂತ ಸಾಮಂತನಾದ ಪೆರ್ಮಾಳ ಮಾದರಸನಾಗಿದ್ದಾನೆ. ತನ್ನ ಅಕ್ಕ ಮೈಲಳದೇವಿಯನ್ನು ಚಕ್ರವರ್ತಿ ಒಂದನೆಯ ಸೋಮೇಶ್ವರನಿಗೆ ಕೊಡುವುದರ ಮೂಲಕ ಚಾಲುಕ್ಯ ಸಂಬಂಧಿಯಾದನು. ಚಾಲುಕ್ಯ ಸಾಮ್ರಾಜ್ಯಕ್ಕೆ ಕಂಠಕಪ್ರಾಯನಾಗಿದ್ದ ರಾಜಾಧಿರಾಜನನ್ನು ಸೋಲಿಸಿ 'ಚೋಳಕುಳ ಕಾಳದಸ್ಡ', 'ರಾಜಾಧಿರಾಜ ಚೋಳಂಗೊಸ್ದ' ಮೊದಲಾದ ಬಿರುದುಗಳನ್ನು ಧರಿಸಿದ್ದಾನೆ. ಇದರಿಂದ ಚಕ್ರವರ್ತಿಯ ಕೃಪೆಗೆ ಪಾತ್ರನಾಗಿ ಮಹಾಮಂಡಲೇಶ್ವರನಾಗಿ ಪದೋನ್ನತಿಯನ್ನು ಪಡೆದನಲ್ಲದೆ ಬೆಳ್ವೊಲ, ಪುಲಿಗೆರೆ ವಿಭಾಗಗಳ ಒಡೆತನವನ್ನೂ ಪಡೆದುಕೊಂಡನು. ಆದರೆ ಈ ಪೂರ್ವದ ಅವನ ಸ್ಥಾನಮಾನ ಮತ್ತು ಆಳ್ವಿಕೆಯ ವಿವರಗಳು ತಿಳಿಯುವುದಿಲ್ಲ. ಇನ್ನು ಮುಂದೆ ಅವುಗಳನ್ನು ಶೋಧಿಸಬೇಕಾಗಿದೆ.

ಟಿಪ್ಪಣಿಗಳು

1 ಸಾ. ಇ.ಇ. vi. 558, ಹೊಯ್ಸಳ ವೀರಬಲ್ಲಾಳದೇವ, ಹೇಮಾವತಿ, ಮಡಕಶಿರ (ತಾ) ಅನಂತಪುರ (ಜಿ).

2 ಅದೇ, xi (i) 103, 1070, ನಂದವಾಡಿಗೆ, ಹುನಗುಂದ (ತಾ), ಬಿಜಾಪುರ (ಜಿ).

3 ಅದೇ, ಪು. 99–100.

"This much damaged inscription……introduces a Mahamandalesvara whose name is lost. It is not known who this Bhavanagandavarana was……".

4 Desai, P. B., Jainism in South India and some Jaina Epigraphs, 1957, p. 106–7.

"An inscription from Nandavadige in the Hungund Taluk belonging to the reign of somesvara I, introduces a distinguished feudatory chief whose religious fewour was remarkably catholic. He seems to have borne the surname bhavanagandavarana".

5 ಹಂಪನಾ, ನಂದವಾಡಿಗೆ ಮಹಾಮಂಡಳೇಶ್ವರ, ಸಾಧನೆ, ಸಂ. 21-22, ಸಂ. 1-4, 1–2 (ಸಂಯುಕ್ತ), ಪು. 50-74.

6 ಇದಲ್ಲದೆ ಸಮರ ಪ್ರಚಂಡ, ಪರಕರಿಮದನಿವಾರಣ, ಧಾನಶಾಲೀನ, ರೂಪ ಮತ್ತೋಜ–ಮೊದಲಾದ ಬಿರುದುಗಳನ್ನು ಧರಿಸಿದ್ದನು. ಅವನಿಗೆ ಭಾವನಗಂಧವಾರಣ ಬಿರುದಿದ್ದುದನ್ನು ಯಾವ ಶಾಸನಗಳೂ ಉಲ್ಲೇಖಿಸಿಲ್ಲ.

ನೋಡಿ :

ಸೌ. ಇಇ xi (i) 84. 1049. ಹೊಂಬಳ, ಗದಗ (ತಾ).

ಎಇ xvi. 1053. ಮುಳಗುಂದ, ಗದಗ (ತಾ).

7 ವಿಕ್ರಮಾರ್ಜುನ ವಿಜಯ 1–148 ವಚನ.

ಸಾಹಸ ಭೀಮವಿಜಯ 1-10.

8 ಸೌಇಇ xi(i) 97. 1062 ಡಿಸೆಂಬರ್ 23. ಮುಳಗುಂದ, ಗದಗ (ತಾ).

9 ಬಿ.ಸಂ. 36/1933-34. ಉಲ್ಲೇಖ : Gopal, B. R., The Chalukyas of Kalyani and the Kalachuris, 1981. Dharwad, p. 202.

10 ಬಿ. ಸಂ. 189/32-33. 1964. ಗದಗ, ಗದಗ (ತಾ).

11 ಬಿ. ಸಂ. 714/58-59. 1066, ನವಲಿ, ಲಿಂಗಸ್ಗೂರು (ತಾ), ರಾಯಚೂರು (ಜಿ).

12 "ರಾಜಧಾನಿ ಕಲ್ಯಾಣದೊಳ್ ತುಂಬೇಶ್ವರಮುಂ ಮಟಮುಂ ದೀಪ ಮಾಲೆಯುಂ ಕೆಱೆಯುಮಂ ರಾಜಧಾನಿಯನ್ನೆಗೆಱೆಯೊಳ್ ಚೋಳಂಗೊಂಡ ಶ್ರೀ ಮೈತ್ರ್ಯ ಪುರುಷ ದೇವರ ಸಾಲೆಯುಂ………

13 ಸೌಇಇxi(i) 103, 1070, ನಂದವಾಡಿಗೆ, ಹುನಗುಂದ (ತಾ).
ಅದೇ. 97, 1062 ಡಿಸೆಂಬರ್ 23, ಮುಳುಗುಂದ, ಗದಗ (ತಾ).

14 ನೋಡಿ. Gopal. B.R., The Chalukyas of Kalyani and the Kalachuris, P. 197-98.

15 ಅದೇ. ಪು. 169.

16 ಸೌಇಇ xi(i) 103, 10.70 ನಂದವಾಡಿಗೆ.

17 ಎರಡನೆಯ ಸೋಮೇಶ್ವರನು ಕ್ರಿ.ಶ. 1049–1054 ರವರೆಗೆ ಮಾತ್ರ ಈ ವಿಭಾಗಗಳನ್ನು ಆಳುತ್ತಿದ್ದು, ಮುಂದೆ ಕ್ರಿ.ಶ. 1058-1060 ರವರೆಗೆ ರಾಷ್ಟ್ರಕೂಟರ ಮನ್ನೆಯ ಮಹಾಸಾಮಂತ ಇಂದ್ರಕೇಸಿಯರಸನು ಆಳತೊಡಗಿದನೆಂದು ಕುಯಿಬಾಳ ಮತ್ತು ಇತರ ಶಾಸನಗಳು ಹೇಳಿವೆ. (ನೋಡಿ. ಪೂರ್ವೋಕ್ತ, ಗೋಪಾಲ್ ಬಿ.ಆರ್., ಪು. 202), ಆದರೆ ಕ್ರಿ.ಶ. 1062 ರಿಂದ ಈ ಇಂದ್ರಕೇಸಿಯ ಜೊತೆಗೆ ಮಹಾಮಂಡಳೇಶ್ವರ ಪೆರ್ಮಾಳ ಮಾದರಸನೂ ಈ ವಿಭಾಗಗಳ ಒಡೆಯನಾಗಿದ್ದನೆಂದು ಶಾಸನಗಳು ಸ್ಪಷ್ಟವಾಗಿ ಉಲ್ಲೇಖಿಸಿವೆ. ಪೆರ್ಮಾಳ ಮಾದರಸನು ಚಕ್ರವರ್ತಿಯಿಂದ ನೇರವಾಗಿ ನೇಮಕಗೊಂಡಿದ್ದು, ಅವನ ಆಳ್ವಿಕೆಯು ಕೇವಲ ಒಂದು ತಲೆಮಾರಿಗೆ ಸೀಮಿತಗೊಂಡಿದ್ದರಿಂದ ವಂಶ ಪರಂಪರೆಯಾಗಿ ಆಳುತ್ತಿದ್ದ ಇಂದ್ರಕೇಸಿಯೂ ಬಹುಶಃ ಹಾಗೆಯೇ ಮುಂದುವರೆದಿರಬೇಕು.

18 ರಾಜಾಧಿರಾಜನ ನಂತರ ಆತನ ತಮ್ಮ ಎರಡನೆಯ ರಾಜೇಂದ್ರ ಚೋಳನು ಕ್ರಿ.ಶ. 1055 ಆಗಸ್ಟ್ 17 ರಲ್ಲಿ ಆಳ್ವಿಕೆ ನಡೆಸುತ್ತಿದ್ದನೆಂದು ಮಣಿಮಂಗಲ ಶಾಸನ ಹೇಳಿದೆ. ಆದ್ದರಿಂದ ಕೊಪ್ಪಳ ಯುದ್ಧವು ಇದಕ್ಕಿಂತ ಪೂರ್ವದಲ್ಲಿಯೇ ನಡೆದಿರಬೇಕು. ರಾಜಾಧಿರಾಜನ 36ನೇ ವರ್ಷದ ಆಳ್ವಿಕೆಯ ಉಲ್ಲೇಖ ಒಂದು ಶಾಸನದಲ್ಲಿದೆ. ಅದು ಕ್ರಿ.ಶ. 1054ಕ್ಕೆ ಸರಿಹೊಂದುತ್ತದೆ. ಅಲ್ಲದೆ ಅವನು ಶಕ 976ನೆಯ ಜಯ ಸಂವತ್ಸರದ ವೈಶಾಖದಲ್ಲಿ ರಣರಂಗದಲ್ಲಿ ಮಡಿದುದನ್ನು ಶಾಸನಗಳು ಹೇಳಿವೆ. ಇದು ಕ್ರಿ.ಶ. 1054ರ ಮೇ ತಿಂಗಳಿಗೆ ಸರಿಹೊಂದುತ್ತದೆ. ಆದ್ದರಿಂದ ಕ್ರಿ.ಶ. 1054ರ ಆರಂಭದ ತಿಂಗಳಿನಲ್ಲಿ ತೊಪ್ಪಳ ಯುದ್ಧವು ನಡೆದಿರಬೇಕು. ವಿವರಗಳಿಗೆ ನೋಡಿ. ಪೂರ್ವೋಕ್ತ ಗೋಪಾಲ್ ಬಿ. ಆರ್. ಪು. 169–70.

19 ಬಿ.ನಂ.36/33–34, ಯರಗುಪ್ಪಿ.

ಬೀದರ್ ಜಿಲ್ಲೆಯ ಗೊಂಡ ಜಾತಿ ಪ್ರಮಾಣ ಪತ್ರದ ಕಗ್ಗಂಟು

ಡಾ॥ ಕೆ. ಎಂ. ಮೈತ್ರಿ

ಬೀದರ್ ಕರ್ನಾಟಕದ ಒಂದು ಪುಟ್ಟ ಜಿಲ್ಲೆ. ಅಲ್ಲಿಯ ಮೂಲನಿವಾಸಿಗಳು ಗೊಂಡರು. ಅವರು ದ್ರಾವಿಡ ಮೂಲದವರು. ಅವರಿಗೆ ಧನಗರ ಮತ್ತು ಕುರುಬ ಎಂಬ ಹೆಸರುಗಳಿಂದಲೂ ಪರಿಚಯಿಸಲಾಗುವುದು. ಅವು ಅವರ ಕಸಬಾಧಾರಿತ ಸಂವಿಧಾನಾತ್ಮಕ ಸೌಲಭ್ಯಗಳ ಕಲ್ಪನೆ ಮೂಡುತಿದ್ದಂತೆ ಅವರು ಗೊಂಡ (ಪರಿಶಿಷ್ಟ ವರ್ಗ) ಜಾತಿ ಪ್ರಮಾಣ ಪತ್ರ ಪಡೆಯಲಾರಂಭಿಸಿದ್ದಾರೆ. ಆದರೆ ಸರಕಾರಿ ಅಧಿಕಾರಿಗಳಿಗೆ ಇದೊಂದು ಬಿಡಿಸಲಾಗದ ಒಗಟಾಗಿದೆ. ಧನಗರ ಹಾಗೂ ಕುರುಬ ಎಂಬ ಬೇರೆ ಬೇರೆ ಹೆಸರುಗಳಿಂದ ಪರಿಚಯಗೊಳ್ಳುವ ಗೊಂಡರು ವಾಸ್ತವಿಕವಾಗಿ ಗೊಂಡರೆ ? ಎನ್ನುವ ಸಾರ್ವಜನಿಕರ ಪ್ರಶ್ನೆಯೇ ಈ ಒಗಟಾಗಿದೆ. ಆ ಒಗಟು ಅಥವಾ ಕಗ್ಗಂಟು ಬಿಡಿಸುವ ಪ್ರಯತ್ನವೇ ಈ ಲೇಖನದ ಉದ್ದೇಶವಾಗಿದೆ.

ಬೀದರ ಜಿಲ್ಲೆಯ ಗೊಂಡ ಜಾತಿ ಪ್ರಮಾಣ ಪತ್ರದ ಒಗಟನ್ನು ಬಿಡಿಸುವ ಮುನ್ನ ಗೊಂಡ ಪದದ ನಿಷ್ಪತ್ತಿ ಹಾಗೂ ಗೊಂಡರೆಂದರೆ ಯಾರು ? ಎಂಬುದು ಅರಿಯುವುದು ಅವಶ್ಯಕ.

ಗೊಂಡ ಪದದ ನಿಷ್ಪತ್ತಿ ಮತ್ತು ಅರ್ಥ

'ಗೊಂಡ' ಪದದ ಉತ್ಪತ್ತಿ "ಬಗೆ ಹರಿಯದೆ ನೆನೆಗುದಿಯಲ್ಲಿರುವುದೆಂದು" ಹಲವಾರು ತಜ್ಞರ ಅಭಿಪ್ರಾಯವಾಗಿದೆ. 'ಗೊಂಡ' ಶಬ್ದವು ತೆಲುಗು ಭಾಷೆಯ 'ಕೊಂಡ' ಎಂಬ ಪದದಿಂದ ಬಂದದೆಂದು ಭಾಷಾ ವಿಜ್ಞಾನಿಗಳ ಅಭಿಪ್ರಾಯ. 'ಕೊಂಡ' ಎಂದರೆ ತೆಲುಗು ಭಾಷೆಯಲ್ಲಿ ಗುಡ್ಡ ಅಥವಾ ಬೆಟ್ಟ (ಪರ್ವತ) ಎಂದು ಅರ್ಥ. ಕಾಲ ಕ್ರಮೇಣ 'ಕ' ಕಾರ ಘೋಷ ಧ್ವನಿಯಾಗಿ 'ಗ' ಕಾರವಾಗಿ 'ಗೊಂಡ' ಎಂದು ರೂಪಾಂತರ ಹೊಂದಿರಬೇಕೆಂದು ಓಸ್ಲೋಪರ್ ವಾದವಾಗಿದೆ. (ರಸೇಲ್ ಆರ್: ವಿ. 1975 : 42 — 43).

ಜನರಲ್ ಕನ್ನಿಂಗ್ ಹ್ಯಾಮರು 'ಗೊಂಡ' ಪದವು 'ಗೌಡ' ಎಂಬ ಶಬ್ದದಿಂದ ಉತ್ಪನ್ನವಾಗಿ ಅದು ಗೌರ, ಗೋದ ಕೋದಗಳಾಗಿ ಪರಿವರ್ತನೆ ಹೊಂದಿ ಅನಂತರ 'ಗೊಂಡ' ಆಯಿತೆಂದೂ ಹೇಳುತ್ತಾರೆ (ವಿಶ್ವಕೋಶ : ಸಂಪುಟ : 6 1973 : 528–529).

'ಗೊಂಡ' ಎಂಬ ಪದವು 'ಗೋ' ಮತ್ತು 'ಅಂಡ' ಎಂಬ ಎರಡು ಶಬ್ದಗಳಿಂದ ಕೂಡಿದೆ. 'ಗೋ' ಎಂದರೆ 'ಭೂಮಿ' ಮತ್ತು 'ಅಂಡ' ಎಂದರೆ 'ಪುತ್ರ' ಎಂದರ್ಥ. 'ಗೊಂಡ ಪದದ ಅರ್ಥ ಭೂಮಿಯ ಪುತ್ರ ಎಂದಾಗುತ್ತದೆ (ವಿಠಲಸಿಂಹ ಧುರ್ವೆ : 1990 : 7).

ತಜ್ಞರ ವಾದಗಳಾಗಲಿ, ಅಥವಾ ಅಭಿಪ್ರಾಯಗಳಾಗಲಿ ಅಸತ್ಯವೆಂದು ಅಲ್ಲಗಳೆಯುವಂತಿಲ್ಲ. 'ಗೊಂಡ' ಪದವು ಮೂಲತಃ ಬೆಟ್ಟ, ಗುಡ್ಡ ಪ್ರದೇಶವಾಚಕವಾಗಿ ನಂತರ ಜನಾಂಗವಾಚಕವಾಗಿರುವುದು ಕಂಡು ಬರುವುದು.

ಮೂಲವಾಗಿ ಗೊಂಡ ಪದದ ಉದಯವು ಕನ್ನಡ ಭಾಷೆಯ ಜನಾಂಗದಿಂದಾಗಿರಲು ಸಾಧ್ಯತೆಗಳಿವೆ. ಅದು 'ಗೋ' ಮತ್ತು 'ಅಂಡ' ಎಂಬ ನುಡಿಗಟ್ಟಿನಿಂದಾಗಿ ಸೃಷ್ಟಿ, ಸ್ಥಿತಿ ಲಯಗಳ ಪ್ರತೀಕ ಹಾಗೂ ಪ್ರತ್ಯಯವಾಗಿ ಬಳಕೆಯಾಗುವುದು.

ಗೊಂಡ ಪದದ ಒಳಾರ್ಥವನ್ನು ಒಡೆದು ನೋಡಿದಾಗ ಅದರ ಅರ್ಥ ಸ್ಪಷ್ಟವಾಗುವುದು. ಅದರ ಮೂಲ 'ಗೋ × ಅ' ಎಂಬೆರಡಕ್ಷರಗಳಿಂದ ಉಂಟಾಗಿರಬಹುದು. ಕನ್ನಡ ನಿಘಂಟುಗಳಲ್ಲಿ 'ಗೋ' ಎಂದರೆ ಗೋವು, ಭೂಮಿ, ಬೆಟ್ಟ ಮತ್ತು 'ಅ' ಎಂದರೆ ಅಜ (ಆಡು ಅಥವಾ ಮೇಕೆ, ಮೇಷ ಅಥವಾ ಕುರಿ) ಎಂಬರ್ಥಗಳೂ ಇವೆ. ಗೋವು (ದನ) ಗಳ ಪಾಲಕರು ಗೋಪಾಲಕರು ಅಥವಾ ದ (ಧ) ನಗಾರರಾದರೆ ; ಅಜ (ಕುರಿ)ಗಳ ಪಾಲಕರು ಅಜಪಾಲಕರು ಅಥವಾ ಕುರಿಗಾರರು ಆಗಿರುವರು. ಕುರಿಗಾರರು, ದ (ಧ) ನಗಾರರು ಬೇರೆಯಲ್ಲ. ಅವರು ಮೂಲತಃ ಪಶುಪಾಲಕರೆಂದರ್ಥ. "ಗೋ" ಎಂದರೆ 'ಭೂಮಿ' ಅದರಂತೆ 'ಕುರು' ಎಂದರೂ ಭೂವಿಶೇಷ ಆದುದರಿಂದ ಗೋಪನೆಂದರೂ ಭೂಪತಿ ಕುರು (ಂ) ಬನೆಂದರೂ ಭೂಪ" (ಜೋಶಿ ಶಂ. ಬಾ: 1966 : 31).

'ಗೋ' ಎಂದರೆ 'ಭೂಮಿ' ಅದು ಗೋಲಾಕಾರವಾಗಿದೆ. 'ಅ' ಎಂದರೆ 'ಆಡು' ಅಥವಾ 'ಕುರಿ' ಅವುಗಳ ಹಿಕ್ಕೆಯೂ ಗೋಲ (ಅಂಡ) ಆಕಾರವಾಗಿದ್ದು ಭೂಮಿಯ ಪ್ರತಿ ರೂಪವಾಗಿದೆ. ಹೀಗೆ ಗೋ + ಅಂಡ, ಗೋಅಂಡ ಗೊಂಡ ಎಂದು, ವಿಕಸಿಸಿರಲು ಸಾಧ್ಯತೆಗಳಿವೆ.

'ಗೊಂಡಾರಣ್ಯ' ಈ ಪದದಲ್ಲಿ ಭಿನ್ನ ಭಾಷೆಯ ಎರಡು ಶಬ್ದಗಳಿವೆ. ಗೊಂಡ + ಅರಣ್ಯ. ಒಂದು ದೇಶಿಯ ನುಡಿ. ಇನ್ನೊಂದು ಸಂಸ್ಕೃತ ಪದ. 'ಗೊಂಡಾರಣ್ಯ' ಎಂಬೀ ಬಗೆಯ ಪದ– ಪ್ರಯೋಗವು ಇವೆರಡೂ ಜನ ಒಗ್ಗಿಕೊಂಡು ಒಡಗೂಡಿ ಬಾಳತೊಡಗಿದುದರ ಸಂಕೇತವಾಗಿದೆ.

ಗೊಂಡರು ಗೊಂಡಾರಣ್ಯದ ಮೂಲನಿವಾಸಿಗಳು. ಪೃಥ್ವಿಯ 5 ಖಂಡಗಳಿಗೆ ಗೊಂಡ್ವಾನಾ ಖಂಡಗಳೆಂದು ಪರಿಚಯಿಸುವರು. ಅವು: 1) ಏಷ್ಯಾ (ಭಾರತ), 2) ಆಫ್ರಿಕಾ, 3) ದಕ್ಷಿಣ ಅಮೇರಿಕ, 4) ಅಂಟಾರ್ಟಿಕಾ, 5) ಆಸ್ಟ್ರೇಲಿಯ, ಗೊಂಡ್ವಾನದ, ಆದಿ ಜನಾಂಗವೂ ಗೊಂಡರ್. ಅವರು ಬೇಟೆಗಾರಿಕೆ, ಪಶುಪಾಲನೆ ಯಿಂದ ನಿಧಾನವಾಗಿ ಕೃಷಿಯತ್ತ ಕೂಡಿಕೊಳ್ಳುತ್ತಿದ್ದಾರೆ.

ಗೊಂಡರ ಹುಟ್ಟಿನ ಬಗ್ಗೆ ಹಲವಾರು ಐತಿಹ್ಯಗಳು, ಪೌರಾಣಿಕ ಮತ್ತು ದಂತ ಕಥೆಗಳಿವೆ. ಅವುಗಳಲ್ಲೊಂದು ಹೀಗಿದೆ: "ಮುದ್ದುಗೊಂಡ ಮುದ್ದಮ್ಮಳಿಂದ ಗೊಂಡ ಜನಾಂಗ ಹುಟ್ಟಿತು. ಆದಿಗೊಂಡನು ಮುದ್ದುಗೊಂಡನ ಮಗ. ಆದಿ ಗೊಂಡನ ಹೆಂಡತಿ ಆದಮ್ಮ. ಅವರ ಪುತ್ರರಾದ ಅಮರಗೊಂಡ, ಶಿವಗೊಂಡ, ಬೆಟ್ಟದ ಬೀರುಗೊಂಡ, ಮಾರುಗೊಂಡ, ಮೋರಡಿ ಮುದ್ದುಗೊಂಡ, ಕಡೆ ಹುಟ್ಟಿದ ಉಂಡಾಡಿ ಪದ್ಮಗೊಂಡ" (ಚನ್ನಮಲ್ಲಿಕಾರ್ಜುನ: 1958 : 347) ಇವರ ವಂಶಜರೆ ಗೊಂಡರೆಂದು ಹಾಲ್ಮತ ಪುರಾಣದಲ್ಲಿ ಉಲ್ಲೇಖಗೊಂಡಿದೆ. ಹೀಗೆ 'ಗೊಂಡ' ಪದ ಪ್ರತ್ಯಯಗೊಂಡ ಹೆಸರುಗಳುಳ್ಳ ಸಾಂಪ್ರದಾಯಿಕ ಪಶುಪಾಲಕರೇ 'ಗೊಂಡ' ಜನಾಂಗವೆಂದು ಸ್ಪಷ್ಟವಾಗುವುದು.

"ಗೊಂಡರು ರಾಜಪೂತರು ಆದರೆ ಬುಡುಕಟ್ಟಿನವರು. ಅವರು ಸಾಮಾನ್ಯವಾಗಿ ಬೀದರ್, ಗುಲಬರ್ಗಾ, ರಾಯಚೂರು ಜಿಲ್ಲೆಗಳಲ್ಲಿ ವಾಸಿಸುವರು. ವಾಸ್ತವದಲ್ಲಿ ಅವರು ಆಂಧ್ರಪ್ರದೇಶ, ಮಧ್ಯಪ್ರದೇಶ, ಮಹಾರಾಷ್ಟ್ರ ಹಾಗೂ ಕರ್ನಾಟಕದಲ್ಲಿ ಕಂಡು ಬರುವರು. ಇಂದಿಗೂ ಅವರಲ್ಲಿ ಖಂಡಗೊಂಡ, ಬೀರಗೊಂಡ, ಜಟಗೊಂಡ ಹುಲಗೊಂಡ, ಮಲಗೊಂಡ, ಚನಗೊಂಡ, ರಾಮಗೊಂಡ, ತುಳಜಗೊಂಡ, ಶಿವಗೊಂಡ, ಶಣಗೊಂಡ ಎಂಬೀ ಗೊಂಡ ಪದ ಪ್ರತ್ಯಯಗೊಳ್ಳುವ ಹೆಸರುಗಳು ಕಂಡು ಬರುತ್ತವೆ. ಅವರ ಹಲವಾರು ಸಂಪ್ರದಾಯಗಳು ಹಾಗೂ ಹವ್ಯಾಸಗಳು ಕುರುಬ ಜನಾಂಗಕ್ಕೆ ಹೋಲಿಕೆಯಾಗುತ್ತವೆ" (ಡಾ॥ ಶಶಿ. ಎಸ್. ಎಸ್. 1978:61). ಗೊಂಡರ ಪೌರಾಣಿಕ ಅಂಶಗಳಿಗೆ ಪ್ರಸಿದ್ಧ ಸಮಾಜ ಶಾಸ್ತ್ರಜ್ಞ ಡಾ॥ ಎಸ್. ಎಸ್. ಶಶಿಯವರ ಸಂಶೋಧಿತ ಅಂಶಗಳು ಪುಷ್ಟಿ ನೀಡುತ್ತವೆ.

ಬೀದರ್ ಜಿಲ್ಲೆಯ ಗೊಂಡರು ಪಶುಪಾಲಕರು. ಕುರಿ ಹಾಗೂ ದನಗಳ ಪಾಲನೆಯಿಂದಾಗಿ ಅವರಿಗೆ ಕುರುಬ ಮತ್ತು ದ(ಧ)ನಗರ ಎಂತಲೂ ಕರೆಯು ವುದುಂಟು. ಆಂದ್ರಪ್ರದೇಶ ಹಾಗೂ ಮಧ್ಯಪ್ರದೇಶದ ಗೊಂಡರಿಗೂ ಕಸಬಾಧಾರಿತ

ಪದಗಳು ಬಳಕೆಯಾಗುವುವು. ಉದಾ : ಕೋಯ್ತುರಗೊಂಡ (ಕುರುಬ), ಗೋವಾರಿ ಗೊಂಡ (ದನಗಾರ), ರಾಜಗೊಂಡ ಇತ್ಯಾದಿ 42 ಉಪ ಪಂಗಡಗಳು ಗೊಂಡ ಜನಾಂಗಕ್ಕೆ ಸಂಬಂಧಿಸಿವೆ.

ಭೌಗೋಳಿಕ ಪರಿಸರ

ಬೀದರ್ ಜಿಲ್ಲೆಯು ಆಂಧ್ರಪ್ರದೇಶ, ಮಹಾರಾಷ್ಟ್ರ ಹಾಗೂ ಕರ್ನಾಟಕದ ಗುಲಬರ್ಗಾ ಜಿಲ್ಲೆಯ ಗಡಿಗಳಿಂದ ಆವೃತಗೊಂಡಿದೆ. ಅದು 17 35 ಹಾಗೂ 18 25 ಉತ್ತರ ಅಕ್ಷಾಂಶ ಹಾಗೂ 76 42 ಮತ್ತು 77 39 ಪೂರ್ವ ರೇಖಾಂಶಗಳ ನಡುವೆ ಗುರುತಿಸಲಾಗುತ್ತದೆ. ಅದರ ಭೂವಿಸ್ತೀರ್ಣ 5448 ಚ. ಕಿ. ಮೀಟರಾಗಿದ್ದು ಕರ್ನಾಟಕದ ಭೂವಿಸ್ತೀರ್ಣದಲ್ಲಿ ಅದರ ಸ್ಥಾನ 17ನೆಯದಾಗಿದೆ. ಅದು ಸಮುದ್ರ-ಮಟ್ಟದಿಂದ ಸರಾಸರಿ 914 ಮೀಟರ್ ಎತ್ತರದಲ್ಲಿದೆ. ಅದರ ಶೇಕಡ 80 ರಷ್ಟು ಪ್ರದೇಶ ಗೋದಾವರಿ ಜಲಾಶಯನಕ್ಕೆ ಸಂಬಂಧಿಸಿದೆ. ಹವಾಮಾನ ಹಿತಕರವಾಗಿದ್ದು ಸಣ್ಣ ಪುಟ್ಟ ಬೆಟ್ಟಗಳಿಂದ ಕೂಡಿದೆ. ಭೌಗೋಳಿಕ ಪ್ರದೇಶದ ಭಿನ್ನತೆಯಿಂದಾಗಿ ಕಸಬು ಭಾಷೆ ಹಾಗೂ ಜನಾಂಗದ ಸಂಸ್ಕೃತಿಯಲ್ಲಿಯೂ ಭಿನ್ನತೆ ಕಂಡು ಬರುವುದು ಸರ್ವೇ ಸಾಮಾನ್ಯ. ಆದಿವಾಸಿಗಳು ಪ್ರಕೃತಿ ಪ್ರಿಯರು, ಸರಳ ಜೀವಿಗಳು ಹಾಗೂ ಕಠಿಣ ಪರಿಶ್ರಮಿಗಳಾಗಿರುವರು.

ಜನಸಂಖ್ಯೆ

ಪ್ರಸ್ತುತ ಅಧ್ಯಯನದ ಪ್ರಕಾರ ಬೀದರ್ ಜಿಲ್ಲೆಯ 540 ಪ್ರದೇಶ (ಗ್ರಾಮ) ಗಳಲ್ಲಿ ಗೊಂಡರು ನೆಲೆಸಿರುತ್ತಾರೆ. ಅವರ 14,835 ಕುಟುಂಬಗಳಲ್ಲಿ 97,531 ಜನರಿದ್ದು, ಅದರಲ್ಲಿ 51,401 ಪುರುಷರು ಹಾಗೂ 46,130 ಸ್ತ್ರೀಯರಿದ್ದಾರೆ. ಜಿಲ್ಲೆಯಲ್ಲಿ ಗೊಂಡರ ಜನಸಾಂದ್ರತೆ ಪ್ರತಿ ಕಿ.ಮೀಟರಿಗೆ 18; ಅವರಲ್ಲಿ ಶೇಕಡ 97 ರಷ್ಟು ಗ್ರಾಮೀಣ ಗುಡ್ಡಗಾಡುಗಳಲ್ಲಿ ನೆಲೆಸಿದರೆ, ಕೇವಲ ಶೇಕಡ 3 ರಷ್ಟು ಮಾತ್ರ ನಗರವಾಸಿಗಳಾಗಿರುತ್ತಾರೆ.

ಗೊಂಡರು ಸಾಂಪ್ರದಾಯಿಕ ಅಲೆಮಾರಿ ಪಶುಪಾಲನೆಯಿಂದ ವಿಮುಖರಾಗುತ್ತ ಕೃಷಿ ಕಾರ್ಮಿಕರಾಗಿ ಕೃಷಿಕರಾಗಿ ಪರಿವರ್ತನೆಗೊಳ್ಳುತ್ತಿದ್ದಾರೆ. ಬೃಹತ್ ಕೈಗಾರಿಕೆಗಳಿಂದಾಗಿ ಗೊಂಡರ ಗೃಹ ಕೈಗಾರಿಕೆಯಾದ ಕಂಬಳಿ ನೆಯ್ಗೆ ನೆಲಕಚ್ಚಿದೆ. ಗ್ರಾಮೀಣ ಗುಡ್ಡಗಾಡುಗಳಲ್ಲಿ ಇಂದಿಗೂ ಗೊಂಡರಲ್ಲಿ ಅಧಿಕ ಪಶುಪಾಲನೆ ಕಂಡುಬರುತ್ತದೆ.

ಗೊಂಡರ ಸಾಂಪ್ರದಾಯಿಕ ಕಸಬಿನಲ್ಲಿ ವ್ಯತ್ಯಾಸವಾದಂತೆ ಅವರ ಜೀವನ ವಿಧಾನದಲ್ಲಿಯೂ ವ್ಯತ್ಯಾಸವಾಗುವುದರಿಂದ ಆದಿವಾಸಿಗಳ ಲಕ್ಷಣಗಳು ಮರೆಮಾಚು ವುದು ಸಾರ್ವತ್ರಿಕ ಸತ್ಯವಾಗಿದೆ. ಪರಿಸರಕ್ಕೆ ತಕ್ಕಂತೆ ವ್ಯಕ್ತಿ ಬದಲಾಗುವುದರಲ್ಲಿ ತಪ್ಪೇನಿದೆ? ಬದಲಾಗುವ ವೈಜ್ಞಾನಿಕ ಯುಗಕ್ಕೆ ಸ್ಪಂದಿಸಲೆಂದೆ ಸರಕಾರ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದವರಿಗೆ ಸಂವಿಧಾನಾತ್ಮಕ ಸೌಲಭ್ಯಗಳನ್ನು ಕಲ್ಪಿಸಿದೆ. ಆದರೆ ಬೀದರ್ ಜಿಲ್ಲೆಯಲ್ಲಿಯ ಪರಿಶಿಷ್ಟ ವರ್ಗದವರಿಗೆ ಸಂವಿಧಾನಾತ್ಮಕ ಸೌಲಭ್ಯಗಳನ್ನು ಪೂರೈಸಲು ಸರಕಾರ ಮೀನಮೇಷ ಮಾಡುತ್ತಿರುವುದು ವಿಪರ್ಯಾಸವೇ ಸರಿ.

ಆದಿವಾಸಿಗಳ ಗುಣಲಕ್ಷಣಗಳ ಆಧಾರದ ಮೇಲೆ ಭಾರತದ ಸಂವಿಧಾನ ಪ್ರಪ್ರಥಮವಾಗಿ 1950ರ ಸೆಪ್ಟೆಂಬರ್ 6 ರಂದು ಹೈದರಾಬಾದ ರಾಜ್ಯದ ಪರಿಶಿಷ್ಟ ವರ್ಗಗಳ ಪಟ್ಟಿಯಲ್ಲಿ 9 ಬುಡಕಟ್ಟುಗಳನ್ನು ಸೇರಿಸಿತ್ತು. ಅವುಗಳಲ್ಲಿ ಗೊಂಡ (ನೈಕಪೋಡ ಮತ್ತು ರಾಜಗೊಂಡ ಸೇರಿ) ಬುಡಕಟ್ಟು ಕ್ರ.ಸಂಖ್ಯೆ 4ರಲ್ಲಿ ಕಂಡು ಬರುತ್ತದೆ. ಬೀದರ, ಗುಲಬರ್ಗಾ ಹಾಗೂ ರಾಯಚೂರು, ಜಿಲ್ಲೆಗಳು 1956 ರ ನವೆಂಬರ್ 1ರವರೆಗೆ ಹೈದರಾಬಾದ ರಾಜ್ಯಕ್ಕೆ ಸೇರಿದ್ದವು. ಭಾರತದಲ್ಲಿ ಜನಗಣತಿ ಪ್ರಾರಂಭವಾದಾಗಿನಿಂದಲೂ ಬೀದರ, ಗುಲಬರ್ಗಾ ಹಾಗೂ ರಾಯಚೂರು ಜಿಲ್ಲೆಗಳಲ್ಲಿ ಗೊಂಡ ಬುಡಕಟ್ಟಿನವರ ಉಲ್ಲೇಖವಿದೆ. ಭಾಷಾವಾರು ಪ್ರಾಂತ ರಚನೆಯಲ್ಲಿ ಹೈದರಾಬಾದ ರಾಜ್ಯದ 3; ಮುಂಬೈ ಪ್ರಾಂತದ 4; ಮದ್ರಾಸ್ ರಾಜ್ಯದ 2 ಜಿಲ್ಲೆ ಗಳು ಹಾಗೂ ಕೊಡಗು ರಾಜ್ಯದ ಕೊಡಗು ಹೀಗೆ ಒಟ್ಟು 10 ಜಿಲ್ಲೆಗಳು ಮೈಸೂರು ರಾಜ್ಯಕ್ಕೆ ಸೇರಿ ಒಟ್ಟು 19 ಜಿಲ್ಲೆಗಳು ಮೈಸೂರು ರಾಜ್ಯವಾಗಿ ರೂಪಗೊಂಡಿತು. ಆದರೆ ಮೈಸೂರು ರಾಜ್ಯದ 19 ಜಿಲ್ಲೆಗಳಲ್ಲಿ ಬೀದರ ಗುಲಬರ್ಗಾ ಹಾಗೂ ರಾಯ ಚೂರು ಜಿಲ್ಲೆಗಳನ್ನು ಹೊರತುಪಡಿಸಿ ಬೇರೆ ಯಾವುದೇ ಜಿಲ್ಲೆಗಳಲ್ಲಿ 1951ರ ಜನ ಗಣತಿಯಲ್ಲಿ ಗೊಂಡರ ಉಲ್ಲೇಖವಿಲ್ಲ.

ಭಾಷಾವಾರು ಪ್ರಾಂತ ರಚನೆಯಿಂದಾಗಿ ರಾಜ್ಯಗಳ ಭೌಗೋಳಿಕ ಚಿತ್ರಣ ವ್ಯತ್ಯಾಸಗೊಂಡಿತು. ಹೀಗಾಗಿ ಭಾರತ ಸರಕಾರ ಸಂವಿಧಾನದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗಗಳ ಪರಿಷ್ಕೃತ ಪಟ್ಟಿಯೊಂದನ್ನು 29ನೇ ಅಕ್ಟೋಬರ್ 1956 ರಂದು ಹೊರಡಿಸಿತು. ಅದರಂತೆ ಬೀದರ, ಗುಲಬರ್ಗಾ ಹಾಗೂ ರಾಯಚೂರು ಜಿಲ್ಲೆಗಳಿಗೆ ಸೀಮಿತಗೊಂಡ ಗೊಂಡ (ನೈಕಪೋಡ ಮತ್ತು ರಾಜಗೊಂಡ ಸೇರಿ) ಬುಡ ಕಟ್ಟು ಹಾಗೂ ಬೆಳಗಾಂವ, ವಿಜಾಪುರ, ಧಾರವಾಡ ಹಾಗೂ ಉತ್ತರ ಕನ್ನಡ ಜಿಲ್ಲೆ ಗಳಿಗೆ ಸೀಮಿತಗೊಂಡ ಗೊಂಡ ಅಥವಾ ರಾಜಗೊಂಡ ಬುಡಕಟ್ಟುಗಳು ಪರಿಶಿಷ್ಟ ವರ್ಗದ ಪಟ್ಟಿಯಲ್ಲಿ ಸೇರಿದ್ದವು. 1961ರ ಜನಗಣತಿಯ ಪ್ರಕಾರ ಬೀದರ ಜಿಲ್ಲೆ ಯಲ್ಲಿ ಒಟ್ಟು 681 ಹಾಗೂ ಉತ್ತರ ಕನ್ನಡ ಜಿಲ್ಲೆಯಲ್ಲಿ ಒಟ್ಟು 109 ಗೊಂಡರಿದ್ದ

ರೆಂದು ವರದಿಯಾಗಿದೆ. ಈ ಹಿಂದಿನ ಜನಗಣತಿಗಳಲ್ಲಿ ಉತ್ತರ ಕನ್ನಡ ಜಿಲ್ಲೆಯ ಗೊಂಡರಿಗೆ ಹಾಲಕ್ಕಿ ಗೊಂಡರೆಂದು ಮಧ್ಯಮ ವರ್ಗದ ಪಟ್ಟಿಯಲ್ಲಿ ಗಣತಿ ಮಾಡಿರುವಂತೆ ಕಂಡುಬರುತ್ತದೆ.

ಕರ್ನಾಟಕ ರಾಜ್ಯದಲ್ಲಿ ಬೀದರ ಗುಲಬರ್ಗಾ ಹಾಗೂ ರಾಯಚೂರು ಜಿಲ್ಲೆಗಳಿಗೆ ಸೀಮಿತಗೊಂಡ ಗೊಂಡ ಜನಾಂಗದ ಭೌಗೋಳಿಕ ವ್ಯಾಪ್ತಿ ಕರ್ನಾಟಕದಾದ್ಯಂತ ವಿಸ್ತರಿಸಿ ದಿನಾಂಕ 27–7–1977 ರಂದು ಭಾರತ ಸರಕಾರ ಅಧಿಸೂಚನೆ ಹೊರಡಿಸಿತು. ಆ ಪಟ್ಟಿಯಲ್ಲೆ ಕರ್ನಾಟಕದಲ್ಲಿ ಒಟ್ಟು 49 ಬುಡಕಟ್ಟುಗಳನ್ನು ಗುರುತಿಸಿದೆ. ಆ ಪಟ್ಟಿಯನ್ನೆ 1981 ಹಾಗೂ 1991 ರ ಜನಗಣತಿಯಲ್ಲಿ ಬಳಸಲಾಯಿತು.

ಬೀದರಿನ ಗೊಂಡರಿಗೆ ಸಂವಿಧಾನಾತ್ಮಕ ಸೌಲಭ್ಯಗಳ ಕಲ್ಪನೆ ಪ್ರಾರಂಭದಲ್ಲಿರಲಿಲ್ಲ. 1958 ರಲ್ಲಿ ಪ್ರಥಮವಾಗಿ ಗೊಂಡ (ಪರಿಶಿಷ್ಟ ವರ್ಗ) ಜಾತಿ ಪ್ರಮಾಣ ಪತ್ರ ಪಡೆದ ದಾಖಲೆಯಿದೆ. 1962 ರವರೆಗೆ ಶಿಕ್ಷಣ ಕ್ಷೇತ್ರದಲ್ಲಿ ಅಪವ್ಯಯ ಮತ್ತು ಸ್ಥಗಿತತೆ ಹೆಚ್ಚಾಗಿರುವುದರಿಂದ ಗೊಂಡ ಜಾತಿ ಪ್ರಮಾಣಪತ್ರ ಪಡೆಯುವವರ ಸಂಖ್ಯೆ ಬೆರಳೆಣಿಕೆಯಷ್ಟಿತ್ತು. ಆದರೆ 1962 ರಿಂದ 1971 ರವರೆಗೆ ಕೆಲವು ಅಧಿಕಾರಿಗಳು ಗೊಂಡ ಜಾತಿ ಪ್ರಮಾಣಪತ್ರ ಕೊಡುವುದರ ಬದಲಾಗಿ ಕುರಿಗಳನ್ನು ಸಾಕುತ್ತಾ, ಕಾಡುಗಳನ್ನು ಅಲೆಯುವುದರಿಂದ ಇವರಿಗೆ ಕಾಡು ಕುರುಬ (ಪರಿಶಿಷ್ಟವರ್ಗ) ಜಾತಿ ಪ್ರಮಾಣಪತ್ರ ಕೊಡಲಾರಂಭಿಸಿದರು. ವಾಸ್ತವವಾಗಿ ಆ ಅವಧಿಯಲ್ಲಿ ಸಂವಿಧಾನ ಬದ್ಧವಾಗಿ ಕಾಡು ಕುರುಬ ಜನಾಂಗ ಹಳೆ ಮೈಸೂರಿನ 9 ಜಿಲ್ಲೆಗಳಲ್ಲಿ ಮಾತ್ರ ಪರಿಶಿಷ್ಟ ವರ್ಗದ ಪಟ್ಟಿಯಲ್ಲಿರುವರು. ಬೀದರ್, ಗುಲಬರ್ಗಾ ಹಾಗೂ ರಾಯಚೂರು ಜಿಲ್ಲೆಗಳಲ್ಲಿ ಕಾಡುಕುರುಬ ಬುಡಕಟ್ಟು ಪರಿಶಿಷ್ಟ ವರ್ಗದ ಪಟ್ಟಿಯಲ್ಲಿರಲಿಲ್ಲ. ಆದರೂ ಈ ತಪ್ಪು ಅಧಿಕಾರಿಗಳ ನಿರ್ಲಕ್ಷತೆಯಿಂದ ನಡೆದು ಹೋಗಿದೆ.

ಸಂವಿಧಾನಬದ್ಧ ಸೌಲಭ್ಯಗಳ ಅರಿವು ಮೂಡುತ್ತಿದ್ದಂತೆ ಜಿಲ್ಲೆ ಹಾಗೂ ವಿಭಾಗ ಮಟ್ಟದಲ್ಲಿ ಗೊಂಡರ ಸಂಘಟನೆಗಳು ಅಂಕುರಿಸಿದವು. ಜಿಲ್ಲೆಯ ಅಧಿಕಾರಿಗಳಿಗೆ ಹಾಗೂ ಸರಕಾರಕ್ಕೆ ಜನಾಂಗದ ಸ್ಪಷ್ಟ ಚಿತ್ರಣ ನೀಡಿದರ ಫಲವಾಗಿ ಅಧಿಕಾರಿಗಳು ತಾವು ಆ ಮೊದಲು ಮಾಡಿದ ತಪ್ಪನ್ನು ಅರಿತು ಪುನಃ ಗೊಂಡ (ಪರಿಶಿಷ್ಟ ವರ್ಗ) ಜಾತಿ ಪ್ರಮಾಣ ಪತ್ರ ಕೊಡಲಾರಂಭಿಸಿದರು. ಆದರೆ ಗೊಂಡರ ಪ್ರಗತಿ ಸಹಿಸದ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಜಿಲ್ಲೆಗೆ ಹೊಸದಾಗಿ ವರ್ಗವಾಗಿ ಬರುವ ಅಧಿಕಾರಿಗಳಿಗೆ ಗೊಂಡರ ಬಗ್ಗೆ ಸಂಶಯ ಮೂಡಿಸುವಂತಹ ವಾತಾವರಣ ನಿರ್ಮಾಣ ಮಾಡಿದುದರ ಪರಿಣಾಮವಾಗಿ ಜಾತಿ ಪ್ರಮಾಣ ಪತ್ರ ಕೊಡುವುದು ಹಲವು ಅಧಿಕಾರಿಗಳು ನಿಲ್ಲಿಸಿದರು. ಆದರೆ ಗೊಂಡ ಸಂಘ ಗೊಂಡರ ಬಗ್ಗೆ ತಲೆದೋರಿರುವ ಸಂಶಯದ ಪರಿಹಾರಕ್ಕಾಗಿ ಸರಕಾರಕ್ಕೆ ತನಿಖೆ ಮಾಡಲು ವಿನಂತಿಸಿತ್ತು.

"ಸಂಘದ ಮನವಿಗಳನ್ವಯ ಬೆಂಗಳೂರಿನಿಂದ 1974ರಲ್ಲಿ ಸಮಾಜಕಲ್ಯಾಣ ಇಲಾಖೆಯ ನಿರ್ದೇಶಕರು ವೈಜ್ಞಾನಿಕವಾಗಿ ಗೊಂಡರ ತನಿಖೆ ನಡೆಸಲು ಬೀದರ್ ಜಿಲ್ಲೆಯ ಔರಾದ ತಾಲ್ಲೂಕಿನ ಬಳತ ಗ್ರಾಮ; ಬಸವಕಲ್ಯಾಣ ತಾಲ್ಲೂಕಿನ ಮಂಠಾಳ ಮತ್ತು ಸಸ್ತಾಪುರ ಗ್ರಾಮಗಳು; ಭಾಲ್ಕಿ ತಾಲ್ಲೂಕಿನ ಕುರುಬಖೇಳಗಿ ಹಾಗೂ ಭಾಗ್ಯನಗರ ಗ್ರಾಮಗಳು; ಬೀದರ ತಾಲ್ಲೂಕಿನ ಗಾದಗಿ ಗ್ರಾಮ ಹಾಗೂ ಹುಮನಾಬಾದ ತಾಲ್ಲೂಕಿನ ನಂದಗಾಂವ ಗ್ರಾಮ ಆಯ್ಕೆ ಮಾಡಿಕೊಂಡು ತನಿಖೆ ನಡೆಸಿರುತ್ತಾರೆ. ತನಿಖೆಯಲ್ಲಿ ಆಯಾ ತಾಲ್ಲೂಕಿನ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು ಹಾಗೂ ತಹಸಿಲ್ದಾರರು ಹಾಜರಿರುತ್ತಾರೆ. ಗೊಂಡರ ಪ್ರದೇಶಗಳಿಗೆ ಸಂದರ್ಶನವಿಟ್ಟು ಸತ್ಯಾಂಶ ಅರಿತಾಗ ಸಂಶಯ ದೂರಾಗುತ್ತದೆ. ಒಂದೇ ಜನಾಂಗವನ್ನ ಬೇರೆ ಬೇರೆ ಜಾತಿಯವರು ಪರಿಚಯಿಸುವ ವಿಧ ಬೇರೆ ಬೇರೆಯಾಗಿರುತ್ತದೆ. ಗೊಂಡರಿಗೆ ತುರುಕರು (ಮುಸ್ಲಿಂ) ಹಾಗೂ ಬ್ರಾಹ್ಮಣರು, ಅರೆ (ಮರಾಠ)ರು ಅವರ ಭಾಷೆಯಲ್ಲಿ 'ಧನಗರ್' ಎಂದು ಕರೆದರೆ ಬಣಜಿಗರು (ಲಿಂಗಾಯಿತರು) ಹಾಗೂ ಇತರ ಕನ್ನಡ ಭಾಷಿಗರು, ಗೊಂಡರ ಮೂಲ ಅರಿತವರು ಗೊಂಡರೆಂದು ಹಾಗೂ ಗೊಂಡರ ಮೂಲ ಅರಿಯದವರು ಕುರುಬರೆಂದು ಇಲ್ಲವೆ ಗೊಂಗಕುರುಬರೆಂದು ಕರೆಯುವುದು ನಿರ್ದೇಶಕರಿಗೆ ಮನವರಿಕೆಯಾಯಿತು" (ಮೈತ್ರಿ ಕೆ. ಎಂ.: 1994:565).

ಗೊಂಡ ಜಾತಿ ಪ್ರಮಾಣ ಪತ್ರಗಳು ಗೊಂಡರಿಗೆ ಲಭಿಸುವಂತಾಗಲು ಕರ್ನಾಟಕ ಸರಕಾರ ಧರ್ಮಗುರು ಸಿದ್ದಯ್ಯ ಆಧುನಿಕ ಒಡೆಯರ್ ಅವರಿಗೆ ಗುರುತಿನ ಪ್ರಮಾಣ ಪತ್ರ ಕೊಡುವ ಅಧಿಕಾರವಿತ್ತು ಸುತ್ತೋಲೆ ಹೊರಡಿಸಿತು (ಸುತ್ತೋಲೆ ಸಂಖ್ಯೆ: ಡಿಎಸ್‌ಡಬ್ಲ್ಯು: ಇಎಂಪಿ: ಪಿಆರ್: 258. 75-76 ದಿನಾಂಕ 3-9-1975). ಅದರಂತೆ ಜಾತಿ ಪ್ರಮಾಣ ಪತ್ರಗಳು ಕೊಡಲಾರಂಭಿಸಿದರು. ಆದರೂ ಪಟ್ಟಭದ್ರ ಹಿತಾಸಕ್ತಿಗಳು ಮೇಲಾಧಿಕಾರಿಗಳಿಗೆ ಗೊಂಡರ ಬಗ್ಗೆ ತಪ್ಪು ತಿಳುವಳಿಕೆ ನೀಡುತ್ತಲೇ ಇದ್ದರು. ಹೀಗಾಗಿ ಕರ್ನಾಟಕ ಸರಕಾರದ ಸಮಾಜ ಕಲ್ಯಾಣ ಇಲಾಖೆಯ ನಿರ್ದೇಶಕರು "ಗೊಂಡ ಸಮುದಾಯದವರಿಗೆ ಪರಿಶಿಷ್ಟ ವರ್ಗದವರೆಂದು ಕೆಲವು ಅಧಿಕಾರಿಗಳು ತಪ್ಪು ಜಾತಿ ಪ್ರಮಾಣ ಪತ್ರ ನೀಡುತ್ತಿರುವುದರ ಬಗ್ಗೆ ತಿಳಿದುಬಂದಿದೆ. ಗುಲ್ಬರ್ಗಾ ವಿಭಾಗದಲ್ಲಿ ಗೊಂಡರು ಹೆಚ್ಚಿಲ್ಲ. ಅವರು ಕೇವಲ ಉತ್ತರ ಕನ್ನಡ ಜಿಲ್ಲೆಯಲ್ಲಿ ವಾಸಿಸುತ್ತಾರೆ ಎಂದು ಹೇಳುತ್ತಾ ಒಂದು ವೇಳೆ ಗೊಂಡರಿದ್ದರೆ ಪರಿಶೀಲಿಸಿ ಜಾತಿ ಪ್ರಮಾಣ ಪತ್ರ ನೀಡಲು ನಿರ್ದೇಶಿಸಿದೆ" (ಸುತ್ತೋಲೆ ಸಂಖ್ಯೆ: ಡಿಎಸ್‌ಡಬ್ಲ್ಯು: ಇಎಂಪಿ: 1 : ಪಿಆರ್: 25:78:-79 ದಿನಾಂಕ 28-8-1978). ಎಂದು ಸುತ್ತೋಲೆ ಹೊರಡಿಸಿರುತ್ತಾರೆ. ಸದರಿ ಸುತ್ತೋಲೆಯನ್ನು ಬೀದರ ಜಿಲ್ಲೆಯ ಸಮಾಜ ಕಲ್ಯಾಣ ಅಧಿಕಾರಿಗಳು ಬೆರಳಚ್ಚು ಮಾಡಿಸಿರುವುದರಿಂದ ಬೆರಳಚ್ಚಿನ ವ್ಯತ್ಯಾಸದಿಂದಾಗಿ ಸುತ್ತೋಲೆ ಅಪಾರ್ಥಕ್ಕೀಡಾಗಿ ಗೊಂಡ ಜಾತಿ ಪ್ರಮಾಣ ಪತ್ರಕ್ಕೆ ಕಡಿವಾಣ ಹಾಕಿತು.

ಗೊಂಡ ಜಾತಿ ಪ್ರಮಾಣ ಪತ್ರ ಕೇಳಲು ಮುಂದಾದವರಿಗೆ ಅಪಾರ್ಥ ಕೊಡುವ ಸುತ್ತೋಲೆ ಎದುರಿಗಿಟ್ಟು ಅಧಿಕಾರಿಗಳು ಬಚಾವಾದರೆ ವಿನಃ ವಾಸ್ತವಿಕತೆ ಅರಿಯಲು ಪ್ರಯತ್ನಿಸಲಿಲ್ಲ. ಕಾಲಾಂತರದಲ್ಲಿ ಒಂದೇ ಸುತ್ತೋಲೆಯು ಭಿನ್ನ ಭಿನ್ನ ರೂಪದ ವಾಸ್ತವಿಕತೆ ಅರಿತು ಗೊಂಡರ ಸಂಘಟನೆಗಳು ಗಟ್ಟಿಗೊಂಡು ಹೋರಾಟಕ್ಕಿಳಿದವು. ವಾಸ್ತವಿಕವಾಗಿ 1961ರ ಮೊದಲಿನ ಯಾವುದೇ ಜನಗಣತಿಯಲ್ಲಿ ಉತ್ತರ ಕನ್ನಡ ಜಿಲ್ಲೆಯ ಗೊಂಡರ ಉಲ್ಲೇಖವಿಲ್ಲ. ಜನಗಣತಿಯು ಪ್ರಾರಂಭನಿಂದಲೂ ಇಂದಿನ ವರೆಗಿನ ಎಲ್ಲ ಗಣತಿಗಳಲ್ಲಿ ಕರ್ನಾಟಕದ ಇತರೆ ಜಿಲ್ಲೆಗಳಿಗೆ ಹೋಲಿಸಿದರೆ ಗೊಂಡರು ಅತ್ಯಧಿಕ ಸಂಖ್ಯೆಯಲ್ಲಿರುವುದು ಬೀದರ ಜಿಲ್ಲೆಯಲ್ಲಿಯೇ ಎಂದು ವೇದ್ಯವಾಗುತ್ತದೆ.

ಕರ್ನಾಟಕ ಸರಕಾರ "ಕುರುಬ ಜನಾಂಗವನ್ನು ಕರ್ನಾಟಕದಲ್ಲಿ ಪರಿಶಿಷ್ಟ ವರ್ಗದ ಜೇನು ಕುರುಬ, ಕಾಡು ಕುರುಬ, ಗೊಂಡ, ರಾಜಗೊಂಡ ಎಂಬ ಬುಡಕಟ್ಟುಗಳ ಪರ್ಯಾಯ ಪದವಾಗಿ ಪರಿಗಣಿಸಲು ಯೋಗ್ಯವೆ? ಎಂದು ನಿರ್ಧರಿಸಲು ಒಂದು ಸಮಿತಿಯನ್ನು ದಿನಾಂಕ 23–1–1986ರಂದು ನೇಮಿಸಿತು. 8ವರ್ಷ ಗತಿಸಿದ್ದರೂ ಸಮಿತಿ ಸರಕಾರಕ್ಕೆ ಯಾವುದೇ ವರದಿ ಒಪ್ಪಿಸದಿರುವುದು ವಿಪರ್ಯಾಸವೇ ಸರಿ.

ಗೊಂಡ ಕುರುಬ ಎಂಬ ದ್ವಂದವುಯ ಒಗಟಿಗೆ ತೆರೆ ಎಳೆಯಲು ಕರ್ನಾಟಕ ಸರಕಾರ ಆದೇಶ ಹೊರಡಿಸಿ "ಕುರುಬರು ಗೊಂಡ ಜಾತಿ ಪ್ರಮಾಣ ಪತ್ರ ಪಡೆದು ಸೇವೆಯಲ್ಲಿದ್ದರೆ ಅವರ ವಿರುದ್ಧ ಯಾವುದೇ ತರಹದ ಮೊಕದ್ದಮೆಗಳು ಹೂಡ ಕೂಡದು, ಹೂಡಿದರೆ ಹಿಂತೆಗೆದುಕೊಳ್ಳಬೇಕೆಂದು ಆದೇಶಿಸಿದೆ."

(ಆದೇಶ ಸಂಖ್ಯೆ: ಎಸ್‌ಡಬ್ಲ್ಯೂಎಲ್: 170: ಎಸ್‌ಎಡಿ: 81 (ಪಿ): ಬೆಂಗಳೂರು ದಿನಾಂಕ 2-9-1986).

ಬೀದರಿನ ಜಿಲ್ಲಾ ಪರಿಷತ್ತು ತನ್ನ 24ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ "ಬೀದರಿನ ಕುರುಬ ಜನಾಂಗದವರಿಗೆ ಗೊಂಡ ರಾಜಗೊಂಡ ಜನಾಂಗದ ಪರ್ಯಾಯ ಜನಾಂಗಗಳೆಂದು ಪರಿಗಣಿಸಿ ಪರಿಶಿಷ್ಟ ವರ್ಗದ ಜಾತಿ ಪ್ರಮಾಣ ಪತ್ರ ನೀಡುವಂತೆ ಸಂಬಂಧಪಟ್ಟ ಇಲಾಖೆಗಳಿಗೆ ವಿನಂತಿಸಿದೆ" (ಬೀದರ ಜಿಲ್ಲಾ ಪರಿಷತ್ತಿನ 24ನೇ ವಾರ್ಷಿಕ ಸಾಮಾನ್ಯ ಸಭೆಯ ನಡುವಳಿಕೆಯ ಕಂಡಿಕೆ 9(4) ದಿನಾಂಕ 16-11-1990).

ಬೀದರಿನ ಸಮಾಜ ಕಲ್ಯಾಣ ಅಧಿಕಾರಿಗಳು ಕೂಡ ಗೊಂಡರ ಸಮೀಕ್ಷೆ ನಡೆಸಿ "ಗೊಂಡ, ರಾಜಗೊಂಡ ಜನಾಂಗದ ಪರ್ಯಾಯ ಜನಾಂಗವೇ ಕುರುಬರಾಗಿರುವುದರಿಂದ ಪರಿಶಿಷ್ಟ ವರ್ಗದ ಪ್ರಮಾಣ ಪತ್ರ ನೀಡಲು ಅಭ್ಯಂತರವಿಲ್ಲ" ಎಂದು ಸರಕಾರಕ್ಕೆ ವರದಿ ಸಲ್ಲಿಸಿರುತ್ತಾರೆ (ಪತ್ರ ಸಂಖ್ಯೆ: ಎಸ್‌ಡಬ್ಲ್ಯೂಬಿ: ಎಸ್‌ಸಿ: ಎಸ್‌ಟಿ: ಸಿಆರ್: 92–93 ದಿನಾಂಕ 20–8–1992).

ಗೊಂಡ, ರಾಜಗೊಂಡ, ಧನಗರ ಹಾಗೂ ಕುರುಬ ಎಂಬ ಪದಗಳು ಬೇರೆ ಬೇರೆ ಕಂಡರೂ ಕೂಡ ಬೀದರ ಜಿಲ್ಲೆಯಲ್ಲಿ ಅವುಗಳೆಲ್ಲ ಒಂದೇ ಜನಾಂಗವನ್ನು ಗುರುತಿಸುವ ಪದಗಳಾಗಿವೆ. ಕರ್ನಾಟಕದ ಕೊಡಗಿನಲ್ಲಿ ಕುರುಬ; ಮಹಾರಾಷ್ಟ್ರದಲ್ಲಿ ಧನಗರ; ದೇಶದ ಹಲವಾರು ರಾಜ್ಯಗಳಲ್ಲಿ ಗೊಂಡ, ರಾಜಗೊಂಡ ಪದಗಳೆಲ್ಲ ಪರಿಶಿಷ್ಟ ವರ್ಗದ ಪಟ್ಟಿಯಲ್ಲಿವೆ. ಸಂವಿಧಾನಬದ್ಧವಾಗಿ ಬೀದರ ಜಿಲ್ಲೆಯಲ್ಲಿ ಕುರುಬ ಮತ್ತು ಧನಗರ ಎಂಬ ಪದಗಳು ಪರಿಶಿಷ್ಟ ವರ್ಗದ ಪಟ್ಟಿಯಲ್ಲಿಲ್ಲ. ಅವು ಗೊಂಡರ ಕಸಬಾಧಾರಿತ ಪದಗಳಾಗಿವೆ. ಸಂವಿಧಾನಬದ್ಧ ಸೌಲಭ್ಯಗಳ ತೊಡಕಿನಿಂದಾಗಿ ಆದಿವಾಸಿಗಳ ಹಿತ ದೃಷ್ಟಿಯಿಂದ ಅವರಿಗೆ ಗೊಂಡ (ಪರಿಶಿಷ್ಟ ವರ್ಗ) ಜಾತಿ ಪ್ರಮಾಣ ಪತ್ರ ಕೊಡುವುದು ನ್ಯಾಯ. ಕಾರಣ ಅವರು ಮೂಲತಃ ಗೊಂಡರೆಂಬುದು ಅಲ್ಲಗಳೆಯುವಂತಿಲ್ಲ.

ಆಧಾರ ಗ್ರಂಥಗಳು

1. ಚನ್ನಮಲ್ಲಿಕಾರ್ಜುನ : ವೀರಶೈವ ಪಂಚಾಚಾರ್ಯ ಚರಿತ್ರೆ : ದೇವಾಸಿದ್ಧರು (ಬ್ಯಾಡಗಿ : ಶ್ರೀ ನಿರಂಜನ ಚನ್ನಬಸವ ಸ್ವಾಮಿ. ಮುಪ್ಪಿನ ಸ್ವಾಮಿ ವಿರಕ್ತ ಮಠ, 1958).
2. ಜೋಶಿ ಶಂ. ಬಾ. : ಕರ್ನಾಟಕ–ಸಂಸ್ಕೃತಿಯ ಪೂರ್ವ ಪೀಠಿಕೆ "ದ್ವಿತೀಯ ಭಾಗ" (ಕರ್ನಾಟಕದ ವೀರಕ್ಷತ್ರಿಯರು–ಪಟ್ಟೇಕಾರರು : ದನಗಾರರು) (ಧಾರವಾಡ : ಸಮಾಜ ಪುಸ್ತಕಾಲಯ 1966).
3. ಮೈತ್ರಿ ಕೆ. ಎಂ. : ಬೀದರ ಜಿಲ್ಲೆಯ ಗೊಂಡ ಆದಿವಾಸಿ ಸಮುದಾಯ : ಒಂದು ಸಮಾಜ–ಶಾಸ್ತ್ರೀಯ ಅಧ್ಯಯನ (ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಮರ್ಪಿಸಿದ ಅಪ್ರಕಟಿತ ಪ್ರೌಢ ಸಂಬಂಧ, 1994).
4. ನಾಯಕ ಹಾ.ಮಾ (ಸಂಪಾದಕ) : ಕನ್ನಡ ವಿಶ್ವಕೋಶ 'ಸಂಪುಟ 6' (ಮೈಸೂರು : ಕನ್ನಡ ಅಧ್ಯಯನ ಸಂಸ್ಥೆ ಮಾನಸಗಂಗೋತ್ರಿ, 1973).
5. ರಸೇಲ್ ಆರ್. ವಿ. : ದಿ ಟ್ರೈಬ್ಸ್ ಅಂಡ್ ಕಾಸ್ಟ್ಸ್ ಆಫ್ ಸೆಂಟ್ರಲ್ ಪ್ರಾವಿನ್ಸಸ್ ಆಫ್ ಇಂಡಿಯಾ (ಹೊಸದೆಹಲಿ) : ಕಾಸ್ಮೋ ಪ್ರಕಾಶನ, 1975).
6. ಶಶಿ ಎಸ್. ಎಸ್. : ದಿ ಶಫರ್ಡ್ಸ್ ಆಫ್ ಇಂಡಿಯಾ 'ಎ ಸೋಸಿಯೋ-ಕಲ್ಚರಲ್ ಸ್ಟಡಿ ಆಫ್ ಶೀಪ್ ಅಂಡ್ ಕ್ಯಾಟಲ್‌ರಿಯರಿಂಗ್ ಕಮ್ಯೂನಿಟೀಸ್' (ದೇಹಲಿ: ಸಂದೀಪ ಪ್ರಕಾಶನ, 1978).
7. ವಿಠಲಸಿಂಹ ಧೂರ್ವೆ : ಮಹಾರಾಜಾ ಸಂಗ್ರಾಮಶಾಹಕೆ ಬಾವನ್ ಗಢ (ನಾಗಪುರ : ಗೋಟೂಲ್ ಪ್ರಕಾಶನ, 1990).
8. ಭಾರತದ ಜನಗಣತಿಯ ವರದಿಗಳು (1891 ರಿಂದ 1991).
9. ಭಾರತದ ಗ್ಯಾಝೆಟಿಯರ್ "ಬೀದರ ಜಿಲ್ಲೆ".
10. ಭಾರತದ ಗ್ಯಾಝೆಟಿಯರ್ "ಕರ್ನಾಟಕ, ಆಂಧ್ರಪ್ರದೇಶ ಹಾಗೂ ಮಹಾರಾಷ್ಟ್ರ ರಾಜ್ಯಗಳು".

ಸಪ್ತಸಂತಾನಗಳು : ಒಂದು ಸ್ಥೂಲ ಅಧ್ಯಯನ

ಡಾ. ಮೃತ್ಯುಂಜಯ ರುಮಾಲೆ

ತಟಾಕಮ್ ಧನ ನೀಕ್ಷೇಪೋ ಬ್ರಹ್ಮಾಸ್ಥಾಪನಮೇವಚ
ವನಮ್ ದೇವಾಲಯ : ಕಾವ್ಯಮ್ ಸುತಷ್ಟ ಸ್ವರ್ಗದಾನ್ಯಣಾಮ್

—ಶಂಬುರಹಸ್ಯಂ

ಪೂನಿಮಗ್ರಾಹಾರ ವರಪುತ್ರ ಸಮುನ್ನತಿ ದೇವಾತಾಲಯೋ
ದಾನ ತಟಾಕ ಸತ್ಕೃತಿ ನಿಧಾನಮುಲಾ ಶಶಿತಾರ ಶಂಬು

ಕುಮಾರ ಸಂಭವಮು (1–46)

ಅಗ್ರಹಾರ, ಪುತ್ರ, ದೇವಾಲಯ, ತಟಾಕ. ನಿಧಿ, ವನ, ಕಾವ್ಯ—ಇವು ಸಪ್ತ ಸಂತಾನಗಳು. ಸಪ್ತ ಸಂತತಿ ಎಂಬುದೂ ಇವುಗಳಿಗಿರುವ ಮತ್ತೊಂದು ಹೆಸರು.

ಈ ಸಪ್ತ ಸಂತಾನಗಳು ಪ್ರಾಚೀನ ಕಾಲದಲ್ಲಿ ಸಾಮಾನ್ಯವಾಗಿ ರಾಜರಿಂದ, ಸಮಾಜದ ಗಣ್ಯವರ್ಗದವರಿಂದ, ಆರ್ಥಿಕವಾಗಿ ಸ್ಥಿತಿವಂತರಿಂದ, ಕೆಲವೊಮ್ಮೆ ಪುಣ್ಯ ವಿಶೇಷ ಫಲದ ಕಾರಣವಾಗಿ ಸಾರ್ವಜನಿಕರಿಂದ, ನೆರವೇರಲ್ಪಡುತ್ತಿದ್ದವು.

ಈ ಸಪ್ತಸಂತಾನಗಳು ಹಲವು ಕ್ಷೇತ್ರಗಳಲ್ಲಿ ಪ್ರಾಚೀನ ಕಾಲವನ್ನು ಸಮೃದ್ಧ ವಾಗಿಟ್ಟಿದ್ದವು. ಬಹುಉಪಯೋಗಿ ಯೋಜನೆಗಳಾಗಿ ಸಮಾಜವನ್ನು ಇವು ನಿಯಂತ್ರಿಸುತ್ತಿದ್ದವು. ತನ್ನ ಕಾಲದ ಬಹುಮುಖ ಒತ್ತಾಸೆಗೆ ಮಹತ್ವ ಕೊಟ್ಟು ವಿಚಾರ ಮಾಡಿದ ಚಿಂತನೆಯ ಫಲವಾಗಿ ಕಾಣುತ್ತದೆ ಈ ಸಪ್ತಸಂತಾನಗಳು.

ರಾಜರೇ ಅಲ್ಲದೇ ಯಾರೇ ಮಾಡಬಹುದಾದ ಈ ಸಾಮಾಜಿಕ ಅವಶ್ಯಕತೆಗಳು ಪ್ರತಿಷ್ಠೆಯ ಸಾಧನೆಯೆನಿಸಿದ್ದು ಅಂದಿನವರ ಉಜ್ವಲ ಭವಿಷ್ಯದ ಕಲ್ಪನೆಯನ್ನು ಎತ್ತಿ ತೋರಿಸುತ್ತವೆ. ಅದೂ ಅಲ್ಲದೇ, ಪ್ರಾಚೀನರ ಬಹುಮುಖ ಧ್ಯೇಯ ಧೋರಣೆಗಳು ಕರ್ತವ್ಯದ ಹಿನ್ನೆಲೆಯಲ್ಲೂ ಮತ್ತು ಪರಂಪರಾಗತವಾಗಿ ಮುಂದುವರೆಯಬೇಕೆಂಬ ಅರ್ಥದ 'ಸಂತಾನಗಳು' ಶಬ್ಧದ ಬಳಕೆ ಅವರ ಆರೋಗ್ಯಕರ ನಿಲುವೆನಿಸುತ್ತದೆ.

ಕನ್ನಡ ಕಾವ್ಯ ಮತ್ತು ಶಾಸನಗಳಲ್ಲಿ ಸಪ್ತಸಂತಾನಗಳ ಉಲ್ಲೇಖ ಅತಿ ವಿರಳ ವೆಂದೇ ಹೇಳಬಹುದು. ಕಾವ್ಯಕ್ಕೆ ಸಂಬಂಧಿಸಿದಂತೆ ಕ್ರಿ.ಶ. 1460 ರಲ್ಲಿದ್ದ ಚಿಕ್ಕ ಮಲ್ಲಿಕಾರ್ಜುನ ತನ್ನ ಧರ್ಮ ಸಂಪಾದನೆಯಲ್ಲಿ.

ಕೆರೆಯುಂ ಧನ ನಿಕ್ಷೇಪ ವನಗಳು
ಹರನ ಆಲಯು ಬ್ರಹ್ಮಸ್ವಾಪ್ಯವು
ಪರಮ ಸಂಸ್ಕೃತಿ ಪುತ್ರ ಮಿಂತಿವು ಸಪ್ತ ಸಂತಾನ
ಧರೆಯೊಳಗೆ ಮಿಗಿಲೆನಿಪ ಧರ್ಮಿಗ
ಗಳಂತು ಮಾಳ್ಪರು ಮಾಳ್ಪರು ಧರ್ಮಕೀರ್ತಿಯ
ಧರಿಸಿ ಚಿತ ವೀರೇಶ ಸತ್ಕೃತಿ ಪುತ್ರನಂ ಪಡೆದಾ.

–ಎಂದು ಸಾಂದರ್ಭಿಕವಾಗಿ ಮೊದಲ ಬಾರಿಗೆ ಸಪ್ತಸಂತಾನಗಳನ್ನು ಉಲ್ಲೇಖಿಸುತ್ತಾನೆ. ಶಾಸನಕ್ಕೆ ಸಂಬಂಧಿಸಿದಂತೆ, 'ಸಪ್ತಸಂತಾನಗಳು' ಎಂಬ ಶೀರ್ಷಿಕೆ ಎಲ್ಲೂ ಬಳಕೆಯಾಗಿಲ್ಲ. ಆದರೆ, ಸಪ್ತಸಂತಾನಗಳಲ್ಲಿ ಬರುವ ವಿವಿಧ ಕರ್ತವ್ಯಗಳನ್ನು ಅವು ಉಲ್ಲೇಖಿಸುತ್ತವೆ. ಈ ಹಿನ್ನೆಲೆಯಲ್ಲಿ ಜಿನವಲ್ಲಭನ ಕುರಿಕ್ಯಾಲ ಶಾಸನ ಮಹತ್ವದ್ದೆನಿಸುತ್ತದೆ. ಶಾಸನದಲ್ಲಿ ಜಿನವಲ್ಲಭ ಎಲ್ಲೂ ಪ್ರಸ್ತುತ ಶೀರ್ಷಿಕೆಯನ್ನು ಉಲ್ಲೇಖಿಸುವುದಿಲ್ಲ. ಆದರೆ ಆ ಕೆಲಸವನ್ನು ಮಾಡಿ ತೋರಿಸಿದ್ದಾನೆ. 'ವಾಗ್ವಧೂವರವಲ್ಲಭ'ನಾದ ಇವನು ಸ್ವತಃ ಕವಿ[1]. ಜೊತೆಗೆ ಕೆರೆ, ಬನ, ದೇವಾಲಯಗಳನ್ನೂ ನಿರ್ಮಿಸಿದ ದಾನ ಶ್ರೇಷ್ಠ. ಅರಿಕೇಸರಿ ಪಂಪನಿಗೆ ದತ್ತಿ ನೀಡಿದ ಅಗ್ರಹಾರದ ಬಗ್ಗೆ ಕಾಳಜಿ ವಹಿಸಿದಾತ. ಸಧ್ಯದ ಶಾಸನ ಈ ಕೆಳಗಿನ ಅಂಶಗಳಿಂದ ಮುಖ್ಯವೆನಿಸುತ್ತದೆ.

i) ಪಂಪನು ಕನ್ನಡದ ಆದಿ ಕವಿ. ತಾನು ವಿಕ್ರಮಾರ್ಜುನ ವಿಜಯವನ್ನು ಬರೆದುದಕ್ಕೆ ತನಗೆ ಅರಿಕೇಸರಿ 'ಧರ್ಮಪುರ' ಎಂಬ ಅಗ್ರಹಾರವನ್ನು ದತ್ತಿಯಾಗಿ ಬಿಟ್ಟುಕೊಟ್ಟಂತೆ ತನ್ನ ಕೃತಿಯಲ್ಲಿ ಹೇಳಿಕೊಂಡಿರುವುದಲ್ಲದೆ ಜಿನವಲ್ಲಭನ ಕುರಿಕ್ಯಾಲ ಶಾಸನವು ಅದನ್ನು 'ದ್ವಿಜಾವಸಥ ಗ್ರಾಮ' (ಬ್ರಾಹ್ಮಣರ ಊರು) ಎಂದು ಹೇಳುತ್ತದೆ.

ii) ಜಿನವಲ್ಲಭ ತನ್ನ ಅಣ್ಣ ಪಂಪನ ಹೆಸರಲ್ಲಿ ಆತನ ಬಿರುದಾದ 'ಕವಿತಾ ಗುಣಾರ್ಣವ' ಎಂಬ ಕೆರೆಯನ್ನು ಕಟ್ಟಿಸಿದ್ದನ್ನು ಶಾಸನದಲ್ಲಿ ಹೇಳಿದೆ.

iii) 'ಮದನ ವಿಲಾಸ'ವೆಂಬ ಬನ ಮಾಡಿಸಿದ್ದು ಶಾಸನೋಕ್ತವಿದೆ.

iv) ಜೊತೆಗೆ 'ತ್ರಿಭುವನ ತಿಲಕ ಬಸದಿ' ಎಂಬ ಬಸದಿಯನ್ನು ಜಿನವಲ್ಲಭ ನಿರ್ಮಿಸಿದ್ದಾಗಿ ತಿಳಿಯುತ್ತದೆ.

–ಹೀಗೆ ಜಿನವಲ್ಲಭ ಮಾಡಿಸಿದ ಸ್ಮಾರಕಗಳ ಪಟ್ಟಿಯೇ ನಮಗೆ ಇಲ್ಲಿ ಸಿಕ್ಕುತ್ತದೆ.

---

1 –ಮಾರ್ಗ–1. ಡಾ. ಎಂ. ಎಂ. ಕಲಬುರ್ಗಿ, ಪುಟ–67.

"...ಜಿನವಲ್ಲಭಂ ಸಬ್ಬಿನಾಡ ನಟ್ಟ ನಡುವಣ ಧರ್ಮಪುರದುತ್ತರ ದಿಗ್ಭಾಗದ ವೃಷಭಗಿರಿಯೆಂಬನಾದಿ ಸಂಸಿದ್ಧ ತೀರ್ಥದ ದಕ್ಷಿಣದಿಶಾಭಾಗದೀ ಸಿದ್ಧ ಶಿಲೆಯೊಳ್ತಮ್ಮ ಕುಲದೈವವಪ್ಪಾದ್ಯಂತ ಜಿನಬಿಂಬಗಳುಮಂ ಚಕ್ರೇಶ್ವರಿಯುಮಂ ಪೆಱವು ಜನಪ್ರತಿಮೆಗಳುಮಂ ತ್ರಿಭುವನ ತಿಲಕಮೆಂಬ ಬಸದಿಯುಮಂ ಕವಿತಾಗುಣಾರ್ಣವಮೆಂಬ ಕೆಱೆಯುಮಂ ಮದನ ವಿಳಾಸಮೆಂಬ ಬನಮುಮಂ ಮಾಡಿಸಿದಂ"[2].

—ಇಲ್ಲಿ ಪಂಪ ಸ್ವತಃ ರಾಜಾಶ್ರಿತ ಕವಿಯಾಗಿ, ಆಶ್ರಯದಾತ ಅರಿಕೇಸರಿಯಿಂದ ಅಗ್ರಹಾರವನ್ನು, ತಮ್ಮ ಜಿನವಲ್ಲಭನಿಂದ ಕೆರೆ, ಬನ ಪಡೆದವನಾಗಿ ಮತ್ತು ಆ ಸಂದರ್ಭದಲ್ಲಿ ಜಿನವಲ್ಲಭನಿಂದ ಜಿನಬಸದಿಯ ನಿರ್ಮಾಣವೂ ಆಗಿ ಹಲವು ಅನುಕೂಲಗಳನ್ನು ಪಡೆದವನಾಗಿಯೂ ಕಾಣುತ್ತಾನೆ. ಅರಿಕೇಸರಿಯ ಸಂಗದಲ್ಲಿದ್ದಾಗ ಪಂಪ ಆರ್ಥಿಕ ಸೌಲಭ್ಯವನ್ನು ಪಡೆದಿದ್ದ ಎನ್ನಬಹುದಾದರೆ ಮತ್ತು ಅದನ್ನು ಸಪ್ತಸಂತಾನಗಳಲ್ಲಿ ಬರುವ 'ನಿಧಿ' ಎಂದು ಪರಿಗಣಿಸಬಹುದಾದರೆ 'ಪುತ್ರ' ಒಂದನ್ನು ಬಿಟ್ಟು ಪಂಪ ಎಲ್ಲಾ ಸೌಕರ್ಯಗಳನ್ನು ಅನುಭವಿಸಿದವನಾಗಿ ಕಾಣುತ್ತಾನೆ. ಈ ಹಿನ್ನೆಲೆಯಲ್ಲಿ ಕನ್ನಡ ಕವಿಗಳಲ್ಲಿಯೇ ಸಪ್ತಸಂತಾನಗಳನ್ನು ಅನುಭವಿಸಿದ ಮೊದಲಕವಿ ಎಂದು 'ಸ್ಥೂಲವಾಗಿ' ಕರೆಯಬಹುದಾಗಿದೆ.

ಏಳು ಕಾರ್ಯಗಳು ಇಲ್ಲಿ ಇಬ್ಬರ ನಡುವೆ ಹಂಚಿ ಹೋಗಿರುವುದು ಮತ್ತು ಅದರಲ್ಲಿ ಒಂದರ ಕಡಿತವಾಗಿರುವುದನ್ನು ಇಲ್ಲಿ ಸೂಚ್ಯವಾಗಿ ಗಮನಿಸಬಹುದು. ಆದರೆ, ಆಂಧ್ರಪ್ರದೇಶದಲ್ಲಿ ಸಪ್ತಸಂತಾನ ದಾನಗಳು ಏಕ ವ್ಯಕ್ತಿಯಿಂದಲೇ ನಡೆದಿರುವುದು ಕಂಡು ಬರುತ್ತದೆ.

ಕನ್ನಡ ಕಾವ್ಯ-ಶಾಸನಗಳು ಸಪ್ತಸಂತಾನಗಳ ಉಲ್ಲೇಖ ಮಾಡದಿದ್ದರೂ ಕನ್ನಡಿಗರು ಆ ಕೆಲಸಗಳನ್ನು ಪ್ರತ್ಯೇಕವಾದ ರೀತಿಯಲ್ಲಿ ನಿರಂತರವಾಗಿ ಮಾಡಿಕೊಂಡು ಬಂದಿದ್ದಾರೆ. ಕನ್ನಡಿಗರಿಗೆ 'ಸಪ್ತಸಂತಾನಗಳ' ಕಲ್ಪನೆ ಇತ್ತೋ ಇದ್ದಿಲ್ಲವೋ ಎಂಬುದು ಬಹುಶಃ ಇಲ್ಲಿ ಮುಖ್ಯವಾದ ಅಂಶವಾಗುತ್ತದೆ.

ಕನ್ನಡಿಗರಲ್ಲಿ ರಾಜರು, ಸಮಾಜದ ಗಣ್ಯರು, ಸಾರ್ವಜನಿಕರು ಎಂದು ಮೂರು ರೀತಿಯಲ್ಲಿ ವಿಂಗಡಿಸಬಹುದಾದ ಸ್ತರಗಳನ್ನು ಗಮನಿಸಬಹುದು.

ಕ್ರಿ.ಶ. 1132ರ ಕೃಷ್ಣಾ ಜಿಲ್ಲೆಯ ಗನ್ನವರಮು ತಾಲೂಕಿನ ಎನಮಲಕುದುರು ಗ್ರಾಮದಲ್ಲಿ ದೊರೆತ ಭೀಮಣ್ಣನು ಹಾಕಿಸಿದ ತೆಲುಗು ಶಾಸನದಲ್ಲಿ ಪ್ರಥಮ ಬಾರಿಗೆ ಸಪ್ತಸಂತಾನಗಳ ಉಲ್ಲೇಖವನ್ನು ಡಾ. ಎಸ್. ವಿದ್ಯಾಶಂಕರ ಗುರುತಿಸಿದ್ದಾರೆ.[3]

---

2 –ಹೊಸತು ಹೊಸತು – ಡಾ. ಎಂ. ಚಿದಾನಂದಮೂರ್ತಿ, ಪುಟ–109, ಉಧೃತ.

3 ಸಾಧನೆ (9–4) ಪುಟ–16

ಆಂಧ್ರದಲ್ಲಿ ಸಪ್ತಸಂತಾನಗಳಂಥ ಸಾಮೂಹಿಕ ಪುಣ್ಯಕಾರ್ಯಗಳು ಸದ್ಗತಿ ಮತ್ತು ಕೀರ್ತಿಸಂಪಾದನೆಗಾಗಿ ಮಾಡಲಾಗುತ್ತಿತ್ತು. ತೆಲುಗು ಕಾವ್ಯಗಳ ಪೀಠಿಕಾ ಪ್ರಕರಣದಲ್ಲಿ ಸಪ್ತಸಂತಾನಗಳ ಉಲ್ಲೇಖ ಸಾಮಾನ್ಯವಾಗಿರುತ್ತಿತ್ತು. ಅದರಲ್ಲೂ ಮನುಚರಿತಮು–

ಸಪ್ತಸಂತಾನಮುಲಲೋ ಬ್ರಶಸ್ತಿ ಗಾಂಡಿ
ಖಿಲಮು ನಾಕುಂಡು ನಧಿಧಾತ್ರಿ ಗೃತಿಯ ಕಾನ
ಕೃತಿ ರಚಿಂಪುಮು ಮಾತು ಶಿರಿಕ್ಷ ಕುಸುಮ
ಪೇಶಲ ಸುಧಾಮ ಯೋಕ್ತುಲ ಬೆದ್ದನಾರ್ಯ.
(ಮನುಚರಿತಮು)

(ಬೆದ್ದನಾರ್ಯನೇ, ಸಪ್ತಸಂತಾನಗಳಲ್ಲಿ ಪ್ರಶಸ್ತಿ ಪಡೆದು ನಾಶಪಡೆಯದೇ ಇರುವುದು, ಭೂಮಿಯಲ್ಲಿ ಕೃತಿಮಾತ್ರ. ಆದ್ದರಿಂದ ಶಿರಿಷ, ಕುಸುಮ, ಪೇಶಲ, ಸುಧಾಮ, ಮುಕ್ತಿಗಳಿಂದ ಒಂದು ಕೃತಿಯನ್ನು ರಚಿಸು).

ಸಪ್ತಸಂತಾನಗಳಲ್ಲೇ ಸಾಹಿತ್ಯ ರಚನೆಯು ಶ್ರೇಷ್ಠವೆಂದು ಹೇಳುತ್ತದೆ.

ಕರ್ನಾಟಕದಲ್ಲಿ ರಾಜರುಗಳು ಈ ಮಾತನ್ನು ಬಹುಶಃ ಹೆಚ್ಚು ನೆಚ್ಚಿಕೊಂಡಂತೆ ಕಾಣುತ್ತದೆ. ಸಪ್ತಸಂತಾನಗಳ ಸಮಗ್ರತೆಯ ಪ್ರಭಾವ ಇಲ್ಲಿ ಕಡಿಮೆಯಾಗಿರುವ ಕಾರಣವಾಗಿ ಅವುಗಳನ್ನು ಆಸಕ್ತಿ–ಅಭಿರುಚಿಗೆ ಅನುಸಾರವಾಗಿ ಮಾಡಿದಂತೆ ಕಾಣುತ್ತದೆ.

ಅದನ್ನು ನೋಡುವುದು ಪ್ರಸ್ತುತ ಸಂಪ್ರಬಂಧದ ಮತ್ತೊಂದು ಉದ್ದೇಶ.

ಸಾಮೂಹಿಕ ಪುಣ್ಯಕಾರ್ಯಗಳಿಗೆ ಸಂಬಂಧಿಸಿದಂತೆ ಕನ್ನಡದ ಕೆಲವು ಶಾಸನಗಳನ್ನು ಪ್ರಾತಿನಿಧಿಕವಾಗಿ ಇಲ್ಲಿ ಗಮನಿಸಬಹುದು.

ನಾಗಾರ್ಜುನ ಪಂಡಿತನ ಶಾಸನ (ಕ್ರಿ.ಶ.ಸು. 1125) ವು—

ಕೆರೆ ಬಾವಿ ಬಸದಿ ದೇಗುಲ
ಮರವಂಟಿಗೆ ಸತ್ರವೆಂಬ ಧರ್ಮಮುನಿತುಂ
ನೆರೆದುವು ಮುಗುಂದ ಮಾವ
ತ್ರರ ವಿಭು ಚಾವುಂಡರಾಯನಿಂದಂ ಜಗದೊಳ್

ಎಂದು ಕೆರೆ, ಬಾವಿ, ಬಸದಿ, ದೇಗುಲ, ಅರವಟ್ಟಿಗೆ, ಸತ್ರಗಳ ಮತ್ತು ಲಕ್ಷ್ಮೀಧರ ಅಮಾತ್ಯನ ಶಾಸನವು,

......ಕೆರೆಯಂ ಕಟ್ಟಿಸು ಬಾವಿಯುಂ ಸವೆಸು ದೇವಾಗಾರಮಂ ಮಾಡಿಸ
ಜ್ಜೆರೆಯೊಳ್ಸಿಲ್ಕಿದನಾಥರಂ ಬಿಡಿಸು ಮಿತ್ರರ್ಗ್ಗಿನಂಬುಕೆಯ್
ನಂಬಿದವರ್ಗ್ಗೆರೆವೆಟ್ಟಾಗಿರು ಶಿಷ್ಟರಂ ಪೊರೆಯುನುತ್ತಿಂತೆಲ್ಲವಂ

ಎಂದು ಕೆರೆ, ಬಾವಿ, ದೇವಾಲಯ, ಅನಾಥರ ಬಿಡುಗಡೆ, ಸ್ನೇಹ, ಆಶ್ರಯ, ಶಿಷ್ಟರ ರಕ್ಷಣೆಗಳನ್ನು ಕುರಿತ ಕರ್ತವ್ಯಗಳ ಪಟ್ಟಿಗಳನ್ನೇ ನೀಡುತ್ತವೆ.

ಈ ಎರಡೂ ಶಾಸನಗಳಲ್ಲಿ ಉಲ್ಲೇಖವಿರುವ ಪುಣ್ಯಕಾರ್ಯಗಳು ಪ್ರಾಚೀನ ಕರ್ನಾಟಕದಲ್ಲಿ ಸಾಮಾನ್ಯವೆನಿಸಿದ್ದವು.

ಪಂಪ ವಿಕ್ರಮಾರ್ಜುನ ವಿಜಯದಲ್ಲಿ (2–97 ವ)—

> 'ಆಗಿ ತಾವಾದಿ ಗರ್ಭೇಶ್ವರರಪ್ಪುದರಿಂತಳರ್ದೆಡೆಯೆಡೆಯ ಮರಂಗಳ ತೊರೆಗಳ ಬಾಡಂಗಳ ಪೆಸರ್ಗಳ ಬೆಸಗೊಳುತ್ತುಂ ಮಹಾಗ್ರಹಾರಂಗಳ ಮಹಾಜನಗಳ ಕೊಟ್ಟ ಪೊನ್ನ ಜನ್ನವಿರಂಗಳುಮನವರ ಪರಕೆಮುಮಂ ಕೈಕೊಳ್ಳುತ್ತುವರ್ಗೆ ಬಾಧೆಯಾಗದಂತು ಕಾಪಂ ನಿಯಮಿಸುತ್ತುಂ......ಅಲ್ಲಿ ಗಲ್ಲಿಗೊಡೆದ ಕೆರೆಗಮಳಿದಾಯ ತನಕ್ಕುಂ ಧನಮನಿತ್ತು ಜೀರ್ಣೋದ್ಧಾರಂ ಗಳಂ ಮಾಡಿಸುತ್ತುಂ ಬಂದು'

ಎಂಬಲ್ಲಿಯ ಪಾಂಡವರ ರಾಜೋಚಿತ ಪ್ರಯಾಣದ ವರ್ಣನೆಯಲ್ಲಿ ಅಂದಿನ ರಾಜವರ್ಗ ಮಾಡಬೇಕಾದ ಸಾಮಾಜಿಕ ಕಾರ್ಯವನ್ನು ತಿಳಿಸಿದ್ದು ಇಲ್ಲಿ ಗಮನಾರ್ಹ.

ಕರ್ನಾಟಕದಲ್ಲಿ ಸಪ್ತಸಂತಾನಗಳ ವಿವಿಧ ಕಾರ್ಯಗಳನ್ನು ಸೂಚಿಸುವ ಕೆಲವು ಮುಖ್ಯ ಶಾಸನಗಳನ್ನು ಪ್ರಾತಿನಿಧಿಕವಾಗಿ ಗಮನಿಸಬಹುದು.

ಕೆರೆ : ಸಪ್ತಸಂತಾನಗಳಲ್ಲಿ ಕೆರೆಯನ್ನು ನಮ್ಮ ಪ್ರಾಚೀನರು ಯಥೇಚ್ಛವಾಗಿ ನಿರ್ಮಿಸಿರುವುದು ಕಂಡುಬರುತ್ತದೆ. ಕೆರೆ ನಿರ್ಮಾಣ ಕದಂಬರ ಕಾಲದಷ್ಟು ಪ್ರಾಚೀನತೆಯನ್ನು ಪಡೆದುಕೊಳ್ಳುತ್ತದೆ. ಕದಂಬರು ಕರ್ನಾಟಕದಲ್ಲಿ ತಟಾಕ ನಿರ್ಮಾಣ ವನ್ನು ಅತಿ ಮಹತ್ವದ ಪೌರಹಿತ್ಯ ಕಾರ್ಯವೆಂದು ಪರಿಗಣಿಸಿದ್ದರು.[4] ಪ್ರಾಚೀನ ಕರ್ನಾಟಕ ಸಮಾಜದ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಆರ್ಥಿಕ, ಸಾಂಸ್ಕೃತಿಕ, ಸಾಮಾಜಿಕ ಮಹತ್ವವನ್ನು ಕೆರೆಕಟ್ಟುವುದರ ಮೂಲಕ ಎತ್ತಿತೋರಿಸಿದೆ. ಸಾರ್ವಜನಿಕ ವಾಗಿ ಆರ್ಥಿಕ ನಿಯಂತ್ರಣ ಹೊಂದಿದ್ದು ಜನಗಳಲ್ಲಿ ವಿಶೇಷವಾಗಿ ದುಡಿಮೆಗಾರರಲ್ಲಿ ಈ ಕೆರೆಗಳು ಪೂಜ್ಯನೀಯವೆನಿಸಿವೆ. ಸ್ಥಿತಿವಂತರು ಈ ಕೆರೆ ನಿರ್ಮಾಣದಲ್ಲಿ ಜನ್ಮ ಸಾರ್ಥಕ್ಯವನ್ನು ಅನುಭವಿಸಿದ್ದಾರೆ. ಕೆರೆಗಳು ; ವ್ಯವಸಾಯೋತ್ಪನ್ನ ಸಂಪನ್ಮೂಲ ಗಳಾಗಿ, ನೀರಿನ ಸೌಲಭ್ಯವನ್ನೊದಗಿಸುವ ಸಾಮಗ್ರಿಗಳಾಗಿ, ಕೆರೆ ನಿಮಿತ್ತ ಸುಂಕ, ತೆರಿಗೆ ಸಂಗ್ರಹವೂ ಇದರಿಂದ ನಡೆಯುತ್ತಿದ್ದು ಒಂದು ಉತ್ತಮ ಆದಾಯ ಮಾಧ್ಯಮ ವಾಗಿ ಬಹುಪಯೋಗಿ ಎನಿಸಿದ್ದವು.

---

4 ಬನವಾಸಿಯ ಕದಂಬರು-ಪುಟ-49.

"ಸತ್ತವನ ಪ್ರೇತವು ಬಹಳ ಬಾಯಾರಿಕೆಯಿಂದ ಬಳಲುವುದೆಂದೂ ತಟಾಕ ನಿರ್ಮಾಣ ಮುಂತಾದ ಧರ್ಮಕಾರ್ಯಗಳಿಂದ ಅದರ ಬಾಯಾರಿಕೆ ಹಿಂಗುವುದೆಂದೂ ಅಂದಿನ ಜನರು ನಂಬಿರುವುದರಿಂದ"[5] ಹಿಂದಿನ ಜನ ಇದರಲ್ಲಿ ಅಲೌಕಿಕತೆಯ ಪ್ರಾಮಾಣಿಕ ಪ್ರಯೋಗಶೀಲತೆಯನ್ನು ಅನುಭವಿಸಿದ್ದನ್ನು ಕಾಣಬಹುದು. ಅದೇ ರೀತಿಯಾಗಿ, "ಯಾವ ವ್ಯಕ್ತಿಯು ಕಟ್ಟಿಸಿದ ಕೆರೆಯಲ್ಲಿ ಹಸುಗಳು, ಪ್ರಾಣಿಗಳು, ಪಕ್ಷಿಗಳು, ಮನುಷ್ಯರು, ನೀರನ್ನು ಕುಡಿದು ತೃಪ್ತರಾಗುವರೋ ಅವರು ಅಶ್ವಮೇಧ ಯಾಗದ ಫಲವನ್ನು ಪಡೆಯುತ್ತಾರೆ."[6] ಎಂದೂ ನಂಬಿದ್ದರು.

ಕೆರೆ ನಿರ್ಮಾಣದಲ್ಲಿ ಸಮಾಜದ ವಿವಿಧ ಸ್ತರದವರನ್ನು ಕುರಿತು ಕೆಲವು ಶಾಸನಗಳಲ್ಲಿ ನೋಡಬಹುದು.

ಬಿದಿಯೆಜಿಯ ಎಂಬಾತನು ಒಂದು ಕೆರೆಯನ್ನು ಕಟ್ಟಿಸಿದ್ದಕ್ಕೆ ಅವನಿಗೆ ಶ್ರೀ ವೀರನೊಳಂಬನು 'ನೊಳಂಬದೊಡ್ಡ' ಎಂಬ ಹೆಸರಿಟ್ಟು ಅವನಿಗೆ ಕಡಗವಿಡುತ್ತಾನೆ.[7]

ಕ್ರಿ.ಶ. 1067ರ ಶಿಗ್ಗಾವಿ ತಾಲೂಕಿನ ಹೊಟ್ಟೂರು ಶಾಸನವು ಕೇಶಿಗಾವುಂಡನೆಂಬಾತ ಉದಕ, ಅನ್ನ, ಗೋವು, ಭೂಮಿ, ವಿದ್ಯಾ, ಕನ್ಯಾ ಮೊದಲಾದ ದಾನಗಳನ್ನು ಮಾಡಿದ ಬಗ್ಗೆ ತಿಳಿಸುತ್ತಿದ್ದು ಅದರಲ್ಲಿ ಪ್ರಸ್ತಾಪಿತವಾದ 'ಉದಕ'ವು ಕೆರೆ, ಕಾಲುವೆ, ಬಾವಿಗಳ ನಿರ್ಮಾಣವೇ ಆಗಿರಬೇಕು.[8] ಎಕ್ಕಲಶೆಟ್ಟಿ ಎಕ್ಕಸಮುದ್ರ ಕಟ್ಟಿಸಿದ್ದಕ್ಕಾಗಿ 40 ಕಂಬ ಜಮೀನನ್ನು ಅತ 'ಕೆರೆ ಕೊಡುಗೆ'ಯಾಗಿ ಪಡೆದಿದ್ದ[9] ಜೊಮ್ಮಯ್ಯ ಎಂಬುವನು ಕೆರೆಗೆ ದಕ್ಷಿಣದ ತೂಬನ್ನು ಕಟ್ಟಿಸಿಕೊಟ್ಟಿದ್ದಕ್ಕಾಗಿ ಆ ಕೆರೆಯ ಸಮೀಪ 10 ಖಂಡುಗ ಗದ್ದೆಯನ್ನು ಆತನ ಕೆಲಸಕ್ಕೆ ಪ್ರತಿಫಲವಾಗಿ ಕೊಡಲಾಗಿತ್ತು.[10] ಪಟ್ಟಣಸ್ವಾಮಿ ನೊಕ್ಕಯ್ಯನೆಂಬುವನು ಪಟ್ಟಣಸ್ವಾಮಿ ಕೆರೆ ಎಂದು ತನ್ನ ಹೆಸರಿನ ಕೆರೆ ನಿರ್ಮಿಸಿದ್ದಾನೆ.[11] ರಟ್ಟರ ಸಾಮಂತ ಎಚಿಯಮ್ಮನ ಹೆಸರಿನಲ್ಲಿ 'ರಟ್ಟ ಸಮುದ್ರ' ಎಂಬ ಕೆರೆಯನ್ನು ಕಟ್ಟಿಸಿದ್ದಾನೆ.[12] ಚಿಲ್ಲುಕ ಭಟಾರ ಎಂಬ ಸುಪ್ರಸಿದ್ಧ ಶೈವ ಸನ್ಯಾಸಿಗಳು ಐದು ಕೆರೆಗಳನ್ನು ಕಟ್ಟಿಸಿದರೆಂದು ಒಂದು ಶಾಸನ ಹೇಳುತ್ತದೆ.[13] ಇವು ವ್ಯಕ್ತಿ ನಿರ್ಮಿತ

---

5 ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ-ಪುಟ-452.
6 ಅದೇ, ಪುಟ-452.
7 511 ix. i. 17, C 900 AD.
8 EI. Vol. 16, P-83, ಉದ್ಧೃತ, ಕರ್ನಾಟಕ ಭಾರತಿ, 23-, 34.
9 MAR, 1928, ನಂ-19. ಕ್ರಿ.ಶ. 1227.
10 EC-5, 180, ಕ್ರಿ.ಶ. 1215.
11 EC-VIII, 58, ಕ್ರಿ.ಶ. 1062.
12 BKI-I-i, 74, ಕ್ರಿ.ಶ. 1041,
13 EC-XII, Si-9, ಕ್ರಿ.ಶ. 1072.

ಕೆರೆಗಳೆನಿಸಿದರೆ, ಧಾರವಾಡ ಜಿಲ್ಲೆಯ ನರಗುಂದದಲ್ಲಿ ಸಾರ್ವಜನಿಕರಿಂದ ಒಂದು ಕೆರೆ ನಿರ್ಮಾಣಗೊಂಡಿದ್ದು[14] ಊರಿನ ಜನ ಒಗ್ಗಟ್ಟಾಗಿ ಕೆರೆ ನಿರ್ಮಾಣಕಾರ್ಯದಲ್ಲಿ ತೊಡಗಿದ್ದಕ್ಕೆ ಉತ್ತಮ ಉದಾಹರಣೆ ಎನಿಸುತ್ತದೆ. ಚಾವುಂಡಯ್ಯನೆಂಬಾತ ಮಾಡಿಸಿದ ಕೆರೆಗೆ ಬಿಟ್ಟ ಭೂಮಿಯನ್ನು ಆ ಊರಿನ ಮಹಾರಾಜರು ಪಾಲಿಸುವರು.[15] ಈ ಶಾಸನ ಕೆರೆಯ ಮೂಲಕವಾಗಿ ಸಾರ್ವಜನಿಕ–ರಾಜರ ಸಂಬಂಧದಲ್ಲಿ ಅನ್ಯೋನ್ಯತೆಯನ್ನು ಕಾಣಬಹುದಾಗಿದೆ. ಕೆರೆ–ಊರು ಊರುಗಳ ನಡುವೆ ಅವಲಂಬನೆ–ಸ್ವಾವಲಂಬನೆಗೆ ಕಾರಣವಾಗಿತ್ತು ಎಂಬುದಕ್ಕೆ ಒಂದು ಶಾಸನ ಈ ನಿಯಮವನ್ನು ಹೇಳುತ್ತದೆ. 'ಒಂದು ಊರಿನ ಕೆರೆಯ ನೀರನ್ನು ಇನ್ನೊಂದು ಊರಿನವರು ಬಳಸಬೇಕಾದರೆ ನಾಡಿನ ಎಲ್ಲ ಪ್ರಭುಗಾವುಂಡಗಳ ಅನುಮತಿ ಪಡೆಯಬೇಕಾಗಿತ್ತು.[16] ಹಿರಿಯ ದಂಡನಾಯಕ ಗಂಗಪ್ಪಯ್ಯ ಕನ್ನೆಗಾಲ ಕದನದಲ್ಲಿ ಜಯಗಳಿಸಿದ್ದಕ್ಕಾಗಿ ಗಂಗ ಸಮುದ್ರ ಕಟ್ಟಿಸಿ ದೇವರಿಗೆ ದತ್ತಿ ಬಿಟ್ಟಿದ್ದನು.[17] ಎಂಬಲ್ಲಿ ಕೆರೆ ಸ್ವಾಮಿಗೆ ಭಕ್ತಿಯ ಕಾಣಿಕೆ ನೀಡುವ ಮೌಲ್ಯನಿಷ್ಠವಾಗಿತ್ತು ಎಂಬುದನ್ನು ಕಾಣಬಹುದು.

ಅದೇ ರೀತಿಯಾಗಿ,

ಎರಡನೇ ಬಲ್ಲಾಳನ ಕಾಲದಲ್ಲಿ ಹೊನ್ನಮಾರಗೌಡನೆಂಬವನು ತನ್ನ ತಾಯಿ ಮಾಯಕ್ಕನ ಹೆಸರಿನಲ್ಲಿ ಮಾಡ ಸಮುದ್ರ ಕಟ್ಟಿಸುತ್ತಾನೆ.[18] ಸೀಯಣ್ಣನೆಂಬುವನು ದೊಡ್ಡ ಕೆರೆಯೊಂದನ್ನು ನಿರ್ಮಿಸಿದ್ದಕ್ಕಾಗಿ ಪೆರಿಯನಾಡಿನ ನಿವಾಸಿಗಳಾದ 6 ಖಂಡುಗ ಗದ್ದೆಯನ್ನು 'ಕಾಮ್ಪು ಕೊಡುಗೆ' ಯಾಗಿ ಪಡೆಯುತ್ತಾನೆ.[19]

ಕನ್ನಡ ಸಾಹಿತ್ಯದಲ್ಲಿ ಕವಿಯಾಗಿ ಹೆಸರು ಮಾಡಿದ ಕೆರೆಯ ಪದ್ಮರಸ ವಿಭೂತಿ ತಳೆದು ಕೆರೆ ಕಟ್ಟಿಸಿದ್ದಾಗಿ ಕಾವ್ಯೋಕ್ತ ವಿಷಯವೊಂದರಿಂದ ತಿಳಿಯುತ್ತದೆ.

ರಟ್ಟಕವಿ ತನ್ನ ರಟ್ಟಮತದಲ್ಲಿ ಕೆರೆ, ತೊರೆ, ಬಾವಿ ಮತ್ತು ಕೊಳಗಳು ನೀರಾವರಿಯ ಮೂಲವೆಂದು ಹೇಳುತ್ತಾನೆ. 'ಕೆರೆಯಂ ಕಂಡು ಕಳವೆಯಂ ಬಿತ್ತುವಂತೆ' —ಎಂದು ಧರ್ಮಾಮೃತದಲ್ಲಿ ನಯಸೇನ ಸಾಂದರ್ಭಿಕವಾಗಿ ಕೆರೆಯ ಮಹತ್ವವನ್ನು ತಿಳಿಸುತ್ತಾನೆ.

---

14 IA-XII, ಪುಟ-222.
15 BKI-I, ii, 151–ಕ್ರಿ.ಶ. 1102.
16 EC-VIII-86-359, ಕ್ರಿ.ಶ. 1129.
17 EC-2, 558, ಕ್ರಿ.ಶ. 1145.
18 EC-5, 96, ಕ್ರಿ.ಶ. 1314.
19 MAR-1919, ಪುಟ–32, ಕ್ರಿ.ಶ. 1340.

ಕೆಲವು ಸಂದರ್ಭಗಳಲ್ಲಿ ಈ ಕೆರೆ ದಿವ್ಯವಾಗಿಯೂ ಬಳಕೆಯಾಗಿದೆ. ಹೀಗೆ ಕೆರೆ ನಮ್ಮ ಪ್ರಾಚೀನ ಸಂಸ್ಕೃತಿಯ ಅವಶೇಷವಾಗಿ ಇಂದಿಗೂ ಉಳಿದಿರುವುದು ಅದರ ಸಾರ್ವಕಾಲಿಕ ಮಹತ್ತ್ವವನ್ನು ಎತ್ತಿ ಹೇಳುತ್ತದೆ.

ಚಟ್ಟಲದೇವಿ ಎಂಬಾಕೆ 'ಧರ್ಮಂ ಪ್ರಾಗೇವ ಚಿಂತಯೇತ್' ಎಂಬುದನ್ನು ಸ್ಮರಿಸಿ ಕೆರೆ, ಬಸದಿ, ದೇಗುಲ, ಅರವಂಟಿಗೆ, ತೀರ್ಥ, ಚತ್ರ, ಆರವೆ (=ತೋಪು) ಮೊದಲಾದವುಗಳನ್ನು ಮಾಡಿಸಿದಂತೆ ಒಂದು ಶಾಸನ[20] ಹೇಳುತ್ತದೆ. ದ್ವಾರಸಮುದ್ರದ ಪಟ್ಟಣಶೆಟ್ಟಿಯಾದ ಹೊಯ್ಸಳ ಶೆಟ್ಟಿಯ ಹೆಂಡತಿ ದೇವಿಯಕ್ಕ ಕತ್ತರಿ ಘಟ್ಟದಲ್ಲಿ ಒಂದು ಜಿನಾಲಯ ಮಾಡಿಸಿದಾಗ ನೊಳಂಬ ಶೆಟ್ಟಿಯು ಅದಕ್ಕೆ ಅರ್ಜನಹಳ್ಳಿಯನ್ನು ದಾನ ಶಾಲೆಯನ್ನು, ಎರಡು ಗಾಣಗಳನ್ನೂ, ಕೆರೆಯನ್ನೂ ದತ್ತಿ ಬಿಟ್ಟನಂತೆ.[21]

ಹೊಯ್ಸಳ ರಾಣಿ ಶಾಂತಲೆ ಶ್ರವಣಬೆಳಗೊಳದಲ್ಲಿ 'ಸವತಿ ಗಂಧವಾರಣ' ಎಂಬ ಹೆಸರಿನ ಬಸದಿಯ ಜೊತೆಗೆ ಒಂದು ಕೆರೆಯನ್ನೂ ಕಟ್ಟಿಸಿ, ಆ ಬಸದಿಗೆ ದತ್ತಿ ಬಿಡುತ್ತಾಳೆ.[22]

ಶ್ರೀಕರಣಾಧಿಕಾರಿ ವಿಶ್ವನಾಥನು ನಿರಗುಂದ ನಾಡಿನಲ್ಲಿ ವೀರನರಸಿಂಹಪುರ ಅಗ್ರಹಾರ ನಿರ್ಮಿಸಿದ್ದಲ್ಲದೆ ಕೆರೆಗಳನ್ನು ಕಟ್ಟಿಸುತ್ತಾನೆ.[23] ಮಹಾಪ್ರಧಾನ ಕೇಶಿರಾಜ ಚಮೂಪತಿಯ ನೇತೃತ್ವದಲ್ಲಿ ಕೇಶವಪುರ ಅಗ್ರಹಾರದ ಜೊತೆಗೆ ಕೇಶವ ಸಮುದ್ರ ಮತ್ತು ಲಕ್ಷ್ಮಿಸಮುದ್ರ ಕೆರೆಗಳು ಅಸ್ತಿತ್ವಕ್ಕೆ ಬಂದಿದ್ದವು.[24]

ವನ: ಪ್ರಕೃತಿ ಸಂರಕ್ಷಣೆ ಕೇವಲ ಕರ್ತವ್ಯವಷ್ಟೇ ಅಲ್ಲ, ಅದು ಒಂದು ಧರ್ಮದ ಕಾರ್ಯವೇ ಆಗಿತ್ತು. ವೇದಕಾಲದಿಂದಲೂ ಪ್ರಕೃತಿಗೆ ಮನುಷ್ಯ ಪೂಜ್ಯನೀಯಸ್ಥಾನ ನೀಡಿದ್ದಾನೆ. ಅದರ ಸಂರಕ್ಷಣೆಯ ಮೂಲಕ ಮನುಕುಲದ ಸಂರಕ್ಷಣೆಯೂ ಆಗುವ ಪಾರಸ್ಪರಿಕ ಸಂಬಂಧವನ್ನು ಅರ್ಥ ಮಾಡಿಕೊಂಡಿದ್ದರು. ಕ್ರಮೇಣ ಈ ಅರಣ್ಯ, ತೋಟ, ಕೃಷಿ, ನಾಗರಿಕ ಸಮಾಜದ ಸ್ವಾವಲಂಬನೆಗೆ ಸಾಧನವಾಗತೊಡಗಿದಂತೆ ಅದನ್ನು ಪೋಷಿಸುವ ಹಿನ್ನೆಲೆಯಲ್ಲಿ ಸಪ್ತಸಂತಾನಗಳಲ್ಲಿ ವನ, ಹೂದೋಟವೂ ಒಂದಾಗಿರುವುದು ಸಹಜವಾಗಿದೆ.

"ಅರಣ್ಯ ಪ್ರದೇಶಗಳು ಇತ್ತೀಚೆಗೆ ಬಯಲುಗಳಾಗುತ್ತಿವೆ. ಆದರೆ ಪ್ರಾಚೀನ ಕರ್ನಾಟಕದಲ್ಲಿ ಪ್ರತಿಯೊಂದು ಗ್ರಾಮದಲ್ಲಿಯೂ ಅರಣ್ಯ ಪ್ರದೇಶಕ್ಕಾಗಿ ಪ್ರತ್ಯೇಕ ಭೂಮಿಯನ್ನು ಮೀಸಲಾಗಿಡುತ್ತಿದ್ದು, ಅರಣ್ಯದ ಬೆಳವಣಿಗೆಗೆ ಹೆಚ್ಚು ಪ್ರಾಮುಖ್ಯತೆ

20 EC-VI, 36, ಕ್ರಿ.ಶ. 746.
21 EC-VI, 3.
22 EC-11, 162.
23 EC-5, 203, ಕ್ರಿ.ಶ. 1223.
24 EC-5, 244, ಕ್ರಿ.ಶ. 1210.

ಕೊಡಲಾಗುತ್ತಿತ್ತು. ಅರಣ್ಯಗಳು ನಾಶವಾಗದಂತೆ ನೋಡಿಕೊಳ್ಳಲಾಗುತ್ತಿತ್ತು. ಜನರಿಗೆ ನಿತ್ಯ ಬಳಕೆಗೆ ಅಗತ್ಯವಾದ ಉರುವಲು ಕಟ್ಟಿಗೆಯನ್ನು ಒದಗಿಸುವ ಗಿಡಗಳನ್ನೂ ಅರಣ್ಯಪ್ರದೇಶದಲ್ಲಿ ಬೆಳೆಸಲಾಗುತ್ತಿತ್ತು. ವನ್ಯಮೃಗಗಳಿಗೆ ಒಂದು ಆವಾಸಸ್ಥಾನವನ್ನು ದೊರಕಿಸಿಕೊಟ್ಟಂತಾಗಿತ್ತು."[25] ದೇಶದಾದ್ಯಂತ ಅಡವಿಗಳನ್ನು ಅಭಿವೃದ್ಧಿಪಡಿಸ ಬೇಕೆಂದು ಕೃಷ್ಣದೇವರಾಯನ ರಾಜನೀತಿಶಾಸ್ತ್ರ ಅಮುಕ್ತಮಾಲ್ಯದಾ (iv-256) ಹೇಳುತ್ತದೆ. ವನ ಬೆಳೆಸುವುದು ಬಹುಶಃ ವನದುರ್ಗಕ್ಕೆ ತಕ್ಕ ರಕ್ಷಣೆಯನ್ನೂ ನೀಡುತ್ತಿರಬೇಕು. ಅದರಲ್ಲೂ ಶುಕ್ರನೀತಿಯು 'ದಟ್ಟವಾದ ಅರಣ್ಯ, ಮುಳ್ಳು, ಮರಗಳಿಂದ ಆವೃತವಾಗಿರತಕ್ಕದೆಂದು ವನದುರ್ಗಕ್ಕೆ ಸಂಬಂಧಿಸಿದಂತೆ ಹೇಳುತ್ತದೆ.

ಕುದಗೋಡ ದುರ್ಗದ ಪ್ರಾಬಲ್ಯಕ್ಕೆ ಸುತ್ತಮುತ್ತಲಿನ ನಿಸರ್ಗ ಸಂಪತ್ತು ಪೂರಕವಾಗಿವೆ-ಎಂಬರ್ಥದಲ್ಲಿ ಕುರುಗೋಡಿನ ಶಾಸನವೊಂದು ಹೇಳುತ್ತದೆ.[26]

ವಿಹಾರಾರ್ಥವಾಗಿಯೂ ಈ ವನಗಳು ನಿರ್ಮಾಣವಾಗುತ್ತಿದ್ದಂತೆ ಕಂಡು ಬರುತ್ತದೆ. ವಿಜಯನಗರ-ಕೆಳದಿ ಅರಸರ ಕಾಲದಲ್ಲಿ ಸಾರ್ವಜನಿಕರಿಗೆ ಮತ್ತು ರಾಜರಿಗೆ ಪ್ರತ್ಯೇಕ ಉದ್ಯಾನಗಳಿದ್ದವು. ವಿಶೇಷ ಸಂದರ್ಭಗಳಲ್ಲಿ ರಾಜರ ಉದ್ಯಾನಗಳಿಗೆ ಪ್ರಜೆಗಳಿಗೆ ಪ್ರವೇಶ ದೊರೆಯುತ್ತಿತ್ತು[27] ಇಕ್ಕೇರಿ ಅರಮನೆಗೆ ಸಮೀಪ ರಾಜರಿಗೆ ಸಂಬಂಧಿಸಿದ ಒಂದು ಉದ್ಯಾನವಿತ್ತು.[28] ಕೆಳದಿ ಹಿರಿಯ ವೆಂಕಟಪ್ಪನಾಯಕನು ಆನಂದಪುರದ ಸಮೀಪ 'ಚಂಪಕಸರಸಿ' ಎಂಬ ಸರೋವರ ಮತ್ತು ಉದ್ಯಾನವನ್ನು, ಸಾಗರದ ಮಹಾಗಣಪತಿ ದೇವಾಲಯದ ಸಮೀಪ ಚಂದನವನ (ಚಂದ್ರ ಮಾವಿನ ಕೊಪ್ಪಲು) ವನ್ನೂ ಕೆಳದಿ ಅರಮನೆಗೆ ಸಮೀಪ 'ಸಂಪಕಟ್ಟೆ' ಎಂಬ ಕೆರೆ ಮತ್ತು ಮಾವಿನ ತೋಟವನ್ನೂ ನಿರ್ಮಿಸಿದ್ದನು.[29] "ಕ್ರಿ.ಶ. 1119 ರಲ್ಲಿ ಹಂಪೆಯಲ್ಲಿದ್ದ 'ದೇವದೋಟ'ವನ್ನು ನಿರ್ಮಾಣ ಮಾಡಿದ್ದು ಬಹುಶಃ 'ವಿರೂಪಾಕ್ಷ ತೀರ್ಥ'ದ ಸಂರಕ್ಷಣೆಗಾಗಿ ಕುರುಗೋಡಿನ ದೊರೆಗಳು ನೇಮಿಸಿದ್ದ ನಾಯಕ ಪಾಳೇಗಾರ ಮನೆತನದವರು"[30] ಎಂದು ಡಾ. ಎಂ. ಚಿದಾನಂದ ಮೂರ್ತಿಯವರು ಊಹಿಸುತ್ತಾರೆ. ಕ್ರಿ.ಶ. 1121 ರ ಶಾಸನವು ನಾಣಿಮಯ್ಯ ಎಂಬಾತನು ತನ್ನ 'ಅರವೆ'ಯಲ್ಲಿ ಅರ

---

25 ಹರಡಿಸಿರಿ-ಪುಟ-437.
26. 511.vol.9
27. ಉಧೃತ, ಇತಿಹಾಸ ದರ್ಶನ-6, ಪುಟ-143
28. ಅದೇ., ಪುಟ-144
29. ಅಲ್ಲೇ.,
30. ಹೊಸತು ಹೊಸತು-ಪುಟ-315

ವಟ್ಟಿಗೆಯನ್ನಿಟ್ಟಿದ್ದನೆಂದು ಹೇಳುತ್ತದೆ.[31] ಕ್ರಿ.ಶ. 3ನೇ ಶತಮಾನದ ಬನವಾಸಿ ನಾಗರಕಲ್ಲಿನ ಪ್ರಾಕೃತ ಶಾಸನವು 'ಸಿವಖಡನಾಗಸಿರಿ' ಎಂಬುವಳು ನಾಗಪ್ರತಿಮೆ. ಕೆರೆ ಹಾಗೂ ವಿಹಾರಗಳನ್ನು ಧರ್ಮಾರ್ಥವಾಗಿ ದಾನಮಾಡಿದ್ದನ್ನು ತಿಳಿಸುತ್ತದೆ.[32]

ಅಶೋಕನು ರಸ್ತೆ ಪಕ್ಕದಲ್ಲಿ ಮರಗಳನ್ನು ನೆಡಿಸಿದನೆಂಬುದು ಬಹುಶಃ ಎಲ್ಲಾ ಅಧಿಕಾರ ವರ್ಗದವರಿಗೆ ಮಾದರಿ ಎನಿಸಿರುವುದರಲ್ಲಿ ಅಸಹಜವೇನೂ ಇಲ್ಲ.

ದೇವಾಲಯ : ನಾಗರಿಕ ಸಮಾಜದಲ್ಲಿ ಮಾನವನ ಬದುಕಿಗೆ ಧಾರ್ಮಿಕ, ಸಾಂಸ್ಕೃತಿಕ ಮತ್ತು ಮುಖ್ಯವಾಗಿ ಶೈಕ್ಷಣಿಕವಾಗಿ ದೇವಾಲಯಗಳು ವಿಶೇಷ ಪಾತ್ರ ವಹಿಸಿವೆ. ದೇವಾಲಯವು ಶ್ರದ್ಧೆ-ನಿಷ್ಠೆಯಂಥ ಭಾವುಕತೆಯನ್ನುಂಟು ಮಾಡು ತ್ತಿದ್ದುದರಿಂದ ಅದು ಮಠವಾಗಿ ಧರ್ಮ ಬೋಧನೆಯನ್ನು, ವಿದ್ಯಾಕೇಂದ್ರವಾಗಿ ಶಿಕ್ಷಣ ವನ್ನೂ, ನ್ಯಾಯಾಲಯವಾಗಿ ಕಾನೂನನ್ನೂ, ವೈದ್ಯಶಾಲೆಯೂ (ತಮಿಳುನಾಡಿನಲ್ಲಿ ಇಂಥ ಒಂದು ಉದಾಹರಣೆಯಿದೆ.) ಆಗಿ ಆರೋಗ್ಯ-ವರ್ಧನೆಯನ್ನು ಉಂಟುಮಾಡುವ ಒಂದು ಸಾಮಾಜಿಕ ಸಂಸ್ಥೆಯಾಗಿತ್ತು. ದೇವಾಲಯಗಳು ಕೇವಲ ಉಳ್ಳವರ ಕಾಣಿಕೆ ಯಾಗಿರದೆ ಅಂದಿನ ಜನಗಳ ಮನೋಸ್ವಾಸ್ಥ್ಯವನ್ನು ಕಾಪಾಡುವ ವೇದಿಕೆಯೂ ಆಗಿತ್ತು. "ನಗರ ಹಾಗೂ ಗ್ರಾಮ ಅಥವಾ ಅಗ್ರಹಾರಗಳ ಸರ್ವತೋಮುಖ ಅಭಿವೃದ್ಧಿಯಲ್ಲಿ ದೇವಸ್ಥಾನವು ವಹಿಸಿದ ಪಾತ್ರವನ್ನು ಮರೆಯುವಂತಿಲ್ಲ. ಅದು ಧಾರ್ಮಿಕ ಕೇಂದ್ರವಾಗಿದ್ದುದಲ್ಲದೆ, ಸಾರ್ವಜನಿಕ ಕಾರ್ಯಗಳಲ್ಲಿ ಮಹತ್ವದ ಸ್ಥಾನ ಪಡೆದಿದ್ದಿತು. ದೇವಸ್ಥಾನವು ಬೃಹತ್ ಪ್ರಮಾಣದಲ್ಲಿ ಉದ್ಯೋಗ ಕೇಂದ್ರವಾಗಿದ್ದು ಎಷ್ಟೋ ಜನರಿಗೆ ಉದ್ಯೋಗ ದೊರಕಿಸಿಕೊಡುತ್ತಿದ್ದಿತು. ವ್ಯವಸಾಯದ ಅಭಿವೃದ್ಧಿ ಯನ್ನು ನೋಡಿಕೊಳ್ಳುತ್ತಿದ್ದಿತು. ದೇವಸ್ಥಾನಕ್ಕಾಗಿ ಬಿಟ್ಟ ಭೂಮಿಯನ್ನು ಯೋಗ್ಯರೀತಿಯಿಂದ ರೈತರಿಗೆ ಸಾಲವನ್ನು ಕೊಡುವ ಪದ್ಧತಿಯಿದ್ದಿತು."[33] ಇದು ದೇವಸ್ಥಾನಗಳ ಸಾಮಾಜಿಕ ಪಾತ್ರದ ಸಮಗ್ರ ಚಿತ್ರವಾಗಿದೆ.

ಪ್ರಾಚೀನ ಕರ್ನಾಟಕದಲ್ಲಿ ದೇವಾಲಯ ನಿರ್ಮಾಣದಲ್ಲಿ ಹೆಚ್ಚಿನ ಔದಾರ್ಯವಿತ್ತು. ಆದ್ದರಿಂದ ಒಂದು ಶಾಸನದ ದಾಖಲೆಯನ್ನು ಇಲ್ಲಿ ಪ್ರಾತಿನಿಧಿಕವಾಗಿ ನೋಡುವುದು ಸರಿಯೆನಿಸುತ್ತದೆ.

ಹೆಬ್ಬೆಯ ನಾಯಕನೆಂಬುವನಿಗೆ ದೇವಸ್ಥಾನ ನಿರ್ಮಾಣಕ್ಕೆ ಒದಗಿ ಬಂದ ಪ್ರಚೋದನೆಯ ಸಂದರ್ಭವನ್ನು ಒಂದು ಶಾಸನವು ವಿವರಿಸುತ್ತದೆ. ಅವನು ಯಾವುದೋ ಕಥಾಗೋಷ್ಠಿಯಲ್ಲಿ ಭಾಗವಹಿಸಿ ಧರ್ಮಶ್ರವಣವನ್ನು ಮಾಡು

31. Bkl. I. ii. 196.
32. EI, xxxiv, 38, - ಪುಟ-239.
33. ಹರತಿಸಿರಿ – ಪುಟ - 436

ತ್ತಿದ್ದಾನೆ." ಎಲ್ಲ ಸಂಪತ್ತುಗಳಿಗೂ ಪುಣ್ಯವೇ ಮೊದಲು ಎಲ್ಲ ಪುಣ್ಯಕ್ಕೂ ಈಶ್ವರ ಪ್ರತಿಷ್ಠೆಯೇ ಮೊತ್ತಮೊದಲು. ಆ ಪುಣ್ಯದ ಬಳಿವಿಡಿದು ಎಲ್ಲ ಪುಣ್ಯಗಳೂ ಬರುತ್ತವೆ. ವ್ಯಕ್ತಿ ಯಾವ ದೇವತೆಯ ಪ್ರತಿಷ್ಠೆಯನ್ನು ಮಾಡಿಸುವನೋ, ಆ ದೇವತೆಗೆ ಆವನ ಹೆಸರು ಬರುತ್ತದೆ. ಈಶ್ವರನ ಪ್ರತಿಷ್ಠೆ ಮಾಡಿಸಿದರೆ ಆವನು ಈಶ್ವರನೇ ಆಗುತ್ತಾನೆ. ಎಂಬುದನ್ನು ದೇವರಿಗೆ ಆವನ ಹೆಸರೇ ರೂಢವಾಗುವುದರ ಮೂಲಕ ತಿಳಿದುಕೊಳ್ಳಬಹುದು. ಮರ, ಇಟ್ಟಿಗೆಗಳಲ್ಲಿ ಕಟ್ಟಿಸುವುದಕ್ಕಿಂತ ಶಿಲೆಯಲ್ಲಿ ದೇವ ಸ್ಥಾನವನ್ನು ಕಟ್ಟಿಸುವುದು ಹೆಚ್ಚು ಫಲವನ್ನು ಕೊಡುತ್ತದೆ......"[34] ಭಕ್ತಿ ಭಾವ ದಿಂದ ಹೆಬ್ಬೇಶ್ವರನನ್ನು ಪ್ರತಿಷ್ಠಿಸಿ, ಶಿಲೆಯಲ್ಲಿ ದೇವಸ್ಥಾನವನ್ನು ಕಟ್ಟಿಸುತ್ತಾನೆ. ಇಂಥ ದೇವಾಲಯಗಳನ್ನು ಕೆಲವು ಶಾಸನಗಳು 'ವಿದ್ಯಾವನ್ತರ ಮನೆ',[35] ರಂಗ ಭೋಗದ ವಿದ್ಯಾವಂತರು'[36] ಎಂದು ಕರೆದಿರುವುದರಲ್ಲಿ ಸಂಗೀತ ಶಿಕ್ಷಣಗಳಿಗೆ ಸಂಬಂಧಿಸಿದಂತೆ ದೇವಾಲಯಗಳು ಪ್ರತಿಸ್ಪಂದಿಸುತ್ತಿದ್ದುದನ್ನು ಗಮನಿಸಬಹುದು. ಕ್ರಿ.ಶ.ಸು. 150 ರ ಶಾಸನ ಒಂದು ದೇವಾಲಯ 'ಮಹಾ ಮುನಿಗಳ ವಾಸಸ್ಥಾನ' ವಾಗಿತ್ತೆಂದು ಹೇಳುತ್ತದೆ.[37]

ಅಗ್ರಹಾರ : "ಅಗ್ರಹಾರವೆಂದರೆ ಶ್ರೇಷ್ಠರಿಗೆ ಕೊಟ್ಟಿರುವ ಸ್ಥಳ ಅಥವಾ ಊರು"[38] ಎಂದರ್ಥ. "ಕದಂಬರ ಅನೇಕ ತಾಮ್ರಪಟಗಳು ವೈದಿಕರಿಗೆ ಕೊಟ್ಟ ದತ್ತಿಗಳನ್ನು ಹೇಳುತ್ತವೆ."[39] "ಕದಂಬರಾಜ ಶ್ರೀವೀರಸೋಮ ಭೂಮಿ ಪತಿಯು ಮೂರುಹಳ್ಳಿಗಳೊಡಗೂಡಿದ ಕೆಲ್ಲಿಗುಂಡ ಎಂಬ ಗ್ರಾಮದ ಸರ್ವಸಾಮ್ಯವನ್ನು ಎಪ್ಪತ್ತಾರು ಬ್ರಾಹ್ಮಣರಿಗೆ ಬಿಟ್ಟುಕೊಡುತ್ತಾನೆ."[40] ಇದು ರಾಜಮನೆತನಗಳಿಂದ ನಡೆಯುತ್ತಿರುವ ದತ್ತಿ ಅಗ್ರಹಾರವಾದರೆ, "ತಮ್ಮ ಊರು ವಿದ್ವಾಂಸರ ನೆಲೆವೀಡಾಗ ಬೇಕೆಂದು ಆ ಊರಿನ ಜನರು ಸೇರಿ ವಿದ್ವಾಂಸನಾದವನಿಗೆ ದತ್ತಿಗಳನ್ನು ಬಿಟ್ಟು ಕೊಟ್ಟಿದ್ದಾಗಿ"[41] ಕ್ರಿ.ಶ. 980ರ ಒಂದು ಶಾಸನ ತಿಳಿಸುತ್ತದೆ. "ವಿಷ್ಣುವರ್ಧನ ಹೊಯ್ಸಳನು ತನ್ನ ತಮ್ಮ ಉದಯಾದಿತ್ಯದೇವನ 'ಪರೋಕ್ಷ ವಿನಯ'ಕ್ಕಾಗಿ ಕೆಲವತ್ತಿ

---

34. KII. 25, ಕ್ರಿ.ಶ. 1186. ಉಧೃತ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ- ಪುಟ-176-17)
35. EC - 6, 161, ಕ್ರಿ.ಶ. 1063.
36. ಅದೇ., 124, ಕ್ರಿ.ಶ. 1133.
37. EC VII. 263, ಕ್ರಿ.ಶ. 150.
38. ಶಬ್ದವಿಹಾರ, ಡಿ.ಎಲ್.ಎನ್. ಪುಟ-55-61.
39. EC-V. 245, ಕ್ರಿ.ಶ. 420
40 EC VII. 117, ಕ್ರಿ.ಶ. 1118.
41 BKI. I. i. 45, ಕ್ರಿ.ಶ. 980.

ಎಂಬ ಊರನ್ನು ಅಗ್ರಹಾರವಾಗಿ ಮಾಡಿ, ಅದನ್ನು ಹದಿನೆಂಟು ವೃತ್ತಿಗಳಾಗಿ ವಿಂಗಡಿಸಿ ಬ್ರಾಹ್ಮಣರಿಗೆ ಧಾರಾಪೂರ್ವಕವಾಗಿ[42] ಕೊಡುವುದನ್ನು ಹೇಳುವ ಕ್ರಿ.ಶ. 1123ರ ಶಾಸನವು ಅಗ್ರಹಾರಕ್ಕೆ ಸಂಬಂಧಿಸಿದಂತೆ ಒಂದು ಉತ್ತಮ ಉದಾಹರಣೆ.

ಅಗ್ರಹಾರದ ದತ್ತಿಕಾರ್ಯ ಪ್ರಾಚೀನ ಕರ್ನಾಟಕದಲ್ಲಿ ಸಮಾಜದ ವಿವಿಧ ಸ್ತರದವರಿಂದ ನೆರವೇರಿಸಲ್ಪಟ್ಟ 'ವಿದ್ಯಾವಂತಿಕೆ'ಯನ್ನು ಜೀವಂತವಾಗಿಟ್ಟದ್ದಾಗಿ ಕಂಡುಬರುತ್ತದೆ.

ಪುತ್ರ : ಸಂವೈಧಾನಿಕ ರಾಜತ್ವದಿಂದ ಆನುವಂಶಿಕ ರಾಜತ್ವಕ್ಕೆ ರಾಜತ್ವದ ವಿಕಾಸವಾಗತೊಡಗಿದಂತೆ ಉತ್ತರಾಧಿಕಾರಿ ಸ್ಥಾನಕ್ಕಾಗಿ ರಾಜ ತನ್ನ ಮಗ ಅಥವಾ ತನ್ನ ವಂಶದ ಯೋಗ್ಯನೊಬ್ಬನನ್ನು ಆರಿಸುವುದು ಮೊದಲಾಯಿತು. "ಮೊದಮೊದಲು ಆರ್ಯರು......ಹೊರಗಿನ ಶತ್ರುಗಳ ಭಯ ತಗ್ಗಿದ ಮೇಲೆ ರಾಜತ್ವಕ್ಕಾಗಿ ತಮ್ಮಲ್ಲಿಯೇ ಅಂತಃಕಲಹಗಳು ತಲೆದೋರಿದಂತೆ ತೋರುತ್ತದೆ. ಈ ಜಗಳವನ್ನು ತಪ್ಪಿಸುವುದಕ್ಕಾಗಿ ವಂಶಪಾರಂಪರ್ಯವಾದ ರಾಜತ್ವರೂಢಿಗೆ ಬಂದಿರಬೇಕು."[43] ಎಂಬ ವೇದದ ಮಾತೂ ಮತ್ತು......"ಕಾಲಕ್ರಮೇಣ ಭರತ, ಕುರು–ಪಾಂಚಾಲ, ಕಾಶಿ ಮುಂತಾದ ರಾಜ ವಂಶದವರು ಪ್ರಬಲರಾಗಿ ರಾಜ್ಯಗಳನ್ನು ವಿಸ್ತರಿಸುತ್ತ ಬಂದುದರಿಂದ ರಾಜಪದವಿ ವಂಶಕ್ರಮವಾಗಿ ಬಂದಿತು."[44] ಎಂಬ ರಾಮಾಯಣದ ಮಾತುಗಳ ಹಿನ್ನೆಲೆಯಲ್ಲಿ ಉತ್ತರಾಧಿಕಾರಿಯಾಗಬಹುದಾದ ಮಗನ ಬಗ್ಗೆ ವಿಶೇಷ ಆಸ್ಥೆ ತೋರುವುದು ಮೊದಲಾಯಿತು.

ಹಿರಿಯ ಮಗನು ಹುಟ್ಟಿದಾಗ ತಂದೆಯು ತನ್ನ ಪಿತೃಗಳ ಋಣದಿಂದ ಮುಕ್ತನಾಗುವನೆಂದು ಮನುಸ್ಮೃತಿ (9–106) ಹೇಳುತ್ತದೆ. ಕನ್ನಡದ ಒಂದು ಶಾಸನವು ಈ ಮಾತಿಗೆ ಪೂರಕವಾಗಿ 'ತಂದೆ ಮಾಡಿದ ಧರ್ಮವನ್ನು ಕಾಪಾಡಿಕೊಂಡು ಬರುವವನು ಗಂಡುಮಗನೇ'[45] ಎಂದು ಹೇಳುತ್ತದೆ. ಆದ್ದರಿಂದ 'ರಾಜನಿಗೆ ಪುತ್ರೋತ್ಸವವಾದಾಗ ಆ ಸಂತೋಷದ ಕುರುಹಾಗಿ ಸೆರೆಮನೆಯ ಅನೇಕ ಬಂಧಿಗಳನ್ನು ಬಿಡುಗಡೆ ಮಾಡಿಸುತ್ತಿದ್ದನು. ಎಂದು ಅಜಿತಪುರಾಣವು (4–7) ಈ ಸಂಬಂಧವಾಗಿ 'ಭೂನಾಯಕರಿಂದ ಬಿಡಿಸಿ ಬಿಟ್ಟ ಬಹುಮಂದಿಯುಂ। ಪಲವಗ್ರಹಾರಮಂ ಕುಡೆ ಪಡೆವ ಪಾರ್ವರಿ' ಎಂದು ಹೇಳುತ್ತದೆ.

---

42 ECV. 102, ಕ್ರಿ.ಶ. 1123.

43 ಕಅಸಂ.ಯ ಕನ್ನಡ ಸಾಹಿತ್ಯ ಚರಿತ್ರೆ-1, ಪುಟ-105.

44 ರಾಮಾಯಣ, ಅಯೋಧ್ಯಾಪರ್ವ. 2-19, 20.

45 EC VII, 287, ಕ್ರಿ.ಶ. 1012.

ಮತ್ತೊಂದು ಶಾಸನವು 'ರಾತ್ರಿಗೆ ಚಂದ್ರನು ದೀಪಕ, ಪ್ರಾತಃಕಾಲಕ್ಕೆ ಸೂರ್ಯನು ದೀಪಕ. ಮೂರೂ ಲೋಕಗಳಿಗೆ ಧರ್ಮವು ದೀಪಕ. ಕುಲಕ್ಕೆ ಸುಪುತ್ರನು ದೀಪಕ.[46] ಎಂದು ತಿಳಿಸುತ್ತದೆ.

ತನ್ನ ಒಡೆಯನಿಗೆ ಪುತ್ರ ಸಂತಾನವಾಗಲಿ ಎಂದು ಹರಕೆ ಹೊತ್ತು, ಆ ಹರಕೆ ಈಡೇರದಿದ್ದಾಗ ತಮ್ಮನ್ನು ಆತ್ಮಬಲಿಗೆ ತೊಡಗಿಸಿಕೊಂಡ ಉದಾಹರಣೆಗಳು ನಮಗೆ ಸಿಕ್ಕುತ್ತವೆ.

ಉದಾ : "ಅರಸಿಗೆ ಗಂಡುಮಗನಾಗಲಿ ಎಂಬ ಹರಕೆ ಹೊತ್ತು 'ಅಕಟೆ' ಎಂಬುವನು ಶಿರವನ್ನು ಕತ್ತರಿಸಿಕೊಂಡ ವಿಷಯ ಕ್ರಿ.ಶ. 991ರ ಹೆಚ್ಚಿ ಶಾಸನದಲ್ಲಿದೆ."[47]

"ಮಹಾಸಾಮಂತ ಬೊಪ್ಪರಸನ ರಾಣಿ ಮಾಯಾದೇವಿ ಗಂಡು ಹಡೆಯಬೇಕೆಂದು ತೊಂಡಸ ಬಾವಿಯ ಬ್ರಹ್ಮದೇವರಿಗೆ ಹರಕೆ ಹೊತ್ತು ದೇಕೆಯ ನಾಯಕ ಸಿಡಿದೆಲೆ ಕೊಟ್ಟುದ್ದನ್ನು ಒಂದು ಶಾಸನ ಹೇಳುತ್ತದೆ."[48]

ಪುತ್ರ ಅಥವಾ ರಾಜನ ನಂತರ ಬರುವ ಉತ್ತರಾಧಿಕಾರಿ ಕೇವಲ ರಾಜನಿಗೆ ಮಾತ್ರ ಮಗನಾಗಿರದೆ ರಾಜ್ಯಕ್ಕೆ ಮಗನಾಗಿದ್ದ ಎಂಬ ಭಾವನೆ ನಮ್ಮ ಪ್ರಾಚೀನರಿಗಿತ್ತು.

ಸಾಹಿತ್ಯ : ಯಾವುದೇ ನಾಡಿನ ಸಾಹಿತ್ಯ ಚರಿತ್ರೆಯಲ್ಲಿ ರಾಜಾಶ್ರಯದ ಸಾಹಿತ್ಯ ಒಂದು ಪ್ರಮುಖವಾದ ಮತ್ತು ಬಹುಭಾಗವಾಗಿರುತ್ತದೆ. ಕನ್ನಡ ಸಾಹಿತ್ಯದ ಬೆಳವಣಿಗೆಯಲ್ಲಿ ರಾಜಾಶ್ರಯದ ಪಾತ್ರವು ಮಹತ್ವಪೂರ್ಣವೆನಿಸುತ್ತದೆ. ಕನ್ನಡ ಸಾಹಿತ್ಯ ವಿಂಗಡಣೆಯಲ್ಲಿ 'ರಾಜಾಶ್ರಯ', 'ರಾಜಸತ್ತೆ'ಗಳು ಒಂದು ಮಾನದಂಡ ವಾಗಿರುವುದು ಈ ಸಂದರ್ಭದಲ್ಲಿ ಗಮನಾರ್ಹವಾದುದು.

ಸಪ್ತಸಂತಾನಗಳಲ್ಲಿ ಸತ್ಕಾವ್ಯರಚನೆಯೇ ಅತ್ಯಂತ ಮೌಲಿಕವಾದುದು ಎಂಬುದು ಇಲ್ಲಿ ಮುಖ್ಯವಾದುದು. "ತಾನು ಬರೆವುದಲ್ಲದೆ ಬರೆಯುವವರಿಗೆ ಆಶ್ರಯ ನೀಡು ವುದರ ಮೂಲಕ ಗ್ರಂಥೋತ್ಪಾದನೆ ರಾಷ್ಟ್ರದ ಉತ್ಪಾದನೆಗಳಲ್ಲಿ ಒಂದು ಎಂದು ನಮ್ಮ ರಾಜವರ್ಗ ಭಾವಿಸಿದ್ದುದು ತುಂಬಾ ಬೆಲೆಯುಳ್ಳ ವಿಚಾರವಾಗಿದೆ.[49]

---

46 EC VI. 94, ಕ್ರಿ.ಶ. 1060.
47 EC–VIII. 416–ಕ್ರಿ.ಶ. 991.
48 MAR–1914-15, ಪುಟ-32.
49 ಸಾಹಿತ್ಯ ಸಂಪಾದನೆ–ಡಾ. ಎಂ. ಎಂ. ಕಲಬುರ್ಗಿ, ಪುಟ-3.

ಒಂದು ನಾಡಿನ ಸಂಸ್ಕೃತಿಯ ಸಮರ್ಥ ಅಭಿವ್ಯಕ್ತಿಯಾದ ಸಾಹಿತ್ಯ ಅರಮನೆಯ ಸ್ನೇಹ-ಸಂಬಂಧವಾಗಿ ಕರ್ತವ್ಯದ ಕಕ್ಷೆಯಲ್ಲಿ ಬಂದದ್ದು ರಾಜನ ಪ್ರಣಾಳಿಕೆಯ ಅತ್ಯುತ್ತಮ ಬೆಳವಣಿಗೆಯಾಗಿದೆ.

ನಿಧಿ: ನಿಧಿ ಸಂಗ್ರಹ ಬಹುಶಃ ಅತಿವೃಷ್ಟಿಯಿಂದಲೋ ಅನಾವೃಷ್ಟಿಯಿಂದಲೋ ನಾಡು ದಿಗ್ಭ್ರಮೆಗೊಂಡಾಗ ಆರ್ಥಿಕ ನೆರವಿಗೆ ಈ ಧನ ನಿಕ್ಷೇಪ ಆಪದ್ಬಾಂಧವನಂತೆ ಕೆಲಸ ಮಾಡುತ್ತಿತ್ತು. ರಾಜ್ಯದ ಯಾವುದೇ ದುರ್ಭರ ಪ್ರಸಂಗವನ್ನು ಈ ನಿಧಿ ತುಂಬಬಲ್ಲುದಾಗಿತ್ತು. ರಾಜ್ಯದ ಸಪ್ತಾಂಗಗಳಲ್ಲಿ ಬರುವ ಕೋಶ ಮತ್ತು ಸಪ್ತಸಂತಾನಗಳಲ್ಲಿ ಬರುವ ನಿಧಿ ಒಂದೇ ಆಗಿರಬೇಕು.

ಧರ್ಮನಿಧಿ ಎಂಬುದು ಸತ್ರ, ವಿದ್ಯೆ ಇತ್ಯಾದಿ ಸಾಮಾಜಿಕ, ಶೈಕ್ಷಣಿಕ ಯೋಜನೆಗಳಿಗೆ ರಾಜ ಬೊಕ್ಕಸದಿಂದ ಬಳಸುತ್ತಿದ್ದ ಧನರೂಪದ ನಿಧಿಯಾಗಿರಬೇಕು. ದೇವಾಲಯ–ಅಗ್ರಹಾರಗಳ ನಿರ್ಮಾಣ ಮತ್ತು ದಾನದತ್ತಿಗಳಂಥ ಸಾಂಸ್ಕೃತಿಕ ಚೌಕಟ್ಟಿನ ಒಳಗೆ ಬರುತ್ತಿದ್ದ ಚಟುವಟಿಕೆಗಳಿಗೆ ಮೀಸಲಿದ್ದ ಧನವೇ ಈ ನಿಧಿಯಾಗಿರುವ ಸಾಧ್ಯತೆಯಿದೆ. ಇದು ತೆರಿಗೆ-ಕರ ಇತ್ಯಾದಿಗಳಿಂದ ಸಂಗ್ರಹವಾಗುತ್ತಿರಬೇಕು.

ಒಟ್ಟಾರೆಯಾಗಿ ಸಪ್ತಸಂತಾನಗಳನ್ನು ನಮ್ಮ ರಾಜರ, ಪ್ರಾಚೀನರ ಮುಂದಿಟ್ಟು ನೋಡಿದಾಗ ಪ್ರತ್ಯೇಕವಾಗಿ ಆ ಎಲ್ಲಾ ಕಾರ್ಯಗಳನ್ನು ನೆರವೇರಿಸಿರುವುದು ಸ್ಪಷ್ಟವಾಗುತ್ತದೆ. ರಾಜರೇ ಕವಿಗಳಾಗಿ, ಸಾಮಾಜಿಕ ಸೇವಾಧುರಂಧರರಾಗಿರುವುದು; ರಾಜ ಮಾಡಬಹುದಾದ ಕಾರ್ಯಗಳನ್ನು ಜನಸಾಮಾನ್ಯರೂ ಆಸಕ್ತಿ ವಹಿಸಿ ಮಾಡಿರುವುದು ಕಂಡುಬರುತ್ತದೆ. ಈ ಸಪ್ತಸಂತಾನಗಳು ಕರ್ನಾಟಕದಲ್ಲಿ ಪ್ರತ್ಯೇಕವಾಗಿ ಮಾಡಲ್ಪಟ್ಟಿದ್ದರೂ ಅವೆಲ್ಲವುಗಳೂ ಪರಸ್ಪರ ಅವಲಂಬಿತವಾಗಿ ಅಂದಿನ ಸಮಾಜಕ್ಕೆ ಕಳೆ ನೀಡಿವೆ.*

---

* ಸಂಡೂರಿನಲ್ಲಿ ನಡೆದ ೪ನೇ ಇತಿಹಾಸ ಸಮ್ಮೇಳನದಲ್ಲಿ ಮಂಡಿಸಿದ ಸಂಪ್ರಬಂಧವಿದು.

ಡಾ. ವಿಜಯಕುಮಾರ ಮಹಾನುಭಾವಿಗಳು

ಬೆಳಕಾಗಲಿ ಅರಿವಾಗಲಿ ತನು ಮನವೆಲ್ಲ
ಹೂವಾಗಲಿ ಚೆಲುವಾಗಲಿ ಕಣ ಕಣವೆಲ್ಲ

ಈ ಭಾಷೆಯು ಈ ಮಣ್ಣಿನ ಈ ಸಂಸ್ಕೃತಿ ಇಲ್ಲಿ
ಈ ಜನಗಳ ಈ ವನಗಳ ಇತಿಹಾಸವು ಇಲ್ಲಿ
ಈ ನಾಡಿನ ಇತಿಹಾಸವು ಅರಳಿತು ಇಲ್ಲಿ
ಭಾರತ ಭವಿತವ್ಯವು ಬೆಳಗಿತು ಇಲ್ಲಿ.

ಈ ಜನಗಳ ಈ ಪ್ರೀತಿಯು ಈ ನುಡಿ ಚೆನ್ನ
ಈ ಹೃದಯದ ಈ ಒಲುಮೆಯ ಈ ಸ್ನೇಹವು ಚೆನ್ನ
ಸುಜ್ಞಾನವು ಬೆಳಗಿರಲಿ ಕನ್ನಡ ಜನರನ್ನ
ಶುಭವಾಗಲಿ ಬದುಕೆಲ್ಲವು ಕಳೆದ್ಹೋಗಲಿ ಬನ್ನ.

ಜನ ಬದುಕಲು ಮಹಾಕಾವ್ಯದ ಬರೆದುದು ಇಲ್ಲಿ
ಜನ ಹಿಗ್ಗುತ ನಲಿದಾಡುತ ಹಿರಿದಾದರು ಇಲ್ಲಿ
ಕನ್ನಡ ಧ್ವಜ ಹಾರಲಿ ಭೂಮಂಡಲವೆಲ್ಲ
ಕನ್ನಡ ಜನರಾಗಲಿ ಸಜ್ಜನ ಸದ್ಹೃದಯ.

ಇತಿಹಾಸದ ಪುಟವೆಲ್ಲವು ಕವಿ ಕವಿಗಳ ಕಾವ್ಯ
ಕಾವ್ಯದ ತಿರುಳೆಲ್ಲವು ಕನ್ನಡ ಜನ ಹೃದಯ
ಸದ್‌ಭಕ್ತಿಯ ಸುಜ್ಞಾನವು ಬಾನೆತ್ತರ ಭುವಿಅಗಲ
ಅವತಾರವು ಇಲ್ಲಾಯಿತು ಈ ನಾಡಿದು ಸಫಲ.

ಮೇಲೆದ್ದರು ಜಿನ ಬುದ್ಧರು ಬೆಳಕಾದರು ಧರೆಗೆ
ಇಲ್ಲಾದರು ಶರಣಾದರು ಪರಮಾರ್ಥದ ಪಥಕೆ
ಪ್ರಭುದೇವರು ಗುರು ರೇವಣ ಜಯವೆಂದರು ಶುಭಕೆ
ಬಸವಣ್ಣರ ಮಹಾದೇವಿಯ ಬೆಳಕೊದಗಿತು ನಮಗೆ

ಕನಕಪುರಂದರ ಶಂಕರ ರಾಮಾನುಜ ಮಾಧ್ವರು ಇಲ್ಲಿ
ಪಥ ತೋರುತ ಕುಹೂ ಕೂಗುತ ಕೋಗಿಲೆ ದನಿ ಇಲ್ಲಿ
ಸರ್ವಜ್ಞನು ನಡಿದಾಡಿದ ಜಗವಿದು ಮಾನ್ಯ
ಬಯಲ ಮಾನಸ ದೇವಗೆ ಶರಣಾಗುತ ಧನ್ಯ.

ಕಾಯಕಾಂತಾರ

ಕಾಯ ಕಾಂತಾರದೊಳಗೆ ಜೀವಾತ್ಮನೊಂದ
ಹುಲಿ ಮೃಗಗಳ ಹಾವಳಿಯಿಂದ
ಭವ ಭವದೊಳು ಬಲು ನೊಂದು ಬೆಂದು
ಬರುತಿಹನು ತಪಕಾಗಿ ಜೀವಾತ್ಮ ನಿಂದು.

ಬಲುಧ್ಯಾನದಿ ತಪವನ್ನು ನಡೆಸಿ
ಇಂದ್ರಿಯಗಳಿಗೆಲ್ಲ ವಿಷಯವ ಬಿಡಿಸಿ
ಸರ್ಪವು ಹೆಡೆ ಎತ್ತಿ ಮೇಲೇರಿಬಂತು
ಉಡುಗಿತು ಧೈರ್ಯವು ಪ್ರಾಣವು ನಿಂತು.

ಮುಕ್ತಿಯ ಪಥ ಸಿಗದೆ ದಿಕ್ಕೆಟ್ಟು ನಿಂದ
ಬೆನ್ನಟ್ಟಿ ಬಂದವು ಮದಗಜವು ಬಹಳ
ಚಿರತೆಯ ಧಾಳಿಯು ಬಲು ಏರಿ ಬಂದು
ಕೆಡೆದುದು ಎನ್ನಾತ್ಮ ಕುರಂಗವು ಇಂದು.

ಅರಿವೆಂಬ ಗುರು ತಾನು ಬಂದ
ಮಂತ್ರಿಸಿ ಎದ್ದೇಳು ಕರವೆತ್ತಿ ಹಿಡಿದ
ಬಿಗಿ ಹಿಡಿಯೊ ಮನದೊಳಗೆ ಶಿವ ಶಿವ ಮಂತ್ರ
ಬಯಲ ಮಾನಸ ದೇವನ ಒಲಿಸುವ ತಂತ್ರ.

ಶಾಬ್ದಿಕ ಸಂವಹನದಲ್ಲಿ ವಾಗ್ವೈಖರಿಯ ಪಾತ್ರ

ಅನು : ನಾರಾಯಣಸ್ವಾಮಿ

ವಾಗ್ವೈಖರಿಯು ಧ್ವನಿ ಪದ್ಧತಿ. ಪದ ರಚನೆ ಮತ್ತು ವಾಕ್ಯ ರಚನೆಗೆ ಸಂಬಂಧಪಟ್ಟ ಅಂಶಗಳ ಜೋಡಣೆ ಮತ್ತು ಆಯ್ಕೆಯಾಗಿದ್ದು, ಅಮಿತ ಹಾಗೂ ಸಂಕೀರ್ಣ ವಸ್ತು ಮತ್ತು ಸ್ವರೂಪವನ್ನು (form and Content) ರಚನೆಯ ಮಟ್ಟದಲ್ಲಿ ಕೂಡಿಸುವುದೆಂದು ಭಾವಿಸಲಾಗಿದೆ. ಭಾಷಾವಿಜ್ಞಾನವೂ ಸೇರಿದಂತೆ ಹಲವಾರು ಶಿಸ್ತುಗಳ ಮುಖ್ಯ ಒಲುವು ಮತ್ತು ಸಂಶೋಧನಗೆ ವಾಗ್ವೈಖರಿ ಒಂದು ಮಹತ್ವದ ವಿಷಯುವಾಗಿದೆ.

ಭಾಷೆಯ ವಿವಿಧ ಕಾರ್ಯಗಳು

ಸಂವಹನದ ಪ್ರಮುಖ ಅಂಶಗಳಾದ ಹೇಳುವವ (the source) ಹಾಗೂ ಕೇಳುವವ (the Receptors) ಮತ್ತು ಸಂದೇಶಗಳಿಗೆ ಸಂಬಂಧಿಸಿದ ಭಾಷೆಯ ಪ್ರಮುಖ ಕಾರ್ಯಗಳ ಸಂದರ್ಭದಲ್ಲಿ ಸಂವಾದದ ನಿಷ್ಕರ್ಷಕ ಅಂಶವಾದ ವಾಗ್ವೈಖರಿಯನ್ನು ಗಮನಿಸಬೇಕಾಗಿದೆ. ಪ್ರಥಮವಾಗಿ ಮೂಲದ (Source) ಒಲವು ಮತ್ತು ಆಸಕ್ತಿಗಳಿಗೆ ಸಂಬಂಧಿಸಿದ ಭಾಷಿಕ ಕಾರ್ಯಗಳನ್ನು ಅಭಿವ್ಯಕ್ತಿಸುವ ಹಾಗೂ ಗ್ರಹಿಸುವ (Signifive) ಕ್ರಿಯೆಗಳಾಗಿ ವಿಭಾಗಿಸಬಹುದು ಮತ್ತು ಉದ್ದಿಷ್ಟ ಭಾಷೆಗೆ ಸಂಬಂಧಿಸಿದ ಕಾರ್ಯಗಳು (Informative Imperative Performative ಮತ್ತು Emotive ಗಳಗಿದ್ದು ಇವಕ್ಕೆ ಸಂಭಂಧಿಸಿದ ಕಾರ್ಯವೂ later Personal ಆಗಿರುತ್ತದೆ

Expressive ಭಾಷಿಕ ಕಾರ್ಯದ ಬರವಣಿಗೆಯ ಅಥವ ಮಾತಿನ ಬಳಕೆಯು ಪ್ರೇಕ್ಷಕನಿಗೆ ಯಾವುದೇ ರೀತಿ ಸಂಬಂಧಿಸಿರುವುದಿಲ್ಲ. ಇದು ಕೇವಲ ಸ್ವ ಅಭಿವ್ಯಕ್ತಿ (Self Exprerssion) ಯಾಗಿರುತ್ತದೆ. ಹಲವಾರು ಸಾರಿ Expressive ಕಾರ್ಯವು ಒಂದು ರೀತಿಯ ತಕ್ಷಣದ ಭಾವ ಸ್ಥಿತಿಗೆ ಕೊಡುವ ಪ್ರತಿಕ್ರಿಯೆಯನ್ನು ಪ್ರತಿಬಿಂಬಿಸುತ್ತದೆ. ಆದರೆ ಇದು ರಸಾಭಿವ್ಯಕ್ತಿಯ ಆಳವಾದ ಸ್ತರಗಳನ್ನು ಹೊಂದಿರುತ್ತದೆ. ಉದಾ: ಪ್ರಕಾಶನ ಮತ್ತು ಓದುಗರ ಉದ್ದೇಶವಿಲ್ಲದೆ ಬರೆಯುವ ಒಂದು ಭಾವಗೀತೆ.

(Ognitive) (ಗ್ರಹಿಸುವ) ಕಾರ್ಯವು 'ಆಂತರಿಕ ಸಂವಾದ'ವನ್ನು ಒಳಗೊಳ್ಳುತ್ತದೆ. ಅಂದರೆ ಯೋಚನೆ ಮಾಡಲು ಭಾಷೆಯನ್ನು ಬಳಸುವುದು 'ನಿರೀಕ್ಷಣಾ ಪ್ರತಿಕ್ರಿಯೆ' ಭಾಗವಾದ ಮೂಲದ ಜೊತೆ ವಾದಕ್ಕಿಳಿಯುವ ಸಮರ್ಥ ಪ್ರೇಕ್ಷಕರೂ ನಿರೀಕ್ಷಣೆಯ ಹಾದಿಗಳಲ್ಲಿ ಸೇರಿಕೊಳ್ಳಬಹುದು ಅಥವ ನಿಜವಾದ 'ನಾನು' ಎನ್ನುವುದನ್ನೆ ಅರಿಯದೆ ದ್ವಿಸಂವಹನ ಪಾತ್ರವನ್ನು ವಹಿಸಿ ಜನ ಇದಕ್ಕೆ ಕಾರಣಗಳನ್ನು ಕೊಡಬಹುದು. ಇಂಥ ಸಂದರ್ಭಗಳಲ್ಲಿ ಮೂರು ವ್ಯಕ್ತಿಗಳು ಸೇರಿದಂತೆ ತೋರುವುದು ಸಹಜ. ವಿವಿಧ ದೃಷ್ಟಿಕೋನಗಳನ್ನು ಮತ್ತು ಯಾರ ವಾದ ಹೆಚ್ಚು ಸಮಂಜಸವೆಂದು ಮೂರನೇಯವನು ನಿರ್ಧರಿಸುತ್ತಾನೆ.

ಹಲವಾರು ಶಾಬ್ದಿಕ ಸಂವಹನಗಳಲ್ಲಿ Informative ಕಾರ್ಯವು ಪ್ರಸಕ್ತವಾಗಿದ್ದು ಪ್ರೇಕ್ಷಕನ ಗ್ರಹಿಕಾ ಸಾಮರ್ಥ್ಯವನ್ನು ಬದಲಾಯಿಸುವ ಪ್ರಮುಖ ಸಾಧನಾವಾಗಿರುವುದರಿಂದ ಇದು ಒಂದು ಪ್ರಮುಖವಾದ ಭಾಷಿಕ ಕಾರ್ಯವಾಗಿದೆ. ಗ್ರಹಿಕಾ ಕಾರ್ಯವು (Ognitive) ವ್ಯಕ್ತಿಯ ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದರಿಂದ ಮಹತ್ವವನ್ನು ಪಡೆದುಕೊಳ್ಳುತ್ತದೆ. ಒಂದು ಕ್ರಿಯೆ ಪ್ರಥಮಿಕವಾದ Informative ಆಗಿ ಕಂಡರೂ, ಅದು ಕೆಲವು ಅಂಶಗಳನ್ನು ಒಳಗೊಂಡಿರುತ್ತದೆ. (Imperative, Emotive, Inter Personal) ಮಾನವನ ಪ್ರತಿಕ್ರಿಯೆಯ ಮಧ್ಯಮವಾದ ಭಾಷೆಯ ಒಟ್ಟು ಸ್ವರೂಪದ ದೃಷ್ಟಿಯಿಂದ Information ಕಾರ್ಯವೂ ಶೇಕಡ 20% ಸಂವಾದದ ರೂಪದಲ್ಲಿರುತ್ತದೆ. ಸ್ವೀಕರಿಸುವವರ ವರ್ತನೆಯನ್ನು ಬದಲಿಸಲು Imperative ಕಾರ್ಯವನ್ನು ವಿಭಾಗಿಸಲಾಗಿದೆ. ಆದರೆ ಈ ಕೆಲಸ ಕೇವಲ ಅಜ್ಞಾರ್ಥಕಗಳನ್ನು ಯಾವುದೇ ಒಂದು ಪಥ್ಯಕ್ಕೆ ಸೇರಿಸಿದರೆ ಮಾತ್ರ ಸಾಧ್ಯವಾಗುವುದಿಲ್ಲ. ಒಂದು ಶಾಬ್ದಿಕ ಆಜ್ಞೆಗಿಂತ, ಒಂದು ಒಳ್ಳೆಯ ಗಾದೆ ಮಾತು. ಬೆರಗಾಗಿಸುವ ನಗೆ ಮಾತು ಸಮರ್ಥ ಅಜ್ಞಾರ್ಥಕವಾಗಬಹುದು.

ಸಮಾಜ ಒಪ್ಪಿಕೊಂಡಿರುವ ಸಂದರ್ಭಗಳಲ್ಲಿ ಒಬ್ಬ ವ್ಯಕ್ತಿಯಿಂದ ಉಚ್ಚರಿಸಲ್ಪಟ್ಟ ಮಾತು ಕೇಳುಗನ ಸಾಮಾಜಿಕ ಸ್ಥಿತಿಯನ್ನು ಬದಲಿಸುವುದಕ್ಕೆ Performative ಕಾರ್ಯ ಎಂದು ಕರೆಯುತ್ತೇವೆ. ಉದಾ : ಮದುವೆ ಸಮಾರಂಭ, ಮರಣ ದಂಡನೆ ವಿಧಿಸುವುದು ಮತ್ತು ಪ್ರಮಾಣ ವಚನ ಸ್ವೀಕರಿಸುವುದು. ಆಧುನಿಕ ಸಮಾಜಗಳಲ್ಲಿ ಈ ಕ್ರಿಯೆಗಳು ಹೆಚ್ಚು ಅಧಿಕಾರ (Power) ಕಾನೂನಿನ ಜೊತೆ ನಡೆಯುತ್ತವೆ. ಪ್ರಾಚೀನ ಸಮಾಜಗಳಲ್ಲಿ ಮತ್ತು ಕೃತಿಯ ಜಗತ್ತಿನ ಕೆಲವು ದೇಶಗಳಲ್ಲಿರುವಂತೆ ಬಯ್ಯುವುದು, ಆಶೀರ್ವದಿಸುವುದು, ಕಂಡುಬರುವುದಿಲ್ಲ.

ಕೇಳುಗನ ಮನಸ್ಥಿತಿಯನ್ನು ಬದಲಿಸುವ ಭಾಷಿಕ ಕಾರ್ಯ emotive ರಾಜಕೀಯ ವ್ಯಕ್ತಿಗಳಲ್ಲಿ ಇದು ಹೆಚ್ಚು ಅಭಿವೃದ್ಧಿ ಹೊಂದಿದ ಕಲೆಯಾಗಿದೆ. ರಾಜಕೀಯ ವ್ಯಕ್ತಿಗಳು ನಟನೆಯುಳ್ಳದ ಆಕರ್ಷಿಸುವ ಭಾಷಣಗಳನ್ನು ಮಾಡುತ್ತಾರೆ. ಅಷ್ಟೆ ಅಲ್ಲದೆ

ಹೆಚ್ಚು ಸಂಬಳ ಪಡೆಯುವ ಮತ್ತು ಹೆಸರಾದ ಮಾತುಗಾರರು ಪ್ರೇಕ್ಷಕರನ್ನು ಖುಷಿ ಪಡಿಸುವ ಸಲುವಾಗಿ ಅವರ ಮನೋಭಾವದ ಸ್ಥಿತಿಗೆ ಹೊಂದಿಕೊಳ್ಳುವ ಹಾಗೆ ಮಾತನಾಡುತ್ತಾರೆ.

ತೃಪ್ತಿಕರವಾದ ಅಂತರ ವ್ಯಕ್ತಿಸಂಬಂಧಗಳನ್ನು ಕಾಪಾಡಿಕೊಳ್ಳಲು ಅಥವ ಸ್ಥಾಪಿಸಿಕೊಳ್ಳಲು ಬಳಸುವ ಭಾಷೆಗೆ Intet Personal ಗುಣವಿರುತ್ತದೆ. ಓ ಏನಪ್ಪ (Hellow) ನಮಸ್ಕಾರ, ಹೇಗೆದ್ದೀರಿ ಎನ್ನುವ ಮಾತುಗಳು ಅಭಿನಂದನೆಗೆ ಸಂಬಂಧಿಸಿದವು. ಪೂಜ್ಯ ಮಹಾಪ್ರಭು, ಎಂಬ ಗೌರವನಾಟಕಗಳಲ್ಲಿ ವ್ಯಕ್ತಿಯ ಸಾಮಾಜಿಕ ಪಾತ್ರ ಮತ್ತು ಘನತೆಯನ್ನು ಗುರ್ತಿಸಬಹುದು. ಹಲವಾರು ಗ್ರಹಿಕೆ (Register) ಗಳೂ ಕೂಡ ಔಪಚಾರಿಕ ಅನೌಪಚಾರಿಕ ಬಂಧುತ್ವ, ಮುಂತಾದವು ಅಂತರ ವ್ಯಕ್ತಿ ಸಂಬಂಧಗಳನ್ನು ಗುರ್ತಿಸುತ್ತವೆ.

ಕೆಲವು ಸಂದರ್ಭಗಳಲ್ಲಿ ಅರ್ಥವಿಲ್ಲದ ಸಂಭಾಷಣೆ ಕೂಡ ಒಂದು ಅನ್ಯೋನ್ಯ ಪರಿಸರವನ್ನು ಸೃಷ್ಟಿಸುವ ಅಂತರ ವ್ಯಕ್ತಿ ಕಾರ್ಯವನ್ನು ಮಾಡುತ್ತದೆ. ಇದು ಕೇಳುಗನಿಗೆ ಬೇಜಾರಾದರೂ ಅವನು ಅದನ್ನು ಕೇಳಲೇಬೇಕಾಗುತ್ತದೆ.

ಒಂದು ನಿರ್ದಿಷ್ಟ ಅವಧಿಯಲ್ಲಿ ಸಂವಾದಗಳು ಒಂದು ಉದ್ದೇಶವನ್ನು ಹೊಂದಿದ್ದು ಒಂದೇ ಒಂದು ಸಂವಹನದ ಕಾರ್ಯವನ್ನು ಮಾಡಿವಾಗ ಶಾಬ್ದಿಕ ಸಂವಹನದ ವಿಶ್ಲೇಷಣೆ ಸುಲಭವಾಗಿರುತ್ತದೆ. ಆದರೆ ನೈಜವಾಗಿ ಸಾಕಷ್ಟು ಸಂವಾದ (ಸಂಭಾಷಣೆ) ಗಳು ಒಂದಕ್ಕಿಂತ ಹೆಚ್ಚು ಕಾರ್ಯಗಳನ್ನು ನಿರ್ವಹಿಸುತ್ತದೆ. ಸಂವಾದ ಮುಂದುವರಿದಂತೆ ಅದರ ಸಾಪೇಕ್ಷ ಮಹತ್ವ ಒಂದರಿಂದ ಇನ್ನೊಂದಕ್ಕೆ ಬದಲಾಗುತ್ತಿರುತ್ತದೆ. ಆದರೆ ಯಾವುದೇ ಒಂದು ಅಥವ ಒಂದಕ್ಕಿಂತ ಹೆಚ್ಚು ಮೂಲಭೂತ ಭಾಷಿಕ ಕಾರ್ಯಗಳನ್ನು ನಿರ್ವಹಿಸಬೇಕಾದರೆ ವಾಗ್ವೈಖರಿಯು ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ. ಏಕೆಂದರೆ ಸಂಭಾಷಣೆಯ ಉದ್ದೇಶಗಳನ್ನು ಪರಿಣಾಮಕಾರಿಯಾಗಿ ಸಾಧಿಸಲು ಧ್ವನಿ ಪದ ರಚನೆ, ವಾಕ್ಯರಚನೆ ಈ ಕ್ರಿಯೆಗಳಿಗೆ ಸಂಬಂಧಿಸಿದಂತೆ ಎಲ್ಲಾ ರೀತಿಯ ಸಂಯೋಜನೆ ಮತ್ತು ಆಯ್ಕೆಯನ್ನು ವಾಗ್ವೈಖರಿಯು ನಿರ್ಧರಿಸುತ್ತದೆ.

ಆಯ್ಕೆ ಮತ್ತು ಸಂಯೋಜನೆ ಮೂಲಭೂತ ವಿಧಾನಗಳು

ಯಾವುದೇ ಭಾಷಿಕ ಚಿನ್ಹೆ (code) ಗೆ ಸಂಬಂಧಪಟ್ಟಂತೆ ಆಯ್ಕೆ ಮತ್ತು ಸಂಯೋಜನೆಯು ಮೂಲಭೂತ ವಿಧಾನಗಳಾಗಿರುತ್ತವೆ. ಆದರೆ ವಸ್ತು ಮತ್ತು ಸ್ವರೂಪವನ್ನು ನಿರ್ಧಸುವುದಲ್ಲಿ ಈ ವಿಧಾನಗಳು ವಹಿಸುವ ಕಾರ್ಯವನ್ನು ಮೆಚ್ಚ

ಬೇಕಾದರೆ, ಸಂಭಾಷಣೆಯಲ್ಲಿ ಸೂಕ್ಷ್ಮ (ಬಿಡಿ) ಹಾಗು ಸಮಗ್ರ (ಇಡಿ) ಎಂದು ವಿಭಾಗಿಸಬೇಕು. ಪರಸ್ಪರ ಸಂಬಂಧದ (overlop) ಸಂದರ್ಭಗಳಿರುವುದರಿಂದ ಈ ವಿಭಾಗವು ಕೃತವಾಗಿ ಕಾಣಿಸುತ್ತದೆ.

ವಸ್ತುವಿನ ಸಮಗ್ರ ನೆಲೆಯ ಆಯ್ಕೆಯು, ಪ್ರಾಥಮಿಕವಸ್ತು (theme) ಅಥವ ಸಂವಾದದವಸ್ತು, ಘಟನೆಗಳು, ಭಾಗವಹಿಸುವವರು ಮತ್ತು ಸಂಯೋಜನೆಯನ್ನು ಒಳಗೊಳ್ಳುತ್ತದೆ. ಕಥಾಸಾಹಿತ್ಯದ ಕಥನದಲ್ಲಿ, ಬರಹಗಾರ ಅಥವ ನಿರೂಪಕ (Speaker) ನ ಪಾತ್ರವು ಭಾಗವಹಿಸುವ ಓದುಗನ ಮಿತಿ ಅಥವ ಅಪರಿಮಿತ ಜ್ಞಾನ ಮತ್ತು ಅತಿಮಾನವ ದೃಷ್ಟಿಯೊಡನೆ ಸೇರಿಕೊಳ್ಳುತ್ತದೆ.

ಸಮಗ್ರ ನೆಲೆಯಲ್ಲಿ ರೂಪದ ಆಯ್ಕೆಯು ಸಂಭಾಷಣ ಮಾದರಿ ಮತ್ತು ಉಪ ಮಾದರಿ (subtyped) ಗಳನ್ನು ಒಳಗೊಳ್ಳುತ್ತದೆ. ಉದಾ : ಕಥನದ ರಚನೆಯನ್ನು ಆಯ್ಕೆ ಮಾಡಿಕೊಂಡಾಗ, ಸಂಭಾಷಣೆಯ ನೆಲೆ, Plotನ ನೆಲೆ ಮತ್ತು ಕತೆಗಳ ಜೋಡಣೆ ಬಹಳ ಮುಖ್ಯವೆನಿಸುತ್ತದೆ. ಇದು ಕಾದಂಬರಿ ಅಥವ ಕತೆಗಳಲ್ಲಿ ಸಾಧ್ಯ ವಾಗಬಹುದು. ಆದರೆ ಒಂದು ಭಾವಗೀತೆಯನ್ನು ತೆಗೆದುಕೊಂಡಾಗ ಅದರ formal rigidity ಯ ಹಲವಾರು ಹಂತಗಳನ್ನು ಗಮನಿಸಬೇಕಾಗುತ್ತದೆ. ಉದಾ : ಸಾಂಪ್ರ ದಾಯಿಕ ಸುನೀತಗಳು ಮತ್ತು ನವ್ಯೋತ್ತರ ಗದ್ಯ ಪದ್ಯಗಳು ತಮ್ಮದೇ ಆದ ರಚನೆಯ ಕ್ರಮವನ್ನು ಹೊಂದಿರುತ್ತವೆ.

ಸಮಗ್ರ ನೆಲೆಯಲ್ಲಿ ಔಪಚಾರಿಕ ಅಂಶಗಳ ಆಯ್ಕೆ, ಭಾಷೆಯ ನೆಲೆಯನ್ನು ಅವಲಂಬಿಸಿರುತ್ತದೆ. ಉದಾ : ರೂಢಿಗಳು, ಸಂಸ್ಕಾರಗಳಿಂದ ಕೂಡಿದ ಅನ್ಯೋನ್ಯ ಭಾಷೆ ಮತ್ತು ಉಪಭಾಷೆಯ ವಿಧಗಳು ಉದಾಹರಣೆಗೆ ಹಳೇ ಶಬ್ದರೂಪಗಳು (archavie) ಪ್ರಾದೇಶಿಕ, ಗುಡ್ಡಗಾಡು, ಶಿಷ್ಟ ಹಾಗು ವೃತ್ತಿ ನಿರತ (Professional) ಭಾಷೆಗಳು.

ಪ್ರಾಥಮಿಕವಾಗಿ ಸಮಗ್ರ ನೆಲೆಯಲ್ಲಿ ಸಂಯೋಜನೆಯು ಆಯ್ಕೆಯಿಂದ ಬಂದ ವಸ್ತು ಮತ್ತು ರೂಪದ ಘಟಕಗಳನ್ನು ವ್ಯವಸ್ಥಿತವಾಗಿ ಜೋಡಿಸುವುದು. ಇಂಥ ಘಟನೆಗಳ ಪ್ರಮುಖ ಜೋಡಣೆಯು ಕೆಲವು ಅಂಶಗಳ ಮೇಲೆ ಆಧಾರಿತವಾಗಿದೆ.

(1) ಕಾಲ Ex ಚರಿತ್ರೆ, ಜೀವನ ಚರಿತ್ರೆ ಕಾದಂಬರಿ, ಮಹಾಕಾವ್ಯ, ಜನಪದ ಕಥೆ, ಮಿಶ್ರಕ್ರಿಯೆಯ ನಿರ್ವಹಣೆಗೆ ಸಲಹೆಗಳು.

(2) ದೇಶ : (space) ಹಲವು ಬಗೆಯ ಘಟನೆಗಳ ಮತ್ತು ವಸ್ತುಗಳ (objects) ವಿವರಣೆ.

(3) ವರ್ಗ : ಹಲವಾರು ಬಗೆಯಲ್ಲಿ ಪರಸ್ಪರ ಸ್ಪಂಧಿಸುವ ಅಂಶಗಳ ಜೋಡಣೆ (alternative subtractive & duplicative)

(4) RANK (ದರ್ಜೆ).

(5) ಪರಿಣಾಮ.

(6) ಸಂಭಾಷಣಾ ಸಂದರ್ಭ (dialogue sequency).

ಸಮಗ್ರ ನೆಲೆಯಲ್ಲಿ ಆಯ್ಕೆಯು ಅಪರಿಮಿತ ಸಂಖ್ಯೆಯ thematic ಸಾಧ್ಯತೆಗಳನ್ನು ಹೊಂದುತ್ತದೆ. ಇವು ಮೂಲ ವಸ್ತುವಿನಿಂದ ಪರಸ್ಪರ ಸಂಬಂಧಪಟ್ಟವಂತವಾಗಿದೆ ಮತ್ತು ಹಲವಾರು ಔಪಚಾರಿಕ ತಂತ್ರಗಳು ಅಥವ ವಿಧಾನಗಳನ್ನು ಹೊಂದಿವೆ. ಉದಾ : ಪುನರಾವರ್ತನೆಗಳು, meusared lines, ellipses, asyude-ton, Parallelisn, Chiasn, Non-gramatical ಮತ್ತು ಇನ್ನೂ ಹಲವಾರು ತಂತ್ರಗಳು ಇವೆ. ಅಲಂಕಾರಿಕ ಭಾಷೆ, ವ್ಯಂಗ್ಯ, ವಿರೋಧಾಬಾಸ, ಅತಿಶಯೋಕ್ತಿ, ಸೌಮ್ಯೋಕ್ತಿ ಮತ್ತು ಪರೋಕ್ಷತೆಗಳು.

ಈ ವಾಗ್ವೈಖರಿಯ ತಂತ್ರಗಳನ್ನು ಪಠ್ಯದಲ್ಲಿ ಹೇಗಂದರೆ ಹಾಗೆ ಬಳಸಲಾಗದು ಅವು ಪರಿಣಾಮಕಾರಿಯಾಗಿರುವಂತೆ, ಕೌಶಲ್ಯದಿಂದ ಜೋಡಿಸಬೇಕಾಗುತ್ತದೆ. ಪಠ್ಯದೊಳಗೆ ಅವುಗಳ ಒತ್ತು ಮತ್ತು ಸಂಖ್ಯೆ, ವಿಧಗಳನ್ನಷ್ಟೇ ಗಮನಿಸದೆ ಅವುಗಳು ಸಂಭವಿಸುವಕ್ರಮ ಮತ್ತು ಹಾಗು ಅವುಗಳ ಸಂಬಂಧವನ್ನು ಕೂಡ ಗಣನೆಗೆ ತೆಗೆದು ಕೊಳ್ಳಬೇಕು ವಾಗ್ವೈಖರಿಯ ಖಚಿತತೆಯನ್ನು ಗಮನಿಸಿ ಮಾಡಿದ ಆಯ್ಕೆ ಮತ್ತು ಸಂಯೋಜನೆ ಈ ವಿಧಾನಗಳ ಮುಖಾಂತರ ಸಂಭಾಷಣೆಗೆ ಒಂದು ರೀತಿಯ ಧ್ವನ್ಯಾತ್ಮಕ ಕೊಡುಗೆಯನ್ನು ಕೊಡಬಲ್ಲುದು.

ವಸ್ತು ಮತ್ತು ರೂಪದ ಆಯ್ಕೆ ಮತ್ತು ಸಂರಚೆಯ ತತ್ವಗಳು

ವಸ್ತು, ರೂಪದ ಆಯ್ಕೆ ಮತ್ತು ಸಂರಚನೆಯು ಗರಿಷ್ಠ ಪರಿಣಾಮಕಾರಿಯಾಗಬೇಕಾದರೆ ಈ ವಿಧಾನಗಳು ಕೇಳುಗರ ಮೇಲೆ ಪ್ರಭಾವವನ್ನು ಬೀರಿ ಅವರನ್ನು ಆಕರ್ಷಿಸಬೇಕಾಗುತ್ತದೆ. ಅಲ್ಲದೆ ಉತ್ತಮ ಪರಿಣಾಮಕ್ಕಾಗಿ ಪ್ರಭಾವ ಮತ್ತು ತಟ್ಟುವಿಕೆ (appeal) ನಡುವೆ ಸೂಕ್ಷ್ಮ ಸಮತೋಲನ ಕಾಪಾಡಬೇಕಾಗುತ್ತದೆ. ಪ್ರಥಮವಾಗಿ (ಪ್ರತ್ಯಕ್ಷವಲ್ಲದಿದ್ದರೂ) ಪ್ರಭಾವ ಬೀರುವ ತತ್ವಗಳೆಂದರೆ ಔಚಿತ್ಯ, ವಾಸ್ತವತೆ, ನವೀನ್ಯತೆ, ಮತ್ತು ಪ್ರಾಥಮಿಕಕಾರ್ಯದ ಮೂರು ಭಾಗಗಳನ್ನು ಒಳಗೊಳ್ಳುತ್ತದೆ.

(1) ವಸ್ತುವನ್ನು ಒಳಗೊಳ್ಳುವ ಅಂಶಗಳು, ಇಡಿನೆಲೆ, ಪ್ರಮಾಣ, & ಬಂಧ.

(2) ರೂಪವನ್ನು ಮೂಲಭೂತ ಒಳಗೊಳ್ಳುವ ಅಂಶಗಳು:– ಸುಸಂಬದ್ಧತೆ, ಸಮಂಜಸತೆ, ಪ್ರಾಮುಖ್ಯತೆ.

(3) ಸ್ಪಷ್ಟತೆಯ ತತ್ವ :– ಇದು ವಸ್ತು ಮತ್ತು ರೂಪವನ್ನು ಸಮವಾಗಿ ಒಳಗೊಳ್ಳುತ್ತದೆ. ನವೀನ್ಯತೆಯು ಊಹಿಸಲಾಗದಿದ್ದಾಗಿದ್ದು, ಅಸಮಾನ್ಯ ಮತ್ತು ಅಥವಾ (ವ್ಯಾಕರಣರಚನೆ) ಶಬ್ದ, ಪದಗಳ ಅನಿರೀಕ್ಷಿತ ಸಂರಚನೆಯಾಗುತ್ತದೆ. ಈ ನವೀನ್ಯತೆಯ ಅಭಿವ್ಯಕ್ತಿಯನ್ನು T.S. Eliot ತನ್ನ the love song of J. Alfred Proflock ನಲ್ಲಿ ಸುಂದರವಾಗಿ ತೋರಿಸಿದ್ದಾನೆ. Evening is spread out against the sky (ಬಾನಹಂದರೆ ಹಾಸಿಕೊಂಡಿದೆ ಸಂಜೆ).

ಔಚಿತ್ಯವನ್ನು ಮನೋವೈಜ್ಞಾನಿಕ ಸಾಮೀಪ್ಯತೆ ಅಥವ ತತ್‌ಕ್ಷಣದ ತುಷ್ಟಿ ಎಂದು ವ್ಯಾಖ್ಯಾನಿಸಬಹುದು. ಇದು ಹೇಗೆಂದರೆ ಪ್ರಾದೇಶಿಕ ರೈಲ್ವೆ ನಿಲ್ದಾಣದಲ್ಲಿ ಚಳಿಯಿಂದ ಸಾಯುವ ಒಬ್ಬಾಕೆಯ ವಿಷಯವು Elthiopia ರಲ್ಲಿ ಊಟವಿಲ್ಲದೆ ಸಾಯುವ ಸಾವಿರಾರು ಜನರಷ್ಟೇ ಅಮೇರಿಕನ್ನರ ಮೇಲೆ ಪ್ರಭಾವ ಬೀರುತ್ತದೆ.

ಇಲ್ಲಿ Relation (ವಾಸ್ತವತೆ) ಹೆಚ್ಚಾಗಿ ಪದಗಳ ಅದ್ವಿತೀಯತೆ ಮತ್ತು ನಿರ್ದಿಷ್ಟತತೆಯನ್ನು ಅರ್ಥೈಸುತ್ತದೆ. ಆದ್ದರಿಂದ ವ್ಯಕ್ತಿಗಳು ಪ್ರದೇಶಗಳು ಮತ್ತು ಘಟನೆಗಳನ್ನು, ಚಿತ್ರಗಳಾಗಿ ಬದುಕಿನಲ್ಲಿ ನೈಜವಾಗಿರುವಂತೆ ತರಲಾಗುತ್ತದೆ. ಈ ವಾಸ್ತವತೆಯನ್ನು ಈಲಿಯಟ್‌ನ ಈ ಎರಡು ಸಾಲುಗಳಲ್ಲಿ ಕಾಣಬಹುದು.

"of Rest less nights in one night cheep hotels
And Sandust restarante with oystet shells"

ಸಮಷ್ಟಿಯ ತತ್ವವು ಪರಿಪೂರ್ಣತೆ ಮತ್ತು ಐಕ್ಯತೆಯನ್ನು ಒಳಗೊಳ್ಳುತ್ತದೆ ಅಂದರೆ ಯಾವುದೇ ಪತ್ಯವು ಪೂರ್ಣಗೊಳ್ಳಲು ಬೇಕಾದ ಎಲ್ಲಾ ಅಂಶಗಳನ್ನು ಇದು ಒಳಗೊಂಡಿರುತ್ತದೆ.

ಪ್ರಮಾಣ (Proporation) ಒಂದು ನಿರ್ದಿಷ್ಟ ಪತ್ಯವು ತನ್ನ ಉದ್ದೇಶಗಳನ್ನು ಸಾಧಿಸಲು ಬೇಕಾದ ಪ್ರಮಾಣದಲ್ಲಿ ಒಂದು ಸಂವಾದದ ಹಲವಾರು ಬಗೆಯ ಅಂಶಗಳನ್ನು ಕಾಲ ಮತ್ತು ಸ್ಥಳದ ಅಂಶಗಳನ್ನು ಒದಗಿಸುವುದು ಈ ತತ್ವವನ್ನು ವಸ್ತುವಿನ ವಿವಿಧ ಭಾಗಗಳ ಸಾಪೇಕ್ಷವಾದ ಪ್ರಾಮುಖ್ಯತೆಯನ್ನು ನಿರ್ಧರಿಸುವುದಲ್ಲದೆ ಹೆಚ್ಚಿನ ಸಂದರ್ಭಗಳಲ್ಲಿ ರೂಪ ಮತ್ತು ವಸ್ತುವಿನ ಪ್ರಾಮುಖ್ಯತೆಯನ್ನು ಅರಿಯುವ ಪ್ರೇಕ್ಷಕರ ಸಾಮರ್ಥ್ಯವನ್ನು ನಿರ್ಣಯಿಸುವ ಬರಹಗಾರನ ನಿರ್ಣಯವು ಮುಖ್ಯವಾಗಿರುತ್ತದೆ.

ಸುಸಂಬದ್ಧತೆ (Coherence) : ಸಂಭಾಷಣೆ ಜಗತ್ತಿನ ಕಲ್ಪಿತ ಅಥವಾ ಸೃಜತೆಯನ್ನು ಬರಹಗಾರ ಅಥವಾ ನಿರೂಪಕ ಸಮಂಜಸವಾಗಿ ಮತ್ತು ಸ್ಪಷ್ಟವಾಗಿ ಪ್ರತಿಬಿಂಬಿಸಬೇಕು. ಆದರೆ ಸುಸಂಬದ್ಧತೆ ಸಂರಚನೆ ಕಾರ್ಯದಲ್ಲಿ ಮತ್ತು ಭಾಗವಹಿಸುವವರ ವಿಷಯಗಳಿಗೆ ಮಾತ್ರ ಸಂಬಂಧಿಸಿದ್ದಲ್ಲ. ಸಂಬಂಧಪಟ್ಟ ಅಂಶಗಳ ಮೇಲೆ ಯಾವುದೇ ಪಠ್ಯದ ಭಾವಾನಾತ್ಮಕ ಧ್ವನಿ ನಿರ್ದಾರವಾಗುತ್ತದೆ. ಉದಾ : ಅಲೆಕ್ಸಾಂಡರ್ ಪೋನ ಕಥೆ ಪರಿಣಾಮಕಾರಿಯಾಗಿರುವುದಕ್ಕೆ ಅವನು ಪದಗಳನ್ನು ಬಳಸಿರುವ ರೀತಿ ಕೆಲವು ಸಾರಿ ಬರಹಗಾರರು ಈ ತತ್ವವನ್ನು ಅನುಸರಿಸದೇ ಕೂಡ ಇರಬಹುದು.

ಕಾಫ್ಕ ತನ್ನ The castle ಕೃತಿಯಲ್ಲಿ ಘಟನೆಗಳ (episode) ನಡುವೆ ಬಿಗಿಯಾದ ಬಂಧವನ್ನು ಕಾಪಾಡಿಕೊಂಡು ಬಂದಿದ್ದಾನೆ. ಆದರೆ ಕಥೆಗಳಲ್ಲಿ ಅಸಂಬದ್ಧ, ಕನಸಿನ ತರಹದ ಬದಲಾವಣೆಗಳನ್ನು ಕಾಣುವುದರಿಂದ ಪರಿಣಾಮದ ತತ್ವವೂ ಅರ್ಥ ಕಳೆದುಕೊಳ್ಳುತ್ತದೆ. ಆದರೆ ಕಾಫ್ಕ ವಾಗ್ವೈಖರಿಯ ರಚನೆಯ ಮೂಲಕ ಜೀವನವೂ ಕನಸಿನಂತೆ ಅರ್ಥರಹಿತ ಎಂದು ಹೇಳಲು ಪ್ರಯತ್ನಿಸಿದ್ದರೂ ಆ ಅನುಭವವೂ ಅಸಂಗತವಾಗಿ ಕಾಣುತ್ತದೆ.

ಸಂಭಾಷಣೆಯು ವ್ಯವಸ್ಥೆ ಮತ್ತು ಸಾರಾಂಶದ ವಸ್ತುವಿಗೆ ಸರಿಹೊಂದುವ ರೂಪವು ಮೂಲಭೂತವಾಗಿ ಪಠ್ಯದ ಔಪಚಾರಿಕ ಅಂಶಗಳ ಸುಸಂಬದ್ಧತೆಯನ್ನು ನಿರ್ಧರಿಸುತ್ತದೆ.

ಧಾರ್ಮಿಕ ಕಾರ್ಯಗಳಲ್ಲಿ ಹಾಸ್ಯವನ್ನು ತರಲಾಗುವುದಿಲ್ಲ. ಅದೇ ರೀತಿ ಆಟಗಳಲ್ಲಿ ಉಪದೇಶಗಳು ಸಮಂಜಸನಾಗಿ ಕಾಣುವುದಿಲ್ಲ.

ಪಠ್ಯದ ಘಟಕಗಳು ಹೇಗೆ ಪರಸ್ಪರ ಪ್ರತಿಕ್ರಿಯಿಸುತ್ತವೆ. ಎನ್ನುವುದರ ಮೇಲೆ cohesion ನ್ನು ನಿರ್ಧರಿಸಬಹುದು ಆದರೆ clauses, Sentences ಮತ್ತು ಪ್ಯಾರಗಳನ್ನು ಕೂಡಿಸುವ ಸಂಬಂಧ ವಾಚಕಗಳೊಂದಿಗೆ ನಿರ್ಧರಿಸಲಾಗದು. ಉದಾ : E E. comings ಕವನಗಳೆಲ್ಲ ನ ವಾಕ್ಯ ಮತ್ತು ಪದಗಳು ಸಂಬಂಧವಿಲ್ಲದೆ ಮುರಿದು ಬಿದ್ದಿರುತ್ತವೆ. ಅಷ್ಟೆ ಅಲ್ಲದೆ ಅತಿಯಾದ ಸುಸಂಬದ್ಧತೆ ಕೂಡ ಒಂದು ಕೃತಿಯ ಸೌಂದರ್ಯವನ್ನು ಕೆಡಿಸಬಹುದು. ಸ್ಪಷ್ಟತೆಯ ತತ್ವ ಕೂಡ ರೂಪ ಮತ್ತುವಸ್ತುವಿನ ಹೊಂದಾಣಿಕೆಯಲ್ಲಿ ಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ತಾಂತ್ರಿಕ ಬರವಣಿಗೆಯಲ್ಲಿ ನಿರೀಕ್ಷಿತ ವೀಕ್ಷಕರು ಪಠ್ಯ ಅರ್ಥ ಮತ್ತು ಕಾರ್ಯಾತ್ಮಕ ಸಂವಹನವನ್ನು, ಉದ್ದೇಶವನ್ನು ಅರ್ಥಮಾಡಿಕೊಳ್ಳುವ ಒಂದು ವ್ಯವಸ್ಥೆಯೇ ಸ್ಪಷ್ಟತೆ.

ಪ್ರಮುಖ ರಚನೆಗಳ ಸಮಗ್ರ ನೆಲೆಯಲ್ಲಿ ವಸ್ತು ಮತ್ತು ರೂಪದ ಆಯ್ಕೆ ಮತ್ತು ಜೋಡಣೆಯು ಈ ತತ್ವಗಳು ಔಚಿತ್ಯವಾಗಿದ್ದು, ಸಂಭಾಷಣೆಯು ಪ್ರಭಾವ ಮತ್ತು ಗಮನವನ್ನು ಹೆಚ್ಚಿಸಲಿಕ್ಕೆ ವಾಗ್ವೈಖರಿಯ ವಿಧಾನಗಳನ್ನು ಸೃಷ್ಟಿ ನೆಲೆಯಲ್ಲಿ ಬಳಸಲಾಗುತ್ತದೆ.

ವಾಗ್ವೈಖರಿಯ ತಂತ್ರಗಳು

ಸಂಭಾಷಣೆಯ ಪ್ರಭಾವ ಮತ್ತು ಪರಿಣಾಮವನ್ನು ಹುಟ್ಟಿಸುವ ಸಲುವಾಗಿ ಮಾತಾಡುವ ಅಥವ ಬರಹಗಾರ ಹಲವು ಔಪಚಾರಿಕವಾದ semartie ವಾಗ್ವೈಖರಿಯ ತಂತ್ರಗಳನ್ನು ಬಳಸಬಹುದಾಗಿದೆ. ಇವು ನಿರೀಕ್ಷಣೆಗಳಲ್ಲಿ ಮುಖ್ಯವಾದ ಬದಲಾವಣೆಗಳನ್ನು ತರಬಹುದಾದ್ದರಿಂದ ಈ ತಂತ್ರಗಳನ್ನು ವಿಧಾನಗಳಾಗಿ ಸಹ ಗಮನಿಸಬಹುದು. ಬೇರೆ ಮಾತುಗಳಲ್ಲಿ ಹೇಳುವುದಾದರೆ ಪ್ರತಿ ನಿತ್ಯದ ಅಭಿವ್ಯಕ್ತಿ ಪ್ರಕಾರಗಳಲ್ಲಿ ಉಪಯೋಗಿಸುವ ಶೋಭಿಕ ಸಂವಹನದ (Plain jare) ಶೈಲಿಯಲ್ಲಿ ಈ ತಂತ್ರಗಳನ್ನು ಕಾಣಲಾಗುವುದಿಲ್ಲ. ಅವು ಸಂಯೋಜಕ ಅಥವ ದ್ವಿರುಕ್ತಿಯ ಮಹತ್ವವನ್ನು ಪಡೆಯುತ್ತವೆ. ಇಂಥ ಪದಗಳ ಮೂಲಕ ನವೀನ್ಯತೆ, ಮಾಧುರ್ಯ, ಅಚ್ಚರಿ, ದಿಗ್ಭ್ರಮೆ, ಉದ್ವೇಗ ಮುಂತಾದವುಗಳನ್ನು ವ್ಯಕ್ತಪಡಿಸಬಹುದು. ಆದರೆ ಶಾಬ್ದಿಕ ಸಂವಹನದ ಕಾರ್ಯದಲ್ಲಿ ಈ ಅಂಶಗಳು ಹೇಗೆ ಪರಿಣಾಮ ಬೀರುತ್ತವೆ ಎಂಬುದನ್ನು ತೀವ್ರವಾದ ಹಾಗು ವಿಶ್ಲೇಷಣಾತ್ಮಕವಾದ ಅರಿವಿನಿಂದ ಪರೀಕ್ಷಿಸಲೇಬೇಕು.

ವ್ಯವಸ್ಥೆ, ಪುನರಾವರ್ತನೆ, ಅಳತೆ embeding, deletion. condensation trasition, reference ಮತ್ತು ವ್ಯಾಕರಣ ರಹಿತ ವಿಧಾನಗಳ ನೆಲೆಯಲ್ಲಿ ಔಪಚಾರಿಕ ತಂತ್ರಗಳನ್ನು ವಿಭಾಗಿಸಬಹುದಾಗಿದೆ. Semantie ತಂತ್ರಗಳನ್ನು ಅಲಂಕಾರ ಅಭಿವ್ಯಕ್ತಿ, ಹೋಲಿಕೆ, ಭಿನ್ನತೆಗಳು ಶಬ್ದ ಸಂಕೇತಿಕತೆ. ಪದಗಳ ಅರ್ಥದಲ್ಲಿ ಬದಲಾವಣೆ ಅಸ್ಪಷ್ಟತೆ ಮತ್ತು ಅರ್ಥ ಸಂದಿಗ್ಧತೆ, ಅರ್ಥದಲ್ಲಿ ಭಿನ್ನತೆ, ವರ್ಗೀಕರಣದಲ್ಲಿ ಬದಲಾವಣೆ, ವ್ಯಾಕರಣಾತ್ಮಕ ಕಾರ್ಯದಲ್ಲಿ ಬದಲಾವಣೆ, ಪರೋಕ್ಷತೆ, ವೈಶಿಷ್ಟ್ಯತೆ ಮತ್ತು ಸಾಧಾರಣೀಕರಣ ಮತ್ತು Semotalic ವ್ಯಾತಿ ಕ್ರಮಗಳು ಪತ್ಯದ ಒಳಗಡೆ. ಅಂಗಗಳ ಜೋಡಣೆಯ ಘಟಕಗಳನ್ನಲ್ಲದೆ ಭಾಗಗಳನ್ನು ಒಳಗೊಳ್ಳುತ್ತದೆ. ಪದಗಳು, ಪದ ಪುಂಜಗಳು ಅಥವಾ ಅಧ್ಯಾಯಗಳಾದ ಘಟಕಗಳಿಗೆ ವಿಶಿಷ್ಟವಾದ ಸ್ಥಾನಗಳನ್ನು ಈ ರೀತಿ ವಿಭಾಗಿಸಬಹುದು.

(1) ಪ್ರಮುಖವಾದ ಸ್ಥಾನ, (2) ನಂತರ ಪ್ರಮುಖ ಸ್ಥಾನ, (3) ಒಂದು ಪ್ರಮುಖವಾದ ಘಟಕ ಅಥವಾ ಅದರೊಡನೆ ಪ್ರಮುಖವಾದ ಭಿನ್ನತೆ, (4) ನಿರೀಕ್ಷಿಸಿದ ವ್ಯಾಕರಣಾತ್ಮಕ ಮತ್ತು ಸಾರಂಶದ ಘಟಕವನ್ನು ಹೊರತು ಪಡಿಸಿದ ಯಾವುದೇ ಸ್ಥಾನ. ಬಹುಫಲಕಗಳುಳ್ಳ ಭಾಗಗಳ ಜೋಡಣೆಯು ಸಮಾನಾಂತರವಾಗಿರಬಹುದು(eliastic) ಆಗಿರಬಹುದು ಅಥವಾ ಸಂಮಿಶ್ರವಾಗಿರಬಹುದು. ಬಿಬ್ಲಿಕಲ್ ಕಾವ್ಯದಲ್ಲಿ ಸಮಾನಾಂತರ ಜೋಡಣೆಯು ಸಾಮಾನ್ಯವಾಗಿದ್ದು ಸಾಲುಗಳು ತಮಗೆ ಪರಸ್ಪರ ಸಂಬಂಧಿಸಿದ ಪದಗಳ ವ್ಯವಸ್ಥೆಯಲ್ಲಿ ಸಮಾನಾಂತರವಾಗಿರುತ್ತವೆ. ಆದರೆ ಭಿನ್ನತೆಯ ಸಲುವಾಗಿ

ಅಂಥ ವ್ಯವಸ್ಥೆಗಳು Chiastic ಆಗಿರಬಹುದು ಪಠ್ಯದ ವ್ಯಾಪಕ ಘಟಕಗಳಿಗೆ ಸಮಾನಂತರತೆ ಮತ್ತು Chasmಗಳು ಅನ್ವಯಿಸುತ್ತವೆ. ಕಥನಗಳಲ್ಲಿ ಅಲ್ಲಲ್ಲಿ Chiastic ಜೋಡಣೆಗಳು ಅವು ಯಾವುವೆಂದರೆ : (1) ನಿರಂತರ ಘಟನೆಗಳು ಸಂಘರ್ಷಕ್ಕೆ ಎಡೆ ಮಾಡುವುದು. (2) ನಿರಂತರತೆಯು ಘಟನೆಗಳು ವ್ಯತಿರಿಕ್ತವಾದಾಗ ಸಂಘರ್ಷ ಕೊನೆಗೊಳ್ಳುವುದು. ಪುನರಾವರ್ತನೆಯು ಒಂದು ಸಾಮಾನ್ಯ ವಾಗ್ವೈಖರಿಯ ವಿಧಾನವಾಗಿದ್ದು ಇದು ಪಠ್ಯದ ಎಲ್ಲ ಘಟಕಗಳನ್ನು ಒಳಗೊಳ್ಳುತ್ತದೆ. ಧ್ವನಿಗಳು ಆಕೃತಿಮಗಳು, ತಹಗಳು, ತಹಪುಂಜಗಳು ಮತ್ತು ವಾಕ್ಯರಚನೆಗಳೂ ಸೇರುತ್ತವೆ. Assurance ಮುಖ್ಯವಾಗಿ ಸಮಾನಾಂತರ ವ್ಯಾಕರಣಾತ್ಮಕ ರಚನೆಗಳಿಗೆ ಸಂಬಂಧಿಸಿದ್ದು ಬಹಳ ಪ್ರಮುಖವಾದ ವಿಧಾನವಾಗಿರುತ್ತದೆ ಸಾಂಪ್ರದಾಯಿಕ ಇಂಗ್ಲೀಷ್ ಕಾವ್ಯದಲ್ಲಿ ಪ್ರಾಸವು ಪ್ರಮುಖ ಸ್ಥಾನ ಮತ್ತು ಪ್ರಶಂಸೆಯನ್ನು ಪಡೆದಿದ್ದು, ಪ್ರಸ್ತುತ ಕಾವ್ಯ ಸೃಷಿಯಲ್ಲಿ ಕೃತಕವೆನಿಸಿದೆ. ಪುನರಾವರ್ತನೆಯು ವ್ಯಾಪಕವಾಗಿರಬಹುದು ಇಲ್ಲದೆ ಇರಬಹುದು. ಆದರೆ ಇದು ಪರಿಶೀಲನೆಯ ಹಂತದಲ್ಲಿ ಮುಖ್ಯವಾದ ಗಣತಿಯಾಗಿದೆ.

ಅಳತೆಯು (measurement) ಘಟಕಗಳು ಒಟ್ಟು ಆಕಾರ ಉದಾ: (ಹೈಕ್ ಕಾವ್ಯ ಸುನೀತಗಳ) ಮತ್ತು ಕಥನಗಳು (2) ಛಂದಸ್ಸಿನ ಘಟಕಗಳು ಉದಾ: ಕವನದ ಸಾಲಿನಲ್ಲಿನ ಮಾತ್ರ ಗಣಗಳು ಲಯ ರಚನೆ ಮುಂತಾದವು.

ಮೂಲಭೂತವಾಗಿ Embedding ಎರಡು ವಿಧಗಳನ್ನು ಹೊಂದಿದೆ :

(1) Interruptive parathetical statements.

(2) ಸಾಂಪ್ರದಾಯಿಕ ಪದ್ಧತಿಗಳಲ್ಲಿ ಔಪಚಾರಿಕವಾಗಿ ಗಣನೆಗೆ ಬಂದಂತ ಘಟಕಗಳು ಮತ್ತು ವ್ಯಾಪಕ ಸಂದರ್ಭಕ್ಕೆ ಸೇರಿದಂತವು. ಉದಾ : ದೃಷ್ಟಾಂತಗಳು ಉದಾರಣೆಗಳು ಸ್ಪಷ್ಟೀಕರಣ ಉದಾಹರಣೆಗಳು.

Deletion ರಚನಾತ್ಮಕ ಶೂನ್ಯಗಳನ್ನು ಒಳಗೊಳ್ಳುತ್ತದೆ. ಅಂದರೆ ಅವುಗಳ ಗೈರುಹಾಜರಿಯಲ್ಲಿ ಅಂಶಗಳು ಸುವ್ಯಕ್ತವಾಗುತ್ತವೆ. ಸಂಬಂಧಾತ್ಮಕ ಘಟಕಗಳನ್ನು ತೆಗೆದುಹಾಕುವುದು asyndeton ಮತ್ತು ellipsisನ ಮುಖ್ಯವಾದ ರೂಪವು ವ್ಯಾಕರಣಾತ್ಮಕ, ಗುಣಾತ್ಮಕ ಅಂಶಗಳನ್ನು ಬಿಟ್ಟು ಬಿಡುವುದೇ ಆಗಿದೆ.

ವಸ್ತುವನ್ನು ಕೆಲವೇ ಸಾಧ್ಯವಾದ ತರಗಳಲ್ಲಿ ತರುವುದೇ ಸಾಂದ್ರೀಕರಣ ಸಾರೋಕ್ತಿಗಳಿಗೆ aphorism ವಿಶಿಷ್ಟವಾದ ಚಲನೆ ಅಂದರೆ ಗಾದೆಗಳು ಮತ್ತು ಸೂತ್ರಗಳು ಮತ್ತು ಕೆಲವು ಬರವಣಿಗೆಗಳು Lelegraphic ಶೈಲಿಯಲ್ಲಿಯೂ ಇರಬಹುದು.

ಸ್ಥಿತ್ಯಾಂತರವು ಕೆಲವಾರು ವಿವಿಧ ಸಂಬಂಧ ಸೂಚಕ ವ್ಯಯಗಳ ಬಳಕೆಯನ್ನು ಒಳಗೊಂಡಿರುತ್ತದೆ. ಮುಖ್ಯವಾಗಿ ಸಂಯೋಜಕ ಮತ್ತು ಅಧೀನ ಬಂಧವನ್ನು ಗುರ್ತಿಸುವ ಸಂಬಂಧ ಸೂಚಕ ವ್ಯಯಗಳು ಆದರೆ ಸಂಬಂಧ ಸೂಚಕ ವಿಶೇಷಣಗಳು ಮತ್ತು ಪದ ಪುಂಜಗಳು ಬಹಳ ಉಪಯುಕ್ತವಾದವುಗಳಾಗಿವೆ.

Ex. Moreover Meanwhile as a result– ಕೆಲವಾರು ಭಾಷೆಗಳಲ್ಲಿ Clauses overleap ಆಗುವುದರಿಂದ ಇಂಥ ಸಾಲುಗಳು ಸೃಷ್ಟಿಯಾಗುತ್ತವೆ.

"John went town, having gone to town, & brought a shirt" ಮೇಲಿನ ಸಾಲಿಗೆ ಇದು ಉದಾಹರಣೆ.

Reference ಕೂಡ ಸಂಬದ್ಧತೆಯನ್ನು ಗುರ್ತಿಸುವ ನಿರ್ಣಾಯಕ ಮಧ್ಯಮ ವಾಗುತ್ತದೆ ಮುಖ್ಯವಾಗಿ ನಾಮಪದಗಳ ಜಾಗದಲ್ಲಿ ಸರ್ವನಾಮಗಳು ಮತ್ತು ನಿರೂಪಕಗಳನ್ನು ಉಪಯೋಗಿಸಲಾಗುತ್ತದೆ.

Ex. Professor william Jones, our teacher a distinguished Scholer, a tru friend.

ವ್ಯಾಕರಣರಹಿತತೆಯನ್ನು ಸಾಂಪ್ರದಾಯಿಕವಾಗಿ, ವ್ಯಾಕರಣ ಸೂತ್ರಗಳ ನಿರ್ದಿಷ್ಟ ಮಾರ್ಗಾಂತರಗಳಿಗಾಗಿ, ಸಂಕುಚಿತವಾಗಿ ಗುರ್ತಿಸಬಹುದು. ಇದನ್ನು ಪಠ್ಯದ ಒಂದು ವಿಶಿಷ್ಟ ಅಂಶವನ್ನು ಎತ್ತಿತೋರಿಸುವ ಪ್ರಯತ್ನವಾಗಿ ಉಪಯೋಗಿಸಲಾಗುತ್ತಿತ್ತು. ಆದರೆ ಇದನ್ನು ಓದುಗನ ಮೇಲೆ ಪ್ರಭಾವ ಬೀರಲು ಈಚೆಗೆ E. E. Commings ಅಂತಹವರು ಬಳಸುತ್ತಿದ್ದಾರೆ.

Mefonyny ಮತ್ತು ರೂಪಕಗಳಷ್ಟೆ ಅಲಂಕಾರಿಕ ಭಾಷೆಯಲ್ಲಿ ಕೆಲವು ಸಾರಿ ಅಲಂಕಾರದ ವಿಸ್ತರಣೆಯಾಗಬಹುದು. ದೃಷ್ಟಾಂತಗಳು, ವ್ಯಂಗ್ಯೋಕ್ತಿಗಳು, ಗಾದೆಗಳು, ಒಗಟುಗಳೂ ಕೂಡ ಅಲಂಕಾರಿಕ ಭಾಷೆಯ ಬಗೆಗಳಾಗಿವೆ.

ಮೂಲಭಾಷಿಕ ಅರ್ಥ ಮತ್ತು ವಿಸ್ತರಿಸಿದ ಅರ್ಥದ ನಡುವೆ ಏರ್ಪಡುವ ಮಾನಸಿಕ ಕರ್ಷಣ (Tenbias) ಯಲ್ಲಿ ಭಾಷೆಯ ಪ್ರಭಾವ ಮತ್ತು ಪರಿಣಾಮವನ್ನು ಗುರುತಿಸಬಹುದು. ಆದರೆ ಅತಿಯಾದ ಅಲಂಕಾರಿಕ ಭಾಷೆಯ ಬಳಕೆ ತನ್ನ ಅರ್ಥವನ್ನು ಕಡಿಮೆ ಮಾಡಿಕೊಳ್ಳುತ್ತವೆ.

ಪದಗಳ ಅರ್ಥದ ಪ್ರಕ್ರಿಯೆಯು ವಾಗ್ವೈಖರಿಯ ವಿಧಾನದಲ್ಲಿ ಪ್ರಮುಖವಾಗಿ ಬಳಕೆಯಲ್ಲಿದೆ.

(1) ಸಾಂದರ್ಭಿಕವಾಗಿ ಸಮರ್ಪಕ ಅರ್ಥವಿದ್ದರೂ ಎರಡೂ ರೀತಿಯ ಅರ್ಥದಲ್ಲಿ ಬಳಸುವುದು.

(2) ಭಾಷೆಯ ಪರಂಪರಾಗತ ಅರ್ಥಗಳು.

(3) ಶ್ಲೇಷೆಗಳು.

ಧ್ವನಿ ಸಂಕೇತ ಕತೆಯು (1) ಧ್ವನಿಗಳ ಅನುಕರಣೆಯನ್ನು ಒಳಗೊಳ್ಳುತ್ತದೆ. Haser, Flare, Flickes, Fly ಒಂದೇ ರೀತಿಯ ಧ್ವನಿಗಳು ಓದುಗನ ಮೇಲೆ ಹೆಚ್ಚು ಪ್ರಭಾವ ಬೀರುತ್ತವೆ. ಉದ್ದೇಶಿತ ಅರ್ಥ ಸಂಧಿಗ್ದತೆ ಮತ್ತು ಅಸ್ಪಷ್ಟತೆಯು ಅಭಿವ್ಯಕ್ತಿಯ ಅರ್ಥದಲ್ಲಿ ಅನುಮಾನವನ್ನು ಮೂಡಿಸಬಹುದು. ಅರ್ಥ ಸಂದಿಗ್ಧತೆಯಲ್ಲಿ ಸಾಮಾನ್ಯವಾಗಿ ಎರಡು ಅರ್ಥಗಳಿದ್ದು, ಅಸ್ಪಷ್ಟತೆಯಲ್ಲಿ ಯಾವುದೇ ಅರ್ಥವಿರುವುದಿಲ್ಲ.

ಮಾತುಗಾರರು ಮತ್ತು ಬರಹಗಾರರು ಅರ್ಥ ಸಂಧಿಗ್ಧತೆಯನ್ನು ಕೇಳುಗ ಚಡಿಪಡಿಸುವಂತೆ ಮಾಡಲು ಮತ್ತು ಅಸ್ಪಷ್ಟ ಸಂಬಂಧವನ್ನು ಸ್ಥಾಪಿಸಲು ಉಪಯೋಗಿಸುತ್ತಾರೆ.

ಅರ್ಥದ್ರುವ ಭಿನ್ನತೆಯು 1) ವ್ಯಂಗ್ಯ–ಭಾಷಿಕವಾಗಿ ಹೇಳುವುದರಿಂದಾದ 2) ವಿರೋದಾಭಾಸ ಅಸಂಗತ ಮತ್ತು ಅಸತ್ಯವಾಗಿ ವ್ಯಂಗ್ಯ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ ಅಲ್ಲದೆ ಅತಿಶಯೋಕ್ತಿ, ಸೌಮ್ಯೋಕ್ತಿ ಮತ್ತು ಸಾಮಾನ್ಯವಾಗಿ ಬಳಸಲ್ಪಡುತ್ತವೆ. ವ್ಯಾಕರಣ ಕಾರ್ಯಗಳು ಅರ್ಥಗಳಲ್ಲಿ ಬದಲಾವಣೆಗಳು ಮನೆ ಪ್ರಶ್ನೆಗಳನ್ನಷ್ಟೆ ಒಳಗೊಳ್ಳುತ್ತದೆ. (Meant to be stong declarations) ಅಜ್ಞಾರ್ಥಕ ಘೋಷಣೆಗಳಾಗುತ್ತವೆ. ಪರೋಕ್ಷತೆಯು ಮುಗ್ಧವಾದಂತಹ ಅಥವಾ ಔಚಿತ್ಯಪೂರ್ಣವಲ್ಲದ ಒಂದು ಹೇಳಿಕೆಯಾಗುವುದಲ್ಲದೆ ಅದೇ ಸಂದರ್ಭದಲ್ಲಿ ಅದಕ್ಕಿಂತ ಸಂಪೂರ್ಣವಾಗಿ ಬೇರೆಯಾದ ಸಂದೇಶವನ್ನು ತಿಳಿಸುತ್ತದೆ. ಬಹಳ ಸಾದರಣೀಕೃತ ಸಿದ್ಧಾಂತಗಳನ್ನು (ವಿಚಾರಗಳನ್ನು) ಸಂವಹನಗೊಳಿಸಲು ಒಂದು ನಿರ್ದಿಷ್ಟ ಭಾಷೆಯನ್ನು ಬಳಸವುದರಿಂದ ಹೆಚ್ಚು ಪರಿಣಾಮಕಾರಿಯಾಗಿ ಪತ್ಯದ ಉದ್ದೇಶವನ್ನು ವ್ಯಕ್ತಪಡಿಸಬಹುದು. ಇದನ್ನು ಚಿತ್ರ ಪ್ರತಿಮೆಗಳ ಮೂಲಕ ಹೆಚ್ಚು ಪರಿಣಾಮಕಾರಿಯಾಗಿಸಬಹುದು.

Semotactic ವ್ಯತಿರಿಕ್ತಗಳು (ವಿರೋದಾಭಾಸಗಳ) ಅಸಾಧ್ಯವಾಗಿ ತೋರುವ ಪದಗಳ ಸಂಯೋಜನೆಯಾಗಿದ್ದರೂ ಅರ್ಥವನ್ನು ಸಂವಹಿಸುವುದಾಗಿರುತ್ತದೆ.

ಸಾಂಪ್ರದಾಯಿಕವಾಗಿ ಇದರ ಒಂದು ವಿಧವನ್ನು exymoron ಎಂದು ಕರೆಯುತ್ತಾರೆ. ಆದರೆ ನವ್ಯೋತ್ತರ ಕವಿಗಳು Semotic ಆಗಿ ವ್ಯಕ್ತವಾದ ಪದ ಸಂಯೋಜನೆಗಳಲ್ಲದೆ ಅಸಹಜ ವಾಕ್ಯಗಳನ್ನು ಕೂಡ ಉಪಯೋಗಿಸಿದ್ದಾರೆ.

ಸಾಹಿತ್ಯಾಭ್ಯಾಸಿಗಳಿಗೆ ಮತ್ತು ಸಾಹಿತ್ಯ ಕೃತಿಗಳ ಅನುವಾದಕರಿಗೆ ವಾಗ್ವೈಖರಿಯ ರಚನೆ ಮತ್ತು ತಂತ್ರಗಳ ಔಪಚಾರಿಕ ಅಂಶಗಳು ಮುಖ್ಯವಾಗಿರದೆ ಅದರ ವೈವಿಧ್ಯ ಕಾರ್ಯ ವೈಖರಿಯು ಹೆಚ್ಚು ಉಪಯೋಜನಕಾರಿಯಾಗಿದೆ. ಇದು ಒಂದು ಭಾಷೆಯ ಒಳ ರಚನೆಯಲ್ಲಿಯೇ ಅಲ್ಲದೆ, ಭಾಷೆಗಳ ನಡುವೆಯೂ ಕೂಡ ಕೆಲಸ ಮಾಡುತ್ತದೆ. ಭಾಷೆಯ ಒಳಗಡೆ ರಚನೆಯಲ್ಲಿನ ಕಾರ್ಯ. Ex. ಇಂಗ್ಲೀಷ್‌ನಲ್ಲಿ ರೂಪ ಮತ್ತು ವಸ್ತುವಿನ ಸಾಲುಗಳ ಸಮಾನಾಂತರತೆ Liturgical Text ಗಳಲ್ಲಿ ಹೆಚ್ಚು ಪ್ರಶಂಸೆಯನ್ನು ಪಡೆದುಕೊಳ್ಳುತ್ತದೆ. ಆದರೆ ಪ್ರಬಂಧಗಳಲ್ಲಿ ಇದಕ್ಕೆ ಸ್ಥಾನವಿಲ್ಲ. Ex. ಒಂದು ಪ್ರದೇಶಿಕ ಭಾಷೆಯ ಭಾಷಣಗಳಲ್ಲಿ ಹೆಚ್ಚು ಪುನರಾವರ್ತನೆಗಳು, ಪ್ರಾಸ, ಒಳಪ್ರಾಸವೂ ಕೂಡ ಬೇರೆ ಭಾಷೆಗಳಿಗಿಂತ ಭಿನ್ನವಾಗಿ ಉಪಯೋಗಿಸಲ್ಪಡಬಹುದು.

ಕೆಲವು ಭಾಷೆಗಳ ಹೆಚ್ಚು ವೇಗ ಗತಿಯನ್ನು ಹೊಂದಿದರೆ ಇನ್ನು ಕೆಲವು ಭಾಷೆಗಳು ಮಂದಗತಿಯನ್ನು ಹೊಂದಿರುತ್ತವೆ. ಇವನ್ನು ಮಾತನಾಡುವನ ನೆಲೆಯಲ್ಲಿ ಗುರ್ತಿಸಬಹುದು.

ಭಾಷೆಗಳ ನಡುವೆ, ಕಾರ್ಯ ಭಿನ್ನತೆ. ಹೆಚ್ಚು ಸುವ್ಯಕ್ತವಾಗುತ್ತವೆ ನಾವು ಪದಗಳ ಪುನರಾವರ್ತನೆಯನ್ನು ಇಂಗ್ಲೀಷ್‌ನಲ್ಲಿ ಒತ್ತು ಕೊಡಲು ಉಪಯೋಗಿಸಿದರೆ ಇಂಡೋನೇಸೀಯ ಭಾಷೆಯಲ್ಲಿ ಬಹುವಚನೀಕರಣವನ್ನು ಗುರುತಿಸಲು ಉಪಯೋಗಿಸುತ್ತಾರೆ. ಮಹಾಕಾವ್ಯವೂ ಮುಖ್ಯವಾಗಿ ಸೂಡಾನನ ಡಿಂಕರ್ ಜನಗಳಲ್ಲಿ ಮತ್ತು ಭಾರತದ ಮಲಿಯಾಳಂ ಮಾತನಾಡುವ ಜನಗಳಲ್ಲಿ ಹೆಚ್ಚು ಜನಪ್ರಿಯವಾಗಿದೆ. ಆದರೆ ಮಹಾಕಾವ್ಯ ಶೈಲಿಯು ಯುರೋಪಿನ ಎಲ್ಲಾ ಭಾಷೆಗಳಲ್ಲಿ ತನ್ನ ಅವನತಿಯನ್ನು ಕಂಡಿದೆ.

ವಾಗ್ವೈಖರಿಯ ರಚನೆಗಳು ಮತ್ತು ತಂತ್ರಗಳು ತಾವೇ ಗುರಿಯಾಗಿರದೆ ಜನರ ಮತ್ತು ವಿಚಾರಗಳ (Propositions) ನಡುವಿನ ಸೂಕ್ಷ್ಮ ಮತ್ತು ಸಂಕೀರ್ಣ ಮಾಧ್ಯಮವಾಗಿ ಕೆಲಸ ನಿರ್ವಹಿಸುತ್ತದೆ.

ಕಾವಲ್ಲಮ್ಮ ಗ್ರಾಮ ದೇವತೆ—ಒಂದು ಸಾಂಸ್ಕೃತಿಕ ವಿಶ್ಲೇಷಣೆ

ಕಾವಲ್ಲಮ್ಮ ಆರ್.

ದೇವರುಗಳ ಕಲ್ಪನೆ ನಮ್ಮ ಬದುಕಿನ ಅವಿಭಾಜ್ಯ ಅಂಗವಾಗಿದೆ. ಅದರಲ್ಲೂ ನಮ್ಮ ಗ್ರಾಮೀಣ ಜನರ ದಿನನಿತ್ಯದ ಬದುಕಿನಲ್ಲಿ ದೇವರುಗಳ ಪಾತ್ರ ವಿಶಿಷ್ಟವಾದುದು. ಅವರ ಪ್ರತಿಯೊಂದು ವ್ಯವಹಾರಗಳಲ್ಲಿ ದೇವರುಗಳು ಒಂದಲ್ಲ ಒಂದು ರೀತಿಯಲ್ಲಿ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಂಡಿವೆ. ಗ್ರಾಮದ ಏಳಿಗೆ, ವಿನಾಶ, ಹಬ್ಬ ಹರಿದಿನಗಳು, ರೀತಿ ನೀತಿಗಳು, ಅವರ ಆಚಾರ ವಿಚಾರಗಳು, ಹೀಗೆ ಎಲ್ಲಾ ಕ್ಷೇತ್ರಗಳಿಗೂ ಯಾವುದೇ ನಿರ್ಬಂಧವಿಲ್ಲದೆ ದೇವರುಗಳಿಗೆ ಪ್ರವೇಶವನ್ನು ನೀಡಿದ್ದಾರೆ. ನಮ್ಮ ಪಾಪ ಪುಣ್ಯಗಳನ್ನು, ನಡೆ ನುಡಿಗಳನ್ನು ದೇವರು ಸದಾ ನೋಡುತ್ತಿರುತ್ತಾನೆ. ಈ ಜನ್ಮದಲ್ಲಿ ಮಾಡಿದ ಪಾಪ ಪುಣ್ಯಗಳಿಗೆ ಅನುಗುಣವಾಗಿ ಮುಂದಿನ ಜನ್ಮ ನೀಡುತ್ತಾನೆ ಎಂಬ ನಂಬಿಕೆ ಅವರಲ್ಲಿ ಆಳವಾಗಿ ಬೇರೂರಿದೆ. ಊರಿಗೆ ತೊಂದರೆಯಾದರೆ ತಮ್ಮ ದನಕರುಗಳಿಗೆ ರೋಗ ಬಂದರೆ, ತಮ್ಮ ಮಕ್ಕಳು ಮರಿಗಳಿಗೆ ಕಾಯಿಲೆ ಬಂದರೆ ಅಂತಹ ಸಂದರ್ಭಗಳಲ್ಲಿ ತಮ್ಮನ್ನು ರಕ್ಷಿಸುವಂತೆ ಹರಕೆ ಹೊರುತ್ತಾರೆ. ಮೂಲ ಕಥೆಯಲ್ಲಿ ಈ ದೇವರುಗಳಿರಲಿ ಬಿಡಲಿ ಆದರೆ ಈ ದೇವ ದೇವಿಯನ್ನು ಆರಾಧಿಸುವ ಜನ ತಮ್ಮ ತೃಪ್ತಿಗಾಗಿ ತಮ್ಮ ಆಸೆ, ಆಕಾಂಕ್ಷೆ, ಅನಿಸಿಕೆಗಳನ್ನೆಲ್ಲ ತಾವು ಪೂಜಿಸುವ ದೇವರ ಮೇಲೆ ಹೇರಿ ಪುರಾಣ ಕಥೆಗಳಿಗೆ ಹೊಸ ಆಯಾಮ ನೀಡುತ್ತಾರೆ.

ಪ್ರಕೃತಿ ದೇವತೆಗಳಿಂದ ಹಿಡಿದು ಪೌರಾಣಿಕ ಹಾಗೂ ಜನಪದದ ಎಲ್ಲ ದೇವರುಗಳನ್ನು ತಾರತಮ್ಯವಿಲ್ಲದೆ ಪೂಜಿಸುತ್ತಾರೆ. ಆದರೆ ತಾವು ಪೂಜಿಸುವ ದೇವರುಗಳು ಬರಿಯ ಕಲ್ಲಿನ ಮೂರ್ತಿಗಳೆಂದು ಭಾವಿಸುವುದಿಲ್ಲ, ದೇವರುಗಳಿಗೂ ಜೀವ ಭಾವವನ್ನು ಕೊಟ್ಟು ತಮ್ಮ ಜೀವನದ ಪ್ರತಿಯೊಂದು ಅಂಶಗಳನ್ನು ದೇವರಲ್ಲಿ ಪ್ರತಿಬಿಂಬಿಸುತ್ತಾರೆ. ತಮ್ಮ ಕಷ್ಟಗಳಲ್ಲಿ ತಾನು ನಂಬಿದ ದೇವರುಗಳು ಸಹಾಯ ಮಾಡದಿದ್ದರೆ ಆ ಕಲ್ಲಿನಮೂರ್ತಿ ಎದುರು ನಿಂತು ಬಯ್ಯುವುದು ಮತ್ತು ಸಂಭಾಷಣೆ ನಡೆಸುವುದು ತುಂಬಾ ಮಾರ್ಮಿಕವಾಗಿರುತ್ತದೆ.

ಭಾರತದಲ್ಲಿ ಮಾತೃದೇವತೆಗಳ ಆರಾಧನೆ ಬಹಳ ವಿಶಿಷ್ಟ ರೀತಿಯದು. ಪ್ರತಿಯೊಂದು ದೇವತೆಯ ಉಗಮದ ಹಿಂದೆ ಒಂದು ಪುರಾಣವಿರುತ್ತದೆ. ಹೆಣ್ಣು ಶಕ್ತಿ ಸ್ವರೂಪಿಣಿ ಎಂಬ ಅಚಲ ನಂಬಿಕೆ ಇದೆ. ಆದ್ದರಿಂದಲೇ ಇಂದಿಗೂ ಒಂದಕ್ಕಿಂತ ಹೆಚ್ಚು

ದೇವತೆಗಳು ಒಂದು ಗ್ರಾಮದಲ್ಲಿ ಪೂಜಿಸಲ್ಪಡುತ್ತವೆ. ಈ ಶಕ್ತಿದೇವತೆಗಳಲ್ಲಿ ಕೆಲವು ಉಗ್ರದೇವತೆಗಳಾದರೆ ಮತ್ತೆ ಕೆಲವು ಸೌಮ್ಯದೇವತೆಗಳು. ಉಗ್ರದೇವತೆಗಳು ಪ್ರಾಣಿ ಬಲಿಯಿಂದ ಸಂತೃಪ್ತರಾದರೆ ಸೌಮ್ಯದೇವತೆಗಳು ಹಾಲು, ತುಪ್ಪ, ಹಣ್ಣುಹಂಪಲು ಗಳಿಂದ ತೃಪ್ತರಾಗುತ್ತಾರೆ. ಮಾರಮ್ಮ, ಮಹೇಶ್ವರಮ್ಮ, ಚೌಡಮ್ಮ, ಕರಿಯಮ್ಮ, ಜಡಲಮ್ಮ ಮುಂತಾದ ದೇವತೆಗಳು ಉಗ್ರರೂಪದ ದೇವತೆಗಳಾದರೆ, ನಾಗಮ್ಮ, ಲಕ್ಕಮ್ಮ, ಅವಶ್ಮಾಜಮ್ಮ ಮುಂತಾದ ದೇವತೆಗಳು ಸೌಮ್ಯದೇವತೆಗಳಿವೆ.

ತುಮಕೂರು ಜಿಲ್ಲೆಯ ವಿಶೇಷವಾಗಿ ಮಧುಗಿರಿ ತಾಲ್ಲೋಕಿನ ರೆಡ್ಡಿಹಳ್ಳಿ ಮತ್ತು ಭಕ್ತರ ಹಳ್ಳಿಗಳಲ್ಲಿ ಹಾಗೂ ಶಿರಾ ತಾಲ್ಲೋಕಿನ 'ನೇಗಿಲ ಹೊಲ' ಮತ್ತು ಬುಕ್ಕಾಪಟ್ಟಣದಲ್ಲಿ ನೆಲೆಸಿರುವ ಕಾವಲ್ಲಮ್ಮನು ಸೌಮ್ಯದೇವತೆಯರ ಸಾಲಿಗೆ ಸೇರುತ್ತಾಳೆ. ರೆಡ್ಡಿಹಳ್ಳಿ ಮತ್ತು ಬುಕ್ಕಾಪಟ್ಟಣಗಳಲ್ಲಿ ನೆಲಸಿರುವ ಕಾವಲ್ಲಮ್ಮನು, ಗ್ರಾಮ ದೇವತೆಯಾಗಿ, ಅಸ್ಪೃಶ್ಯರಲ್ಲಿ ಬರುವ 'ಮಾದಿಗ' ಎನ್ನುವ ಒಂದು ಜಾತಿ ಯನ್ನುಳಿದು ಉಳಿದ ಎಲ್ಲರಿಂದಲೂ ಪೂಜಿಸಲ್ಪಡುತ್ತಾಳೆ. ಆದರೆ ಭಕ್ತರುಳ್ಳಿ ಮತ್ತು 'ನೇಗಿಲ ಹೊಲ' ದಲ್ಲಿ ನೆಲೆಸಿರುವ ಕಾವಲ್ಲಮ್ಮನನ್ನು ಈ ಮೇಲೆ ಹೇಳಿದ ಒಂದು ಜಾತಿಯನ್ನುಳಿದು ಎಲ್ಲರೂ ಪೂಜಿಸಿದರು ಕುಂಚಿಟಿಗ ಒಕ್ಕಲಿಗರ 'ಶೆಟ್ಟಿನೋರ' ವಂಶಕ್ಕೆ ಮನೆದೇವತೆ ಮತ್ತು ಕುಲದೇವತೆಯಾಗಿದ್ದಾಳೆ. ಆದರೆ ಈ ಪರಿಶಿಷ್ಟ ಜಾತಿಯವರು ಯಾಕೆ ಈ ದೇವತೆಯನ್ನು ನೋಡಬಾರದು ಎಂಬ ಪ್ರಶ್ನೆಗೆ ಅವರು ನೋಡಿದರೆ ಅವರಿಗೆ ಬರಬಾರದ ಕಷ್ಟನಷ್ಟಗಳು ಬರುತ್ತವೆ ಎಂಬ ಭೀತಿಯ ಉತ್ತರ ವನ್ನು ನೀಡುತ್ತಾರೆ. ಆದರೆ ಇಂದಿಗೂ ಆ ಜಾತಿಯವರು ನೋಡುವ ಪ್ರಯತ್ನ ವಾಗಲೀ ಉಳಿದವರು ಆ ದೇವಿಯನ್ನು ತೋರಿಸುವ ಪ್ರಯತ್ನ ನಡೆಯದೆ ಇರುವುದು ಶೋಚನೀಯ ಸಂಗತಿ.

ಈ ದೇವತೆಯ ಉಗಮಕ್ಕೆ ಕಾರಣಗಳನ್ನು ಹುಡುಕಿದಾಗ, ಕಾವಲು ಎಂದರೆ 'ರಕ್ಷಣೆ', ಪಹರೆ ಎಂಬ ಅರ್ಥದ ಹಿನ್ನೆಲೆಯಲ್ಲಿ ಗ್ರಾಮದ ರಕ್ಷಣಾ ದೇವತೆಯಾಗಿರ ಬಹುದೆಂಬುದು ಒಂದು ಆಶಯವಾದರೆ, ಸಂತಾನ ಭಾಗ್ಯ ನೀಡುವ ದೇವತೆ ಎಂಬ ನಂಬಿಕೆಯೂ ಇದೆ. ಮಧುಗಿರಿ ಮತ್ತು ಶಿರಾ ತಾಲ್ಲೋಕಿನಲ್ಲಿ ತೆಲುಗಿನ ಪ್ರಭಾವವಿದ್ದು, ತೆಲುಗಿನಲ್ಲಿ 'ಕಾವಲ್ಲ' ಎಂದರೆ ಬೇಕು ಎಂದರ್ಥ. ಸಾಮಾನ್ಯವಾಗಿ ಹಳ್ಳಿಗಳಲ್ಲಿ ಹೆಚ್ಚು ಹೆಣ್ಣು ಮಕ್ಕಳಾದರೆ ಕೊನೆಯ ಮಗಳಿಗೆ 'ಸಾಕಮ್ಮ' ನೆಂಬ ಹೆಸರು ಇಡುವ ರೂಢಿ ಇಂದಿಗೂ ಇದೆ. ಹಾಗೆಯೇ ಮಕ್ಕಳು ಬೇಕು ಎನ್ನುವ ಕಾರಣದಿಂದ ಕಾವಲ್ಲಮ್ಮ ನೆಂದು ಇಟ್ಟಿರಲೂಬಹುದು. ಇಂದಿಗೂ ಈ ದೇವಿಯ ಉತ್ಸವ ಸಮಯದಲ್ಲಿ ಮಕ್ಕಳಿಲ್ಲದ ಮಹಿಳೆಯರು ಮೊರೆಬೀಳುತ್ತಾರೆ ಮೊರೆಬಿದ್ದವರನ್ನು ದೇವಿಯ ಮೂರ್ತಿ ಹೊತ್ತವರು ತುಳಿದುಕೊಂಡು ಹೋದರೆ ಅವರಿಗೆ ಸಂತಾನ ಪ್ರಾಪ್ತಿಯಾಗುತ್ತದೆ ಇಲ್ಲವಾದರೆ ಇಲ್ಲ ಎಂಬ ನಂಬಿಕೆ ಇದೆ.

ಎಲ್ಲ ದೇವತೆಗಳ ಉಗಮದ ಬಗ್ಗೆ ಪುರಾಣಕಥೆ ಇರುವಂತೆ ಈ ದೇವಿಯು ಉಗಮದ ಬಗ್ಗೆಯೂ ಒಂದು ಜನಪದ ಕಥೆ ಇದೆ. "ಏಳು ಜನ ಅಕ್ಕತಂಗಿಯರಾದ ದೇವಕನ್ನಿಕೆಯರು ದೇವಲೋಕದಿಂದ ಭೂಲೋಕಕ್ಕೆ ಬರುವ ಆಸೆಯಾಗಿ, ಬೆಂಡಿನ ರಥದಲ್ಲಿ ಕುಳಿತು ಬರುವಾಗ ಸಣ್ಣ ಜಾಲಿಮುಳ್ಳು, ಸಾಘುಗಪ್ಪಿನ ಭರಣಿ, ಹಸಿರು ಕುಂಡಲಿಕೆಗಳನ್ನು ಹಿಡಿದು ಬರುತ್ತಾರೆ. ಬರುವ ದಾರಿಯ ಮಧ್ಯದಲ್ಲಿ ಗಾಳಿ ನಿಂತು ಹೋಗಿ ರಥವು ಚಲಿಸದಂತೆ ಆಗುತ್ತದೆ. ಆಗ ಗುಂಗಾರಿ ಹುಳುಗಳನ್ನು ಕರೆದು ಗಾಳಿ ನಿಂತಲ್ಲಿ ನೀವು ರಥವನ್ನು ನಡೆಸಿರಿ ಎಂದು ಆಜ್ಞೆ ಮಾಡುತ್ತಾರೆ[1]. ಇಲ್ಲಿ ಬರುವ ಸಣ್ಣ ಜಾಲಿಮುಳ್ಳು ಮಧುಗಿರಿ ಮತ್ತು ಶಿರಾ ಪ್ರದೇಶಗಳಲ್ಲಿ ಹೆಚ್ಚಾಗಿ ಕಂಡುಬರುವ ಒಂದು ಸಸ್ಯವೇ ಹೊರತು ದೇವಲೋಕದ್ದಲ್ಲ. ಇನ್ನೂ ಸಾಘುಗಪ್ಪು ಎಂದರೆ ಈ ಪ್ರದೇಶ ಗಳಲ್ಲಿ ತಮ್ಮ ಮನೆಯ ತೊಲೆ ಮತ್ತು ಕಂಬಗಳಿಗೆ ಬಣ್ಣ ಬಳಿಯುವ ಸಲುವಾಗಿ ಧಾನ್ಯಗಳನ್ನು ಚೆನ್ನಾಗಿ ಹುರಿದು ಕುಟ್ಟಿ ಚೆನ್ನಾಗಿ ಕಾಯಿಸಿ ಮಾಡುವ ಒಂದು ರೀತಿಯ ಕಪ್ಪು ಬಣ್ಣವಾಗಿದೆ. ಅಂದರೆ ತಮ್ಮ ಭೌಗೋಳಿಕ ಪರಿಸರದಲ್ಲಿ ಸಂಭವಿಸಿದ ಯಾವುದೇ ಒಂದು ಘಟನೆ ದೇವರ ಉಗಮಕ್ಕೆ ಕಾರಣವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಭಾವನಾತ್ಮಕ ಲೋಕವನ್ನು ಕಲ್ಪಿಸಿಕೊಂಡು ಕಥೆಯನ್ನು ಹೇಳುತ್ತಾರೆ ಎಂಬುದು ಸ್ಪಷ್ಟವಾಗುತ್ತದೆ.

ಭೂಲೋಕಕ್ಕೆ ಬಂದ ಈ ದೇವಕನ್ನಿಕೆಯರು ಅರಣ್ಯದಲ್ಲಿ ಬಂದು ನಿಲ್ಲುತ್ತಾರೆ. ನಂತರ ತಮ್ಮ ಬಟ್ಟೆಗಳನ್ನು ಮಡಿ ಮಾಡಬೇಕು, ಹೇಗೆ ಮಾಡುವುದೆಂದು ಯೋಚಿಸಿ ತಮ್ಮ ಬೆವರನ್ನು ತೆಗೆದು ಭೂಮಿಗೆ ಹಾಕಲು ಮಡಿವಾಳ ಮಾಸಮ್ಮ ಮತ್ತು ಕುಲ ಪುರುಷ ಹುಟ್ಟಿ ಬಂದು ಇದರ ಮುಂದೆ ನಿಂತು, 'ಅಮ್ಮ. ನಾವು ನಿಮ್ಮ ಮಕ್ಕಳು ಬಂದಿದ್ದೇವೆ' ಅಪ್ಪಣೆಯಾಗಬೇಕು ಎಂದು ಕೇಳುತ್ತಾರೆ. ಆಗ ಅವಳಿಗೆ ತಮ್ಮ ವಸ್ತ್ರ ಗಳನ್ನು ಮಡಿ ಮಾಡಿಕೊಡುವಂತೆ ಹೇಳುತ್ತಾರೆ[2]. ಇಲ್ಲಿ ಮಡಿವಾಳ ಮಾಸಮ್ಮನೇ ಏಕೆ ಹುಟ್ಟಿ ಬರಬೇಕು ? ಬೇರೆಯವರು ದೇವತೆಗಳ ವಸ್ತ್ರಗಳನ್ನು ಮಡಿ ಮಾಡ ಬಾರದಿತ್ತೆ ? ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಆದರೆ ಸಮಾಜದಲ್ಲಿನ ವ್ಯವಸ್ಥೆ ಮತ್ತು ಜಾತಿ ಪರ ವೃತ್ತಿಗಳ ಅಸ್ತಿತ್ವವನ್ನು ಪ್ರತಿಬಿಂಬಿಸುವುದೇ ಆಗಿದೆ. ಮತ್ತು ಇಲ್ಲಿ 'ಅಮ್ಮ ನಾವು ನಿಮ್ಮ ಮಕ್ಕಳು ಬಂದಿದ್ದೇವೆ.' ಎನ್ನುವ ಮಾತು ಜಾತಿ ಯಾವುದೇ ಆದರೂ ದೇವರ ಮತ್ತು ಮನುಷ್ಯರ ಸಂಬಂಧ ತಾಯಿ ಮಕ್ಕಳ ಸಂಬಂಧದ ಕಲ್ಪನೆ ಗಮನಾರ್ಹವಾಗಿದೆ.

---

1) ದೇವರ ಉಗಮದ ಬಗ್ಗೆ ಇರುವ ಜಾನಪದ ಕಥೆ.
2) ಜನಪದ ಕಥೆ

ಜನಪದ ಕಥೆ ಮುಂದುವರಿಯುತ್ತಾ ಅರಣ್ಯದಿಂದ ಇವರ ಪ್ರಯಾಣ ಹೇಮರೆಡ್ಡಿ ಪಟ್ಟಣಕ್ಕೆ ಸಾಗುತ್ತದೆ. ಅಲ್ಲಿ ರೆಡ್ಡಿಯು ತನ್ನ ಜೋಳದ ಹೊಲಕ್ಕೆ ಮನುಷ್ಯರಾಗಲಿ ಪ್ರಾಣಿಪಕ್ಷಿಗಳಾಗಲೀ ಬರದಂತೆ ಕಟ್ಟುನಿಟ್ಟಾದ ಕಾವಲು ಹಾಕಿರುತ್ತಾನೆ, ಒಂದು ಪಕ್ಷ ಪಕ್ಷಿಗಳೇನಾದರೂ ಬಂದು ಜೋಳ ತಿಂದರೆ, ಅವುಗಳನ್ನು ಹಿಡಿದು ನೇಣು ಹಾಕುತ್ತಿರುತ್ತಾನೆ. ಇದನ್ನು ನೋಡಿದ ಕಾವಲ್ಲಮ್ಮ ಇವನಿಗೆ ಬುದ್ದಿ ಕಲಿಸಬೇಕೆಂದು ಹೋಗಿ ಜೋಳದ ತೆನೆಗಳನ್ನು ಕೀಳುತ್ತಾಳೆ, ಇದನ್ನು ಕಂಡ ರೆಡ್ಡಿಯು ಕೋಪಗೊಂಡು ಅವಳ ಮುಂದಲೆ ಹಿಡಿದು, ಜೋಳದ ದಂಟಿನಿಂದ ಹೊಡೆಯಲು ಹೋಗುತ್ತಾನೆ. ಇದರಿಂದ ಕೋಪಗೊಂಡ ಕಾವಲ್ಲಮ್ಮನು "ನೀವು ಸರ್ವನಾಶವಾಗಿ ಹೋಗಿ" ಎಂದು ಶಾಪ ಕೊಡುತ್ತಾಳೆ.[3] ಇದರಿಂದ ಹೇಮರೆಡ್ಡಿ ಪಟ್ಟಣ ಹಾಳಾಗಿ ಹೋಗುತ್ತದೆ. ಎಂದು ರೆಡ್ಡಿಹಳ್ಳಿಯ ಸ್ಥಳ ಪುರಾಣ ವಿವರಿಸುತ್ತದೆ. ದೇವತೆಗಳು ದೇವಲೋಕದಿಂದ ಬಂದಿರಲಿ ಬಿಡಲಿ ಆದರೆ ಈ ಮೇಲಿನ ಪ್ರಸಂಗವು ಗುರುತರವಾದುದು. ಶ್ರೀಮಂತ ವರ್ಗದ ದೌರ್ಜನ್ಯದ ವಿರುದ್ದ ಪ್ರತಿಭಟಿಸಿದ ಹೆಣ್ಣುಮಗಳು ಮುಂದೆ ದೇವತೆಯಾಗಿ ಮಾರ್ಪಟ್ಟಿರಬಹುದು. ಹಸಿವು ಮತ್ತು ಬಡತನಗಳ ವಿರುದ್ಧ ಪ್ರತಿಭಟಿಸಿದ ಘಟನೆಗಳು ಈ ಹಿಂದೆಯೂ ಸಮಾಜದಲ್ಲಿ ಇದ್ದವೆಂದು ಈ ಕಥೆಯಿಂದ ಸ್ಪಷ್ಟವಾಗುತ್ತದೆ.

ಹೇಮರೆಡ್ಡಿ ಪಟ್ಟಣವನ್ನು ನಾಶಮಾಡಿದ ಮೇಲೆ ತಮ್ಮ ಪ್ರಯಾಣವನ್ನು ಮುಂದುವರಿಸಿ, ಒಂದು ಪರ್ವತಕ್ಕೆ ಬಂದು ನಿಲ್ಲುತ್ತಾರೆ. ಅಲ್ಲಿ ವಾಸವಾಗಿದ್ದ ನ್ಯಾಸಬೇಡ ಬೇಟೆಯಾಡಿ ಆ ಪರ್ವತದ ಕುಂಬಿಯ ಮೇಲಿದ್ದ ಕಂಚಿನ ದೋಣಿಯಲ್ಲಿ ತನ್ನ ರಕ್ತಮಯವಾದ ಕೈಯನ್ನು ತೊಳೆದು ಅದೇ ನೀರನ್ನು ಕುಡಿಯುತ್ತಿದ್ದನು. ಇದನ್ನು ನೋಡಿದ ಕಾವಲ್ಲಮ್ಮನು ಇವನ ಅಂಧಕಾರವನ್ನು ಹೋಗಲಾಡಿಸಬೇಕೆಂದು, ಅವನಿಗೆ ಮೈಯಲ್ಲಿ ಉರಿ ಮತ್ತು ನೋವು ಬರುವಂತೆ ಮಾಡಿ, ತಾನು ಕೊರವಂಜಿ ವೇಷವನ್ನು ಹಾಕಿ ಅವನ ಬಳಿಗೆ ಬಂದು ಕಣಿ ಹೇಳುತ್ತಾಳೆ. ನೀನು ಮಾಡಿದ ಪಾಪ ಕಾರ್ಯದಿಂದ ನಿನಗೆ ಈ ಶಿಕ್ಷೆ ಒದಗಿದೆ. ಈ ದೋಣಿಯ ಬಳಿ ದೇವಕನ್ನಿಕೆಯರು ಬಂದು ನೆಲೆಸಿದ್ದಾರೆ. ಬೇಟೆಯಾಡಿ ಪ್ರಾಣಿಗಳನ್ನು ಕೊಂದ ಕೈಯನ್ನು ದೋಣಿಯಲ್ಲಿ ತೊಳೆದು ಆ ನೀರನ್ನು ಅಮಂಗಲ ಮಾಡಿದ್ದೀಯ, ಆದ್ದರಿಂದ ನೀನು ತಪ್ಪುಕಾಣಿಕೆಯನ್ನು ಕಟ್ಟಿ ಇಲ್ಲಿ ಒಂದು ದೇವಾಲಯವನ್ನು ನಿರ್ಮಿಸಿ ಅದರಲ್ಲಿ 'ಕಲಶ'ವನ್ನು ಇಟ್ಟು ಪೂಜಿಸಿ ಆ 'ಕಲಶ'ವನ್ನೆ ಕಾವಲ್ಲಮ್ಮನೆಂದು ಕರೆಯಬೇಕೆಂದು, ನಿನ್ನ ಮನೆತನದ ಹಿರಿಯ ಮಗನನ್ನು ಪೂಜಾರಿಯನ್ನಾಗಿ ಮಾಡು, ನಿನಗೆ ಬಂದಿರುವ ಪೀಡೆ ದೂರ

3) ರೆಡ್ಡಿಹಳ್ಳಿಯ ಸ್ಥಳಪುರಾಣ (ಈ ಊರಲ್ಲಿ ಹಾಳಾದ ಒಂದು ಕೋಟೆ ಇದೆ. ಹಳೆಕೆರೆಯ ಅವಶೇಷಗಳು ಇವೆ ಮತ್ತು ಒಂದು ಬೂದಿ ದಿಣ್ಣೆ ಇದೆ. ಇದನ್ನು ರೆಡ್ಡಿಗಳ ಸಮಾಧಿಯೆಂದು ಕರೆಯುತ್ತಾರೆ.

ವಾಗುತ್ತದೆ ಎಂದು ಹೇಳುತ್ತಾರೆ.[4] ಇಲ್ಲಿ ಬರುವ ಬೇಟೆಯಂತಹ ಪ್ರಸಂಗ ಹಿಂಸೆಯನ್ನು ಅಲ್ಲಗಳೆಯುವುದೆ ಆಗಿದೆ, ಅಲ್ಲದೇ ಕುಡಿಯುವ ನೀರು ಶುದ್ಧವಾಗಿರಬೇಕೆಂಬ ವೈಜ್ಞಾನಿಕ ಪ್ರಜ್ಞೆಯನ್ನು ಗುರ್ತಿಸಬಹುದು. ಆದರೆ ಈ ಜನಪದ ಕಥೆಯಲ್ಲಿ ಬರುವ ನ್ಯಾಸಬೇಡರು ಈಗ ದೇವಿಯ ಪೂಜಾರಿಗಳಾಗಿಲ್ಲ. ಬದಲಾಗಿ ಭಕ್ತರಳ್ಳಿ ಮತ್ತು ನೇಗಿಲ ಹೊಲದಲ್ಲಿ ಕುಂಚಿಟಿಗ ವಕ್ಕಲಿಗರ ಒಂದು ಕುಲವಾದ "ಶೆಟ್ಟಿನೂರ" ವಂಶದ ಹಿರಿಯ ಮಕ್ಕಳು ಪೂಜಾರಿಗಳಾಗಿದ್ದರೆ, ರೆಡ್ಡಿಹಳ್ಳಿ ಮತ್ತು ಬುಕ್ಕಾಪಟ್ಟಣಗಳಲ್ಲಿ "ಲಿಂಗಾಯಿತರು" ಪೂಜಾರಿಗಳಾಗಿದ್ದಾರೆ. ಈ ಪ್ರದೇಶಗಳಲ್ಲಿ ಬರುವ ಒಕ್ಕಲಿಗರು ಮತ್ತು ಲಿಂಗಾಯಿತರು ಸಸ್ಯಹಾರಿಗಳಾಗಿರುವ ಕಾರಣದಿಂದಾಗಿ ಈ ದೇವತೆ ಶಿಷ್ಟ ದೇವತೆಯಾಗಿದ್ದಾಳೆ.

ತುರುಗಾಹಿಗಳು ಮತ್ತು ಕುರಿಗಾಹಿಗಳು ಸಾಮಾನ್ಯವಾಗಿ ಆಕಾಶದೇವತೆಗಳಾದ ಪುರುಷ ದೇವರುಗಳನ್ನು ಪೂಜಿಸುತ್ತಾರೆ. ಆದರೆ ತುರುಗಾಹಿಗಳಾದ ಕಾಡುಗೊಲ್ಲರು ಈ ದೇವಿಗೆ ಭಕ್ತಿಪೂರ್ವಕವಾಗಿ ನಿಷ್ಠೆಯಿಂದ ನಡೆದುಕೊಳ್ಳುತ್ತಾರೆ. ಈ ದೇವಿಯ ಪೂಜೆಗೂ ನಿಮಗೂ ಏನು ಸಂಬಂಧವೆಂದು ಕೇಳಿದರೆ ಕಾವಲ್ಲಮ್ಮನಿಗೆ ಕಾಡುಗೊಲ್ಲರು ಸೋದರಮಾವಗಳಾಗಬೇಕೆಂದು ಹೇಳುತ್ತಾರೆ. ಕಾವಲ್ಲಮ್ಮನನ್ನು ಗೊಲ್ಲರ ಬೊಮ್ಮಣ್ಣ ತನ್ನ ಮಗನ ಮದುವೆಗೆ ಕರೆಯುವ ಪ್ರಸಂಗವನ್ನು ತುಂಬಾ ಸೊಗಸಾಗಿ ಹಾಡಿನ ರೂಪದಲ್ಲಿ ಹೇಳುತ್ತಾರೆ. ಆದರೆ ಕಾವಲು ಎಂದರೆ ಬಯಲು, ದಿಗಂತ ಎಂಬ ಅರ್ಥಗಳು ಇವೆ, ಆದ್ದರಿಂದ ಬಯಲು ದೇವತೆಯು ಆಗಿರಬಹುದು. ಅದೇ ಕಾರಣದಿಂದ ಗೊಲ್ಲರು ಈ ದೇವಿಯನ್ನು ಪೂಜಿಸುತ್ತಿರಬಹುದು. ಈ ದೇವಿಯ ಉತ್ಸವ ಸಂದರ್ಭದಲ್ಲಿ ಇವರು ಮಾಡುವ ಪಂಜಿನ ಸೇವೆ ಮತ್ತು ಕೋಲಾಟಗಳು ಮನರಂಜಕವಾಗಿವೆ.

ದೇವತೆಗಳು ಹೇಗಾದರೂ ಉಗಮವಾಗಲಿ ಆದರೆ ದೇವತೆಗಳಿಗಾಗಿ ಮಾಡುವ ವಿಶೇಷ ಪೂಜೆ, ಉತ್ಸವ, ಜಲದಿ, ಜಾತ್ರೆ ಮುಂತಾದ ವಿಶೇಷ ಸಂದರ್ಭಗಳಲ್ಲಿ ತಮ್ಮ ನೆಂಟರಿಷ್ಟರನ್ನು ಕರೆಯಿಸಿ ಧಾರ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಸಮಾವೇಶವನ್ನು ನಡೆಸುತ್ತಾರೆ. ಇವರು ಆಚರಿಸುವ ಆಚರಣೆಗಳು ಕಾಲಾಂತರದಲ್ಲಿ ನಿಯಮಗಳಾಗಿ ಪರಿಣಮಿಸಿ ಸಾಮಾಜಿಕ ಭದ್ರತೆಗೆ ನಾಂದಿಯಾಗುತ್ತವೆ. ಈಗಲೂ ತುಂಬ ನಿಷ್ಠೆಯಿಂದ ನಡೆಯುವ ಮನೆಯಲ್ಲಿ ಹಾವು ಚೇಳುಗಳೇನಾದರೂ ಕಾಣಿಸಿದರೆ ನಮ್ಮ ಮನೆಯಲ್ಲಿ ಏನೋ ಅಪಚಾರವಾಗಿದೆ, ಸೂತಕ ತಗಲಿದೆ ಎಂದು ನಂಬಿ ತಪ್ಪು ಕಾಣಿಕೆ

4) ಕಂಚಿನ ದೋಣಿಯ ಸ್ಥಳ ಪುರಾಣ ಮತ್ತು ಜನಪದ ಕಥೆ.

ಕಟ್ಟಿ ದೇವಾಲಯಕ್ಕೆ ಹೋಗಿ ಪೂಜೆ ಮಾಡಿಸುತ್ತಾರೆ.* ಸಾಮಾನ್ಯವಾಗಿ ಭಾರತದ ಎಲ್ಲಾ ದೇಶೀಯರ ಪೂಜೆ ಮಂಗಳವಾರ ಮತ್ತು ಶುಕ್ರವಾರ ನಡೆದರೆ ಈ ದೇವಿಯ ಪೂಜೆ ಸೋಮವಾರ ನಡೆಯುವುದು ವಿಶೇಷವಾಗಿದೆ.

ವ್ಯವಸಾಯದ ಕಷ್ಟ ಕೆಲಸದ ನಡುವೆಯೂ ತಮ್ಮ ಬಡತನದ ಬೇಗೆಯ ಮರೆಯಲ್ಲಿಯೂ ತಮ್ಮ ಕಷ್ಟ ದುಃಖಗಳನ್ನು ಮರೆಯಲು ವರ್ಷಕ್ಕೊಮ್ಮೆ ಮಾಡುವ ಇಂತಹ ಧಾರ್ಮಿಕ ಆಚರಣೆಗಳು ಅವರ ಮುಗ್ಧ ಬದುಕಿಗೆ ನವಚೇತನವಾಗಿರುತ್ತವೆ. ಗ್ರಾಮೀಣ ಜನರ ಸಾಂಸ್ಕೃತಿಕ ಬದುಕನ್ನು ತಿಳಿಯಬೇಕೆಂದರೆ ಕೇವಲ ಗ್ರಂಥಗಳಲ್ಲಿ ಬರುವ ವಿವರಣೆಯಿಂದ ಸಾಧ್ಯವಾಗುವುದಿಲ್ಲ. ಇವರು ಆಚರಿಸುವ ಹಬ್ಬ ಹರಿದಿನ, ಜಾತ್ರೆ, ಉತ್ಸವ ಮುಂತಾದ ಕಾರ್ಯಕ್ರಮಗಳಲ್ಲಿ ಅವರೊಂದಿಗೆ ಪಾಲ್ಗೊಂಡು ಆ ಸಂತೋಷವನ್ನು ಅನುಭವಿಸಿದಾಗ ಮಾತ್ರ ಸಾಧ್ಯವೆಂಬುದು ನನ್ನ ಅನಿಸಿಕೆ.

ಮೂಲ ಆಧಾರಗಳು

1) ಜನಪದ ಕಥೆ—(1937 ರಲ್ಲಿ ದಾಖಲು ಮಾಡಿದ ಕಥೆಯ ಪ್ರತಿಯನ್ನು ಮಿಡಿಗೇಶಿ ಛಲವಾದಿ ನಾಗಪ್ಪನವರಿಂದ ಪಡೆದಿರುತ್ತೇನೆ).
2) ಜನಪದ ಕಾವ್ಯ—(ಕಾಡುಗೊಲ್ಲರು ಹೇಳುವ ಈ ದೇವಿಯನ್ನು ಕುರಿತಾದ ಹಾಡುಗಳು).
3) ಸ್ಥಳ ಪುರಾಣಗಳು (ಕ್ಷೇತ್ರ ಸಂದರ್ಶನ ಸಮಯದಲ್ಲಿ ಆಯಾ ಊರಿನ ಜನತೆ ಹೇಳಿದ ಸ್ಥಳ ಪುರಾಣ ಕಥೆ).
4) ಡಾ॥ ಸಿದ್ದಲಿಂಗಯ್ಯ—ಗ್ರಾಮದೇವತೆಗಳು ಒಂದು ಅಧ್ಯಯನ (ಅಪ್ರಕಟಿತ ಮಹಾ ಪ್ರಬಂಧ).

ಅನುಷಾಂಗಿಕ ಗ್ರಂಥಗಳು

1) ಕರ್ನಾಟಕ ಜಾತ್ರೆಗಳು : ಸಂಪಾದಕರು, ಹಿ. ಎಸ್. ಕುಮಾರಸ್ವಾಮಿ, ಮೈಸೂರು ವಿಶ್ವವಿದ್ಯಾನಿಲಯದ ಪ್ರಕಟಣೆ.
2) ಮಲೆನಾಡು ಜಾನಪದ : ಸಂಪಾದಕರು, ಎಚ್. ಜೆ. ಲಕ್ಕಪ್ಪಗೌಡ, ಮೈಸೂರು ವಿಶ್ವವಿದ್ಯಾನಿಲಯದ ಪ್ರಕಟಣೆ.
3) ಪಡ್ಡಗಿರಿ ನಾಗಮ್ಮ : ಕಾಳೇಗೌಡ ನಾಗವಾರ, ಬೆಂಗಳೂರು ವಿಶ್ವವಿದ್ಯಾಲಯ ಪ್ರಕಟಣೆ.
4) ಎಂ. ಡಿ. ಶ್ರೀನಿವಾಸ್ : ಮಧುಗಿರಿ ಇತಿಹಾಸ, ಸುಧಾ ಪ್ರಕಾಶನ, ಮಧುಗಿರಿ.
5) ಡಾ॥ ಸಿದ್ದಲಿಂಗಯ್ಯ : ಅವತಾರಗಳು, ಸ್ನೇಹ ಪ್ರಕಾಶನ, ಬೆಂಗಳೂರು 40.

---

* ಈ ದೇವತೆ ನಾಗರಹಾವಿನ ರೂಪದಲ್ಲಿರುತ್ತಾಳೆ ಎಂಬ ನಂಬಿಕೆ ಮತ್ತು ಬೆಳ್ಳಿಯ ಕಲಶಕ್ಕೆ ನಾಗಾಭರಣ ಮತ್ತು ಬೆಳ್ಳಿಯ ಕೊಡೆಗಳನ್ನು ಇಟ್ಟು ಅದೇ ಕಾವಲ್ಲಮ್ಮನೆಂದು ಪೂಜಿಸುತ್ತಾರೆ.

ನೆಲದೊಡಲ ಹಾಡು

ದೊಡ್ಡರಂಗೇಗೌಡ

೧

ಮಣ್ಣಿನ ಪದವಿದು, ಮುಗ್ಧ ಹಳ್ಳಿಗ ನಾನು–
ಸಹೃದಯರಿಗೆನ್ನ ಗೀತವಿದು ;

ಬುವಿಯು ಕವಿಯು ಮೇಲೆ ನಿಜದ ಒಲವು ತೋರಿ
ನೆಲದ ಹಾಡಿನಲಿ ಮನುಜನಿರುವ ಪರಿ
ಗುರುತಿಸಿ ನೀವಿದ ಕೇಳುವುದು !
ಗ್ರಾಮೀಣ ಕಾವ್ಯ ಮುದ ಸವಿಯುವುದು.

ಹೊಲಗಳು ಹಡೆದಿವೆ ಹಸಿರಿನ ಕವಿತೆ
ಹೂಗಳು ತೋರಿವೆ ಚೆಲುವಿನ ಒರತೆ–
ಜುಳು ಜುಳು ಹರಿಯುವ ಗಂಗಾವಶಾತೆ
ರೈತಾಪಿ ಜನರಿಗೆ ಅವಳು ಸಂಪ್ರೀತೆ,

ದನಕರು ಬಯಲಲಿ ಮೇಯುತಿವೆ
ಭೂತಾಯಿ ಅಕ್ಕರೆ ಸವಿಯುತಿವೆ...

ಬದುಗಳ ಮೇಲೆ ನಡೆಯುವ ನನಗೆ-
"ಸ್ವರ್ಗವೇ ಇಳಿದಿದೆ ಈ ಹಳ್ಳಿಗಾಡಿಗೆ !"
ಎಂಬುವ ನಂಬಿಕೆ ತಂದಿದೆ ಮನಕೆ
ನೀಡಿದೆ ಸಂತಸ ಹೈದನ ಹೃದಯಕೆ ।

೨

ನಿಜಕೂ ಮೂಡಿವೆ ನಿತ್ಯವೂ ನಿತ್ಯವೂ
ನೆಲದಾಯಿ ಒಡಲ ತನಿ ಗೀತಗಳು
ಆಯಾ ಕಾಲಕೆ ತಕ್ಕಂತೆ ಮೈತಳೆದು
ಮಿನುಮಿನುಗಿ ಹೊಳೆವ ಋತುಗೀತಗಳು...

ಬಂಗಾರ ನೇಸರ ಮೂಡಣ ದಿಕ್ಕೊಳು
ಮುಂಜಾನೆ ಬರೆವ ಸಿರಿಗೀತಗಳು,
ಇರುಳಲಿ ಫಳ ಫಳ ಲಕ್ಷ ಲಕ್ಷ ತಾರಗೆ
ಮಿಂಚಿಸಿ ಮೆರೆವ ಕಿರುಗೀತಗಳು :

ಬೆಳಗಲಿ ಉಬ್ಬಿ ಬೈಗಲಿ ತಬ್ಬಿ
ನನ್ನೆದೆ ಕಾಡುವ ಗೀತಗಳು

೩

ಬತ್ತದ ಪೈರಲಿ ಮಗುವಿನ ನಗೆಯನು
ಬಾಳೆಯ ಸುಳಿಯಲಿ ಬಳುಕುವ ಹೆಣ್ಣನು
ತಾವರೆ ಹೂವಲಿ ಚೆಲುವೆಯ ಮುಖವನು
ಕಾಣುವ ನನಗೆ ಕವಿತೆಯೇ ಹೊನ್ನು !

ಮಣ್ಣಿನ ಕಂಪಲಿ ಜೀವನ ಪುಳಕವ
ಹೊಂಗೆಯ ತಂಪಲಿ ಹಳ್ಳಿಯ ಸೆಳೆತವ
ಹಳ್ಳದ ಬದಿಯಲಿ ಚಿಲಿಪಿಲಿ ಕಲರವ
ಕೇಳುವ ನನಗೆ ಹಳ್ಳಿಯೇ ಚೆನ್ನು !

ರಾಗಿಯ ತೆನೆಗಳು ಉಸುರಿವೆ ಹಾಡನು
ಜೋಳದ ಹೊಲದಲೂ ಹಾಡಿನ ಲಲಕನು
ಬೆಟ್ಟ ಗುಡ್ಡದಲಿ ಹಾಡಿನ ಜಾಡನು
ಕಂಡಿಹ ನನಗೆ ಬೇಡ ಇನ್ನೇನು !

ನೆಲದೊಡಲ ಹಾಡಲಿ ಮಧುರ ಸಂಗೀತ
ಅದಕೂ ಮಿಗಿಲು ಚೈತನ್ಯದಮೃತ.
ದಿನ ದಿನ ತನುಮನ ಬಿಡದಲೆ ಸವಿಯುತ
ಬರೆದೆನು ನಾನು ಅಗಣಿತ ಕವಿತ !

ಅದ್ವೈತ ತತ್ವದರ್ಶನ—ಒಂದು ವಿಶ್ಲೇಷಣೆ

ಡಾ॥ ಟಿ. ಬಿ. ಬಸವರಾಜು

1

ಅದ್ವೈತ ತತ್ತ್ವ ಸಿದ್ಧಾಂತದ ಇತಿಹಾಸದಲ್ಲಿ ಆಚಾರ್ಯ ಶ್ರೀ ಶಂಕರರ ಹೆಸರು ಪ್ರಮುಖವಾದದ್ದು. ಇವರು ಕ್ರಿ.ಶ. 8ನೆಯ ಶತಮಾನದಲ್ಲಿ ಮಹಿಮಾವಂತ ತಾತ್ತ್ವಿಕರಾಗಿದ್ದರು. ವಾಸ್ತವವಾಗಿ ಅದ್ವೈತ ತತ್ವ ಪ್ರತಿಪಾದನೆ ಶಂಕರರಿಗಿಂತಲೂ ಬಹಳ ಪ್ರಾಚೀನ ಕಾಲದಲ್ಲಿಯೇ[1] ಕಂಡುಬಂದರೂ ಶಂಕರರು ಅದಕ್ಕೊಂದು ಅರ್ಥಪೂರ್ಣ, ಸೈದ್ಧಾಂತಿಕ ರೂಪವನ್ನು ನೀಡಿ ಅದರ ವರ್ಚಸ್ಸು ಬೆಳಗುವಂತೆ ಮಾಡಿದ್ದಾರೆ. ಕೇರಳದ 'ಕಾಲಟಿ' ಎಂಬ ಸ್ಥಳದಲ್ಲಿ ಜನ್ಮತಾಳಿದ ಶಂಕರರು ಕೇವಲ ಹನ್ನೆರಡನೆಯ ವಯಸ್ಸಿಗೇ ಅಸಾಧಾರಣವೆಂಬ ರೀತಿಯಲ್ಲಿ ವೇದಪಾರಂಗತರಾಗಿ ಬಾಲಸನ್ಯಾಸಿ ಎನಿಸಿದವರು. ಇವರ ಬದುಕಿನ ಅವಧಿ ಕೇವಲ 32 ವರ್ಷಗಳಾದರೂ ಸಾಧನೆ ಅನನ್ಯ. ಬೌದ್ಧ ಸಿದ್ಧಾಂತವು ಎಲ್ಲಾ ಕಡೆಯಲ್ಲಿಯೂ ವ್ಯಾಪಕವಾಗಿ ಸ್ಥಾಪಿತವಾಗಿದ್ದ ಸಮಯದಲ್ಲಿ ಅದ್ವೈತ ತತ್ವದ ಔನತ್ಯವನ್ನು ಲೋಕದ ಜನರಿಗೆ ಮನವರಿಕೆ ಮಾಡಿಕೊಟ್ಟು ಶಂಕರರು ಅತ್ಯಂತ ಯಶಸ್ವಿಯಾಗಿ ದೇಶದ ಸರ್ವಕಡೆಗಳಲ್ಲಿಯೂ ಅದ್ವೈತ ತತ್ವವನ್ನು ಪ್ರತಿಪಾದಿಸಿ, ಪ್ರತಿಷ್ಠಾಪಿಸಿದ್ದಾರೆ.

ಶ್ರೀ ಶಂಕರರು ರಚಿಸಿದ್ದಾರೆ ಎಂದು ಹೇಳಲಾದ ಗ್ರಂಥಗಳು ಯಾವುವೆಂದರೆ—ಬ್ರಹ್ಮಸೂತ್ರಗಳು, ಭಗವದ್ಗೀತೆ ಮತ್ತು ಉಪನಿಷತ್ತುಗಳು—ಇವುಗಳ ಮೇಲೆ ರಚಿಸಿದ ಭಾಷ್ಯಗಳೇ ಅಲ್ಲದೆ, ಶ್ರೀ ಗೌಡಪಾದರ ಮಾಂಡೂಕ್ಯಕಾರಿಕಾ, ವಿಷ್ಣುಸಹಸ್ರನಾಮ, ಸನತ್ಸುಜಾತೀಯ—ಇವುಗಳಿಗೂ ಶಂಕರರು ಭಾಷ್ಯಗಳನ್ನು ರಚಿಸಿದ್ದಾರೆ. ಅಲ್ಲದೆ ಉಪದೇಶ ಸಾಹಸ್ರೀ, ವಿವೇಕ ಚೂಡಾಮಣಿ, ಸೌಂದರ್ಯ ಲಹರೀ ಮುಂತಾದ ಪ್ರಕರಣಗಳನ್ನೂ ರಚಿಸಿರುವರು.

---

1 ಅದ್ವೈತ ತತ್ತ್ವವು ಭಾರತದಲ್ಲಿ ವೇದೋಪನಿಷತ್ತುಗಳ ಕಾಲದಲ್ಲಿಯೂ, ನಂತರ ಆಚಾರ್ಯ ಗೌಡಪಾದದಲ್ಲಿಯೂ ಕಾಣಸಿಗುತ್ತದೆ. ಗೌಡಪಾದರ ಪ್ರಭಾವ ಶಂಕರರ ಮೇಲೆ ಅಪರಿಮಿತವಾದದ್ದು ; ವಾಸ್ತವವಾಗಿ ಗೌಡಪಾದರ ಶಿಷ್ಯರೇ ಆಗಿದ್ದ ಗೋವಿಂದ ಭಗವತ್ಪಾದರು ಶಂಕರರ ದೀಕ್ಷಾಗುರುಗಳು ಎನ್ನುವುದು ಗಮನಾರ್ಹ.

2

ಅದ್ವೈತವೆಂದರೆ ಹೆಸರೇ ಸೂಚಿಸಿರುವಂತೆ ದ್ವೈತರಹಿತವಾದದ್ದು. ಜಗತ್ತಿನ ಅಂತಿಮ ಸತ್ಯ ನೈಜವಾಗಿ ಏಕೈಕ, ಏಕಮೇವಾದ್ವಿತೀಯ, ಸರ್ವಸ್ವತಂತ್ರ ಈ ಜಗತ್ತಿನಲ್ಲಿ ಕಾಣುವುದೆಲ್ಲ ಬ್ರಹ್ಮವೇ ಆಗಿದೆ. ಅದ್ವೈತ ತತ್ತ್ವದ ಸಾರವನ್ನು ಕೆಲವು ಮಾತುಗಳಲ್ಲಿ ಅಭಿವ್ಯಕ್ತಪಡಿಸುವುದಾದರೆ, – 'ಸತ್ಯವೊಂದೇ', ಅದು 'ಬ್ರಹ್ಮ', ಈ ಜಗತ್ತು 'ಮಿಥ್ಯೆ' ಎನಿಸಿದೆ. ಜೀವವೂ ಬ್ರಹ್ಮವೇ ಆಗಿದೆ. ವಾಸ್ತವವಾಗಿ ಅದು ಬ್ರಹ್ಮಕ್ಕಿಂತ ಬೇರೆ ಅಲ್ಲ.[2]

ಶ್ರೀ ಶಂಕರಾಚಾರ್ಯರ ಅದ್ವೈತ ಸಮರ್ಥನೆಯು ಉಪನಿಷತ್ತುಗಳ ಸಮರ್ಥನೆಯೇ ಆಗಿದೆ. ಉಪನಿಷತ್ತುಗಳು ಅದ್ವೈತವನ್ನೇ ಬೋಧಿಸುತ್ತವೆ ಎನ್ನುವ ಶಂಕರರ ತಾತ್ತ್ವಿಕ ನಿಲುವಿನ ಹಿನ್ನೆಲೆಯಲ್ಲಿ ಅವರ ಅದ್ವೈತ ದರ್ಶನವು ಉಪನಿಷತ್ತುಗಳ ಸಮರ್ಥನೆಯೇ ಆಗಿ ನಮಗೆ ತೋರಿಬರುತ್ತದೆ. ಇತರ ವೇದಾಂತ ದರ್ಶನಗಳಿಗಿಂತ ಶಂಕರರು ಪ್ರತಿಪಾದಿಸಿದ 'ಅದ್ವೈತ' ಹೆಚ್ಚು ಅರ್ಥಪೂರ್ಣವೆಂದೇ ವಿದ್ವಾಂಸರು, ಅದರಲ್ಲೂ ಪಾಶ್ಚಾತ್ಯ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಕುತೂಹಲಕ್ಕಾಗಿ ಅಂತಹ ಕೆಲವು ಉದಾಹರಣೆಗಳನ್ನು ನಾವು ಇಲ್ಲಿ ಗಮನಿಸಬಹುದು—

ಜಾರ್ಜ್ ಥೀಬೋ (George Thibaut) ಮೂಲತಃ ಶಂಕರರ ಅಭಿಮಾನಿಯಲ್ಲದಿದ್ದರೂ, ಶಂಕರರ ಅದ್ವೈತ ದರ್ಶನ ಹೇಗೆ ಉಪನಿಷತ್ತುಗಳ ತತ್ತ್ವವೇ ಆಗಿದೆ ಎಂಬುದನ್ನು ನಿಷ್ಪಕ್ಷಪಾತವಾಗಿ ನಮ್ಮ ಮುಂದಿಟ್ಟಿದ್ದಾರೆ......

"Shankara's method enables him to recognise existing differences which other systematisers are intent on obliterating and there has yet to be made a more important admission in favour of his system. It is not only more pliable, more capable of amalgamating heterogenous materials than other systems, but its fundamental doctrines are manifestly in greater harmony with the essential teachings of the Upanishads than those of other systems."

ಫ್ರೆಂಚ್ ವಿದ್ವಾಂಸರಾದ ಶ್ರೀಯುತ ರೇನೇಗ್ಯೂನೋ (Rene Guenon) ತನ್ನದೇ ಆದ ರೀತಿಯಲ್ಲಿ ಹೀಗೆ ಅಭಿಪ್ರಾಯ ಮಂಡಿಸುತ್ತಾರೆ—

---

2 'ಶ್ಲೋಕಾರ್ಧೇನ ಪ್ರವಕ್ಷ್ಯಾಮಿ ಯದುಕ್ತಂ ಗ್ರಂಥಕೋಟಿಭಿಃ ।
ಬ್ರಹ್ಮಂ ಸತ್ಯಂ ಜಗನ್ಮಿಥ್ಯಾ ಜೀವೋ ಬ್ರಹ್ಮೈವ ನಾ ಪರಃ' ॥

"Shankaracharya has deduced and developed more completely the essential contents of the Upanishads- His authority can only be questioned by those who are ignorant of the true spirit of the orthodox Hindu tradition and whose opinion is consequently valueless. In a general way, therefore, it is his commentory that we shall follow in preference to others".

ಈ ಮಹಾಶಯರೇ ಅಲ್ಲದೆ, ಭಾರತೀಯ ವೇದ-ವೇದಾಂತಗಳಲ್ಲಿ ಆಳವಾದ ಪಾಂಡಿತ್ಯ ಸಂಪಾದಿಸಿದ್ದ, ಪ್ರಾಚ್ಯ ಸಂಶೋಧನಾ ಪಂಡಿತರೂ ಆಗಿದ್ದ ಜಗತ್ಪ್ರಸಿದ್ಧ ಪ್ರೊ॥ ಮಾಕ್ಸ್‌ಮುಲ್ಲರ್ (Max Muller) ತನ್ನ ಭಾರತೀಯ ಷಡ್ದರ್ಶನಗಳು (Six Systems of Indian Philosophy) ಎಂಬ ಗ್ರಂಥದಲ್ಲಿ ಉಪನಿಷತ್ತುಗಳು 'ನಿಶ್ಚಿತವಾದ' ಮತವನ್ನೇನೂ ಹೇಳುವುದಿಲ್ಲ ; ನಿಶ್ಚಿತವಾದ ಮತವೊಂದನ್ನು ಅವುಗಳಲ್ಲಿ ಹುಡುಕುವುದಾದರೆ, ಅದು ಸಾಧ್ಯವಾಗುವುದು ಶಂಕರರ ಮತದಿಂದ ಮಾತ್ರವೆಂದೇ ಅಭಿಪ್ರಾಯಪಡುತ್ತಾರೆ. ಅವರು ಹೇಳುವುದು ಹೀಗಿದೆ—

"Even if we admit that Badarayana wished to teach in his Sutras nothing but what he found in the Upanishads, it must not be forgotten that Upanishads contain ever so many conflicting guesses at Truth, freely uttered by thinkers who had no personal relations with each other and had no idea of propounding a uniform system of Religious Philosophy. If these conflicting utterances of the Upanishads had to be reduced to a system, we can hardly blame Shankara for his taking refuge in the theory of a higher and lower Brahman, the former being the Brahman of Philosophy, the other that of Religion and both as he thought to be found in different parts of Veda. By doing that he avoided the neceessity of arguing away a number of purely anthromorphic features, incongruous, if applied to the Highest Brahman and dragging down even the Brahman of the lower, Vidya to a lower stage than Philosophers would approve of.

3

ಅದ್ವೈತ ತತ್ತ್ವವು ಸಾರುವಂತೆ ಈ ಜಗತ್ತಿನ ಅಂತಿಮ ಮೂಲ ಒಂದೇ. ಅದು ನಿತ್ಯ ಹಾಗೂ ಶಾಶ್ವತವಾದದ್ದು. ಈ ಹಿಂದೆ ತಿಳಿಸಿದಂತೆ, ಏಕೈಕ ಸತ್ಯವಾದ ಅದು 'ಬ್ರಹ್ಮತತ್ತ್ವ'ವೆನಿಸಿದೆ. ಸರ್ವವೂ ಬ್ರಹ್ಮಮಯವೇ ಆಗಿದ್ದು 'ಪರವಸ್ತು'ವು

ಸಚ್ಚಿದಾನಂದ ಸ್ವರೂಪವಾಗಿದೆ. 'ಅರ್ಥಾತ್ 'ನಿರಂತರ ಅಸ್ತಿತ್ವವನ್ನು ಹೊಂದಿ, ಚೈತನ್ಯಪೂರ್ಣವಾಗಿ, ದುಃಖರಹಿತವಾಗಿ, ಶಾಂತಪೂರ್ಣವಾಗಿದೆ. ಇಂತಹ ಪರತತ್ತ್ವ ಅಚಲವೂ ಅಪರಿಣಾಮಿಯೂ ಆಗಿದೆ.' ಬ್ರಹ್ಮವೊಂದೇ ನಿಜವಾದ ಸತ್ಯ. ಜ್ಞಾನವು ಅದರ ಸ್ವರೂಪವೆನ್ನುವ ತೈತ್ತಿರೀಯ ಉಪನಿಷತ್ತಿನ ಮಾತು ಇಲ್ಲಿ ಅನ್ವರ್ಥವೆನಿಸುತ್ತದೆ. ಈ ಬಗೆಯ ಬ್ರಹ್ಮತತ್ತ್ವ ಅಖಂಡ, ಅವಿನಾಶಿ, ಅನಂತ, ಇದರ ಹೊರತು ಮತ್ತೊಂದು ಸತ್ಯದ ಅಸ್ತಿತ್ವ ಎಲ್ಲೂ ಕಾಣಲಾಗದು. ಬ್ರಹ್ಮತತ್ವ ಆದಿ-ಅಂತ್ಯವಿಲ್ಲದಿರುವ ಹಾಗೆಯೇ ಬಂಧನವಿಮುಕ್ತವಾದದ್ದು, ಸೀಮಾತೀತ, ಅದನ್ನು ಉಪನಿಷತ್ತುಗಳು ಹೇಳುವಂತೆ—ನೀರಿನಿಂದ ನೆನೆಸುವುದಾಗಲೀ, ಕತ್ತಿಯಿಂದ ಕತ್ತರಿಸುವುದೇ ಆಗಲೀ, ಅಗ್ನಿಯಿಂದ ಸುಡುವುದೇ ಆಗಲೀ ಸಾಧ್ಯವಾಗಲಾರದು. ಎಲ್ಲ ಬಗೆಯ ಅಭಾವ, ಕಾಮಗಳಿಂದ ಮುಕ್ತವಾಗಿ, ಸ್ವಯಂಪರಿಪೂರ್ಣ, ಸರ್ವದೋಷರಹಿತ, ಅಮೃತ, ಸ್ವಯಂಪ್ರಕಾಶ, ಸ್ವಯಂಜ್ಯೋತಿಯಾಗಿದೆ. ತನ್ನ ಬೆಳಕಿನಿಂದಲೇ ಬೆಳಗಿ ಅದು ಸರ್ವವನ್ನೂ ಪ್ರಕಾಶಪಡಿಸಬಲ್ಲುದು: ಆದರೆ ಯಾವುದೇ ಎರಡನೆಯದರ ಸಹಾಯ, ಸಹಕಾರ ಅದಕ್ಕೆ ಅನಗತ್ಯ. ಪರಮೋತ್ಕೃಷ್ಟ ಬ್ರಹ್ಮತತ್ತ್ವವನ್ನು ಮಾಂಡೂಕ್ಯ ಉಪನಿಷತ್ತು ವಿವರಿಸುವಂತೆ—'ಯಾವುದರೊಡನೆಯೂ ಹೋಲಿಸಲಾಗದು,' ಕಾರಣವೇನೆಂದರೆ ಇರುವುದು 'ಅದೊಂದೇ' ಎಂಬ ಅರ್ಥದಲ್ಲಿ. ಅಂತೆಯೇ ಬ್ರಹ್ಮತತ್ತ್ವವು ಅಚಿಂತ್ಯ, ಅದನ್ನು ನೋಡುವುದು ಅಸಾಧ್ಯ, ಅಲ್ಲದೆ ಅನುಭವಾತೀತವಾದ ಅದು ತ್ರಿಕಾಲಾಬಾಧಿತವಾಗಿ ನಿಂತಿರುವ ಶುದ್ಧಚೈತನ್ಯ.

ಅದ್ವೈತದರ್ಶನವು ಒಂದೇ ಸತ್ಯವನ್ನು ಒಪ್ಪಿಕೊಳ್ಳುವುದರಿಂದ ಅದು ಬ್ರಹ್ಮತತ್ತ್ವವೇ ಆಗಿರುವುದರಿಂದ, ಅಂತಿಮಾರ್ಥದಲ್ಲಿ ಜಗತ್ತು ಮಿಥ್ಯ ಎನಿಸಿಕೊಳ್ಳುತ್ತದೆ.[1] ವಿಕಾರಗಳಾದ ಮಡಕೆ, ಕುಡಿಕೆ, ಜಾಡಿ, ಗುಡಾಣಗಳು ಮಣ್ಣಿಗಿಂತ ಹೇಗೆ ಭಿನ್ನ ಎನಿಸಿಕೊಳ್ಳಲಾರವೋ ಅದೇ ರೀತಿ ಸಾರವಸ್ತುವಾದ 'ಸತ್' ಒಂದೇ, ಅದೇ ಬ್ರಹ್ಮತತ್ತ್ವ ಎನ್ನುವುದು ಈ ದರ್ಶನದ ನಿಲುವು. ಆದರೆ ಅವಿದ್ಯೆಯ ದೆಸೆಯಿಂದ ಜೀವಾತ್ಮನಿಗೆ ಅದೇ ಜಗತ್ತಾಗಿ ಭಾಸವಾಗುತ್ತದೆ ಅಷ್ಟೇ.[2] ಅಂದರೆ ಇಲ್ಲಿ ಜಗತ್ತಿಗೆ ಮೂಲಕಾರಣವು

---

1. ಶಂಕರರೇ ತಮ್ಮ ವೇದಾಂತ ಸೂತ್ರಗಳ ಮೇಲಿನ ಭಾಷ್ಯದ ಪ್ರಸ್ತಾವನೆಯಲ್ಲಿ ಹೀಗೆ ಹೇಳುತ್ತಾರೆ—'ಆತ್ಮವೆನ್ನುವ ಪದಾರ್ಥಕ್ಕೂ ಅನಾತ್ಮವೆನ್ನುವ ಪದಾರ್ಥಕ್ಕೂ ಎಷ್ಟು ವಿರೋಧವಿದೆಯೆಂದರೆ, ಅವನ್ನು ಪರಸ್ಪರ ಅನ್ವಯ ಮಾಡಲು ಸಾಧ್ಯವೇ ಇಲ್ಲ. ಶಂಕರರ ಈ ಮಾತಿನ ಜಾಡು ಹಿಡಿದು ನಡೆದಾಗ ನಾವು 'ಆತ್ಮ-ಅನಾತ್ಮ' ಇವೆರಡರಲ್ಲಿ ಒಂದು ಸತ್ಯವಾಗಿರಬೇಕು ಎಂಬ ಅಭಿಪ್ರಾಯಕ್ಕೆ ಬರುವುದು ಸಾಧ್ಯ. ಏಕೆಂದರೆ ಎರಡೂ ಅಸತ್ಯವಾಗಿರಲು ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿಯೇ ಅದ್ವೈತ ದರ್ಶನವು ಭೌತಿಕ ಜಗತ್ತನ್ನು ಸತ್ಯವಾದುದಲ್ಲ (ಮಿಥ್ಯೆ) ಎಂದೇ ತೀರ್ಮಾನಿಸುತ್ತದೆ.

2. ಇದು ಬ್ರಹ್ಮವಿವರ್ತವಾದವೆಂದೇ ಪ್ರಸಿದ್ಧ. ಉದಾ: ಚಿನ್ನದ ಆಭರಣಗಳಲ್ಲಿ ಚಿನ್ನವು ಆಭರಣಗಳಿಂದ ಬೇರೆ ಎನಿಸದು. ಅಲ್ಲಿ ಚಿನ್ನವೇ ಆಭರಣವಾಗಿ ನೋಡುವವನಿಗೆ ಗೋಚರವಾಗುವುದು. ಇದೇ ರೀತಿ ಬ್ರಹ್ಮ ಮತ್ತು ಜಗತ್ತಿನ ಸಂಬಂಧವೂ ಸಹ.

ಕಾರ್ಯವಲ್ಲವೆಂಬ ತಿಳಿವಳಿಕೆ ಅಗತ್ಯ. ಕಾರ್ಯವೆಂದರೆ ಜನ್ಯ ಅಥವಾ ಹುಟ್ಟಿದ್ದು ಎಂದೇ ಅರ್ಥ. ಕಾರಣವು ನಿತ್ಯವಸ್ತು. ಅದು ಜಗತ್ತಿಗೆ ಕಾರಣವೆಂದು ಹೇಳುವುದು ಕೇವಲ ಭ್ರಾಂತಿ. ಅಂತೆಯೇ ಬ್ರಹ್ಮದ ಕಾರ್ಯವೆಂದು ಹೇಳುವ ಜಗತ್ತು ಮಿಥ್ಯೆಯಲ್ಲದೆ ಮತ್ತೇನು? ಏಕೆಂದರೆ, ಶ್ರುತಿಗಳು ಸಾರುವಂತೆ ಬ್ರಹ್ಮವು ನಿರ್ಧರ್ಮಕವೂ, ನಿರ್ಗುಣವೂ, ನಿರ್ದೋಷವೂ. ನಿರ್ವಿಶೇಷವೂ, ಶಾಂತಸ್ವರೂಪವೂ, ನಿತ್ಯನಿರ್ವಿಕಾರವೂ ಆಗಿದೆ. ಬ್ರಹ್ಮತತ್ತ್ವವು ನಿರ್ವಿಶೇಷ[1] ವಸ್ತುವೆಂದು ಹೇಳಿದ ಮಾತ್ರಕ್ಕೆ ಶಶವಿಷಾಣ (ಮೊಲದ ಕೊಂಬು) ದಂಥ ಶೂನ್ಯವೆಂದು ಭಾವಿಸಬಾರದು. ನಿರ್ವಿಶೇಷವೆಂದಾಗ ರೂಪವಿಲ್ಲವೆಂದೇ ಅರ್ಥಮಾಡಿಕೊಳ್ಳಬೇಕು. ಶ್ರುತಿಯು ಪ್ರಕಟಪಡಿಸುವಂತೆ ಬ್ರಹ್ಮವು ಬೇರೊಂದರಿಂದ ಜನ್ಮ ತಾಳಿಲ್ಲ, ಬ್ರಹ್ಮದಿಂದ ಬೇರೊಂದು ಯಾವುದೂ ಜನ್ಮತಾಳಿಲ್ಲವೆಂಬ ಮಾತೂ ಯಥೋಚಿತವೇ ಆಗಿದೆ. ಇಲ್ಲಿ ಮತ್ತೊಂದು ಗಮನಾರ್ಹ ಸಂಗತಿ ಎಂದರೆ ಬ್ರಹ್ಮತತ್ತ್ವವು ಈ ಗೋಚರ ಜಗತ್ತಿಗೆ ಉಪಾದಾನ ಕಾರಣವೆಂದು ಪರಿಭಾವಿಸಿ, ಮಣ್ಣು ಅಥವಾ ಚಿನ್ನ, ಗಡಿಗೆ ಅಥವಾ ಒಡವೆಗಳಿಗೆ ಕಾರಣವಾಗುವ ರೀತಿಯಲ್ಲಿ ಬ್ರಹ್ಮತತ್ತ್ವವೂ ಸಹ ಎಂಬ ವಿಚಾರವೂ ಸರಿ ಎನಿಸದು! ಬ್ರಹ್ಮವು ಜಗತ್ತಿಗೆ ವಿವರ್ತೋಪಾದಾನ ಕಾರಣವೆಂಬ ನೈಜಸಂಗತಿಯನ್ನು ಅರಿಯಬೇಕು. ಅಂದರೆ ಹಗ್ಗವು ಹಾವು ಎಂಬ ಭ್ರಾಂತಿಗೆ ಕಾರಣವಾಗುವ ಪರಿಯಂತೆ. ಇಲ್ಲಿ ತಿಳಿಯುವ ಅಂಶವೆಂದರೆ, ನಿರ್ಧರ್ಮಕವಾದ ಬ್ರಹ್ಮತತ್ತ್ವದಲ್ಲಿ ವಿವರ್ತೋಪಾದಾನ ಕಾರಣತ್ವವೆಂಬ ಧರ್ಮವೂ ಸಹ ಇರಲು ಶಕ್ಯವಿಲ್ಲ! ಅರ್ಥಾತ್, ಬ್ರಹ್ಮವು ಎಂದೂ ಭ್ರಾಂತಿಗೆ ನಿಮಿತ್ತವಾಗಲಾರದು ಎಂಬುದು ಮನನೀಯವಾಗಬೇಕು. ಭ್ರಾಂತಿ ಅವಾಸ್ತವ ಇದರ ಕಾರಣವೂ ಕೂಡ ಅವಾಸ್ತವ. ಇಂತಹ ಕಾರಣವೇ ಅವಿದ್ಯೆ.[2] ಮಾಯೆಯು ಮೂಲತಃ ಇರುವಂಥದ್ದಲ್ಲವಾದುದರಿಂದಲೇ 'ಯಾ ಮಾಸಾ ಮಾಯಾ'—ಇದು ಮಾಯೆ ಎಂದೆನಿಸಿಕೊಳ್ಳುತ್ತದೆ. ವ್ಯಕ್ತಿಯಲ್ಲಿ ಅಹಂಕಾರ, ಮನಸ್ಸು, ಇಂದ್ರಿಯಗಳು, ಭೌತ ಶರೀರಗಳೆಂಬ ಉಪಾದಿಗಳಿಂದ ಆವೃತವಾದ ಚಿತ್‌ತತ್ತ್ವವೇ ಆತ್ಮತತ್ತ್ವವೆಂದು ಹೇಳುವಾಗ ಉಪಾದಿಗಳಿಗೆ ಮೂಲಕಾರಣವೇ ಅವಿದ್ಯೆಯಾಗುತ್ತದೆ. ಈ ಅವಿದ್ಯೆಯೆಂಬ ಮಾಯೆಯ ಕಾರಣದಿಂದಲೇ ನಿರ್ವಿಕಾರವಾದ ಚಿತ್‌ತತ್ತ್ವ ಭೋಕ್ತೃವಂತೆ, ಕರ್ತೃವಂತೆ ಬದಲಾವಣೆ ಹೊಂದುತ್ತಿರುವ ಹಾಗೆ ಭಾಸವಾಗುವುದು.[3]

---

1 ಪರತತ್ತ್ವವನ್ನು ಕುರಿತಂತೆ ವ್ಯಾವಹಾರಿಕವಾಗಿ ವಿವರಿಸುವಾಗ ವಿಶೇಷಣಗಳನ್ನು ಬಳಸಿ ವಿವರಿಸಿದರೆ, ನಾವು ಬಳಸಬಹುದಾದ ವಿಶೇಷಣಗಳು ಬ್ರಹ್ಮತತ್ವಕ್ಕೆ ಎಲ್ಲೆಯನ್ನುಂಟು ಮಾಡಿಬಿಡುತ್ತದೆ. ಜೊತೆಗೆ ವಿಶೇಷಣಗಳು ಇನ್ನೊಂದು ದಿಕ್ಕಿನಿಂದ ಬ್ರಹ್ಮತತ್ತ್ವದ ಎಲ್ಲೆಯನ್ನು ನಿಷ್ಕರ್ಷಿಸಲು ಹೊರಡುತ್ತವೆ. ಆದರೆ ನೈಜವಾಗಿ ಬ್ರಹ್ಮವು ಸೀಮಾತೀತ ಮತ್ತು ವಿಶೇಷಣಗಳಿಗೆ ವಿರೋಧವಾದುದು ಎಂಬುದನ್ನು ಮರೆಯಬಾರದು.

2 ಮಾಯೆ ಅಥವಾ ಅಜ್ಞಾನ ಅಥವಾ ತಮಸ್ಸು.

3 ಶಂಕರರ ಬ್ರಹ್ಮಸೂತ್ರಭಾಷ್ಯ—1-1-1.

ಜಗತ್ತಿನ ಸಕಲ ವಸ್ತು ವಿಷಯಗಳನ್ನು ಕುರಿತು ಅನುಮಾನ ತಾಳುತ್ತಾ ಹೋಗಬಹುದು. ಆದರೆ ಯಾರಿಗೇ ಆದರೂ ತನ್ನ ಅಸ್ತಿತ್ವದ ವಿಷಯದಲ್ಲಿ ಶಂಕೆ ತಾಳುವುದು ಸಾಧ್ಯವಾಗಲಾರದು.[1] ಏಕೆಂದರೆ ಶಂಕೆ ತಾಳುವ ಪ್ರಕ್ರಿಯೆಯೇ ಅವರ ಅಸ್ತಿತ್ವಕ್ಕೆ ಸಿದ್ಧ ಆಧಾರವಾಗುತ್ತದೆ.[2] ಒಟ್ಟಾರೆ ನಮ್ಮೊಳಗಿನ 'ಒಂದರ' ಮೂಲಕ ನಾವು ಸತ್ಯ-ಅಸತ್ಯ ವಸ್ತುಗಳ ನಿರ್ಣಯ ಕೈಗೊಳ್ಳುತ್ತೇವೆ. ಈ ಎಲ್ಲವೂ ನಮ್ಮ ಅಸ್ತಿತ್ವದ ವಿಚಾರಕ್ಕೆ ಪುಷ್ಟಿ ಆಗುತ್ತವೆ. ಆದರೂ ನಾನು ಯಾರು? ನನ್ನ ನೈಜ ಸ್ವರೂಪವೇನು?—ಎಂಬ ಮೂಲಭೂತ ಸತ್ಯಸ್ವರೂಪದ ಬಗೆಗೆ ನಮಗೆ ನೈಜ ಅರಿವು ಇರುವುದಿಲ್ಲ. ಅರ್ಥಾತ್ ನಿತ್ಯಾನಿತ್ಯ ವಸ್ತುಗಳ ನಿರ್ಣಯದಲ್ಲಿ ಮಹತ್ತರ ಪಾತ್ರ ವಹಿಸುವ ನಮ್ಮೊಳಗಿನ 'ಒಂದರ' ಬಗೆಗೆ ಪೂರ್ಣಜ್ಞಾನ ನಮಗಿರದು. ಇದಕ್ಕೆ ಕಾರಣವೇನೆಂದರೆ, 'ಅವಿದ್ಯೆ' ಎಂದೇ ಅದ್ವೈತ ದರ್ಶನ ಸಾರುತ್ತದೆ.

ಜೀವಾತ್ಮನು ತನ್ನ ನೈಜಸ್ವರೂಪವನ್ನು ಅರಿಯದಿರುವುದಕ್ಕೆ ಕಾರಣ 'ಮಾಯೆ' ಯೆನ್ನುವುದು ಖಚಿತವಾದಂತಾಯಿತು. 'ಮಾಯೆ' ಎಂದರೆ ಇಲ್ಲದಿರುವುದನ್ನು ಇದೆ ಎಂಬ ಹಾಗೆ ತೋರಿಸುವುದೇ ಆಗಿದೆ; ಅರ್ಥಾತ್ ಈಗಾಗಲೇ ತಿಳಿಸಿರುವಂತೆ ಈಶ್ವರ, ಜೀವ, ಜಗತ್ತು, ಇಂದ್ರಿಯಗಳು ಇತ್ಯಾದಿಗಳ ಅಸ್ತಿತ್ವ ಸತ್ಯವೆಂದು ಭ್ರಮಿಸುವುದು ಮಾಯೆಯ ಪ್ರಭಾವದಿಂದ! ಭೌತಿಕ ಜಗತ್ತು ವಾಸ್ತವವಾಗಿ ಬ್ರಹ್ಮತತ್ವದ ತೋರಿಕೆಯೇ ಆಗಿದೆಯಲ್ಲದೆ ಬೇರೇನಿಲ್ಲ! ಮಾಯೆಯು ಎರಡು ರೀತಿಯ ಶಕ್ತಿಯನ್ನು ಪಡೆದಿದೆ; 1) ಆವರಣಶಕ್ತಿ, 2) ವಿಕ್ಷೇಪಶಕ್ತಿ: ಆವರಣಶಕ್ತಿ ಎಂದರೆ, ವಸ್ತುಗಳ ನೈಜಸ್ವರೂಪವನ್ನು ಮರೆಮಾಚುವಿಕೆ; ಇದರಿಂದ ವಸ್ತುಗಳ ನೈಜಸ್ವರೂಪ, ಆಕಾರ ಮರೆಯಾಗುತ್ತದೆ. ವಿಕ್ಷೇಪ ಶಕ್ತಿ ಎಂದರೆ, ಅಸ್ತಿತ್ವದಲ್ಲಿರುವ ನೈಜವಸ್ತುಗಳ ಬದಲಿಗೆ ಬೇರೆಯದೇ ಆದ ವಸ್ತು-ವಿಷಯ ಗೋಚರಿಸುವಿಕೆ; ತರ್ಕದ ಸಹಾಯದಿಂದಲೂ ಮಾಯೆಯನ್ನು ಹಿಡಿದಿಡಲಾಗದು. ಮಾಯೆಯ ಜ್ಞಾನವನ್ನು ತರ್ಕದ ಸಹಾಯದಿಂದ ಹೊಂದುತ್ತೇನೆ ಎನ್ನುವುದು ಅಂಧಕಾರದ ಸಹಾಯದಿಂದ ಅಂಧಕಾರದ ಜ್ಞಾನವನ್ನು ಪಡೆದಂತೆಯೇ ಸರಿ! ಈ ಕುರಿತು ನೈಷ್ಕರ್ಮ್ಯಸಿದ್ಧಿಯು ತಿಳಿಸಿರುವ ಮಾತುಗಳು ಅರ್ಥಪೂರ್ಣವಾದುದು—'ಈ ಭ್ರಾಂತಿಯು ಆಲಂಬನರಹಿತವಾದುದು ಮತ್ತು ಸಮಸ್ತನ್ಯಾಯಗಳಿಗೂ ವಿರೋಧಿಯಾದುದು; ಅಂಧಕಾರವು ಸೂರ್ಯನನ್ನು ಸಹಿಸದಿರುವಂತೆ ಮಾಯೆಯ ವಿಚಾರವನ್ನು ಸಹಿಸುವುದಿಲ್ಲ. ಈ ಹಿನ್ನೆಲೆಯಲ್ಲಿಯೇ

1 ಅನುಭವಾವಸಾನತ್ವಾತ್ ಬ್ರಹ್ಮಜ್ಞಾನಸ್ಯ—ವೇದಾಂತ ಸೂತ್ರಗಳ ಮೇಲೆ ಶ್ರೀ ಶಂಕರ ಭಾಷ್ಯ 1-1-2.

2 ಹೋಲಿಸಬಹುದು—ಆಧುನಿಕ ಪಾಶ್ಚಾತ್ಯ ತತ್ವಚಿಂತಕ ರೇನಿಡೇಕಾರ್ಟ್, ಚಿಂತನೆಗೆ ಅಡಿಪಾಯವಾದ ಆತ್ಮದ ಅಸ್ತಿತ್ವವನ್ನು ಸಾಧಿಸುವಲ್ಲಿ ಹೀಗೆ ಹೇಳುತ್ತಾನೆ:—"ನಾನು ಆಲೋಚಿಸುತ್ತೇನೆ, ಆದುದರಿಂದ ನಾನು ಇದ್ದೇನೆ (cogito ergosum)"

ಶಂಕರರು ಮಾಯೆಯ ಸ್ವರೂಪವನ್ನು ಕುರಿತು ಹೇಳುತ್ತಾ, 'ಅದು ಪರಮಾತ್ಮನ ಅವ್ಯಕ್ತಶಕ್ತಿ, ಅದರ ಆದಿ ತಿಳಿಯುವುದಿಲ್ಲ ಮತ್ತು ಗುಣತ್ರಯುಗಳಿಂದ ಕೂಡಿದ ಅವಿದ್ಯಾರೂಪಿಣಿ ಎಂದು ಹೇಳುತ್ತಾ ಮುಂದುವರಿದು ಹೀಗೆ ಅಭಿಪ್ರಾಯಪಡುತ್ತಾರೆ—'ಮಾಯೆಯು ಸತ್‌ಆಗಲೀ, ಅಸತ್‌ಆಗಲೀ ಅಥವಾ ಉಭಯುರೂಪವಾಗಲೀ ಆಗಿರುವುದಿಲ್ಲ. ಅಂಗಸಹಿತವಾಗಲೀ, ಅಂಗರಹಿತವಾಗಲೀ ಅಥವಾ ಉಭಯಾತ್ಮಕವಾಗಲೀ ಆಗಿರುವುಧಿಲ್ಲ. ಆದರೆ ಅದು ಅತ್ಯಂತ ಅದ್ಭುತವಾದ ಅನಿರ್ವಚನೀಯ ರೂಪವಾಗಿರುತ್ತದೆ. ಯಾವ ರೀತಿಯಿಂದಲೂ ಅದನ್ನು ಹೇಳಲು ಸಾಧ್ಯವಿಲ್ಲ !'[1]

ಮಾಯೆಯ ಕಾರಣದಿಂದ ಈ ಜಗತ್ತು ಸತ್ಯವೆಂದು ಭಾಸವಾಗುವುದು ಒಂದು ರೀತಿಯಲ್ಲಿ ಇಂದ್ರಜಾಲದ ಮಾಯಾ ಶಕ್ತಿಯಂತೆಯೇ ಸರಿ ! ಇಂದ್ರಜಾಲದ ಮಾಯಾ ಶಕ್ತಿಯು ವಿಚಿತ್ರ ದೃಷ್ಟಿಯಲ್ಲಿ ತೊಡಗಿ ಸಾಮಾನ್ಯ ಜನರು ಮೋಹಗೊಳ್ಳುವಂತೆ ಮಾಡುತ್ತದೆ. ಮಾಯೆಯನ್ನು ಇಲ್ಲಿ ಇಂದ್ರಜಾಲಕ್ಕೆ ಹೋಲಿಸಬಹುದು. ಇಂದ್ರಜಾಲದ ರಹಸ್ಯ ಅರಿತವನು ಇಂದ್ರಜಾಲದ ಮೋಹಕ್ಕೆ ಒಳಗಾಗಲಾರ. ಅದೇ ರೀತಿ ಅಖಂಡ ಪರತತ್ತ್ವವನ್ನು ತಿಳಿದವನಿಗೆ ಈ ಗೋಚರ ಪ್ರಪಂಚ ಸತ್ಯವಾಗಿ ತೋರಲಾರದು ; ಏಕೆಂದರೆ, ಜ್ಞಾನದ ಕಾಲದಲ್ಲಿ ಮಾಯೆಯು ಇರಲಾರದು. [ವಾಸ್ತವವಾಗಿ ಅದು ಮಿಥ್ಯೆಯೇ ಆಗಿರುವುದರಿಂದ] ಮಿಥ್ಯೆ ಎನಿಸಿರುವ ಮಾಯೆಯನ್ನು ನಿತ್ಯವಾದ ಬ್ರಹ್ಮದ ಜೊತೆಗೆ ಸಂಬಂಧ ಕಲ್ಪಿಸುವುದು ಅಸಾಧ್ಯವೇ ಸರಿ ; ಆದುದರಿಂದ, ಮಾಯೆಯು 'ಸತ್' ಸಹ ಅಲ್ಲ, 'ಅಸತ್' ಕೂಡ ಅಲ್ಲ ! ಅದು ವಿಲಕ್ಷಣವಾದುದು ! ಕೇವಲ ತೋರಿಕೆ ಮಾತ್ರ [Illusory Appearence] ಎಂದು ಹೇಳುವ ಶಂಕರರು ಬ್ರಹ್ಮತತ್ವವೇ ಈ ಗೋಚರ ಪ್ರಪಂಚವಾಗಿ ತೋರುತ್ತಿದೆಯಲ್ಲದೆ ಈ ಜಗತ್ತು ಬ್ರಹ್ಮದ ಹೊರತಾಗಿಲ್ಲವೆಂದು ಖಚಿತಪಡಿಸುತ್ತಾರೆ.

ಮಾಯೆಯ ವಿಲಕ್ಷಣತೆಯನ್ನು ವಿವರಿಸುತ್ತಾ ಅದ್ವೈತಿಗಳು ಭ್ರಾಂತಿಯ ದೆಸೆಯಿಂದ ಹೇಗೆ ಹಾವು ಹಗ್ಗದ ಮೇಲೆ ಆರೋಪಗೊಂಡಿರುವುದೋ ಅವೇ ರೀತಿಯಲ್ಲಿ ಬ್ರಹ್ಮತತ್ವದ ಮೇಲೆ ಮಾಯೆಯು ಅಧ್ಯಾಸಗೊಂಡಿದೆ ; ಅಂದರೆ ಜಗತ್ತಿನ ನಾಮರೂಪಾದಿಗಳು [ಅನೇಕತ್ವ] ಬ್ರಹ್ಮತತ್ತ್ವದ ತೋರಿಕೆಗಳೇ ಆಗಿವೆ. ಬ್ರಹ್ಮ ಇರುವುದರಿಂದಲೇ ಈ ಬಗೆಯ ತೋರಿಕೆ ಸಾಧ್ಯವಾಗಿದೆ, ಅರ್ಥಾತ್ ಈ ತೋರಿಕೆಗಳೆಲ್ಲಕ್ಕೂ ಅಖಂಡ ಬ್ರಹ್ಮವೇ ಆಧಾರವಾಗಿ, ಅವಿದ್ಯೆಯಿಂದ ಅದು ಅನೇಕವಾಗಿ ಗೋಚರವಾಗುತ್ತಿದೆ, ಅಷ್ಟೇ ! ಎನ್ನುವ ಅದ್ವೈತ ಪ್ರತಿಪಾದಕ ಶಂಕರರು,

---

1. 'ಸನ್ನಾಪ್ಯ ಸನ್ನಾಪ್ಯ್ಯ ಧಯಾತ್ಮಿಕಾಸೋ । ಭಿನ್ನಾಪ್ಯಭಿನ್ನಾಪ್ಯುಭಯಾತ್ಮಿಕಾನೋ ।
ಸಾಂಗಾಪ್ಯ ಸಂಗಾಪ್ಯು ಭಯಾತ್ಮಿಕಾ ನೋಮಹಾದ್ಭುತಾ ನಿರ್ವಚನೀಯ ರೂಪಾ' ॥
—ವಿವೇಕ ಚೂಡಾಮಣಿ—ಶ್ಲೋಕ ।।।

ತರ್ಕದ ಬಾಲ ಹಿಡಿದು ಬ್ರಹ್ಮತತ್ವದ ಸಾಧನೆ ಅಸಾಧ್ಯವೆಂದು ಹೇಳುತ್ತಾರೆ; ಏಕೆಂದರೆ ತಾರ್ಕಿಕವಾಗಿ ನಿತ್ಯ ಸತ್ಯದ ಸ್ಥಾಪನೆ ಯಾವ ಪ್ರಮಾಣದ ಮೂಲಕವೂ ಸಾಧಿತವಾಗಲಾರದು.[2] ಅನಂತವಾದ ನಿತ್ಯ ಬ್ರಹ್ಮತತ್ತ್ವ ಪ್ರಮಾಣದಿಂದ ಪ್ರಕಾಶಿಸಲ್ಪಡದು, ಬದಲಿಗೆ ಎಲ್ಲಾ ಪ್ರಮಾಣಗಳಿಗೂ ಅದೇ ಆಧಾರವಾಗಿದೆ ಎಂದೆನ್ನುತ್ತಾರೆ. ಅವಿದ್ಯೆಗೆ ಪರಿಶುದ್ಧ ಜ್ಞಾನ ಸ್ವರೂಪವೇ ಆಗಿರುವ ಪರಬ್ರಹ್ಮ ನಲ್ಲಿ ಸ್ಥಳವಿರದು. 'ಅಜ್ಞಾನವೆಂಬ ಭ್ರಾಂತಿಗೆ ಆಶ್ರಯ 'ಜ್ಞಾತೃ' ಎನಿಸಿರುವ ಜೀವಾತ್ಮನೇ ಹೊರತು ಜ್ಞಾನ ಸ್ವರೂಪ ಬ್ರಹ್ಮಸಲ್ಲ'— ಎಂದೆನ್ನುವ ಶಂಕರರು 'ನಿತ್ಯವಾದದ್ದು ತ್ರಿಕಾಲದಲ್ಲೂ ಒಂದೇ'[3] ಎಂಬ ಮಾತನ್ನು ಅಕ್ಷರಶಃ ನಿಜವೆಂದು ಒಪ್ಪಿಕೊಳ್ಳುತ್ತಾರೆ. ಅದು ಸರ್ವಮಿತಿಯಿಂದಲೂ ಮುಕ್ತವಾಗಿದೆ ಎಂದ ಮಾತ್ರಕ್ಕೆ ಅದನ್ನು 'ಅಸತ್' ಎಂದು ಭಾವಿಸುವುದು ಮೂರ್ಖತನವೆಂದೇ ಶಂಕರರು ತಮ್ಮ ಛಾಂದೋಗ್ಯಪನಿಷತ್ ಭಾಷ್ಯದಲ್ಲಿ ಟೀಕಾಕಾರರ ಬಗೆಗೆ ವ್ಯಂಗ್ಯ ಮಾಡುತ್ತಾರೆ. ವ್ಯಾವಹಾರಿಕ ಮಟ್ಟದಲ್ಲಿರುವುದು ಮಾಯೆಯೊಡಗೂಡಿದ ಬ್ರಹ್ಮವೆಂದೇ ಹೇಳುತ್ತಾ. ಅದನ್ನು 'ಅಪರಬ್ರಹ್ಮ'ವೆಂದು ಅರ್ಥಪೂರ್ಣವಾಗಿ ಕರೆಯುತ್ತಾರೆ.

ಭ್ರಾಂತಿಯ ದೆಸೆಯಿಂದ ಅಪರಿಣಾಮಿ ಬ್ರಹ್ಮತತ್ತ್ವವು ಅನೇಕವಾದ ಜೀವ ಜಗತ್ತಾಗಿ ತೋರುತ್ತಿದೆ. ಮೂಲತಃ ಭೇದವನ್ನೊಳಗೊಂಡ ಪ್ರಾಪಂಚಿಕ ಬದುಕೇ ಅಜ್ಞಾನದ ಆಶ್ರಯದಲ್ಲಿರುವುದಕ್ಕೆ ರುಜುವಾತು. ದೂರದಿಂದ ಹಗ್ಗವೊಂದನ್ನು ನೋಡಿದ ವ್ಯಕ್ತಿಗೆ ಅದು ಹಾವು ಎಂದೇ ಭಾಸವಾಗಿ, ಹತ್ತಿರ ಬಂದಾಗ 'ಹಾವಲ್ಲ' ಅದುನಿಜವಾಗಿಯೂ 'ಹಗ್ಗ' ಎಂದು 'ಸತ್ಯ'ದ ಅರಿವಾಗುತ್ತದೆ. ಆಗಲೇ ಆತ ವಸ್ತುವಿನ (ಹಗ್ಗ) ಅಸ್ತಿತ್ವವನ್ನು ದೃಢಪಡಿಸಿಕೊಳ್ಳಲು ಸಾಧ್ಯ. ಹಳದಿ ಕನ್ನಡಕ ಹಾಕಿ ಕೊಂಡವನು ಒಂದು ಶಂಖವನ್ನು ನೋಡಿದಾಗ ಆ ಶಂಖವು ಹಳದಿ ಬಣ್ಣದ್ದಾಗಿಯೇ ಇರುವಂತೆ ತೋರುತ್ತದೆ. ಕನ್ನಡಕದ ಬಗೆಗೆ ಅಜ್ಞಾನವಿದ್ದಾಗ ಆತ ನೋಡುವ ಶಂಖ ಮೂಲತಃ ಹಳದಿಯೆಂದೇ ಭಾವಿಸಿಕೊಳ್ಳುತ್ತಾನೆ. ಅಂತಿಮವಾಗಿ ಕನ್ನಡಕದ ವಾಸ್ತವ ಜ್ಞಾನ ಉಂಟಾದಾಗ ಹಳದಿ ಬಣ್ಣವು ಕನ್ನಡಕ್ಕದ್ದಾಗಿ, ಶಂಖವು ಅದಕ್ಕೆ ಹೊರತಾಗಿರುವುದನ್ನು ಮನಗಾಣುತ್ತಾನೆ. ಶಂಕರರು ಪ್ರತಿಪಾದಿಸುವಂತೆ ನಾವು ವಸ್ತುಗಳಿಗೆ ಹೆಸರಿಸುವ 'ನಾಮ' ಕೇವಲ ರೂಢ ಮೂಲವಾದದ್ದು ಎನ್ನುವುದರಲ್ಲಿ ಎರಡು ಮಾತಿಲ್ಲ. ಇದೇ ಮಾತು 'ರೂಪ'ಗಳಿಗೂ ಅನ್ವಯವಾಗುತ್ತದೆ. ನಾವು ವ್ಯಾವಹಾರಿಕವಾಗಿ ಕಾಣುವ ಸಾಮಾನ್ಯ ವಸ್ತುಗಳ ಅನೇಕತ್ವದ ಹಿಂದೆ ಅಜ್ಞಾನವಿದೆ.

---

2. 'ಯತೋವಾಚೋ ಅಪ್ರಾಪ್ಯಮನಸಾ ಸಹ'—ತೈತ್ತಿರೀಯ ಉಪನಿಷತ್ತಿನಲ್ಲಿ ಹೀಗೆ ಹೇಳಿ, ಶ್ರುತಿಯು ತಿಳಿಸಲು ಅಸಾಧ್ಯವೆಂದೇ ನಿಷೇಧಿಸಿರುವುದನ್ನು ಹೋಲಿಸಬಹುದು.
3. ಸದೇವ ಸೋಮ್ಯೇದಮಗ್ರ ಆಸೀತ್ ಏಕಮೇವಾ ದ್ವಿತೀಯಂ'—ಛಾಂದೋಗ್ಯ--. 6.2.1. [ಎಲೈ ಸಾಮ್ಯನೇ ! ಎಲ್ಲಕ್ಕಿಂತ ಮಾಡಲು 'ಸತ್' ಒಂದೇ ಇದ್ದಿತು ಮತ್ತೊಂದಲ್ಲ[

ಮೂಲತಃ ಅಜ್ಞಾನದ ಕಾರಣದಿಂದಲೇ ಬ್ರಹ್ಮವು ಜಗತ್ತಾಗಿ ತೋರುತ್ತಿದೆ. ಅಜ್ಞಾನವನ್ನು ನೈಜಜ್ಞಾನದ ಮೂಲಕ ತೊಡೆದುಕೊಂಡಾಗ ಏಕ ಸತ್ಯದ ಅರಿವಾಗಿ ಸತ್ಯವು ಅನೇಕ ಪ್ರಕಾರವಾದದ್ದು ಎಂಬ ಮಾತು ಅರ್ಥ ಕಳೆದುಕೊಳ್ಳುತ್ತದೆ. ಅಂದರೆ ಜಗತ್ತು ಇಲ್ಲವಾಗಿ ಸಾಧಕನು ನೈಜ ಆತ್ಮನನ್ನು ಅರಿಯುತ್ತಾನೆ. ಸರ್ವವೂ ಬ್ರಹ್ಮಮಯವಾಗಿರುವುದನ್ನು ಅನುಭವಿಸುತ್ತಾನೆ.

'ಸತ್ಯ'ವು ಕೇವಲ ಕಲ್ಪನೆ ಎಂದು ಭಾವಿಸಬಾರದು ಎನ್ನುವ ಅದ್ವೈತದರ್ಶನದ ನಿಲುವಿನ ಹಿಂದೆ, ಅದು ಸ್ವತಃ ಸಿದ್ಧವಾದ ಅಪರೋಕ್ಷಾನುಭೂತಿ, ಅಂತಃಸತ್ವದ ಇರವು ಎಂಬ ಖಚಿತ ತೀರ್ಮಾನವನ್ನು ಗುರುತಿಸಬಹುದು. ಒಬ್ಬನು ತನ್ನ ಅಂತಃ ಕರಣದಲ್ಲಿ ನಿಶ್ಚಿತವಾಗಿ ಅನುಭವಿಸುತ್ತಿರುವ ಬ್ರಹ್ಮಜ್ಞಾನವನ್ನು ಮತ್ತೊಬ್ಬನು ಹೇಗೆ ಆಕ್ಷೇಪಿಸಲಾದೀತು ? ಇಂತಹ ಅನುಭವ ನಿಕಟ, ಅನಿರ್ವಚನೀಯ ಹಾಗೂ ವ್ಯಕ್ತಗೊಳಿಸಲು ಅಸಾಧ್ಯವಾದುದು ! ಇದಕ್ಕೆ ಆತ್ಮವೊಂದೇ 'ಸಾಕ್ಷಿ'ಯೆಂದು ಹೇಳ ಬಹುದು. ಎಲ್ಲಾ ಬಗೆಯ ದುಃಖದಿಂದ ಹೊರತಾದ ಶುದ್ಧ ಚೈತನ್ಯವೆಂಬ ಸಾಕ್ಷಾತ್ಕಾರವೇ ಆ ಅನುಭವ. ಶ್ರೀ ಶಂಕರರ ಪ್ರಕಾರ ಸತ್ಯವೆಂದರೆ ವಸ್ತುವು ನಿಶ್ಚಿತವಾದ ರೂಪದಿಂದ ಸಂತತವಾಗಿ ಹಾಗೂ ಸಮಭಾವದಿಂದ ಇರಬೇಕು. ಕ್ಷಣ ಕ್ಷಣವೂ ಪರಿಣಾಮ ಹೊಂದುವ ಸಂತತ ಚಂಚಲವಾದ, ನಿಯತವಾಗಿ ಪರಿವರ್ತನ ಶೀಲದ ಆಗರವೇ ಆಗಿರುವ ಸಂಸಾರದ ಯಾವ ವಸ್ತುವನ್ನೂ ಸತ್ಯವೆಂದು ಹೇಳ ಲಾಗದು ! ಜಗತ್ತಿನ ಪ್ರತಿ ವಸ್ತುವೂ ಸ್ವಪ್ನದೋಪಾದಿಯಲ್ಲಿ ಮಿಥ್ಯಾಭೂತವಾದುದು. ಭೂತ, ಭವಿಷತ್ ಮತ್ತು ವರ್ತಮಾನ—ಈ ಮೂರು ಕಾಲಗಳಲ್ಲಿಯೂ ಮತ್ತು ಜಾಗೃತ, ಸ್ವಪ್ನ, ಸುಷುಪ್ತಿ—ಈ ಮೂರೂ ಅವಸ್ಥೆಗಳಲ್ಲಿಯೂ ಯಾವುದರ ಸ್ವರೂಪವು ಬದಲಾಗುವುದಿಲ್ಲವೋ, ಅದೇ 'ಸತ್ಯ' ಎನಿಸಿಕೊಳ್ಳುತ್ತದೆ. ಬ್ರಹ್ಮ ತತ್ತ್ವವು ಇಂತಹ ಏಕೈಕ ಸತ್ಯ. ಬ್ರಹ್ಮದಿಂದ ಬೇರೆ ಎನಿಸಿ ಸಮಸ್ತನಾನಾತ್ಮಕ ಜಗತ್ತು ಮಿಥ್ಯಾಭೂತ[1]ವಾದುದೆಂದೇ ಅದ್ವೈತ ದರ್ಶನ ಸಾರುತ್ತದೆ.

ಮೂಲತಃ ಜೀವಾತ್ಮನು ಅಂತಃಕರಣದಿಂದೊಡಗೂಡಿದ ಚೈತನ್ಯವೇ ಹೌದು. ಅರ್ಥಾತ್ ಆಚಾರ್ಯರು ಸಮ್ಮತಿಸಿರುವಂತೆ ಶರೀರ ಮತ್ತು ಇಂದ್ರಿಯಗಳ ಅಧಿಪತಿ ಯಾದ ಹಾಗೂ ಕರ್ಮಫಲಗಳನ್ನು ಅನುಭವಿಸುವ ಆತ್ಮನೇ ಜೀವ. ಆತ್ಮಚೈತನ್ಯವು ಜಾಗೃತ, ಸ್ವಪ್ನ ಹಾಗೂ ಸುಷುಪ್ತಿ—ಈ ಮೂರು ಅವಸ್ಥೆಗಳಲ್ಲಿಯೂ ಕಾಣಸಿಗುತ್ತವೆ.

---

1. ನ ನಿರೋಧೋ ನಚೋತ್ಪತ್ತಿಃ ನ ಬದ್ಧೋ ನ ಚ ಸಾಧಕಃ ।
ನ ಮುಮುಕ್ಷುರ್ನವೈ ಮುಕ್ತ ಇತ್ಯೇಷಾ ಪರಮಾರ್ಥತಾ ॥ —ಮಾಂ.ಕಾ. 2.32
ಪಾರಮಾರ್ಥಿಕ ದೃಷ್ಟಿಯಿಂದ ಜೀವರೂ ಇಲ್ಲ. ಜಗತ್ತೂ ಇಲ್ಲ. ಭಗವಂತನೂ ಇಲ್ಲ ; ಬಂಧಮೋಕ್ಷಗಳೂ ಇಲ್ಲವೆಂದೇ ಹೇಳುವ ಆಚಾರ್ಯ ಗೌಡಪಾದರ ಮಾತನ್ನು ಹೋಲಿಸ ಬಹುದು.

ಜೀವಾತ್ಮನನ್ನು ದೃಷ್ಟಿಯಲ್ಲಿಟ್ಟುಕೊಂಡು ಅದ್ವೈತ ದರ್ಶನದಲ್ಲಿ ಮೂರು ವಿಧದ ಸತ್ಯಗಳನ್ನು ಪರಿಗಣಿಸಲಾಗಿದೆ. ದತ್ತಾತ್ರಯಗಳ ಮೂಲಕವಾಗಿ ಬದುಕಿನಲ್ಲಿ ಜೀವಾತ್ಮ ಆತ್ಮಸಾಕ್ಷಾತ್ಕಾರ ಸಾಧ್ಯಮಾಡಿಕೊಳ್ಳುವ ಸಲುವಾಗಿ ಅಗತ್ಯವೆನಿಸಿರುವ ಸಾಧನೆಗಳನ್ನು ಕುರಿತು ಈ ದರ್ಶನದಲ್ಲಿ ನಿರ್ದೇಶನ ಮಾಡಲಾಗಿದೆ.

ಸತ್ಯಾತ್ರಯಗಳು ಹೀಗಿವೆ :–

(ಅ) ಪ್ರಾತಿಭಾಸಿಕ ದತ್ತಾ
(ಆ) ವ್ಯಾವಹಾರಿಕ ದತ್ತಾ
(ಇ) ಪಾರಮಾರ್ಥಿಕ ದತ್ತಾ

ಇವುಗಳ ಸ್ಥೂಲ ಪರಿಚಯವನ್ನು ಹೀಗೆ ನಿರೂಪಿಸಬಹುದು :–

ಪ್ರಾತಿಭಾಸಿಕ ಸತ್ಯವೆಂದರೆ—ನಮ್ಮ ಅನುಭವನ (ಪ್ರತೀತಿ) ಕೆಲವು ಕ್ಷಣಗಳು ವ್ಯಾವಹಾರಿಕವಾಗಿ ಕಂಡುಬಂದು ತದನಂತರ ಕಾಣೆಯಾಗುವುದು. ಇಲ್ಲಿ ವಸ್ತುವು ಸತ್ಯವಾಗಿ ತೋರುವುದು ಕೇವಲ ಕೆಲವು ಕ್ಷಣಗಳು ಮಾತ್ರ! ಉದಾಹರಣೆಗೆ—ಹಗ್ಗ ವನ್ನು ನೋಡಿ ಹಾವೆಂದು ಭ್ರಮಿಸುವುದು. ಈ ಅನುಭವದ ಕಾಲದಲ್ಲಿ ಹಾವು ಸತ್ಯವೆಂದೇ ತೋರುತ್ತದೆ. ತತ್‌ಪರಿಣಾಮವೆಂದರೆ ಸಹಜವಾಗಿಯೇ ನಾವು ಭಯ ಪಡುತ್ತೇವೆ. ನೈಜ ಹಾವನ್ನು ಕಂಡಾಗ ಉಂಟಾಗುವ ಪರಿಣಾಮವೇ ಇಲ್ಲೂ ಸಂಭವಿಸುತ್ತದೆ. ಅಂತಿಮವಾಗಿ ನೈಜ ಜ್ಞಾನ ಸ್ಫುರಿಸಿದಾಗ ಅರ್ಥಾತ್ ಅದು ಹಾವಲ್ಲ! ಹಗ್ಗವೆಂಬ ವಾಸ್ತವ ಜ್ಞಾನದ ಅರಿವಾದಾಗ ನಮ್ಮ ಭಯ, ಆತಂಕಗಳು ಇಲ್ಲವಾಗುತ್ತವೆ. ಪ್ರಾತಿಭಾಸಿಕ ಸತ್ಯವು ಕೇವಲ ತಾತ್ಕಾಲಿಕವಾದದ್ದು, ಅಲ್ಲದೆ ವೈಯಕ್ತಿಕ ಅನುಭೂತಿಗೆ ಸಂಬಂಧಿಸಿದ್ದು.

ಜೀವಾತ್ಮನು ಪ್ರಾಪಂಚಿಕ ಬದುಕಿನಲ್ಲಿ ಅನುಭವಿಸುವ ಎಲ್ಲಾ ಬಗೆಯ ಸಂವೇದನೆಗಳು, ಅನುಭವಗಳು, ವಸ್ತು-ವಿಷಯಗಳು ವ್ಯಾವಹಾರಿಕ ಸತ್ಯದ ವ್ಯಾಪ್ತಿ ಯಲ್ಲಿ ಬರುತ್ತವೆ. ಈ ಗೋಚರ ಪ್ರಪಂಚದ ಅನೇಕತೆಯಲ್ಲಿ ಎಲ್ಲ ವಸ್ತು ವಿಷಯಗಳ ಜೊತೆಗಿದ್ದ ವ್ಯವಹಾರವು ಬ್ರಹ್ಮಜ್ಞಾನವಾಗುವವರೆಗೂ ನಮ್ಮಲ್ಲಿ ಸಾಧ್ಯವಾಗುತ್ತಿರು ತ್ತದೆ. ಇಲ್ಲಿ ಪ್ರಾತಿಭಾಸಿಕ ಸತ್ಯದ ರೀತಿ ಹಗ್ಗವನ್ನು ನೋಡಿ ಹಾವೆಂದು ತಿಳಿಯುವ ರೀತಿಯಲ್ಲ! ಬದಲಾಗಿ ನಿಜವಾದ ಹಾವುಗಳ ಒಡನಾಟವೇ ಸಾಧ್ಯವಾಗುತ್ತಿರುತ್ತದೆ. ಹಾವು ಕಚ್ಚಿ ವಿಷವೇರಿ ವ್ಯಕ್ತಿ ಸಾಯಲೂಬಹುದು. ಈ ಬಗೆಯ ವ್ಯಾವಹಾರಿಕ ಸತ್ಯವು ಅಂದರೆ ಈ ಭೌತಿಕ ಪ್ರಪಂಚ ಹಾಗೂ ಅದರ ಅನೇಕತೆಯೊಡನೆ ನಡೆಯುವ ವ್ಯವಹಾರವು ಬ್ರಹ್ಮಸಾಕ್ಷಾತ್ಕಾರ ಸಾಧ್ಯವಾಗುವವರೆಗೂ 'ಮಿಥ್ಯೆ' ಎನಿಸಲಾರದು. ಇಲ್ಲಿ ಗಮನಾರ್ಹ ಸಂಗತಿಯೆಂದರೆ, ಪ್ರಾತಿಭಾಸಿಕ ಸತ್ಯವು ವೈಯಕ್ತಿಕವಾದರೆ. ವ್ಯಾವಹಾರಿಕ ಸತ್ಯವು ಸಾರ್ವತ್ರಿಕವಾದುದು.

ಪಾರಮಾರ್ಥಿಕ ಸತ್ಯವೆಂದರೆ, ನೈಜ ಶಾಶ್ವತ ಸತ್ಯ. ಪರಿಪೂರ್ಣವಾಗಿ, ಸೀಮಾತೀತವೆನಿಸಿ, ಸರ್ವಕಾಮಗಳಿಂದಲೂ ಮುಕ್ತವಾಗಿ, ಬಂಧನರಹಿತವಾದ ಸತ್ಯ. ಅದು ಬ್ರಹ್ಮತತ್ತ್ವವೇ ಹೌದು. ಅದು ಎಂದಿಗೂ ತನ್ನ ನೈಜ ಸ್ವರೂಪದಿಂದ ಬಾಧಿತವಾಗದು, ಸರ್ವದಾ ಅಬಾಧಿತವಾಗಿರುವ ತತ್ತ್ವ. ಕಾಲ, ದೇಶ, ಅವಸ್ಥೆಗಳಿಗನುಗುಣವಾಗಿ ತನ್ನ ಸ್ವರೂಪವನ್ನು ಮಾರ್ಪಡಿಸಿಕೊಳ್ಳುವುದು ಸತ್ಯವಾಗಲಾರದು, ಬದಲಾಗಿ ಅದು ಕೇವಲ 'ತೋರಿಕೆಯ ಸತ್ಯ' ಮಾತ್ರ! ಪರಮ ಸತ್ಯವಾಗಿರುವ ಬ್ರಹ್ಮತತ್ತ್ವವು ಅಚಲ, ಅಖಂಡವಾದುದು, ಮೂಲತಃ ಅದು ಸವಿಶೇಷವಲ್ಲ; ನಿರ್ಗುಣ ಸ್ವರೂಪವಾದುದೆಂಬ ಅರಿವನ್ನು ಹೊಂದುವುದು ಪಾರಮಾರ್ಥಿಕ ಸತ್ಯದ ತಿರುಳು.

ಅವಿದ್ಯೆಯ ವಶದಲ್ಲಿರುವ ಜೀವಾತ್ಮನು ತನ್ನ ನೈಜ ಸ್ವರೂಪವನ್ನರಿಯಲು ನೈಜ ಜ್ಞಾನವನ್ನು ಆಶ್ರಯಿಸಬೇಕು. ಅಖಂಡ ಸತ್ಯದ ಅನುಭವ ಜೀವಾತ್ಮನಿಗೆ ಸಾಧ್ಯವಾಗಬೇಕು, ಇಂತಹ ಅನುಭವಕ್ಕೆ ಪ್ರಾಯೋಗಿಕ ಶಿಕ್ಷಣದ ಸಾಧನೆಯನ್ನು ಅದ್ವೈತದರ್ಶನವು ಮಾರ್ಗದರ್ಶಿಸುತ್ತದೆ.

ಪ್ರಾಯೋಗಿಕ ಶಿಕ್ಷಣವೆಂದಾಗ ಪೂರ್ವಭಾವಿಯಾಗಿ ಮಾನವನು ವೈರಾಗ್ಯಭಾವ ಹೊಂದಿರಬೇಕಾದುದು ಅವಶ್ಯ. ಪರತತ್ತ್ವದ ಬಗೆಗೆ ನಿಷ್ಕಾಮಭಾವದಿಂದ ಜ್ಞಾನವನ್ನು ಪಡೆದುಕೊಂಡು ಅದು ಅಪರೋಕ್ಷ ಅನುಭವವಾಗಲು ಸಾಧನ ಚತುಷ್ಟಯವನ್ನು ಆಶ್ರಯಿಸಬೇಕು. ಸಾಧನ ಚತುಷ್ಟಯವನ್ನು ಹೀಗೆ ನಿರೂಪಿಸಬಹುದು :–

(i) **ನಿತ್ಯಾನಿತ್ಯ ವಸ್ತುವಿವೇಕ** :–ಪ್ರಾಪಂಚಿಕ ಬದುಕಿನ ಅನೇಕತೆಯಲ್ಲಿ ನಿತ್ಯವಾದದ್ದು, ಸತ್ಯವಾದದ್ದು, ಶಾಶ್ವತವಾಗಿರುವುದು ಯಾವುದು? ಅಸತ್ಯವೆನಿಸಿ ನಶ್ವರವಾಗಿರುವುದು ಯಾವುದು? ಎಂಬ ಯುಕ್ತಾಯುಕ್ತತೆಯ ಪರಿಜ್ಞಾನವನ್ನು ಹೊಂದುವುದು. ಈ ಬಗೆಯ ಜಿಜ್ಞಾಸೆಯು ಜೀವಾತ್ಮನಿಗೆ ಮೌಲ್ಯಗಳ ಬಗೆಗೆ ಅರಿವನ್ನುಂಟು ಮಾಡುತ್ತದೆ. ಅಂತಿಮ ಮೌಲ್ಯದ ಅನುಭವ ಆತ್ಮಸಾಕ್ಷಾತ್ಕಾರದ ನಂತರವೇ ಆದರೂ ಅದಕ್ಕೆ ಪೂರ್ವಭಾವಿಯಾಗಿ ಲೋಕಾನುಭವದೊಡನೆ ಶಾಸ್ತ್ರವಿಚಾರಗಳ ಸಹಾಯದಿಂದಲೂ ಸ್ವಲ್ಪಮಟ್ಟಿನ ಸ್ಥೂಲ ಜ್ಞಾನವನ್ನು ಹೊಂದಬಹುದು. ಲೋಕಾನುಭವವು ನೈಜ ಸಂಗತಿಯನ್ನು ನಮಗೆ ಮನವರಿಕೆ ಮಾಡಿಕೊಡುತ್ತದೆ. ಜಗತ್ತಿನ ವಸ್ತು-ವಿಷಯಗಳು ಕೇವಲ ಕ್ಷಣಿಕ, ಶಾಶ್ವತವಲ್ಲ, ಲೌಕಿಕ ಸುಖಸಾಧನಗಳು, ಭೋಗವಿಲಾಸಗಳು ಕೇವಲ ತಾತ್ಕಾಲಿಕ ಅವಸ್ಥೆಗಳು ಮಾತ್ರ ಎಂಬ ಸತ್ಯವನ್ನು ಲೋಕಾನುಭವದಿಂದ ಅರಿತುಕೊಳ್ಳಬಹುದು. ಸ್ವರ್ಗ ಅಥವಾ ಇನ್ನಿತರ ಪರಲೋಕಗಳ ಸ್ಥಿತಿಯೂ ಸಹ ಮೇಲೆ ವಿವರಿಸಿದ ಅನುಭವಕ್ಕಿಂತ ಭಿನ್ನವಾದುದಲ್ಲವೆಂದು ಶಾಸ್ತ್ರಗಳೂ ಸಹ ಉಪದೇಶಿಸುತ್ತವೆ. ಒಟ್ಟಾರೆ ಪ್ರಾಪಂಚಿಕ ಬದುಕಿನಲ್ಲಿ ಜೀವಾತ್ಮನು ಹೊಂದಬೇಕಾದ ಜ್ಞಾನವೆಂದರೆ ಆತ್ಮಜ್ಞಾನ. ಜನ್ಮರಹಿತವಾಗಿರುವ, ಅಪರಿಣಾಮಿಯಾಗಿ, ಅಚಲವಾಗಿರುವಾಗ, ಅಂತಃಸ್ಸತ್ವವೇ ಆಗಿರುವ 'ಆತ್ಮ'ವೊಂದೇ ನಿತ್ಯವಾದದ್ದು, ಉಳಿದೆಲ್ಲ

ಅನೇಕತೆಗಳು ಮಿಥ್ಯಾಭೂತವೇ ಸರಿ ಎಂಬ ಸ್ಥೂಲ ಜ್ಞಾನವನ್ನು ವಿಚಾರದ ಮೂಲಕ ಸಾಧಕನು ಪರೋಕ್ಷ ಜ್ಞಾನವನ್ನು ಪಡೆಯುವುದು. ಲೌಕಿಕ ಬದುಕಿನ ಸಂಸಾರದ ಜಂಜಾಟಗಳೂ, ನೋವು, ಹಿಂಸೆ, ದುಃಖಗಳೂ ಕೂಡ ಈ ಬಗೆಯ ಜ್ಞಾನ ಪಡೆದು ಕೊಳ್ಳುವಲ್ಲಿ ಪ್ರೇರಣೆಯಹಾಗುವುದು ಸಾಧ್ಯವಿದೆ.

(ii) **ಇಹಾಮುತ್ರಾರ್ಥ ಫಲಭೋಗವಿರಾಗ** :–ಜೀವಾತ್ಮನು ಭೌತಿಕ ಜಗತ್ತಿನಲ್ಲೇ ಆಗಲೀ, ಸ್ವರ್ಗ ಇತ್ಯಾದಿ ಪರಲೋಕಗಳಲ್ಲೇ ಆಗಲೀ ಸುಖವನ್ನು ಪಡೆಯ ಬೇಕು ಎಂಬ ಬಯಕೆಯನ್ನು ಹೊಂದಿರುವುದು. ಈ ಬಗೆಯ ಸುಖಗಳು ಕ್ರಿಯೆಗಳಿಂದಲೇ ಉದಯವಾಗುವುದರಿಂದ ಇವು ಮಿಥ್ಯೆ ಎನಿಸುತ್ತವೆ. ಶಾಶ್ವತವಾದ ಆನಂದವನ್ನು ಹೊಂದುವ ಇಚ್ಛೆಯುಳ್ಳ ಜೀವಾತ್ಮನು ಈ ಬಗೆಯ ಸುಖಗಳಲ್ಲಿ ಆಸೆ ಇಡಲಾರ.

(iii) **ಶಮಾದಿ ಸಾಧನ ಸಂಪತ್ತು** :–ಶಮಾದಿ ಸಾಧನ ಸಂಪತ್ತು ಎಂದರೆ–ಶಮ, ದಮ, ಉಪರತಿ, ತಿತಿಕ್ಷೆ, ಸಮಾಧಾನ, ಶ್ರದ್ಧೆ–ಈ ಆರರ ಪೌಷ್ಕಲ್ಯ. ಮನಸ್ಸು ಮತ್ತು ಬಾಹ್ಯೇಂದ್ರಿಯಗಳನ್ನು ನಿಗ್ರಹಿಸುವುದು 'ಶಮ' ಹಾಗೂ 'ದಮ' ಎನಿಸುತ್ತದೆ. ಉಪರತಿ ಎಂಬ ಶಬ್ದದ ಅರ್ಥವನ್ನು ಹೀಗೆ ಹೇಳಬಹುದು–'ಬಾಹ್ಯ ವಿಷಯಗಳಲ್ಲಿ ನಿರಾಸಕ್ತಿಯನ್ನು ತಾಳಿ ತತ್ಪರಿಣಾಮವಾಗಿ ಮನಶ್ಶಾಂತಿಯನ್ನು ಪಡೆಯುವುದು' ಅಥವಾ ಸಂಸಾರ ಜಗತ್ತಿನಲ್ಲಿ ಆಸಕ್ತಿ ತ್ಯಜಿಸಿದವನು ಸಂನ್ಯಾಸಾಶ್ರಮ ಸ್ವೀಕರಿಸುವುದು ಕೂಡ ಉಪರತಿಯ ಅರ್ಥವ್ಯಾಪ್ತಿಯಲ್ಲಿಯೇ ಬರುತ್ತದೆ. 'ತಿತಿಕ್ಷೆ' ಎಂದರೆ ಬಿಸಿಲು, ಚಳಿ, ಮುಂತಾದ ದ್ವಂದ್ವವನ್ನು ಸಹಿಸುವಿಕೆ; ಸಮಾಧಾನವೆಂದರೆ ಮಾಡುತ್ತಿರುವ ಕೆಲಸದಲ್ಲೇ ಆಗಲೀ, ಕೇಳುತ್ತಿರುವ ವಿಷಯದಲ್ಲೇ ಆಗಲೀ ಜೀವಾತ್ಮನು ಏಕಾಗ್ರತೆಯಿಂದ ತನ್ಮಯಚಿತ್ತನಾಗುವುದು. ಗುರುವಿನ ಬೋಧನೆಯಲ್ಲಿ ಅಪಾರವಾದ, ಅಚಲವಾದ, ನಂಬಿಕೆಯನ್ನಿಡುವುದು ಶ್ರದ್ಧೆ ಎನಿಸುತ್ತದೆ.

(iv) **ಮುಮುಕ್ಷುತ್ವ** :–ಮುಕ್ತಿಯನ್ನು ಪಡೆಯುವ ಬಯಕೆಗೆ 'ಮುಮುಕ್ಷುತ್ವ' ಎಂದು ಹೇಳಬಹುದು. ಮೇಲೆ ಹೇಳಿದ ಸಾಧನಾ ಚತುಷ್ಟಯವನ್ನು ಪಡೆದುಕೊಂಡು ಸಾಧಕನು ಅನಂತರ ಮುಕ್ತಿ ಪಡೆಯಲು ಸಾಧ್ಯವಾಗುವ ಜ್ಞಾನಸಂಪಾದನೆಗಾಗಿ ತತ್ತ್ವ ಯೋಗ್ಯ ಗುರುವನ್ನು ಆಶ್ರಯಿಸುತ್ತಾನೆ. ಕಾರಣವೇನೆಂದರೆ ಯೋಗ್ಯ ಗುರುವಿನಿಂದ ಸಂಪಾದಿಸಿಕೊಳ್ಳದ ಜ್ಞಾನವು ಕಾರ್ಯಕಾರಿಯಹಾಗಲು ಸಾಧ್ಯವಿಲ್ಲ. ಗುರುವು ತನ್ನ ಶಿಷ್ಯೋತ್ತಮನಿಗೆ ತತ್ತ್ವದ ಜೊತೆಗೆ ಮುಕ್ತಿಯನ್ನು ಹೇಗೆ ಪಡೆಯಬೇಕೆಂಬ ವಿಷಯದಲ್ಲಿ ಉಪನಿಷತ್ತುಗಳ ಮಹತ್ತ್ವವನ್ನು ವಿವರಿಸುತ್ತಾ, ಅವುಗಳ ಸಾರ-ಸರ್ವಸ್ವವನ್ನು ಶಿಷ್ಯನಲ್ಲಿ ತುಂಬುವುದರ ಮೂಲಕ ತನ್ನ ಕರ್ತವ್ಯವನ್ನು ನೆರವೇರಿಸುತ್ತಾ ಆತ್ಮ ಸಾಕ್ಷಾತ್ಕಾರದ ಮಾರ್ಗವನ್ನು ಬೋಧಿಸುತ್ತಾನೆ. ತನ್ಮೂಲಕ ಶಿಷ್ಯನಲ್ಲಿದ್ದ ಅಜ್ಞಾನವನ್ನು ಹೋಗಲಾಡಿಸಿ ಮಿಥ್ಯೆಯಿಂದಾಚೆಯ ಬ್ರಹ್ಮಪದ ಪ್ರಾಪ್ತಿಯಹಾಗಲು ಸಹಾಯ ಮಾಡುತ್ತಾನೆ. ಒಟ್ಟಾರೆ ಇದು ಶಿಕ್ಷಣದ ಮೊದಲನೆಯ ಹಂತ. ದ್ವಿತೀಯ ಹಂತವನ್ನು ಮೂರು ಕ್ರಮಗಳಲ್ಲಿ ವಿವರಿಸಲಾಗಿದೆ—

ಶ್ರವಣ, ಮನನ ಮತ್ತು ನಿದಿಧ್ಯಾಸನ.

ಶ್ರವಣವೆಂದರೆ ಅಂತಿಮ ಸತ್ಯ ಒಂದೇ ಎಂಬ ಅದ್ವೈತ ಜ್ಞಾನದ ಬಗೆಗೆ ಯೋಗ್ಯ ಗುರುವಿನಾಶ್ರಯದಲ್ಲಿ ಸಾಧಕ ಕೇಳಿ ತಿಳಿದುಕೊಳ್ಳುವುದು. 'ಮನನ'ವೆಂದರೆ ತಾನು ಕೇಳಿ ತಿಳಿದುಕೊಂಡ ಸತ್ಯವು ಅದು ಹೇಗೆ ಸಮ್ಮತವಾದುದು ಎಂದು ಸ್ವತಃ ಸರಿ ಎನಿಸುವವರೆಗೆ ಪರ್ಯಾಲೋಚಿಸುವುದು. ನಿದಿಧ್ಯಾಸನವೆಂದರೆ ತಾನು ಪರ್ಯಾಲೋಚಿಸಿದ ಅಂತಿಮ ಸತ್ಯದ ಪರೋಕ್ಷ ಜ್ಞಾನದ ಪ್ರತ್ಯಕ್ಷ ಅನುಭೂತಿಯನ್ನು ಹೊಂದುವುದು. ಈ ಹಂತದಲ್ಲಿ ಸಾಧಕ ಜಯಗಳಿಸಿದಾಗ ಕರ್ತೃ, ಭೋಕ್ತೃ ಎನ್ನುವ ತೋರಿಕೆಯ ದ್ವಂದ್ವ ಭಾವಗಳೆಲ್ಲಾ ನಶಿಸುತ್ತವೆ. ಅಭೇದ ಸತ್ಯದ ಆತ್ಮಜ್ಞಾನ ಸಾಧ್ಯವಾದಾಗ 'ತತ್ತ್ವಮಸಿ' ಎಂಬ ಅರಿವು ಸಾಧಕನಿಗುಂಟಾಗುವುದು. ಆತ್ಮದ ಅಂತಃಸ್ಸತ್ವ ಸಂಪೂರ್ಣವಾಗಿ ಸಾಧಕನ ಅನುಭವಕ್ಕೆ ಬರುವುದು ; ಅರ್ಥಾತ್ ಅಜ್ಞಾನ ಕಳೆದುಹೋಗಿ ಜೀವೇಶ್ವರ ಅಭೇದ ಸಿದ್ಧವಾಗುತ್ತದೆ. ವೇದವು ಹೇಳುವಂತೆ 'ಅನೇಕ ಹೆಸರುಗಳಿಂದ ಕರೆಯಿಸಿಕೊಳ್ಳುವ ಏಕ ಸತ್ಯದ ಸಾಕ್ಷಾತ್ಕಾರವಾಗುತ್ತದೆ. ಜಗತ್ತು ಬ್ರಹ್ಮಮಯವೇ ಆಗಿದೆ ಎಂಬ ಉಪನಿಷತ್ತುಗಳ ಮಾತು ಇಲ್ಲಿ ಸಾರ್ಥಕ್ಯ ಪಡೆಯುತ್ತದೆ; ಅಂದರೆ ಗೌಡಪಾದಾಚಾರ್ಯರು ಹೇಳುವಂತೆ—ಆತ್ಮವೊಂದೇ ಸತ್ಯವೆಂಬ ಜ್ಞಾನದಿಂದ ಯಾವಾಗ ಏನನ್ನೂ ಸಂಕಲ್ಪಿಸುವುದಿಲ್ಲವೋ ಆಗ ಗ್ರಾಹ್ಯವಸ್ತುವೇನೂ ಇಲ್ಲದೆ ಯಾವುದನ್ನೂ ಗ್ರಹಿಸದೆ ಮನಸ್ಸು ಅಮನೀಭಾವವನ್ನು ಹೊಂದುವ ಸ್ಥಿತಿ.

ಪರಾತ್ಪರ ವಸ್ತು ಸಾಕ್ಷಾತ್ಕಾರವಾಯಿತೆಂದರೆ ಹೃದಯದ ಗ್ರಂಥಿಯು ನಾಶವಾಗುತ್ತದೆ. ಸರ್ವ ಅನುಮಾನಗಳೂ ಕತ್ತರಿಸಲ್ಪಡುತ್ತವೆ. ಮತ್ತು ಸರ್ವಕರ್ಮಗಳೂ ಕ್ಷೀಣಿಸುತ್ತವೆ. ಇದೇ ಮೋಕ್ಷ ಸ್ಥಿತಿ. ಅಂದರೆ ಆತ್ಮಜ್ಞಾನವು ಬೇರೆಡೆಯಿಂದ ಮೋಕ್ಷವನ್ನು ತಂದುಕೊಡುತ್ತದೆ ಎಂದು ಭಾವಿಸಬಾರದು. ಜೀವಾತ್ಮ ತನ್ನ ನೈಜ ಸ್ವರೂಪವನ್ನು ಸಾಕ್ಷಾತ್ಕರಿಸಿಕೊಳ್ಳುವುದೇ ಮೋಕ್ಷ ಸ್ಥಿತಿ. ಏಕ ಸತ್ಯದ ಅರಿವಾದಾಗ ಸಾಧಕನು ಜೀವನ್ಮುಕ್ತ ಎನಿಸುತ್ತಾನೆ. ಜೀವನ್ಮುಕ್ತನಾದವನಿಗೆ ಪ್ರಾಪಂಚಿಕತೆ ಎನ್ನುವುದು ಇರುವುದೇ ಇಲ್ಲ! ಐಹಿಕ ಭೋಗ ಜೀವನದ ವಸ್ತು-ವಿಷಯಗಳನ್ನು ಆತ ಕಾಣಲಾರ : ಆತ ಕಾಣುವುದೆಲ್ಲವೂ ಬ್ರಹ್ಮವೇ ಆಗಿ, ಸಂವಾದದಿಂದ ಮೊದಲ್ಗೊಂಡು ಉಣ್ಣುವುದು, ತಿನ್ನುವುದು, ಉಡುವುದು, ಮಲಗುವುದು, ಬದುಕುವುದೆಲ್ಲವೂ ಬ್ರಹ್ಮವೇ ಆಗಿರುತ್ತದೆ. ಆತನ ಬದುಕಿನ ಕಾರ್ಯಗಳೆಲ್ಲಾ ಬ್ರಹ್ಮವೇ ಆಗಿ ಇಡೀ ಜಗತ್ತು ಬ್ರಹ್ಮಮಯವಾಗಿರುತ್ತದೆ ; ಇಂತಹವನಿಗೆ ಸಂಸಾರದ ದೋಷ ತಟ್ಟುವುದಾದರೂ ಹೇಗೆ ಸಾಧ್ಯ? ಈ ಬಗೆಯ ಜೀವನ್ಮುಕ್ತನು ಇತರರನ್ನು ಮೇಲಕ್ಕೆತ್ತಲು, ಅಂತಿಮ ಸತ್ಯದ ಅನುಭವ ಹೊಂದಲು ದಾರಿ ತೋರಿಸುತ್ತಾನೆ ; ಸಮಾಜಕ್ಕೆ ಬೆಳಕಾಗುತ್ತಾನೆ ; ಜೀವನ್ಮುಕ್ತನು ದೇಹ ತ್ಯಜಿಸಿದಾಗ ವಿದೇಹಮುಕ್ತ ಎನಿಸಿಕೊಳ್ಳುತ್ತಾನೆ.

"ಕುವೆಂಪು ವಿಮರ್ಶೆಯ ಸ್ವರೂಪ"

ಸಾಸಲು ಜಿ. ವಿಶ್ವನಾಥ

ಕುವೆಂಪು ಸಾಹಿತ್ಯದಲ್ಲಿ ಹೇಗೆ ಮಹಾವ್ಯಕ್ತಿಯೋ ಹಾಗೆಯೇ ವಿಮರ್ಶೆಯ ನೆಲೆಯಲ್ಲಿಯೂ ಮಹಾವ್ಯಕ್ತಿಯಾಗಿಯೇ ನಮಗೆ ಗೋಚರಿಸುತ್ತಾರೆ. ಇವರಿಗೆ ನವೋದಯ ಮನೋಧರ್ಮ ಒಂದು ಹೊಸ ವಿಮರ್ಶಾ ಆಯಾಮವನ್ನೇ ಒದಗಿಸಿದೆ ಯೆಂದರೆ ತಪ್ಪಲ್ಲ. ಬಿ. ಎಂ. ಶ್ರೀ. ಮಾಸ್ತಿಯವರ ನವೋದಯ ವಿಮರ್ಶೆಯ ಮೊದಲ ಸ್ಥರದ ವಿಚಾರಧಾರೆಗಳಾದ ಪಾಶ್ಚಾತ್ಯ ಸಾಹಿತ್ಯ ವಿಮರ್ಶೆ ಮತ್ತು ಪಾಶ್ಚಾತ್ಯ ಕಾವ್ಯಮೀಮಾಂಸೆಯ ಕೆಲವೊಂದು ವಿಮರ್ಶಾ ಮಾನದಂಡಗಳನ್ನು ಕುವೆಂಪು ಭಾರತೀಯ ಕಾವ್ಯಮೀಮಾಂಸೆ ಹಾಗೂ ಭಾರತೀಯ ಸಾಹಿತ್ಯ ವಿಮರ್ಶೆಯ ಮಾನದಂಡದೊಂದಿಗೆ ಬೆರಸಿ ನೋಡುವ ದೃಷ್ಟಿಕೋನವನ್ನು ಬೆಳೆಸಿಕೊಂಡಿರುವುದು ನಮಗೆ ಕಾಣಸಿಗುತ್ತದೆ. ಮತ್ತೆ ಅದನ್ನು ತಮ್ಮದನ್ನಾಗಿ ಮಾಡಿಕೊಂಡು ಕನ್ನಡದ ಸಂದರ್ಭದಲ್ಲಿ ಅನ್ವಯಿಕ ದೃಷ್ಟಿಯಿಂದ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ತನ್ನ ತನವನ್ನೂ ತೋರಿದ ಪ್ರಥಮ ಆಧುನಿಕ ವಿಮರ್ಶಕರಾಗಿದ್ದಾರೆ.

ಹೊಸ ಪ್ರಯೋಗಗಳ ಮಹತ್ವದ ಲೇಖಕರಾಗಿ, ಸ್ವತಃ ಕವಿಯಾದ ಕುವೆಂಪು ವಿಮರ್ಶಕರಾಗಿ ದರ್ಶನಾತ್ಮಕ ನೆಲೆಯ ಒಂದು ಮಹಾ ವಿಮರ್ಶಾಲೋಕವನ್ನೇ ನಮ್ಮ ಕಣ್ಣೆದುರು ತೆರೆದು ಕೊಟ್ಟರು. ಈ ನಿಟ್ಟಿನಲ್ಲಿ ಕಾವ್ಯಮೀಮಾಂಸಕರಾಗಿಯೂ ನಮ್ಮ ನಡುವೆ ಅಗಾಧವಾಗಿ ಬೆಳೆದು ನಿಂತರು. ಅಷ್ಟೇ ಅಲ್ಲದೆ ಹೊಸ ತಲೆಮಾರಿನ ವಿಮರ್ಶಕರಿಗೆ, ಕಾವ್ಯಮೀಮಾಂಸಕರಿಗೆ, ಬುದ್ಧಿಜೀವಿಗಳಿಗೆ; ತತ್ವಜ್ಞಾನಿಗಳಿಗೆ, ಮನೋವಿಜ್ಞಾನಿಗಳಿಗೆ, ಸಮಾಜ ವಿಜ್ಞಾನಿಗಳಿಗೆ, ಬುದ್ಧಿಜೀವಿಗಳಿಗೆ ಮೇಲಾಗಿ ಸಹೃದಯರಿಗೆ ಹೊಸ ಹೊಸ ವಿಮರ್ಶನಾ, ಮೀಮಾಂಸನಾ ಮಾನದಂಡಗಳನ್ನು ನೀಡಿ, ಅವುಗಳ ಬಳಕೆಯಿಂದ ಹೇಗೆ ಉತ್ಕೃಷ್ಟ ಕಾವ್ಯಕೃಷಿ ಸಾಧ್ಯವೆಂದು ಕುವೆಂಪು ಸ್ವತಃ ಪ್ರಯೋಗ ಮಾಡಿ ತೋರಿಸಿದ್ದಾರೆ.

ಕುವೆಂಪು ಸಾಹಿತ್ಯತತ್ವ ಮತ್ತು ಸಾಹಿತ್ಯ ವಿಮರ್ಶೆಯ ಮಾನದಂಡಗಳನ್ನು, ಅವರ ಪ್ರಮುಖ ಕೃತಿಗಳಾದ 'ತಪೋನಂದನ', 'ವಿಭೂತಿಪೂಜೆ' 'ರಸೋವೈಸ', 'ದ್ರೌಪದಿಯ ಶ್ರೀಮುಡಿ' 'ಕಾವ್ಯ ವಿಹಾರ' ಇತ್ಯಾದಿ. 'ರಾಮಾಯಣ ದರ್ಶನಂ',

'ಚಿತ್ರಾಂಗದ', 'ದಾರ್ಶನಿಕ ಕಾವ್ಯ ಮೀಮಾಂಸೆ' ಮುಂತಾದ ಕೃತಿಗಳಲ್ಲಿ ಸಮಗ್ರವಾಗಿ ನಾವು ಕಾಣಬಹುದು. ಅವರ ದರ್ಶನದ ದೃಷ್ಟಿಕೋನಗಳಿಗೆ ಈ ಕೃತಿಗಳು ಮಹತ್ವದ ದಾಖಲೆಗಳಾಗಿವೆ. ಈ ನಿಟ್ಟಿನಲ್ಲಿ ಕುವೆಂಪು ಕೇವಲ ಮಾತುಗಾರನಲ್ಲ, ಕೇವಲ ಕವಿಯಲ್ಲ, ವರಕವಿ, ತಾನಿಡಿದ ಕಾರ್ಯವನ್ನು ಸಂಪೂರ್ಣವಾಗಿ ವಸ್ತುನಿಷ್ಠವಾಗಿ ಮುಗಿಸುವ ಮಹಾವ್ಯಕ್ತಿಯಾಗಿ ನಮಗೆ ಸಿಗುತ್ತಾರೆ.

ಕವಿ ಕುವೆಂಪು ಕಾವ್ಯಮೀಮಾಂಸೆಯ ಪ್ರಸ್ಥಾನಗಳನ್ನು ಹಳೆಯ ತತ್ವಗಳನ್ನೇ ನವನವೀನವಾಗಿ ನಮಗೆ ದರ್ಶಿಸುತ್ತಾರೆ. ಆಧ್ಯಾತ್ಮದ ಎಳೆ ಎಳೆಗಳ ಭಾವ ಮಿಳಿತ ಮನಸ್ಥಿತಿಯನ್ನು ಧ್ವನಿಸುತ್ತಾರೆ. ಇದೇ ಕುವೆಂಪುರವರ ದರ್ಶನಾತ್ಮಕ ಮನೋಧರ್ಮ ವೆನ್ನಬಹುದು. ಪಾಶ್ಚಾತ್ಯ ಮತ್ತು ಭಾರತೀಯ ಸಾಹಿತ್ಯತತ್ವ ಮತ್ತು ಕಾವ್ಯ ಮೀಮಾಂಸೆಗಳ ಸಮನ್ವಯ ಶಿಲ್ಪಿಯಾಗಿ ನಮ್ಮ ಮನದಲ್ಲಿ ನೆಲೆಸಿದ್ದಾರೆ.

ಕುವೆಂಪು ವಿಮರ್ಶೆಯ ಸ್ವರೂಪವನ್ನು ಹಲವು ಬಗೆಗಳಲ್ಲಿ ವಿಂಗಡಿಸಬಹುದು.

1) ಪಾಶ್ಚಾತ್ಯ ವಿಮರ್ಶೆಯ ಮತ್ತು ಕಾವ್ಯಮೀಮಾಂಸೆಯ ನೆಲೆ.
2) ಭಾರತೀಯ ವಿಮರ್ಶೆ ಮತ್ತು ಕಾವ್ಯಮೀಮಾಂಸೆಯ ನೆಲೆ.
3) ಕನ್ನಡ ವಿಮರ್ಶೆ ಮತ್ತು ಮೀಮಾಂಸೆಯ ಸಂದರ್ಭ.
4) ವೈಯಕ್ತಿಕವಾಗಿ ಈ ನೆಲದ ನೋಟ.
5) ದಾರ್ಶನಿಕ ಮನೋಧರ್ಮದ ತತ್ವ ಪ್ರತಿಪಾದನಾ ನೆಲೆ.
6) ನವೋದಯ ಮನೋಧರ್ಮದ ಈ ನೆಲದ ಜೀವಂತಿಕೆ.
7) ನಮ್ಮ ಸಂಸ್ಕೃತಿ–ಪರಂಪರೆಗಳ ಗುಣಾವಗುಣಗಳ ಚರ್ಚೆ.
8) ವಾಸ್ತವವಾದೀ ಚಿಂತನೆಯ ನಿಲುವು.
9) ತೌಲನಿಕ ಸಮನ್ವಯ ದೃಷ್ಟಿ.
10) ಆಧ್ಯಾತ್ಮಿಕ ಮನಸ್ಥಿತಿಯ ನೆಲೆ.

ಹೀಗೆ ಕುವೆಂಪುರವರು ಹತ್ತು ಹಲವು ವೈವಿಧ್ಯಮಯ ಮೂಲಗಳಿಂದ ಪಡೆದ ಜ್ಞಾನರಾಶಿಯಿಂದ ಅನುಭವಿಸಿದ, ಕೇಳಿದ ತತ್ವಚಿಂತನೆಗಳಿಂದ, ಸಾಹಿತ್ಯತತ್ವ ಮತ್ತು ಸಾಹಿತ್ಯವಿಮರ್ಶೆಯ ಮೀಮಾಂಸೆಯ ಒಟ್ಟು ನೋಟವನ್ನು ಕನ್ನಡದ ಸಂದರ್ಭದಲ್ಲಿ ಉಜ್ವಲವಾಗಿ ಕಡೆದು ನಿಲ್ಲಿಸಿದ್ದಾರೆ. ಆಧುನೀಕತೆಯ ಒಲವುಗಳಿಗೆ ಸ್ಪಂದಿಸುತ್ತಾ ಹೊಸ ಹೊಸ ಆಶೋತ್ತರಗಳಿಗೆ ಇಂಬು ಕೊಡುವಂತೆ ಹೊಸತನವನ್ನು ವಿಭಿನ್ನ ನೆಲೆಗಳಿಂದ ಪ್ರಕಟಿಸುತ್ತಾ ಕ್ರಮಿಸಿದ ಅವರ ಮಾರ್ಗ ನಮಗೆ ಒಂದು ಹೊಸ ಶಕೆಯನ್ನೇ ತೆರೆದುಕೊಟ್ಟಿತು. ಇದರಿಂದ ಕನ್ನಡತನ ವಿಶ್ವವ್ಯಾಪಿ ನೆಲೆಯಲ್ಲಿ ನಿಲ್ಲಲು ಶಕ್ಯವಾಯಿತು.

ಈ ನಿಟ್ಟಿನಲ್ಲಿ ನಾವು 'ಶ್ರೀರಾಮಾಯಣ ದರ್ಶನಂ' ಕೃತಿಯನ್ನು ಸಮೀಕ್ಷಿಸಿದರೆ ನಮಗೆ ಹತ್ತು ಹಲವು ಹೊಸ ಹೊಸ ಕಾವ್ಯ ತತ್ವಗಳು ಹೊಸ ವಿಮರ್ಶಾ ಮಾನ ದಂಡಗಳು, ಅಂತೆಯೇ ಶೈಲನಿಕ ವಿಧಾನಗಳು ದಾರ್ಶನಿಕ ವಿಮರ್ಶಾ ದೃಷ್ಟಿ ವೈವಿಧ್ಯಮಯವಾಗಿ ಗೋಚರಿಸುತ್ತವೆ. ಸ್ವತಃ ಕವಿವಾಣಿಯಂತೆ ಬುದ್ಧಿಭಾವಗಳ ವಿದ್ಯುತ್ ಆಲಿಂಗನವೇ ಈ ಕೃತಿಯ ಮೇಲ್ಮೆ. ಹಾಗೆಯೇ ಕುವೆಂಪು ರಾಮಾಯಣ ರಚನೆಗೆ ಕೈ ಹಾಕಿದಾಗ ಕವಿಯನ್ನೇ ಹೇಗೆ ಈ ಕೃತಿ ಸೃಜಿಸಿತೋ ಹಾಗೆಯೇ ಮೀಮಾಂಸಕರು. ವಿಮರ್ಶಕರು ಈ ಕೃತಿಯ ವಿಶ್ಲೇಷಣೆಗೆ ತೊಡಗಿದರೆ ಅವರ ಪ್ರಾಮಾಣಿಕ ಪ್ರಯತ್ನಕ್ಕೆ ತಕ್ಕ ಪ್ರಾಶಸ್ತ್ಯವನ್ನ ಹೊಸತನ್ನು ಈ ಕೃತಿ ನಮಗೆ ನೀಡುತ್ತದೆ. ನಮ್ಮ ವಿಮರ್ಶೆಯನ್ನೇ ತತ್ವವನ್ನೇ ಹೊಸದಾಗಿ ಸೃಜಿಸುವಂತೆ ಪ್ರೇರೇಪಿಸುತ್ತದೆ.

'ರಾಮಾಯಣವನ್ನು' ಕುವೆಂಪು 'ರಾಮಾಯಣ ದರ್ಶನಂ' ಎಂದು ಕರೆದುದರಲ್ಲಿ ಮಹತ್ವದ ಅರ್ಥವಿದೆ. ಇದು ಕೇವಲ ರಾಮಾಯಣದ ಕಥೆಯಲ್ಲ: ದರ್ಶನಾತ್ಮಕ ಕಥನ ಅಂದರೆ ಪ್ರತಿಯೊಂದು ಪಾತ್ರವನ್ನು ಅವರವರ ಗುಣಾವಗುಣಗಳ ಒರೆಗೆ ಹಚ್ಚಿ ತುಲನೆ ಮಾಡಿ ಯಾವುದು ಸರಿ ಯಾವುದು ತಪ್ಪು ಎಂದು ಕಾರಣ ಪರಿಣಾಮಗಳ ಅರಿವಿನಿಂದ ಒಂದು ನಿರ್ಣಾಯಕ ಸ್ಥಿತಿಯನ್ನು ತಲುಪುವ ಒಂದು ವಿಮರ್ಶಾ ನೋಟವೇ, 'ರಾಮಾಯಣ ದರ್ಶನಂ' ಕೃತಿಯ ಮಹತ್ವದ ವಸ್ತು ವಿಶೇಷವಾಗಿದೆ.

ಪಾಶ್ಚಾತ್ಯ ಸಾಹಿತ್ಯದ ದುರಂತ ನಾಯಕನ ಪರಿಕಲ್ಪನೆಯ ಹಿನ್ನೆಲೆಯಲ್ಲಿ ನಾಗಚಂದ್ರನ ರಾವಣನ ಉದ್ದಾತ್ತ ಭಾವನೆಗಳನ್ನು ಮತ್ತು ರನ್ನ ದುರ್ಯೋಧನನ ಪ್ರತಿನಾಯಕ ಪರಿಕಲ್ಪನೆಯ ಸೂಕ್ಷ್ಮ ಎಳೆಗಳನ್ನು ರಾಮಾಯಣ ದರ್ಶನಂ ಕೃತಿಯ ರಾವಣನ ಪಾತ್ರದಲ್ಲಿ ನಾವು ಕಾಣಬಹುದಾಗಿದೆ. ರಾವಣ ತನ್ನ ಮೂಲರಾಕ್ಷಸೀ ವರ್ತನೆಗಳನ್ನು ಸಡಿಲಿಸಿ ಸಹಜ ಮಾನವನ ಹಾಗೂ ದೈವತ್ವದ ಲಕ್ಷಣಗಳನ್ನು ಗಳಿಸಿ ಕೊಂಡು ದೇವರಾಗುವ ಹಂತ ತಲುಪಲು ಪ್ರಯತ್ನಿಸಿದರೆ ರಾಮ ಕೆಲವು ಸಂದರ್ಭ ಗಳಲ್ಲಿ ತನ್ನ ಸಹಜ ದೈವತ್ವ ಮಾನವತೆಗಳನ್ನು ಬದಿಗೊತ್ತಿ ರಾಕ್ಷಸೀ ವರ್ತನೆಗಳನ್ನು ತೋರುವ ವ್ಯವದಾನ ಉಳಿಸಿಕೊಳ್ಳುವ ವೈರುಧ್ಯಗಳನ್ನು ಕುವೆಂಪು ತಮ್ಮ ಕೃತಿಯಲ್ಲಿ ಉಜ್ವಲವಾಗಿ ಚಿತ್ರಿಸಿದ್ದಾರೆ.

ರಾಕ್ಷಸ ದೇವರಾಗುವ, ದೇವರು ರಾಕ್ಷಸನಾಗುವ ಪರಿವರ್ತನೆಯ ವಿರುದ್ಧಾ ಬಾಸಗಳೇ ಶ್ರೀ ರಾಮಾಯಣ ದರ್ಶನಂ ಕೃತಿಯ ಶಿಥಿಲ ಸಂಘರ್ಷದ ವೇದಿಕೆಗಳಾಗಿವೆ. ಅನಲೆಯ ಪಾತ್ರವನ್ನು ಸ್ವತಃ ಸೃಷ್ಟಿಸಿದ ಕುವೆಂಪು ರಾವಣ ಕುಂಭಕರ್ಣರ ಪಾತ್ರದಲ್ಲಿ ರಕ್ತಸಂಬಂಧ ಹಾಗೂ ಸಹೋದರೀತನ, ಮಗಳ ಮಮತೆಯ ಸಿಂಚನ ಎಂಥಾ ರಾಕ್ಷಸ ಮನಸ್ಸನ್ನೂ ಹೇಗೆ ಕರಗಿಸುತ್ತೆಂದು ಸ್ವತಃ ತೋರಿಸಿಕೊಟ್ಟಿದ್ದಾರೆ.

ಚಾರಿತ್ರಿಕ ದೃಷ್ಟಿಯಿಂದ ಮುಂದೆ ಇದೊಂದು ಕುವೆಂಪು ಸಮಕಾಲೀನ ಕರ್ನಾಟಕ ಕೌಟುಂಬಿಕ ವ್ಯವಸ್ಥೆಗೆ ತೋರ್‌ಬೆರಳಾಗಿ ಪಿತೃವಾತ್ಸಲ್ಯ, ಮಗಳ ಮಮಕಾರಗಳ ವ್ಯವಸ್ಥಿತ ರೂಪಗಳನ್ನು ಪ್ರತಿನಿಧಿಸಿದಂತಾಗುತ್ತದೆ.

ರಾಮಾಯಣ ದರ್ಶನಂನಲ್ಲಿ ನಮಗೆ ಸೀತೆಗಿಂತಲೂ ಮಂಡೋದರಿ ಪ್ರಮುಖ ವ್ಯಕ್ತಿಯಾಗಿದ್ದಾಳೆ. ಸಹಜ ಪ್ರಕೃತಿಯ ನೈಸರ್ಗಿಕ ಜೀವಿಯಾಗಿ ಸೀತೆಗಿಂತಲೂ ಮಹತ್ತಾಗಿ ಪುತ್ರಶೋಕವನ್ನೂ ನುಂಗಿಕೊಂಡು ರಾವಣನ ಉದ್ಧಾರಕ್ಕಾಗಿ ಹಗಲಿರಳು ಶ್ರಮಿಸುವ ಸತ್ಯದಲ್ಲಿ ಸೀತೆಯಷ್ಟೆ ಶಕ್ತಿಶಾಲಿಯಾಗಿದ್ದಾಳೆ. ಸೀತೆಯಿಂದಲೇ ಕುವೆಂಪು ಮಂಡೋದರಿಯ ಗುಣಗಾನ ಮಾಡಿಸಿದ್ದಾರೆ. ತನ್ನ ಪತಿಯ ಸಾವಿನ ಚಿಂತೆ ತಾನು ಸೇರುವ ಮರಣ ಹೊಂದಿದ ಅಮೂಲ್ಯ ಭಾರತೀಯ ಸ್ತ್ರೀಯಾಗಿ ನಮಗೆ ಮಹಾ ಮಾತೆಯಂತೆ ಗೋಚರಿಸುತ್ತಾಳೆ.

ಶಬರಿಯ ತಪಸ್ಸಿನ ಸಿದ್ಧಿಸರ್ವೋತ್ಕೃಷ್ಟವಾಗಿ ಆಧ್ಯಾತ್ಮಿಕ ಚೆಲ್ವಿಕೆ ಇಲ್ಲಿ ಸೊರೆಗಟ್ಟಿದೆ ವಾಲ್ಮಿಕಿಯ ಅಸ್ಪಷ್ಟ ಕಲ್ಪನೆಯಾದ ಮಂಥರೆ ಇಲ್ಲಿ ಮತ್ತೆ ಪುನರ್‌ಜೀವಿಯಂತೆ ಹೊಸತನ ಪಡೆದಿದ್ದಾಳೆ, ರಾಮನರಮನೆಯಲ್ಲಿ ಕುಬ್ಜೆ ಮಂಥರೆ ತನ್ನ ಪುತ್ರವಾತ್ಸಲ್ಯದ ಸಹಜ ದೌರ್ಬಲ್ಯವೆಂಬಂತೆ ಬದುಕಿ ಕೊನೆಗೆ ಓ ನನ್ನ ಭರತನಣ್ಣಯ್ಯ ಎಂದು ಕಾಡಿನ ಬೆಂಕಿಗೆ ಆಹುತಿಯಾಗುತ್ತಾಳೆ. ಇವಳ ಪಾತ್ರ ಪುಟ್ಟಪ್ಪನವರ ಲೇಖನಿಯಲ್ಲಿ ಪುನರ್ಜನ್ಮ ಪಡೆದಿದೆ. ಇದೇ ರೀತಿ ಊರ್ಮಿಳೆಯ ಪಾತ್ರವೂ ಸಹಜ ಗುಣಗಳ ಸೊಗಡಿನಿಂದ ತಪೋವನದ ಶ್ವೇತಮನಸ್ಥಿತಿಯಿಂದ ನಿಷ್ಕಲ್ಮಶ ನಿರ್ಮಲ ಭಾವನೆ ಮೂಡಿಸಿ ಸಹೃದಯರ ಮನಗೆದಿಯುತ್ತದೆ. ಚಂದ್ರನಖಿಯಾಗಿ ಶೂರ್ಪನಖಿಯೂ ಹೊಸತನ ಪಡೆದಿದ್ದಾಳೆ ರಾಮಾಯಣದ ಪಾತ್ರಗಳೆಲ್ಲವೂ ಗುಣಾವಗುಣಗಳ ತುಲನೆಯಲ್ಲಿ ದರ್ಶನಾತ್ಮಕ ಪುನರ್ ಜನ್ಮ ಪಡೆಯುತ್ತಾ ಆದರ್ಶಸ್ಥಾನಕ್ಕೇರುತ್ತವೆ.

ರಾಮಾಯಣ ದರ್ಶನಂ ಒಂದು ಮಹಾ ಕೃತಿ. ಮಹಾಕಾವ್ಯದ ಎಲ್ಲೆಯನ್ನು ಮೀರಿ ಮಹತ್ತಿಗೇರುತ್ತದೆ ಆದ ಕಾರಣದಿಂದಲೇ ಈ ಕೃತಿ ನಮ್ಮ ನಡುವಿನ ಒಂದು ಅಪೂರ್ವ ಕೃತಿಯಾಗಿದೆ. ಮಹಾಕಾವ್ಯದಲ್ಲಿ ನಾವು ಕೆಲವು ಸೀಮಿತ ವ್ಯಾಪ್ತಿಯ ಮಹತ್ತನ್ನು ಕಂಡರೆ ಮಹಾ ಕೃತಿಯಲ್ಲಿ ಸಾರ್ವಕಾಲಿಕ ಗುಣಾವ ಗುಣಗಳ ಚರ್ಚೆಯ ಜೊತೆಗೆ ಕವಿಯು ಕ್ರಮಿಸಿದ ಮಾರ್ಗ. ತೋರಿದ ಭವ್ಯತೆಯ ವ್ಯಾಪ್ತಿ, ಭೂಮಾನು ಭೂತಿಯ ಸ್ವರೂಪ. ಅವನ ಉತ್ಪತ್ತಿ, ಸಾಹಿತ್ಯ, ಇತಿಹಾಸ ಪರಂಪರೆಯ ಅನನ್ಯತೆ. ವಿಸ್ತಾರವಾದ ವೈಜ್ಞಾನಿಕ ದೃಷ್ಟಿ. ದಾರ್ಶ್ನಿಕ, ತಾತ್ವಿಕ, ಮನೋವಿಜ್ಞಾನದ ಆಳ ಅಗಲಗಳು ತನ್ನ ಸಮಕಾಲೀನ ಸಮಾಜದ ಸಮಸ್ಥ ಚಿಂತನೆಗಳು ಆಶೋತ್ತರಗಳನ್ನು ಕೃತಿಯಲ್ಲಿ ನೆಯುವ ಮಹಾ ಪ್ರತಿಭೆ ಮುಂತಾದ ಹಲವಾರು ಒಳಸುಳಿವುಗಳಿಂದ ಸೂಕ್ಷ್ಮ ಸಾಮಾಜಿಕ ಸಾಂಸ್ಕೃತಿಕ ಸ್ಥಿತ್ಯಂರಗಳನ್ನು ನಾವು ರಾಮಾಯಣ ದರ್ಶನಂದಲ್ಲಿ

ಕಾಣಬಹುದಾಗಿದೆ. ಈ ಎಲ್ಲಾ ಅಂಶಗಳನ್ನು ಚಾಚೂ ತಪ್ಪದೆ ರಸ ಋಷಿಯ ಅಗಾಧ ಪಾಂಡಿತ್ಯ ಈ ಕೃತಿಯಲ್ಲಿ ಕಾರ್ಯನಿರ್ವಹಿಸಿ ಸರ್ವ ಕಾಲದಲ್ಲೂ ಸಾರ್ವತ್ರಿಕ ಭಾವನೆಗಳಿಗೆ ಇಂಬು ಗೊಡುವ ಒಂದು ಉಜ್ವಲ ಪರಂಪರೆಯನ್ನೇ ನಿರ್ಮಾಣ ಮಾಡಿದೆ.

ರಾಮಾಯಣ ದರ್ಶನಂನಲ್ಲಿ ನಾವು ಪ್ರಮುಖವಾಗಿ ಗಮನಿಸಬೇಕಾಗಿರುವುದು. ಆರ್ಯ-ದ್ರಾವಿಡ ಸಂಸ್ಕೃತಿಗಳ ಶಿಥಿಲಮಯ ಅಂತಃ ಸಂಘರ್ಷದ ಎಳೆಗಳನ್ನು, ಯಾಕೆಂದರೆ ಕುವೆಂಪು ರಾಮನ ಪಾತ್ರವನ್ನು ಅಷ್ಟಾಗಿ ಕಡೆಗಣಿಸದಿದ್ದರೂ ದ್ರಾವಿಡ ಪ್ರೇಮಕಾವ್ಯಧಾರೆ ಚಿಮ್ಮುವಲ್ಲಿ ಕವಿಯ ಆಶಯವಾಗಿ ಅಲ್ಲಲ್ಲಿ ಮಿಂಚಿರುವುದು ಸೂಕ್ಷ್ಮ ಮತಿಗಳಿಗೆ ತಟ್ಟನೆ ಹೊಳೆಯುತ್ತದೆ. ಆ ದೃಷ್ಟಿಯಿಂದ ನೋಡಿದರೆ ರಾಮಾಯಣ ದರ್ಶನದ ನಿಜವಾದ ನಾಯಕ 'ವಿಮರ್ಶಕ ಪುಟ್ಟಪ್ಪ'. ಕೆಲವು ಸಂದರ್ಭಗಳಲ್ಲಿ ಆಂಜನೇಯ ಕಪಿಯನ್ನು ನಾಯಕನನ್ನಾಗಿಸಿ ಭವ್ಯತೆಗೇರಿಸಿದ ಉದ್ದೇಶ ನಮ್ಮ ದ್ರಾವಿಡ ಸಂಸ್ಕೃತಿಯ ಪ್ರತೀಕವೆನ್ನಬಹುದು. ದಕ್ಷಿಣದ ಕಿಷ್ಕಿಂದೆಯ ವರ್ಣನೆ, ಸಾಗರೋಲ್ಲಂಘನದ ವರ್ಣನೆ, ಲಂಕಾದಹನ ಮುಂತಾದ ಪ್ರಸಂಗಗಳಲ್ಲಿ ವಾಲಿ-ಸುಗ್ರಿವ ಕಾಳಗದಲ್ಲಿ ದ್ರಾವಿಡತನವನ್ನು ಎತ್ತಿ ಹಿಡಿದು ರಾಮನ ಪಾತ್ರವನ್ನೂ, ಆರ್ಯ ಸಂಸ್ಕೃತಿಯನ್ನು ಗೇಲಿ ಮಾಡುವಷ್ಟೇ ವ್ಯವದಾನವನ್ನು ಸೂಕ್ಷ್ಮವಾಗಿ ತಮ್ಮ ಕೃತಿಯಲ್ಲಿ ತುಂಬಾ ಪರಿಣಾಮಕಾರಿಯಾಗಿ ಕುವೆಂಪು ತಂದಿದ್ದಾರೆ. ಅಷ್ಟೇ ಅಲ್ಲದೆ ಸಹ್ಯಾದ್ರಿಯ ಸಮಸ್ತ ಲೋಕವೇ ರಾಮಾಯಣ ದರ್ಶನದಲ್ಲಿ ಮಿಳಿತವಾಗಿದೆಯೆನ್ನಬಹುದು.

1) ವಾಲಿ-ಸುಗ್ರೀವರ ಕಾಳಗದಲ್ಲಿ ಮರೆಯಲ್ಲಿ ನಿಂತು ಬಾಣ ಪ್ರಯೋಗಿಸುವ ವಾಲಿಯನ್ನೇ ವಧೆ ಮಾಡುವುದು ದೇವರು ಮಾಡುವ ಕೆಲಸವೆ ?

2) ವಾಲಿಯು ಸುಗ್ರೀವರ ಹೆಂಡತಿಯನ್ನು ಮದುವೆಯಾಗಲೋಸುಗ ಅವನನ್ನು ಗುಹೆಯಲ್ಲಿ ಮುಚ್ಚಿ ಮದುವೆಯಾದದ್ದು ಅನೈತಿಕ ಸಂಬಂಧವೆಂಬ ಕಾರಣಕ್ಕಾಗಿ ವಾಲಿಯ ವಧೆ ಮಾಡಿದರೆ, ವಾಲಿಯ ಸಾವಿನ ನಂತರ ಸುಗ್ರೀವ ವಾಲಿಯ ಪತ್ನಿಯನ್ನು ದ್ರಾವಿಡ ಸಂಸ್ಕೃತಿಯ ಪ್ರಕಾರ ಮದುವೆಯಾದ ಆಗ ಶ್ರೀರಾಮ ಅವನನ್ನೇಕೆ ಕೊಲ್ಲಲಿಲ್ಲ. ಇಲ್ಲಿ ಯಾವುದು ನೈತಿಕ ಯಾವುದು ಅನೈತಿಕ ರಾಮನಿಗೆ ಸುಗ್ರೀವನ ಸಹಾಯ ಬೇಕಿತ್ತು, ಆದಕಾರಣ ವಾಲಿಯನ್ನು ಕದ್ದು ಬಾಣ ಪ್ರಯೋಗಿಸಿ ಕೊಂದನು ಇದು ಅನ್ಯಾಯ ಕಾರ್ಯವಲ್ಲವೆ ?

3) ಒಬ್ಬರನ್ನೊಬ್ಬರು ಬಯಸುವುದು ಲೋಕ ಸಹಜವಾದ ಮಾನವ ದೌರ್ಬಲ್ಯ ಹಾಗಿದ್ದೂ ರಾವಣನ ತಂಗಿ ಶೂರ್ಪನಖಿ ರಾಮನನ್ನು ಬಯಸಿದ್ದು ತಪ್ಪೆ. ತಪ್ಪಾಗಿದ್ದರೆ ಒಲ್ಲೆ ಎನ್ನಬೇಕಿತ್ತು ಲಕ್ಷ್ಮಣನ ಬಳಿಗೆ ಹೋಗೆಂದು ಆಕೆಯಲ್ಲಿ

ಆಸೆ ಹುಟ್ಟಿಸಿ ಆಕೆಯ ಮೂಗು ಮುಂದಲೆ ಕತ್ತರಿಸುವುದು ದೇವರ ಕೆಲಸವೆ ? (ಹೆಣ್ಣನ್ನು ದೇವರೆಂದು ಪೂಜಿಸುವ ಈ ನೆಲದಲ್ಲಿ) ರಾಕ್ಷಸೀ ಕೃತ್ಯ ರಾಮನಿಂದ ನಡೆಯಿತಲ್ಲ ರಾಮನನ್ನು ಏನೆನ್ನಬೇಕು ?

4) ಸೀತಾ ಬಿಡುಗಡೆಗೆ ಲಕ್ಷೋಪಲಕ್ಷ ಜನರ ಹತ್ಯೆ ಅಗತ್ಯ ವಿತ್ತೆ. ಹಿಂದೆ ಎಂತೆಂಥಾ ಶೂರರನ್ನು ರಾಕ್ಷಸರನ್ನು ರಾಮ ಸಂಹರಿಸಲಿಲ್ಲವೆ ? ರಾಮನಿಂದ ಸೀತೆಯನ್ನು ಬಿಡಿಸಲು ಆಗುತ್ತಿರಲಿಲ್ಲವೆ ? ಒಂದು ಹೆಣ್ಣಿಗಾಗಿ ಲಕ್ಷಾಂತರ ಹೆಣ್ಣುಗಳು ವಿಧವೆಯರಾಗಲಿಲ್ಲವೆ ? ದೇವರಾದ ರಾಮನ ದೃಷ್ಟಿಯಲ್ಲಿ ಯಾವುದು ನ್ಯಾಯ ಯಾವುದು ಅನ್ಯಾಯ ಹೋಗಲಿ ಇಷ್ಟೆಲ್ಲಾ ಆದರೂ ಸೀತೆಗೆ ಸಿಕ್ಕ ಪಟ್ಟವಾವುದು ? ಕಾಡಿನ ಗೋಳೇ ? ಕಾಡಿಗೆ ಕಳಿಸಲು ರಾಮ ಇಷ್ಟೆಲ್ಲಾ ಪ್ರಯತ್ನ ಪಡಬೇಕಿತ್ತೆ ?

ಇತ್ಯಾದಿ ಇತ್ಯಾದಿ ಹತ್ತು ಹಲವು ಪ್ರಶ್ನೆಗಳನ್ನು ನಮ್ಮ ಮನದಲ್ಲಿ ಬಿತ್ತುತ್ತಾ ರಾಮಾಯಣ ದರ್ಶನಂ ಒಂದು ಮಹಾ ಕೃತಿಯಾಗಿದೆ. ಕವಿ ಕುವೆಂಪು ಕ್ಷಣ ಮಾಯವಾಗಿ, ಚಿಕಿತ್ಸಾ ದೃಷ್ಟಿಯ ತಾರ್ಕಿಕ ಪುಟ್ಟಪ್ಪನ ನಿಸ್ಪಕ್ಷಪಾತ, ನಿರ್ಣಾಯಕ, ವಿಮರ್ಶಕ ಕುವೆಂಪು ರಾಮಾಯಣ ಕೃತಿಯ ತುಂಬಾ ಅಗಾಧವಾಗಿ ಬೆಳೆದುನಿಂತಿದ್ದಾರೆ. ಹೊಸ ಹೊಸ ಆಲೋಚನೆಗಳಿಗೆ ವಿಚಾರಧಾರೆಗಳಿಗೆ ಗುಣಾವಗುಣಗಳ ಚರ್ಚೆಗೆ ಹಾದಿಮಾಡಿಕೊಟ್ಟು ಹೊಸ ವೇದಿಕೆ ಸಿದ್ದಪಡಿಸಿದ್ದಾರೆ. ಈ ದೃಷ್ಟಿಯಿಂದಲೇ ರಾಮಾಯಣ ದರ್ಶನದ ಬೆಲೆಯನ್ನು ನಾವು ತೂಗಬೇಕು.

ರಾಮಾಯಣ ದರ್ಶನದಲ್ಲಿ ನಮಗೆ ಪ್ರಮುಖವಾಗಿ ಈ ನೆಲದ ಸಂಸ್ಕೃತಿ ಮತ್ತು ಪರಂಪರೆ ; ನಮ್ಮ ಆಚಾರ, ವಿಚಾರ ; ನಮ್ಮ ಸಂಪ್ರದಾಯ ಪದ್ಧತಿಗಳು ; ನಮ್ಮ ಸಮಾಜದ ಸಮಸ್ತ ಸಮಕಾಲೀನ ಮಾನವ ಸಹಜ ವರ್ತನೆಗಳು ; ಮುಖ್ಯವಾಗಿ ಆರ್ಯ-ದ್ರಾವಿಡ ಸಂಸ್ಕೃತಿಗಳ ಶಿಥಿಲ ಸಂಘರ್ಷದ ಎಳೆಗಳು ; ಕರ್ನಾಟಕ ಜನಜೀವನದ ಸಮಸ್ತ ವಿಚಾರಧಾರೆಗಳು ; ನಮ್ಮ ನಡುವಿನ ಸಾಮಾಜಿಕ, ರಾಜಕೀಯ, ಆರ್ಥಿಕ, ಧಾರ್ಮಿಕ ತಾತ್ವಿಕ ವಿಚಾರಧಾರೆಗಳು. ಈ ನೆಲದ ಗುಣಾವಗುಣಗಳು ಧಾರ್ಮಿಕ ಸೂಕ್ಷ್ಮಗಳು; ಸಂಸ್ಕೃತಿಯ ಸ್ಥಿತ್ಯಂತರಗಳು ; ಇಂದಿನ ವಿಜ್ಞಾನ, ವೈಜ್ಞಾನಿಕ ಪ್ರಗತಿ ಯಾಂತ್ರಿಕತೆ ಆಧುನೀಕರಣ, ನಾಗರೀಕರಣ, ನಾಗರೀಕತೆಗಳ ಬೆಳವಣಿಗೆ, ಗ್ರಾಮ ಜೀವನ ಮೌಲ್ಯಗಳು. ರಕ್ತಸಂಬಂಧದ ಎಳೆಗಳು ಇತ್ಯಾದಿ ಇತ್ಯಾದಿ ಹತ್ತು ಹಲವು ಆಲೋಚನಾ ವಿಧಾನಗಳನ್ನು ರಾಮಾಯಣದ ಕಥೆಯ ಸಂದರ್ಭಕ್ಕೆ ಅನ್ವಯಿಸಿ, ಜೋಡಿಸಿ ರಾಮಾಯಣದ ಕಥೆಯ ಹಂದರವನ್ನು ಕಟ್ಟಿ ನಿರ್ಮಿಸಿದ ಒಂದು ಮಹೋನ್ನತ ಕೃತಿಯಾಗಿದೆ ರಾಮಾಯಣ ದರ್ಶನಂ.

ಈ ದೃಷ್ಟಿಯಿಂದಲೇ ನಾವು ರಾಮಾಯಣ ಕಾವ್ಯವೆಂದು ಕರೆಯುವುದಕ್ಕಿಂತ ಇದೊಂದು ಬೃಹತ್ ಕೃತಿಯೆಂದು ನೋಡಬೇಕು. ಮಹಾಕಾವ್ಯದ ಚೌಕಟ್ಟನ್ನು ಮೀರಿ ಮಹತ್ತಿಗೇರಿದ ಭವ್ಯತೆಗೇರಿ ಭೂಮಾನುಭೂತಿಯನ್ನು ನಾವು ಇಲ್ಲಿ ದರ್ಶಿಸಲು ಸಾಧ್ಯ. ಆದ್ದರಿಂದ ಇದೊಂದು ಅದ್ಭುತವಾದ ಕಥಾನಕ. ಸಂಸ್ಕೃತ ವಾಲ್ಮೀಕಿ ರಾಮಾಯಣಕ್ಕೆ ಕುವೆಂಪು ಬರೆದ ಕನ್ನಡ ಕಾವ್ಯರೂಪದ ವಿಮರ್ಶೆ ಎಂದು ಹೇಳಿದರೂ ಇವರ ಮಹತ್ತಿನ ಒಂದು ಮುಖವನ್ನು ಹೇಳಿದಂತಾಗುತ್ತದೆ.

ರಾಮಾಯಣ ದರ್ಶನದ ಮೇಲೆ ಈವರೆಗೂ ಬಂದಿರುವ ವಿಮರ್ಶೆಗಳೆಲ್ಲಾ ಅತಿಯಾದ ಹೊಗಳಿಕೆಯು ಇಲ್ಲವೆ ಕುವೆಂಪುರವರನ್ನು ತೆಗಳುವ ಉದ್ದೇಶದಿಂದಲೇ ರಚಿತವಾಗಿರುವುದು ತುಂಬಾ ದುಃಖದ ವಿಷಯು. ಪ್ರಾಮಾಣಿಕತೆಯ ನಿಷ್ಪಕ್ಷಪಾತ ದೃಷ್ಟಿಯಿಂದ ಈ ಕೃತಿಯ ಮೌಲ್ಯ ನಿರ್ಣಯ ನಡೆಯದಿರುವುದು ಸಮಕಾಲೀನ ವಿಮರ್ಶೆಯ ದೊಡ್ಡ ದುರಂತವಾಗಿದೆ.

ಪುಷ್ಪಮಾಕಾಲಿ ಶಬ್ಧಕೋಶವು
(ಮರಿಸುಬ್ಬಣ್ಣ ವಿರಚಿತ)

ಸಂ॥ ಜಿ. ಎ. ಶಿವಲಿಂಗಯ್ಯ

ಐತಿಹಾಸಿಕವಾಗಿ ಪ್ರಖ್ಯಾತವಾಗಿರುವ ಮೈಸೂರು ನಗರದ ವಿಷಯವಾಗಿ ಪ್ರತ್ಯೇಕವಾಗಿ ಪರಿಚಯ ಮಾಡಿಕೊಡುವ ಅಗತ್ಯವಿಲ್ಲ. ಮೈಸೂರು ನಗರದ ಸನಿಹವೇ ಇರುವ ಮಹಾಬಲಾದ್ರಿ ಅಥವಾ ಚಾಮುಂಡಿ ಬೆಟ್ಟವು ಶಕ್ತಿದೇವತೆಯಾದ ಚಾಮುಂಡೇಶ್ವರಿ ತಾಯಿಯಿಂದ ಪುಣ್ಯಕ್ಷೇತ್ರವಾಗಿದೆ. ಆದರೆ ಈ ಬೆಟ್ಟದಲ್ಲಿದ್ದಂತಹ ಗವಿವಾಸಿ ಮಹಾನುಭಾವಿಗಳ ಮತ್ತು ವಿದ್ವಾಂಸರ ಬಗೆಗೆ ಜನರಿಗೆ ಅಷ್ಟಾಗಿ ಪರಿಚಯ ವಿಲ್ಲ. ಕಾರಣ ಆ ಅವರುಗಳು ಕೀರ್ತಿಕಾಮಿಗಳಾಗಿರಲಿಲ್ಲ. ಎಲೆಮರೆಯ ಕಾಯಾಗಿ ಇದ್ದರು. ಇವರಲ್ಲಿ ಬಹುಪಾಲು ಶುದ್ಧ ಶೈವಜನಾಂಗದವರು. ಚಾಮುಂಡಾಂಬೆಯ ದೇಗುಲದಲ್ಲಿ ಬಹುಹಿಂದೆ ಅರ್ಚಕವೃತ್ತಿಯಲ್ಲಿದ್ದವರು. ಇನ್ನುಳಿದವರು ನಾಯಕರು ಅಥವಾ ಪರಿವಾರದವರು. ಈ ಎರಡು ಪಂಗಡವೇ ಬೆಟ್ಟದ ಮೂಲನಿವಾಸಿಗಳೆಂದು ಹೇಳಿದರೂ ತಪ್ಪಾಗಲಾರದು. ಶುದ್ಧ ಶೈವಜನಾಂಗದವರಾದ ಇವರಲ್ಲಿ ಜ್ಯೋತಿಷಿ ಗಳೂ, ವೈದ್ಯರೂ, ವಾಗ್ಗೇಯಕಾರರೂ ಇದ್ದರೆಂದು ತಿಳಿದು ಬರುತ್ತದೆ. ಪಂಡಿತ ರಾಮಯ್ಯನವರು ವೈದ್ಯರು. ಜವನಪ್ಪನವರು ಜ್ಯೋತಿಷ್ಯವಿದ್ವಾಂಸರು. ಪಂಡಿತ ಮರಿಸುಬ್ಬಣ್ಣನವರು ಪ್ರಖ್ಯಾತ ವೈದ್ಯರೂ ಸಾಹಿತ್ಯಪ್ರಿಯರೂ ಆಗಿದ್ದರು. ಈ ವಿದ್ವತ್ತು ವಂಶಪರಂಪರೆಯಿಂದ ಬಂದ ಆಸ್ತಿಯಾಗಿದ್ದಿತು. ಇವರೆಲ್ಲರೂ 19ನೇ ಶತಮಾನದ 3 ಅಥವಾ 4 ನೇ ದಶಕದಲ್ಲಿ ಜನಿಸಿದವರು.

ಪಂಡಿತ ಮರಿಸುಬ್ಬಣ್ಣನವರು ಉಭಯಭಾಷಾ ವಿದ್ವಾಂಸರಾಗಿದ್ದರು. ವೈದ್ಯ ವಿದ್ಯೆಯಲ್ಲಿ ಪಾರಂಗತರು. ಹಸ್ತಸಿದ್ಧಿ ಮತ್ತು ಶುದ್ಧಿ ವೈದ್ಯವಿದ್ಯೆಗೆ ಅತ್ಯಗತ್ಯವಾದುದು. ಈ ಎರಡೂ ಇವರಿಗೆ ದೈವದತ್ತವಾಗಿತ್ತು. ಆದ್ದರಿಂದಲೋ ಏನೋ ಅಕಾಲದಲ್ಲಿ ಇವರಿಗೆ ಎದುರಾಳಿಗಳಿರಲಿಲ್ಲ. ಎಂದ ಮಾತ್ರಕ್ಕೆ ಇವರು ಎಂದೂ ಅಹಂಕಾರಿಗಳಾ ಗಿರಲಿಲ್ಲ. ಅಮ್ಮನವರ ದೇವಸ್ಥಾನದ ಮಣೇಗಾರ್ ದೇವಣ್ಣನವರು ಪಂಡಿತರಿಗೆ ತೀರಹತ್ತಿರದ ಸಂಬಂಧಿಗಳಾಗಿದ್ದರು. ಎಂದರೆ ಕಿರಿಯ ಸಮಕಾಲೀನರಾಗಿದ್ದ ಮಣೇಗಾರರು ಪಂಡಿತರಿಗೆ ಬಹಳ ಮರ್ಯಾದೆಯನ್ನು ತೋರಿಸುತ್ತಿದ್ದರು. ಪಂಡಿತ ರಿಗೆ ಬಿಡುವಾಗಿದ್ದಾಗ, ಮನಸು ಉಲ್ಲಸಿತವಿದ್ದಾಗ ಮಣೇಗಾರರ ಜಗುಲಿಯಮೇಲೆ

ತಮ್ಮ ಓರಗೆಯವರೊಂದಿಗೆ ವಿನೋದಕ್ಕಾಗಿ ಕರಪತ್ರ (ಇಸ್ಪೀಟು) ಕ್ರೀಡೆಯನ್ನು ಅಪರೂಪಕ್ಕೊಮ್ಮೆ ಆಡುತ್ತಿದ್ದುದುಂಟು. ಇವರು ಶಿವಪೂಜಾ ದುರಂಧರರು. ಸ್ನಾನವಮಾಡುತ್ತಿದ್ದ ಸಮಯದಲ್ಲಿ, ಪೂಜಾದಿಗಳಿಗೆ ಅಣಿಮಾಡಿಕೊಳ್ಳುತ್ತಿದ್ದ ಸಮಯದಲ್ಲಿ ತತ್ವದ ಪದಗಳನ್ನು ಮೆಲುದನಿಯಲ್ಲಿ ಗುನುಗಿಕೊಳ್ಳುತ್ತಿದ್ದರು. ಕೆಲವು ಸಂದರ್ಭಗಳಲ್ಲಿ ಇಂತಹ ಹಾಡುಗಳನ್ನು ಹಾಡಿ ಜನರ ಬಾಹ್ಯಾಡಂಬರ ಮುಂತಾದುವನ್ನು ಲೇವಡಿಮಾಡುತ್ತಿದ್ದರಂತೆ. ತೀರ್ಥಸ್ನಾನ, ಮಡಿ ಮುಂತಾದ ಆಚರಣೆಗಳನ್ನು ಕಂಡರೆ ಅವರಿಗೆ ಆಗುತ್ತಿರಲಿಲ್ಲ. ಅಂತಹ ವೇಳೆಯಲ್ಲಿ "ಸ್ನಾನವ ಮಾಡಿರೋ... ಜ್ಞಾನ ತೀರ್ಥದಲ್ಲೀ... ಎಂದು ಹಲವಾರು ತತ್ವದ ಪದಗಳನ್ನು ಹಾಡುತ್ತಿದ್ದರು.

ವೈದ್ಯರಾಗಿ ವಿಶೇಷವಾಗಿ ಸನ್ನಿಪಾತ ರೋಗಕ್ಕೆ ವಿಶೇಷಚಿಕಿತ್ಸಕರಾಗಿದ್ದರು. ರೋಗಿಯ ಕಣ್ಣಿಗೆ ಒಂದು ಬಗೆಯ ಅಂಜನವನ್ನು ಹಾಕಿ, ತನ್ಮೂಲಕ ರೋಗ ನಿದಾನವನ್ನು ಕಂಡುಹಿಡಿದು ನಂತರ ಔಷಧೋಪಚಾರವನ್ನು ಮಾಡುತ್ತಿದ್ದರು. ಇವರ ಮನೆಯಲ್ಲಿ ಕಾರಕಲಸಿದ ಹಿಟ್ಟು, ಉಪ್ಪಿನಕಾಯಿಗಳನ್ನು ಪಡೆದುಕೊಂಡು ತಿಂದವರಿಗೆ ನಾಲ್ಕರ ಜ್ವರದಂತಹ ಕಾಯಿಲೆಗಳು ಗುಣವಾಗುತ್ತಿತ್ತು ಎಂದು ಕಂಡವರು ಹೇಳುತ್ತಿದ್ದರು. ಇಂತಹ ವೈದ್ಯ ತಾನು ತಾಂತ್ರಿಕ ವಿಧಿಯಲ್ಲಿ ಪೂಜಾದಿಗಳನ್ನು ಆಚರಿಸುತ್ತಿದ್ದರು. ನವರಾತ್ರಿಯ ದಿನಗಳಲ್ಲಿ ವಿಶೇಷ ಪೂಜೆ, ತಮ್ಮಲ್ಲಿ ಸಂಗ್ರಹಿಸಿದ್ದ ಓಲೆಗರಿಕಟ್ಟಿನ ರಾಶಿಯನ್ನು ಓರಣವಾಗಿಟ್ಟು ಸರಸ್ವತಿ ಪೂಜೆಯನ್ನು ಕ್ರಮಬದ್ಧವಾಗಿ ಮಾಡುತ್ತಿದ್ದರು. ದುರ್ಗಾಷ್ಟಮಿಯಂದು ಅಮ್ಮನವರ ಬಿಂಬಕ್ಕೆ ಪೂಜೆಯನ್ನು ಮಾಡಿ ನೈವೇದ್ಯಕ್ಕಾಗಿ 'ಕೊತ್ತಂಬರಿ ಅನ್ನ' (ಪಂಗಲಿನಂತೆ)ವನ್ನು ಮಾಡಿ ಅರ್ಪಿಸಿ ಅನಂತರ ಪ್ರಸಾದವನ್ನು ಹಂಚುತ್ತಿದ್ದರು.

ವೈದ್ಯರಾಗಿದ್ದುದರಿಂದ ಇವರಲ್ಲಿ ವೈದ್ಯಕಂಪ, ಖಗೇಂದ್ರಮಣಿ ದರ್ಪಣ, ಮಾಧವ ನಿದಾನ, ಮದನಪಾಲ ನಿಘಂಟು ಎಂಬ ಔಷಧಿಕೋಶ (ತಾವೇ ಬರೆದದ್ದು) ಗಳು ಇವರಲ್ಲಿತ್ತು. ಇವರು ಸಾಹಿತ್ಯ ಪ್ರಿಯರೂ ಆಗಿದ್ದು ಅನೇಕ ಅಪೂರ್ವ ಸಾಹಿತ್ಯ ಕೃತಿಗಳನ್ನು ಸಂಗ್ರಹಿಸಿದ್ದರು. ಬಹುಶಃ ಇವರಿಗೆ ತಮ್ಮ ಮರಣದ ರಹಸ್ಯ ತಿಳಿದಿತ್ತೋ ಏನೋ (ಆಯುರ್ವೇದದಲ್ಲಿ ಮರಣಸೂಚನೆಯುಂಟು) ತಮ್ಮ ಸಾವಿಗೆ ಆರೇಳು ದಿವಸಗಳಿಗೆ ಮೊದಲೇ ಶಿವಪೂಜೆಯಲ್ಲಿ ದಿನದ ಹೆಚ್ಚಿನ ವೇಳೆಯನ್ನು ಕಳೆಯುತ್ತಿದ್ದರು. ಇವರ ಮನೋಭೀಷ್ಟದಂತೆ ಸುಮಾರು 1920 ರಲ್ಲಿ ಶಿವನಲ್ಲಿ ಸೇರಿಹೋದರು. ಅವರ ಸಾವಿನ ನಂತರ ಅವರ ವಿದ್ಯಾಬಂಡಾರವು ಅವ್ಯವಸ್ಥೆಗೆ ಈಡಾಗಿ ನಾಶವಾಯಿತು. ಹಾಗೂ ಹೀಗೂ ಪ್ರಯತ್ನ ಮಾಡಿದ ಈ ಲೇಖಕನಿಗೆ ಒಂದೆರಡು ಕೃತಿಗಳು ಲಭ್ಯವಾಗಿವೆ. ಪಂಡಿತ ಮರಿಸುಬ್ಬಣ್ಣನವರು ಬರೆದಿಟ್ಟು ಕೊಂಡಿದ್ದ ಪುಷ್ಪಮಾಲಿಕಾ ಶಬ್ದಕೋಶವು ಅವರ ವಿದ್ವತ್ತಿಗೆ ಸಾಕ್ಷಿಯಾಗಿದೆ.

ಪುಷ್ಪಮಾಲಿಕಾ ಶಬ್ದಕೋಶ

ಅ

ಅ—ಇಲ್ಲ, ಅಯುಕ್ತ, ತಕ್ಕುದ್ದಲ್ಲ. ಶಬ್ದದ ಆದಿಯಲ್ಲಿ ಸ್ವರವಿದ್ದರೆ ನಕಾರ ಸಮ ಬರುವದು.
ಉದಾ : ಅ + ಏಕ = ಅನೇಕ—ಬಹಳ
ಅಂಕ—ಗುರು, ಯುದ್ಧ
ಅಂಕಿತ—ಗುರುತು
ಅಂಕುರ—ಮೊಳಕೆ
ಅಂಕುರಿತ—ಮೊಳೆತ
ಅಂಗ—ಅವಯುವ, ಶರೀರ (ಮನಃ-ಅಂತರಂಗ)
ಅಂಗಜ—ಶರೀರದಲ್ಲಿ ಹುಟ್ಟಿದವನು, ಮನ್ಮಥ
ಅಂಗಣ—ಅಂಗಳ
ಅಂಗನೆ—ಸ್ತ್ರೀ
ಅಂಗುಲಿ—ಬೆರಳು
ಅಂಗವಣೆ – ಇಚ್ಛೆ
ಅಂಘ್ರಿ—ಪಾದ
ಅಚಿಂತ್ಯ—ಪೂಜ್ಯ, ಸುಂದರ್
ಅಂಚೆ—ಹಂಸ ಪಕ್ಷಿ
ಅಂಜನ—ಕಾಡಿಗೆ
ಅಂಡ—ತತ್ತಿ
ಅಂಡಜ—ತತ್ತಿಯಿಂದ ಹುಟ್ಟಿದ್ದು
ಅಂಡಲೆ—ಉಪದ್ರವ ಮಾಡು
ಅಂತಃ—ಕಡೆ
ಅಂತಃಕಲಹ—ತನ್ನೊಳಗಿನ ಗುದ್ದಾಟ
ಅಂತಃ—ಒಳಗೆ
ಅಂತಃಪುರ—ರಾಣಿವಾಸ
ಅಂತಕ—ಅಂತ್ಯ ಮಾಡುವವನು, ಯಮ
ಅಂತರ—ಎರಡರ ನಡುವಿನ ಸ್ಥಳ
ಅಂತರಿಸು—ಅಡ್ಡಿ ಮಾಡು
ಅಂತಸ್ತಾಪ—ಒಳಗಿನ ದುಃಖ
ಅಂತಸ್ತು—ಅಂತರಂಗ
ಅಂತಿಕ—ಸಮೀಪ
ಅಂದ—ರೀತಿ, ಚೆಂದ
ಅಂದಣ—ಅಂದಳ, ಪಾಲಕ್ಕಿ
ಅಂಧ—ಕತ್ತಲೆ, ಕುರುಡು
ಅಂಧಕ—ಕುರುಡನು
ಅಂಧಕಾರ—ಕತ್ತಲೆ
ಅಂಬಿಕ—ಕಣ್ಣು
ಅಂಬರ—ಆಕಾಶ, ವಸ್ತ್ರ
ಅಂಬಿಕೆ—ತಾಯಿ
ಅಂಶ—ಪಾಲು
ಅಂಶು—ಕಿರಣ (ಅನ್ನುತಾಂಶು–ಚಂದ್ರ)
ಅಂಶುಕ—ಬಟ್ಟೆ
ಅಕ್ಕಜ—ಆಶ್ಚರ್ಯ
ಅಕ್ಕರ—ಸಂತೋಷ
ಅಕ್ಕಳಿಸು—ಭಯದಿಂದ ಹಿಂಜರಿ
ಅಖಂಡ—ಎಲ್ಲಾ, ತುಂಡಿಲ್ಲದ್ದು
ಅಖಿಲ—ಎಲ್ಲಾ
ಅಗ—ಹೊಗದ್ದು, ಗುಡ್ಡ
ಅಗಡು—ಕಾಡು
ಅಗಲ—ಅಗಳ, ಗಂಗಾಳ
ಅಗಳು—ಅಗಿ
ಅಗಿ—ಅಂಜು, ತಿನ್ನು, ಸಂತೋಷ
ಅಗಿನಿ—ಬೆಂಕಿ
ಅಗ್ಗ—ಅಗ್ರ, ಮುಖ್ಯ
ಅಗ್ಗಲ—ಹೆಚ್ಚಿಗೆ, ಅಗ್ಗಳ. ಅರ್ಗಳ
ಅಗ್ಗಳಿಕೆ—ಬಲ
ಅಗ್ನಿಹೋತ್ರ—ಹೋಮಾಗ್ನಿ
ಅಗ್ರ—ತುದಿ, ಮುಖ್ಯ, ಅಭದ್ರ ಹೆಚ್ಚು
ಅಗ್ರಜ—ಮೊದಲು ಹುಟ್ಟಿದವನು, ಅಣ್ಣ
ಅಗ್ರಣಿ—ಹೆಚ್ಚಿನವನು
ಅಘ—ಪಾಪ
ಅಚಲ—ಅಲ್ಲಾಡದಂಥಾದ್ದು, ಗುಡ್ಡ
ಅಚೇತನ—ಅಚೇತನ್ಯ ಜೀವವಿಲ್ಲದ್ದು
ಅಚ್ಚರಿ—ಆಶ್ಚರ್ಯ
ಅಚ್ಚಳಿ—ಅಛಿದ್ರ ತೂತಿಲ್ಲದ್ದು, ಮೊಸತು

ಅಜ—ಅ. ಜ.—ಹುಟ್ಟದವನು,
ಬ್ರಹ್ಮ, ಹೋತು, ಕುರಿ
ಅಜಸ್ರ—ಸರ್ವದಾ
ಅಜಿನ—ತೊಗಲು
ಅಜೇಯು—ಅಪಜಯವಿಲ್ಲದ
ಅಜ್ಞ—ಅರಿಯದ
ಅಟಮಟ—ಮಿೀರಿ ಹೋಗುವದು
ಅಟ್ಟಹಾಸ—ಬಡಿವಾರ
ಅಟ್ಟೆ—ಮುಂಡ
ಅಂಡಕು—ಅಡಕು, ಬಿಡುವಿಲ್ಲದೆಯಿಡು
ಅಡಗು—ಮಾಂಸ
ಅಡಸು—ಕವಿದು ಬರು
ಅಡಿ—ಪಾದ
ಅಡಿಗಡಿಗೆ—ಮೇಲೆ ಮೇಲೆ
ಅಣಕ—ಸುಮಾರು
ಅಣೆ—ಸುಮಾನ
ಅಣೆಮರ—ದೊಡ್ಡದು
ಅಣು—ತೀರ ಸಣ್ಣದು
ಅಣುಗ—ಹುಡುಗ
ಅಣೆ—ಹೊಡೆ
ಅತಿ—ಮೇಲೆ, ಬಹಳ
ಅತಿಗಳಿಯು—ಕಳೆ
ಅತಿರೀತ—ಬಹಳ
ಅತಿಶಯ—ಹೆಚ್ಚು
ಅತುಲ—ತೂಕವಿಲ್ಲದ್ದು, ಅಸನು, ಅತುಳಿತ
ಅದಿರ್ಮುತ್ತೆ—ಒಂದು ಪುಷ್ಪ
ಅದ್ಭುತ—ಆಶ್ಚರ್ಯ, ಅದುಭುತ
ಅದ್ರಿ—ಗುಡ್ಡ
ಅಧಟು—ಗದರಿಸು
ಅಧಟನು—ಗದರಿಸುವವನು
ಅಧಮ—ಕಳಗೆ, ಕಡಿಮೆ
ಅಧರ—ಕೆಳಗೆ, ಕೆಳಗಣ ತುಟಿ
ಅಧಿಕ—ಹೆಚ್ಚು
ಅಧಿನೇತ್ರ—ಅಧಿಪ, ಅಧಿಪತಿ, ಒಡೆಯ
ಅಧೀಶ್ವರ—ದೊಡ್ಡರಾಜನು
ಅಧೋಗತಿ—ಕೆಳಗೆ ಹೋಗುವದು, ನಾಶ
ಅಧ್ಯಾತ್ಮ—ಹೆಚ್ಚಿನವನು
ಅಧ್ಯಾಹಾರ
ಅಧ್ವ—ಮಾರ್ಗ
ಅಧ್ವರ—ಯಜ್ಞ

ಅನರ್ಘ್ಯ—ತುಟ್ಟಿ
ಅನಲ—ಬೆಂಕಿ
ಅನವರತ—ನಿತ್ಯ
ಅನಶನ—ಉಪವಾಸ
ಅನಾಥ—ದಿಕ್ಕಿಲ್ಲದ್ದು
ಅನಾರತ—ನಿತ್ಯ
ಅನಿಮಿಷ—ದೇವತೆ, ಮಿೀನು
ಅನಿಲ—ಗಾಳಿ
ಅನಿಶ—ನಿತ್ಯ
ಅನಿಷ್ಟ—ಅಪೇಕ್ಷಿಸದ್ದು
ಅನೀಕ—ಅನೀಕಿನಿ, ದಂಡು
ಅನುಕರಿಸು—ಅನುಸರಿಸು
ಅನುಗುಣ—ತಕ್ಕಗುಣ
ಅನುಜ್ಞೆ—ಆಜ್ಞೆ
ಅನುಗ್ರಹ—ಕೃಪೆ
ಅನುಚಿತ—ತಕ್ಕದ್ದಲ್ಲದ್ದು
ಅನುಜ—ತಮ್ಮ
ಅನುಜೆ—ತಂಗಿ
ಅನುಪಮ—ದುಃಖ
ಅನುಸಮ—ಉಪಚಾರ
ಅನುಸಮ—ಸಮವಿಲ್ಲದ್ದು
ಅನುಮತಿ—ಒಪ್ಪುವದು, ಆಜ್ಞೆ
ಅನುರಕ್ತಿ—ಅನುರಾಗ, ಪ್ರೀತಿ
ಅನುರೂಪ—ಸಮ
ಅನುಲೇಪನೆ—ಅನುಲೇಪಿಸು, ಹಚ್ಚು
ಅನುವರ—ಯುದ್ಧ
ಅನುಷ್ಠಾನ—ಯಾವುದೊಂದು ಆಚಾರ
ಅನ್ಯಥಾ—ಬೇರೆಯಾಗಿ, ಸುಮಾರು
ಅನ್ಯೋನ್ಯ—ಪರಸ್ಪರ ಸ್ನೇಹ
ಅನ್ವಯ—ವಂಶ
ಅನ್ವಿತ—ಕೂಡಿದ
ಅಪಗಮಿತ—ಹೋದಂತಾ
ಅಪರಾಹ್ಣ—ಮಧ್ಯಾಹ್ನ
ಅಪವರ್ಗ—(ಅಪ + ವೃಜ್) ಬಿಡು, ಮೋಕ್ಷ
ಅಪಾಂಗ—ಕಡೆಗಣ್ಣು, ಕರುಣ
ಅಪಾಯ—(ಅಪ + ಇ) ನಷ್ಟ
ಅಪೂರ್ವ—ಅಪರೂಪ
ಅಪ್ಪು—ನೀರು
ಅಪ್ರತಿಮ—ಸಮಾನವಿಲ್ಲದವನು
ಅಪ್ಸರಸೆ—ಅಪ್ಸರೆ, ದೇವತಾ ಸ್ತ್ರೀ

ಅಬಲೆ—ಅಬಳೆ, ಬಲವಿಲ್ಲದಾಕೆ ಸ್ತ್ರೀ
ಅಬ್ಜ—ಕಮಲ, ನೀರಲ್ಲಿ ಹುಟ್ಟುವಂತಾದ್ದು
ಅಬ್ಜಭವ—ಕಮಲದಿಂದ ಹುಟ್ಟಿದವನುಬ್ರಹ್ಮ
ಅಬ್ದ—ಮೇಘ, ನೀರುಕೊಡುವದು. ವರುಷ
ಅಭನ—ಜನನವಿಲ್ಲದವನು, ದೇವರು
ಅಭಿದೆ—ಅಭಿದಾನ, ಅಭಿದಾನಕ, ನಾಮ
ಅಭಿನವ—ಹೊಸತು
ಅಭಿಭೂತ—(ಅಭಿ + ಭೂತ) ಇದ್ದ, ಒಳಗಾದ
ಅಭಿವತ—ಅಪೇಕ್ಷೆ, ಒಪ್ಪ
ಅಭಿಮುಖ—ಇದಿರು
ಅಭಿಲಷಿತ—ಒಪ್ಪುವಂಥಾ
ಅಭಿವಾದನೆ—ನಮಸ್ಕಾರ
ಅಭಿಷೇಕ—ಸ್ನಾನ
ಅಭೀಕ್ಷಿಸು—ನೋಡುವದು
ಅಭೀಷ್ಟ—ಆಶಿಸಿದ
ಅಭ್ಯರ್ಚನೆ—ಪೂಜೆ
ಅಭ್ಯಾಗತ—ತಾವಾಗಿಬಂದ ಅತಿಥಿ (ಅಭಿ + ಆ + ಗಮ್)
ಅಭ್ಯುದಯ—ಜನನ, ಹೆಚ್ಚಿಗೆ
ಅಭ್ರ—ಆಕಾಶ, ಮೇಘ, ಮಿಂಚಗಲ್ಲು
ಅಮರ—ಮರಣವಿಲ್ಲದೆ, ದೇವತೆ
ಅಮರ್ದು—ಅಮೃತ
ಅಯಸ್ಸು—ಉಕ್ಕು
ಅಯುತ—ಪತ್ತುಸಾವಿರ
ಅರಕೆ—ಅರ್ಥ
ಅರಚು—ಕೂಗು
ಅರಮೆ—ಸಣ್ಣದು
ಅರರ—ಅರರಿ, ಅರರೆ (ನಿಪಾತ)
ಅರವಿಂದ—ಕಮಲ
ಅರಸು—ಹುಡುಗು
ಅರಿ—ವೈರಿ
ಅರುಣ—ಅರುಣತೆ, ಕೆಂಪುಸೂರ್ಯ, ಸೂರ್ಯನ ಸಾರಥಿ
ಅರುಣಾಂಬು—ರಕ್ತ
ಅರೋಚಕ—ಸಪ್ಪನೆ
ಅರ್ಕ—ಸೂರ್ಯ
ಅರ್ಘ್ಯ—ಅಗ್ಗ
ಅರ್ಘ್ಯ—ಪೂಜ್ಯ, ಬಂದವರಿಗೆ ಮಾಡತಕ್ಕ ಉಪಚಾರ
ಅರ್ಚನೆ—ಪೂಜೆ
ಅರ್ಥನೆ—ಪ್ರಾರ್ಥನೆ
ಅರ್ಭಕ—ಹುಡುಗ
ಅಲಂಕೃತ—ಭೂಷಣ
ಅಲಗು—ಅಲ್ಲಾಡಿಸು
ಅಲರು—ಅರಳು ಹೂವು
ಅಲಸು—ಬೇಸಾಯು (ಬೇಜಾರು)
ಅಲ್ಲಿ—ಅಲ್ಲೆ, ತಿರಸು
ಅಲ್ಲರಿ—ಬಾಧೆಪಡಿಸು
ಅವಘಡಿಸು—ಅಡ್ಡಿಮಾಡು
ಅವಜ್ಞೆ—ಅಲಕ್ಷ್ಯ
ಅವತಂಸ—ಜುಟ್ಟು
ಅವಧರಿಸು—ಅವಧರಿಪು, ಕೇಳು
ಅವಧಿ—ಮೇರೆ
ಅವಧೂತ—ಎಲ್ಲಾ ಬಿಟ್ಟವನು
ಅವನಿ—ಭೂಮಿ
ಅವಲಂಬನೆ—ಆಶ್ರಯ
ಅವಶ—ವಶಮೀರಿದ್ದು
ಅವಿರಲ—ದಟ್ಟನೆ
ಅಶೋಕ—ಒಂದು ಗಿಡ
ಅಶ್ಮ—ಕಲ್ಲು
ಅಶ್ರು—ಕಣ್ಣೀರು
ಅಶ್ವತ್ಥ—ಅರಳೀಗಿಡ
ಅಷ್ಟಾಂಗಯೋಗ—ಎಂಟುತರದ ಯೋಗ
ಅಸವಸ—ಅಶ್ವವಶ, ಅವಸರ
ಅಸಾಮ್ಯ—ಸಮವಲ್ಲ
ಅಸಿತ—ರಪ್ಪು, ಅ(ಸಿತ-ಬಿಳುಪು)
ಅಸು—ಜೀವ, (ಅಸವಳಿಯು-ಜೀವಕಳೆ)
ಅಸುರ—ರಾಕ್ಷಸ
ಅಸೂಯ—ಹೊಟ್ಟೆಕಿಚ್ಚು
ಅಸ್ತ—ಅಸ್ತಮಯ, ಸೂರ್ಯಮುಣಗು
ಅಸ್ತ್ರಾಯುಧ—ಬಾಣ
ಅಹರ್ನಿಶ—ಹಗಲು ರಾತ್ರಿ
ಅಹಿ—ಸರ್ಪ
ಅಹಿತ—ವೈರಿ
ಅಳರು—ಭಯಪಡು, ಅಳುರು
ಅಳಲು—ದುಃಖ
ಅಳವಡು—ಸಿದ್ಧವಾಗು
ಅಳವಡಿಸು—ಸಿದ್ಧಮಾಡು
ಅಳವಳು—ಚಿಂತೆಮಾಡು
ಅಳವು—ಬಲ

ಅಳವಳಿ—ಬಲಗುಂದು
ಅಳಿ—ಭ್ರಮರ ಸಣ್ಣದು
ಅಳಿವು—ನಾಶ
ಅಳ್ಕಜ—ಹೊಟ್ಟೆಕಿಚ್ಚು, ಅಳ್ಕಜಕಾರ
ಅಳ್ತಿ—ಸಂತೋಷ
ಅಕ್ಷಮಾಲೆ—ಜಪಮಾಲೆ
ಅಕ್ಷಯ—ನಾಶವಾಗದ್ದು
ಅಕ್ಷಿ—ಕಣ್ಣು

ಆ

ಆಂದೋಳ—ಚಿಂತೆ, ಸುಳ್‍ಬಗೆ, ಅಲ್ಲಾಡು
ಆಂದೋಳಿತ—ನಡುಗುವ
ಆಕಾರ—ಆಕರಣೆ, ಅಧಿಕಾರ
ಆಕರಿಸು—ತಕ್ಕೊಳ್ಳು
ಆಕರ್ಷ—ಆಕರ್ಷಣ, ಎಳದುಕೊಳ್ಳುವದು
ಆಕಸ್ಮಿಕ—ಭಗ್ಗನೆ
ಆಕರಣ—ಕರೆಯುವದು
ಆಕುಲ—ಗಲಿಬಿಲಿ, (ನಿರಾಕುಲ—ಗಲಿಬಿಲಿಲ್ಲದ್ದು)
ಆಕೃತಿ—ಆಕಾರ
ಆಕೆವಾಳತನ—ಶೂರತ್ವ
ಆಕೆವಾಳರು—ಶೂರರು
ಆಕ್ರಮಿಸು—ವಶಮಾಡಿಕೊಳ್ಳು (ಆ + ಕ್ರಮ್ – ಪ್ರೀಗ)
ಆಕ್ರಾಂತ—ಅವಮಾಡಿಕೊಂಡ
ಆಖು—ಇಲಿ (ಆಖು-ಸಂ.)
ಆಖ್ಯೆ—ಹೆಸರು (ಆಖ್ಯಾತ)
ಆಗಮ—ಬರುವದು
ಆಗಸ—ಆಕಾಶ
ಆಗರ—ಮನೆ
ಆಗ್ರಹ—ಸಿಟ್ಟು
ಆಘ್ರಾಣಿಸು—ಮೂಸಿನೋಡು, ಘ್ರಾಣಿಸು.
ಆಚ್ಚರ—ಆಶ್ಚರ್ಯ
ಆಜಿ—ಯುದ್ಧ (ಆಜಿರಂಗ)
ಆಡಂಬರ—ದಂಭ, ಸಮೂಹ
ಆಣ್ಮ—ಅಣ್ಬ, ಒಡೆಯ
ಆತಪ—ಬಿಸಿಲು
ಆತಪವಾರಣ—ಆತಪತ್ರ, ಕೊಡೆ
ಆತಿಥೇಯ—ಆತಿಥ್ಯ, ಬಂದವರಿಗೆ ಉಪಚಾರ ಮಾಡುವವನು
ಆತ್ಮ—ಆತ್ಮಿಯ, ತನ್ನ
ಆದರ—ಪ್ರೀತಿ, ಆದರಿಸು
ಆದಿತ್ಯ—ಸೂರ್ಯ
ಆನತ—ಅಡ್ಡಬಿದ್ದ
ಆನನ—ಮುಖ
ಆನೀತ—ತರಲ್ಪಟ್ಟ
ಆಪನ—ಹೊಳೆ
ಆಪನ್ನ—ದುಃಖಿತ
ಆಮಾತ್ಯ—ಪ್ರಧಾನಿ (ಅಮಾತ್ಯ-ಇರಬೇಕು)
ಆಮೋದ—ಸಂತೋಷ, ಸುನಂದ
ಆಯುತ—ಉದ್ದ
ಆರಡಿ—ಆರು ಕಾಲುಳ್ಳದ್ದು, ಭ್ರಮರ, ದುರಾಚಾರ
ಆರತ—ಸಂತೋಷಪಟ್ಟ
ಆರಾಮ—ತೋಟ
ಆರೂಢ—ಹತ್ತಿದ ರೂಢಿ
ಆರೋಪಣ—ತಪ್ಪು ಹೊರಿಸು
ಆರ್ಜನೆ—ಗಳಿಸಿಕೊಳ್ಳುವದು. (ಆರ್ಜಿಸು)
ಆರ್ಜಿತ—ಗಳಿಸಿಕೊಂಡ
ಆರ್ಣವ—ಸಮುದ್ರ
ಆರ್ತಿ—ದುಃಖ
ಆರ್ತ—ದೈನ್ಯ, ದುಃಖಿತ
ಆರ್ದ್ರ—ತೊಯಿದ
ಆರ್ಯ—ಪೂಜ್ಯ
ಆಲಂಬ—ಆಲಂಬನೆ, ಆಶ್ರಯ (ಆಲಂಬಿತ)
ಆಲವಟ್ಟ—ಬೀಸಣಿಗೆ
ಆಲವಾಲ—ಗಿಡಗಳಿಗೆ ಮಾಡುವ ಮಡಿ
ಆಲಾಪ—ಮಾತು
ಆಲಿ—ಕಣ್ಣು
ಆಲಿಂಗನ—ಅಪ್ಪಿಕೊಳ್ಳುವದು
ಆಲಿವರಲು—ಆಲಿಕಲ್ಲು
ಆಲೋಕ—ಆಲೋಚನೆ, ನೋಡುವದು
ಆವಗಂ—ಯಾವಾಗಲು
ಆವರಣ—ಮುಚ್ಚೋಣ, (ಆವರಿಸು, ಮುಚ್ಚು)
ಆವರ್ತ—ಸುಳಿ, (ಆವರ್ತಿಸು, ತಿರುವು)
ಆವಳಿ—ಪಜ್ತಿ, ಸಾಲು, ಆಳಿ
ಆವಾಸ—ಆವಸ, ಮನೆ
ಆವೇಶ—ದೆವ್ವ ಹಿಡಿಯುವುದು (ಪ್ರವೇಶ)
ಆಶಾ—ದಿಕ್ಕು

ಆಶಯು—ಅರ್ಥ, ಅಪೇಕ್ಷೆ
ಆಶಿ—ಸರ್ಪದ ಹಲ್ಲು
ಆಶ್ವಾಸ—ಉಸಿರು ಬಿಡೋಣ
ಆಸುರು—ರಾಕ್ಷಸ (ಅಸುರ ಇರಬೇಕು)
ಆಸ್ಥಾನ—ಸಭೆ
ಆಸ್ಫೋಟನ—ಅರಳುವದು ವಡೆಯೋಣ
ಆಸ್ಯ...ಮುಖ
ಆಸ್ವಾದ—ಆಸ್ವಾದಿಸು, ಸವಿ ನೋಡು
ಆಹನ—ಯುದ್ಧ
ಆಹಿಕ—ಆಹಾಜ್ವರ, ದಿನ ದಿನಕ್ಕೆ ಬರುವ ಜ್ವರ
ಆಳಿ—ಗೆಳತಿ
ಆಳಿಗೊಳ್ಳು—ತಿರಸ್ಕಾರ ಮಾಡು
ಆಳು—ಮುಣಗು

ಇ

ಇಂ—ಸಮಾಸ ಶಬ್ದಗಳಲ್ಲಿ ಸವಿ
ಇಂಗಡಲು—(ಇಂ—ಸವಿ) + (ಕಡಲು—ಸಮುದ್ರ = ಹಾಲಿನ ಸಮುದ್ರ
ಇಂಡೆಯಂ—ಮುದ್ದೆ
ಇಂದಿರೆ—ಲಕ್ಷ್ಮಿ
ಇಂದು—ಚಂದ್ರ (ಐಂದವ—ಚಂದ್ರಗೆ) ಸಂಬಂಧಪಟ್ಟ)
ಇಂದ್ರಜಾಲ—ಮೋಸ, ಮಂತ್ರ
ಇಂಧನ—ಕಟ್ಟಿಗೆ
ಇಕ್ಕೆ—ಸ್ಥಳ
ಇಟ್ಟಣಿಸು—ಗುಂಪಾಗು
ಇಡಿ—ಇಡಿಯು, ಗುಂಪಾಗಿರು (ಬಿಡಿ, ಇತರ, ಬೇರೆ, ಇತರೇತರ. ಅನ್ಯ)
ಇತ್ತಂಡ— (ಇರ್ + ತಂಡ) ಸಮೂಹ, ಎರಡು ಸರ್ತಿ ಎರಡು ಪಕ್ಷ
ಇತ್ತಂಡ—(ಇರ್ + ದಡ) ಎರಡು ಕಡೆ
ಇನ—ಸೂರ್ಯ
ಇನಿ—ಸವಿ (ಇನಿಯಂ, ಇಳಿಯಳ್)
ಇಭ—ಆನೆ
ಇಬ್ಬಗೆ—ಎರಡು ಭಾಗ
ಇರುಳು—ರಾತ್ರಿ
ಇಲ—ಇಳಾ, ಇಳೆ, ಭೂಮಿ
ಇಷ್ಟು—ಬಾಣ
ಇಷ್ಟಕೆ—ಹೆಂಟೆ, ಇಟ್ಟಿಗೆ
ಇಳಿಕೆ—ಕುಂದು, ಇಳಿಕೆ ಕಾಣು
ಇಳಿತರು—ಇಳಿದು ಬರು

ಈ

ಈ—ಕೊಡು
ಈಂಟು—ಕುಡಿ
ಈಡಾಡು—ಕಳೆ
ಈಡಿರಿ—ಹಾರ್ಯಾಡು, ಅಲ್ಲಾಡಿಸು
ಈಷಣ—ಆಸೆ
ಈಕ್ಷಿತೆ—ನೋಟ
ಈಕ್ಷಿಸು—ನೋಡು

ಉ

ಉನ್ನಿಸು—ಹಿಪ್ಪಿಕೊಳ್ಳು
ಉಮ್ಮಳ—ಉಮ್ಮಳಿಕೆ, ಚಿಂತೆ
ಉಕ್ತಿ—ಮಾತು
ಉಕ್ತ—ಮಾತಾಡಿದ್ದು
ಉಗಿ—ಉಗಿಯು, ಹಿರಿ, ಸುಲಿ. ಅಂಜು
ಉಗು—ಹರಿ
ಉಗ್ಗಡ—ಹೆಚ್ಚಿಗೆ
ಉಗ್ರ—ಸಿಟ್ಟು, (ಉಗ್ರಾಕ್ಷ—ಶಿವ)
ಉಘ್ವಡಣೆ—ಹೆಚ್ಚಿಗೆ
ಉಚ್ಚ—ಎತ್ತರ
ಉಚ್ಚಳಿಸು—ಉಚ್ಛಳಿಸು, ಹೊರಡು ಅಲ್ಲಾಡಿಸು
ಉಚ್ಛಿಷ್ಟ—ಎಂಜಲು
ಉಜ್ವಲ—ಉಜ್ವಳ, ಪ್ರಕಾಶ
ಉಜ್ಜುಗ—ಪ್ರಯತ್ನ, ಉಜ್ಜುಗಿಸು
ಉಡಿ—ಮುರಿ
ಉಡು—ನಕ್ಷತ್ರ
ಉಣ್ಮು—ಹೊರಡು, ಹುಟ್ಟು
ಉತ್ಕಟ—ಉತ್ಕೃಷ್ಟ
ಉತ್ಕರ—ಗುಂಪು, ಹೆಚ್ಚು
ಉತ್ಕರ್ಷ—ವಿಶೇಷ
ಉತ್ತರೋತ್ತರ—ಉತ್ತಮ
ಉತ್ತರಿಸು—ದಾಟು

ಉತ್ತಾರಹ—ಪಾರಾಗುವದು
ಉತ್ತುಂಗ—ಬಹಳ ದೊಡ್ಡದು
ಉತ್ಪಲ—ನೈದಿಲೆ
ಉತ್ಸುಕ—ಆಸಕ್ತ
ಉದಗ್ರ—ಶ್ರೇಷ್ಠ
ಉದಿತ—ಹುಟ್ಟಿದ
ಉದ್ಗಮ—ಉತ್ಪತ್ತಿ, ಮೇಲೆ ಹೋಗುವದು
ಉದ್ಭ—ವಿಶೇಷ
ಉದ್ಘೋಷಿಸು—ಬಹಳ ಸಪ್ಪಳ ಮಾಡು
ಉದ್ದಂಡ—ದೊಡ್ಡದು, ಬಲತ್ಕಾರ
ಉದ್ದಾಮ—ಉತ್ತಮ
ಉದ್ದೀಪಿತ—ಪ್ರಜ್ವಲ
ಉದ್ಭವ—ಉತ್ಪತ್ತಿ
ಉಸ್ಭಾನ್ನ—ಪ್ರತ್ಯೇಕ
ಉದ್ಯಾನ—ಉದ್ಯಾನವನ, ಉಪವನ
ಉದ್ರೇಕ—ಬಹಳ, ಮೀರಿದ್ದು
ಉದ್ವಾಹ—ಮದುವೆ
ಉನ್ಮತ್ತ—ಹುಚ್ಚು
ಉಪಕಂಠ—ಸಮೀಪ
ಉಪಕರಣ—ಸಮಾನ, ಉಪಕರಿಸು, ಮಾಡು
ಉಪಟಳ—ಸಂಕಟ
ಉಪಮಾ—ಉಪಮಾನ
ಉಪಮೆ—ಸಮಾನ (ನಿರುಪಮ—ಅನುಪಮ)
ಉಪರೋಧ...ವಿರೋಧ
ಉಪಲ—ಕಲ್ಲು, (ಘನೋಪಲ—ಆಲಿಕಲ್ಲು
ಮೇಘದಿಂದ ಬೀಳುವಂಥಾದ್ದು)
ಉಪಹತಿ—ಉಪದ್ರ
ಉಪಹಾರ—ದಾನ
ಉಪಾದಾನ—ಕಾರಣ, ಭಿಕ್ಷೆ
ಉಪಾರ್ಜಿಸು—ಗಳಿಸು
ಉಪೇಕ್ಷೆ—ತಿರಸ್ಕಾರ
ಉಪ್ಪವಡಿಸು—ಎಬ್ಬಿಸು
ಉಮೆ—ಪಾರ್ವತಿ
ಉರ—ಎದೆ
ಉರಗ—ಎದೆಯ ಮೇಲೆ ನಡೆಯುವಂತಾದ್ದು
ಸರ್ಪ
ಉರವಣೆ—ಆವಸರ
ಉರು—ದೊಡ್ಡದು
ಉರೆ—ದೊಡ್ಡದು
ಉರ್ಕು—ಸೊಕ್ಕು
ಉರ್ಘು ಉಬ್ಬು
ಉರ್ವಿ—ಭೂಮಿ, ಉರ್ವರೆ
ಉಲಿ—ಉಲಿಯು, ಹಾಡು, ಮಾತಾಡು
ಉಲವು—ಉಲುಹು. ಶಬ್ದ
ಉಲ್ಕ—ಕೋಳಿ, ಸಿಡಿಲು
ಉಲ್ಲಂಘನೆ—ತಿರಸ್ಕಾರ, ಉಲ್ಲಂಗಿಸು
ಉಲ್ಲಸನ—ರೋಮೋದ್ಗಮನ
ಉಷ—ಉಷಃಕಾಲ, ಉಷಸ್ಸು, ಮೂಡಲ
ಹರೆಯುವ ಹೊತ್ತು
ಉಷ್ಟ್ರ—ಒಂಟೆ
ಉಳು—ಸೇಗಿಲು ಹೊಡೆ
ಉಳ್ಕು—ಪ್ರಕಾಶಿಸು

ಊ

ಊಡು-ತಿನ್ನು, ಕುಡಿ, ತಿನ್ನಿಸು
ಊರ್ಧ್ವ-ಎತ್ತರ, ಊರ್ವು—ನಡು, ಉಬ್ಬು
ಊಳು.ಊಳಿಡು, ಬೊಗಳು

ಋ

ಋತ್ವಿಕ್ಕು-ಋತ್ವಿಜನು, ಪುರೋಹಿತನು
ಋಕ್ಷ-ಕರಡಿ, ನಕ್ಷತ್ರ

ಎ

ಎಕ್ಕಡ-ಎಕ್ಕವಡ, ಕೆರವು
ಎಕ್ಕಸ—ವೆಕ್ಕಸ, ಬಹಳ
ಎಡರು-ತೊಡಕು, ಎಡವು
ಎಡೆ-ಸ್ಥಳ, ದಾರಿ
ಎಡ್ಡವಣೆ-ಮನೋಹರ
ಎಣೆ-ಸರಿ, ಸಮಾನ
ಎರಕ-ಪ್ರೀತಿ, ದಯ
ಎರಕಿ-ಹುಲ್ಲುಕಡ್ಡಿ
ಎರವು-ನಮಸ್ಕರಿಸು
ಎರವು-ಹೆಚ್ಚು ಕಡಿಮೆ
ಎರೆಯ-ಒಡೆಯ
ಎಲರು-ಗಾಳಿ
ಎಸಕ-ಚಂದ
ಎಸಗು-ಮಾಡು
ಎಸೆಯ-ಎಸೆಯು, ಪ್ರಕಾಶಿಸು
ಎಸೆ-ಎಸೆದಂಥಾದ್ದು
ಎಳತಟ-ದಣಿಯುವುದು
ಎಳ್ಳರು-ಎಳೆಯುಬರು

ಏ

ಏಡಿಸು-ತಿನಿಸು
ಏಳ್ಗೆ-ಏಳಿಗೆ

ಐ

ಐಚಲು-ಚಳಿ
ಐತರು-ಬರು
ಐದು-ಹೊಂದು, ಬರು
ಐದೆ-ನೆಟ್ಟನೆ
ಐದೆತನ-ಸ್ತ್ರೀ, (ಮದುವೆಯಾಗಿರುವುದು)
ಐಸಲೆ-ಅಷ್ಟೆ
ಐಸು-ಎಲ್ಲ, ಅಷ್ಟು

ಒ

ಒಕ್ಕಣಿಸು-ಒಕ್ರಣಿಸು, ಹೇಳು
ಒಕ್ಕಲಿಕ್ಕು-ಕೊಲ್ಲು
ಒಗಲು-ಒಕ್ಕೊಡು
ಒಗು-ತುಳುಕು
ಒಗುಮಿಗೆ-ತುಳುಕುವುದು, ಎತ್ತರ
ಒಗೆ-ಹುಟ್ಟು
ಒಡರ್ಚು-ಕೂಡಿಸು, ಮಾಡು
ಒಡ್ಡಣ-ಗುಂಪು
ಒಡ್ಡನ-ಬೇರೊಬ್ಬರಂತೆ ಮಾಡಬೇಕೆಂಬುದು
ಒದೆವು-ಒದಗು
ಒಪ್ಪಹ-ಮನೋಹರ
ಒಯ್ಯನೆ-ಮೆಲ್ಲಗೆ
ಒರು-ಬರೆಯು, ಹೇಳು
ಒಲವು-ಪ್ರೀತಿ
ಒಲಹು-ಅಲ್ಲಾಡುವದು
ಒಸರೆ-ಸಂತೋಷ
ಒಸೆ-ಮೆಚ್ಚು
ಒಳ್ಪು-ಒಳ್ಳೆಯದು

ಓ

ಓ-ಸಖಿತ್ವಮಾಡು
ಓಗರ-ಅನ್ನ
ಓಘ-ಸಮೂಹ
ಓಜ-ಆಚಾರ್ಯ,ಬಡಗಿಯವನು
ಓಜೆ-ನ್ಯಾಯ, ಶೂರತ್ವ
ಓದನ-ಅನ್ನ
ಓರಂತೆ-ನೆಟ್ಟನೆ
ಓರಂಡಲೆ-ಮಿಕ್ಕದ್ದು
ಓರಣಿಸು-ಸಾಲಾಗಿರು
ಓಲಾಡು-ನೀರಾಟಮಾಡು
ಓಲು-ಬಲಿ
ಓವು-ಸಾಕು
ಓಸರಿಸು-ಬಲದಿಂದ ಮಾಡು

ಔ

ಔಕು-ಒಚಕು
ಔಘ-ಸಮೂಹ
ಔರಸ-ಔರಸನು, ಹಡೆದಮಗ
ಔರ್ವ-ಔರ್ವವು, ಔರ್ವಾನಲವು, ಸಮುದ್ರದೊಳಗಣ ಬೆಂಕಿ, ಬಡಬಾನಲ

ಕ

ಕಂ-ನೀರು, (ಕಂಜ–ಕಮಲ)
ಕಂಕಾಳ-ಎಲುವು
ಕಂಗೊಳಿಸು-ಕಾಣು, ಕಣ್ಣುಗೊಳಿಸು
ಕಂಚುಕ-ಅಂಗಿ
ಕಂಠೀರವ-ಸಿಂಹ
ಕಂತು-ಮನ್ಮಥ
ಕಂದ-ಬೇರು, ಗಡ್ಡೆ, ಮಗನು
ಕಂಧರ-ಕೊರಳು
ಕಂಬನಿ-ಸಣ್ಣಸನಿ, ಕಣ್ಣೀರು
ಕಜ್ಜ-ಕಜ್ಜಂ, ಕೆಲಸ
ಕಟಕ-ಪಟ್ಟಣ, ದಂಡು
ಕಟಕಿ-ಹಾಸ್ಯಕ್ಕೆ ಸಂಬಂಧ
ಕಟು-ಕಠಿಣ
ಕಡಂಗು-ಕಡಂಕು, ಬಹಳಪ್ರಯತ್ನಮಾಡು
ಕಡಲು-ಸಮುದ್ರ
ಕಡವರ-ಬಂಗಾರ
ಕಡು-ಬಹಳ
ಕಣ-ಹನಿ, ಕಡಿ
ಕಣಾ-ಕಂಡ್ಯಾ
ಕಣೆ-ಬಾಣ
ಕತಿಪಯ-ಕೆಲವು
ಕದಂಕು-ಅಲ್ಲಾಡು
ಕದಂಬ-ಸಮುದಾಯ, ಕದಂಬಕ

ಕದನ-ಯುದ್ಧ
ಕದಪು-ಗಲ್ಲ, ಕದಂಪು
ಕದಳಿ-ಬಾಳೆಗಿಡ, ಸಮುದಾಯ
ಕದಿರು-ಕಿರಣ
ಕನಕ ಬಂಗಾರ
ಕನಲು-ಸಿಟ್ಟುಮಾಡು
ಕಪೋತ-ಪಾರಿವಾಳ
ಕಬರಿ-ತುರುಬು
ಕಬ್ಬ-ಕಾವ್ಯ
ಕಮನೀಯ-ಮನೋಹರ, ಕೈ, ಕಿರಣ
ಕರಂ-ಬಹಳ
ಕರಂಡ-ಭರಣಿ
ಕರಪತ್ರ-ಗರಗಸ
ಕರವಾಲ-ಕರವಾಳ, ಒಂದು ಕತ್ತಿ
ಕರಾಳ-ಭಯಂಕರ
ಕರಿ-(ಕರ) ಸೊಂಡಿಲನ್ನು ಉಳ್ಳದ್ದು, ಆನೆ
ಕರುಬು-ಹೊಟ್ಟೆಕಿಚ್ಚು ಪಡು
ಕರುಬರು-ಹೊಟ್ಟೆಕಿಚ್ಚಿನವರು
ಕರ್ಕಟ-ಏಡಿ
ಕರ್ಜುರ-ಕಜ್ಜು, ತೊಳೆ
ಕರ್ಣಿಕ-ಕಮಲದ ವಳಗಣ ಭಾಗ
ಕರ್ಬುರ-ಬಂಗಾರ
ಕರ್ಮಟ-ಕುಲುಮೆ
ಕ-ಸವಿಸ್ವರ, ಕಳ
ಕಲಕಂಠ-ಕೋಗಿಲೆ, (ಕಳಕಂಠ)
ಕಲಕಂಠಿ-ಹೆಣ್ಣುಕೋಗಿಲೆ, (ಕಳಕಂಠಿ)
ಕಲಿ-ಶೂರ
ಕಲಿತ-ಹೊಂದಿದ
ಕಲ್ಲೋಲ-ದೊಡ್ಡತೆರೆ
ಕವರು-ಕಸುಗೊಳ್ಳು
ಕವಳಿಗೆ—ಪಾತ್ರೆ
ಕವಾಟ—ಬಾಗಿಲು
ಕಳ—ಖಳ, ಯುದ್ಧದ ಸ್ಥಳ
ಕಳಚು—ತೆಗೆದುಹಾಕು
ಕಳತ್ರ—ಹೆಂಡತಿ
ಕಳಲು—ತೀರು (ಕಳಲಿಸು—ತೀರಿಸು)
ಕಳೇವರ—ದೇಹ
ಕಳು—ತೃಪ್ತಿ
ಕಳ್ತಲೆ—ಕತ್ತಲೆ
ಕಾಂಚನ—ಬಂಗಾರ
ಕಾಂತ—ಪ್ರಿಯ
ಕಾಂತೆ—ಹೆಂಡತಿ
ಕಾಂತಾರ—ಅಡವಿ
ಕಾಕು—ಕೆಟ್ಟದ್ದು
ಕಾತರಿಸು—ಅವಸರ ಮಾಡು
ಕಾತುರ—ಅವಸರ
ಕಾದಂಬಿನಿ—ಮೇಘದ ಸಾಲು
ಕಾಪಥ—ಕೆಟ್ಟಮಾರ್ಗ
ಕಾಪು—ಆಶ್ರಮ, ಕಾವಲು
ಕಾಮುಕ—ಕಾಮವುಳ್ಳವನು
ಕಾಮಿನಿ—ಸ್ತ್ರೀ
ಕಾಯ್ಪು—ಸಿಟ್ಟು, ಕಾವು
ಕಾರ್—ಕಾರು, ಕಪ್ಪು, ಕಾಡು, ಮಳೆಗಾಲ
ಕಾರಾಗಾರ—ಸೆರೆಮನೆ
ಕಾರುಕ—ಕಮ್ಮಾರ
ಕಾರ್ಷ್ಣ್ಯ—ಕಪ್ಪು
ಕಾಲುಂಛಿಚ—ತಿಕುಕೊಳ್ಳುವವನು
ಕಾಷಾಯ—ಕೆಂಪು (ಕಾಷಾಯಾಂಬರ)
ಕಾಷ್ಠ—ಕಟ್ಟಿಗೆ
ಕಾಸ—ಕೆಮ್ಮು
ಕಾಹುರ—ಆತುರ
ಕಾಳೆಡು—ತಿರಸ್ಕಾರ
ಕಿರಾತ—ಬೇಡನು
ಕಿರಿ—ಕಿಡಿ
ಕಿಲ್ಬಿಷ—ಪಾಪ
ಕೀನಾಶ—ಯಮ
ಕೀಳ್ಕೊಟ್ಟೆ—ಕೀಳ್ಪೊಡೆ, ಕೆಳಹೊಟ್ಟೆ
ಕುಂಜರ—ಆನೆ
ಕುಂಭ—ಕೊಡ, ಆನೆಯ ಕುಂಭಸ್ಥಳ
ಕುಂಭಿಣಿ—ಭೂಮಿ
ಕುಕಿಲು—ಕೋಗಿಲೆಕೂಗು
ಕುಕ್ಕು—ಪ್ರವೇಶಿಸು
ಕುಚ—ಮೊಲೆ
ಕುಟಿಲ—ಮೋಸ, ಸೊಟ್ಟ
ಕುಡುಪ—ಗುಣುಕು
ಕುಣಪ—ಕುಣಬ, ಹೆಣ
ಕುತ್ತು—ಹೊಡೆ
ಕುದ್ದಾಲ—ಗುದ್ದಲ
ಕುಣಿಲು—ಚೀಲ
ಕುಮುದ—ನೈದಿಲೆ, ದಿಗ್ಗಜ

ಕುರಂಗ—ಚಿಗರೆ
ಕುರುಪು—ಗುರುತು, ಸ್ಥಳ
ಕುಲ—ಸಮೂಹ
ಕುಲಟೆ—ಕೆಟ್ಟಾಕೆ
ಕುವರ—ಮಗನು
ಕುವರಿ—ಮಗಳು
ಕುವಲಮು—ನೈದಿಲೆ, ಭೂಮಿ
ಕುಸುರಿ—ನುಚ್ಚು
ಕುಸುರಿದರಿಯು— ಸಣ್ಣನಾಗಿಕೊಯ್
ಕುಳಿ—ತಗ್ಗಾಗು, ತಗ್ಗು
ಕುಳಿರು—ಚಳಿ
ಕುಕ್ಷಿ—ಹೊಟ್ಟೆ
ಕೂಟ—ತುದಿ
ಕೂಪ—ಬಾವಿ
ಕೂರ್—ತೀಷ್ಣ. ಕ್ರೂರ
ಕೂರು—ಪ್ರೀತಿಯಾಗು, ಕೂತುಕೊಳ್ಳು
ಕೃತಕ—ಮಾಡಿದ್ದು, ಕಲ್ಪಿಸಿದ್ದು
ಕೃಪಣ—ಮಾಡಿದ್ದು, ಕಲ್ಪಿಸಿದ್ದು
ಕೃಪಣ—ಲೋಭವುಳ್ಳದ್ದು
ಕೃಶಾನುವು-ಬೆಂಕಿ
ಕೆರಳು—ಸಿಟ್ಟುಮಾಡು
ಕೆರು—ಪ್ರಕಾಶಿಸು (ಕೆತ್ತ—ಪ್ರಕಾಶಿಸಿದ)
ಕೆಳದಿ—ಗೆಳತಿ
ಕೆಳೆಗೊಳ್ಳು—ಸಖತ್ವಮಾಡು
ಕೇಕಿ—ನವಿಲು
ಕೇಗು—ನವಿಲು ಕೂಗು
ಕೇಣ—ಸಿಟ್ಟು, ನಾಚಿಕೆ
ಕೇಶ—ಕೂದಲು
ಕೇಶನ—ವಿಷ್ಣು
ಕೇಸರ—ಸಿಂಹದ ಕೊರಳಿನ ಕೂದಲು
ಕೇಸರಿ—ಸಿಂಹ
ಕೇಳಿ—ಆಟ
ಕೈತ—ಕೈತವ ಕಪಟ
ಕೈದು—ಆಯುಧ
ಕೈದೊಳಿಸು—ಕಪಟ
ಕೈಮೆ—ಕೆಟ್ಟತನ
ಕೈರವ—ನೈದಿಲೆ
ಕೈನರ್ತಿಸು—ಒಪ್ಪಿಸು
ಕೈವಾರ—ಸ್ತೋತ್ರ

ಕೊಕ್ಕು—ಪಕ್ಷಿಯ ಮೂಗು
ಕೊಣ—ಕೆರೆ
ಕೊನರು—ಕೊಸಲು, ಚಿಗುರು
ಕೊರಸು—ಒಣಗು, ಬತ್ತು
ಕೊಲ್ಲಣಿಗೆ—ಆಟ
ಕೋಕನದ—ಕೆಂಪುಕಮಲ
ಕೋಟಲೆ—ಕಷ್ಟ
ಕೋಣ—ಮೂಲೆ, ದಿಕ್ಕು, ಗುಣುಕ
ಕೋದಂಡ—ಬಿಲ್ಲು
ಕೋರಯಿಸು—ಕುಕ್ಕು
ಕೋಲಾಹಲ—ಸಮೂಹ ಮಾಡುವ ಸಪ್ಪಳ
ಕೋವಿದ—ಜಾಣ
ಕೋಶ—ಚೀಲ
ಕೋಳು—ಸುಲಿಗೆ
ಕೌಸ್ತುಭಮಣಿ—ವಿಷ್ಣುವಿನ ಆಭರಣ
ಕೌಳಿಕ—ಕಪಟ
ಕ್ರಂದನ—ಗೋಳಾಟ
ಕ್ರತು—ಯಜ್ಞ
ಕ್ರೌಂಚ—ಕೌಜಗ (ಗೌಜಗ)

ಖ

ಖಂಡೆಯ—ನಿಶ್ಚಯ
ಖಗ—ಆಕಾಶದಲ್ಲಿ ಗವಿಸುವಂಥಾದ್ದು ಪಕ್ಷಿ
ಖಚರ, ಖಚರಿ—ಗಗನದಲ್ಲಿ ನಡೆಯುವಂಥಾದ್ದು, ದೇವತೆ
ಖಚಿತ—ಕೆತ್ತಿದ
ಖತಿ—ಸಿಟ್ಟು, ಅವಸರ
ಖಯಕೋಡೀ—ಬಹಳ ಚಾಡಿ ಹೇಳುವವನು
ಖರ—ಕಾವು. ತೀಕ್ಷ್ಣ, ಕಠಿಣ, ಕತ್ತೆ
ಖರಕರ—ಸೂರ್ಯ, ತೀಕ್ಷ್ಣ ಕಿರಣವುಳ್ಳವನು
ಖಲ—ಖಳ, ನೀಚ, ಕಠಿಣ
ಖಾತಿ – ಸಿಟ್ಟು
ಖುರ—ಕೊಳಗ. ಕತ್ತಿ
ಖೂಳ—ಕೆಟ್ಟವನು
ಖೇಚರ—ಗಗನದಲ್ಲಿ ನಡೆಯುವಂಥಾ ದೇವತೆ
ಖೇಡ—ಡಾಲು (ಡೌಲು ?), ಆಶ್ರಯ
ಖೇದ—ದುಃಖ
ಖ್ಯಾತ—ಖ್ಯಾತಿಯುಳ್ಳಂಥಾ

ಗ

ಗಂಡ—ಗಂಡಾಂತರ, ಕಷ್ಟ
ಗನ್ನ—ಕಳವು, ದೊಡ್ಡದು, ಘನ
ಗಜರು—ಗದರಿಸು
ಗಡ—ಹೌದಲ್ಲ
ಗಡಣ—ಸಮೂಹ
ಗಡಣೆ—ಗರಾಮರಿಕೆ
ಗಣ—ಸಮೂಹ
ಗಣಕ—ಗಣಿತ, ಜೋಯಿಸ, ಶಾನುಭೋಗ
ಗಣಿಕೆ—ಪಾತ್ರದಾಕೆ
ಗದಿತ—ಹೇಳಿದ್ದು
ಗದಿಸು—ಹೇಳು
ಗದೆ—ಆಯುಧ
ಗಬ್ಬರಿಸು—ಮುಟ್ಟು
ಗಬ್ಬಿ—ಗರ್ವಿ· ಗರ್ವವುಳ್ಳಾಕೆ
ಗಭೀರ—ಗಂಭೀರ
ಗರಳ–ವಿಷ
ಗರ್ತ–ತಗ್ಗು, ತೂತು
ಗರ್ದಭ–ಗಾರ್ದಭ, ಕತ್ತೆ
ಗವ್ಯ–ಆಕಳಕ್ಕೆ ಸಂಬಂಧ
ಗಸಣಿ–ಗಸಣೆ, ಸಂಕಟ
ಗಹನ–ಪ್ರಕಟವಾಗದ್ದು, ಅಡವಿ
ಗಹ್ವರ–ಗವಿ
ಗಳ–ಕೊರಳು
ಗಳಿತ–ಬಿದ್ದದ್ದು, ಇಳಿದದ್ದು
ಗಾಂಧರ್ವ–ಗಂಧರ್ವರಿಗೆ ಸಂಬಂಧವಾದದ್ದು
ಗಾಂಪ–ದಡ್ಡ
ಗಾಡಿ–ಚಂದ, ಕೀರ್ತಿ
ಗಾಡಿಸು–ಚಂದದಿಂದಿರು
ಗಾತ್ರ–ದೇಹ
ಗಾಯಕ–ಹಾಡುವವನು
ಗಾವಿಲ–ದಡ್ಡ
ಗಾಹುಗತಕ–ಕಪಟ
ಗೀರ್ವಾಣನು–ದೇವತೆ
ಗೀಳಿಡು–ಒದರು (ವದರು)
ಗುಡ–ಬೆಲ್ಲ
ಗುಹ–ಗುಹೆ, ಗವಿ
ಗೂಡುಗೊಳ್ಳು-ಒಳಗೆ ಹೋಗು
ಗೂಢ–ಗುಪ್ತ
ಗೃಹವು–ಮನೆ
ಗೇರು–ತರುಕು, ನಿಶ್ಚಯಿಸು
ಗೇಯು–ಗೈಯು, ಮಾಡು
ಗೇಹ–ಮನೆ
ಗೊಂಟು·ದಿಕ್ಕು, ಮೂಲೆ
ಗೋ–ಆಕಳು
ಗೋಹಟ್ಟಿ–ಆಕಳಹಟ್ಟಿ
ಗೋಚರ–ಪ್ರತ್ಯಕ್ಷ
ಗೋಪ–ಆಕಳುಗಳ ಕಾಯುವವನು
ಗೋಪಿ–ಆಕಳುಗಳ ಕಾಯುವಾಕೆ
ಗೋಪ್ಯ–ಗುಪ್ತ
ಗೋಳಕ–ವಿಧವಾ ಪುತ್ರ
ಗ್ರಾಮಣಿ–ಹಳ್ಳಿಯವನು
ಗ್ರಾವ–ಕಲ್ಲು
ಗ್ರಾಹಿ–ಹಿಡಿಯುವವನು
ಗ್ರೀಷ್ಮ–ಸೆಖೆ

ಘ

ಘಟ-ಕೊಡ
ಘಟಿಸು–ಪ್ರಾಪ್ತಿಯಾಗು
ಘನ–ಮೇಘ
ಘನಸಾರ–ಕರ್ಪೂರ
ಘರ್ಮ–ಸೆಖೆ
ಘಂತಾಳಿಕ-ಕೆಡುಕುತನ
ಘೂಕ-ಗೂಗೆ
ಘೂರ್ಣಾಯಮಾನ-ಘೋಷಿಸಲ್ಪಟ್ಟ
ಘೃತ-ತುಪ್ಪ
ಘೃಷ್ಟಿ-ತಿಕ್ಕುವದು, ಆಕಳು
ಘೋಟಕ-ಕುದುರೆ

ಚ

ಚಂಚಲ–ಅಸ್ಥಿರ, ಮಿಂಚು
ಚಂಡ-ಬಲವುಳ್ಳದ್ದು
ಚಂಡಿಕೆ–ಪಾರ್ವತಿ
ಚಂದ್ರಿಕೆ–ಬೆಳದಿಂಗಳು
ಚಂಬೊನ್ನ-ಬಂಗಾರ
ಚಕಿತ-ಭಯಗೊಂಡದ್ದು
ಚಮು-ದಂಡು
ಚಮೂಪತಿ-ಸೇನಾಪತಿ
ಚಮೂರು-ಹುಲಿ

ಚಮು-ಸಮೂಹ
ಚರರು-ಸೇವಕರು
ಚಲನೆ-ಅಲ್ಲಾಡೋಣ, ಚಲಿಸು
ಚವುಲ (ಚೌಲ)- ತಲೆ ಬೆಳೆಯಿಸಿಕೊಳ್ಳುವುದು
ಚಳಕ-ಜಾಣತನ, ತೀವ್ರ
ಚಕ್ಷು-ಚಕ್ಷಸ್ಸು, ಕಣ್ಣು
ಚಾಂಪೇಯ–ಸಂಪಿಗೆ
ಚಾಪಲ್ಯ-ಅಸ್ಥಿರತ್ವ, ಚಾಪಳ (ಚಪಲ)
ಚಾರಿ-ಗುರಿ
ಚಾರು-ಮನೋಹರ
ಚಿತಿ-ಹೆಣ ಸುಡುವ ಕಟ್ಟಿಗೆ ಮುಂತಾದ್ದು
ಚಿತ್ರಭಾನು-ಬೆಂಕಿ
ಚಿನ್ಮಯ-ಚಿತ್ತ ಸ್ವರೂಪ, ದೇವರು
ಚಿರ-ಬಹಳ ಕಾಲ
ಚುಂಬನ-ಮುದ್ದು (ಚುಂಬಿಸು)
ಚೂಡಾಕರ್ಮ-ತಲೆಬೋಳಿಸುವ ಕರ್ಮ
ಚೂತ- ಮಾವಿನಗಿಡ
ಚೂರ್ನ-ಚೂರ್ಣ, ಪುಡಿ
ಚೂಳಿ- ಚೂಣಿ, ಮೊದಲು
ಚೇಷ್ಟಿತ-ಹೊಕ್ಕಂಥಾದ್ದು
ಚೈತ್ಯ-ಪೀಠ
ಚೋಜಿಗ-ಆಶ್ಚರ್ಯ
ಚೋಪು-ಬೆದರಿಸು

ಛ

ಛತ್ರ–ಕೊಡೆ
ಛನಿ-ಚಂದ್ರ, ಪ್ರಕಾಶ

ಜ

ಜಂಘೆ–ಕಣಕಾಲು
ಜಂಬುಕ-ನರಿ
ಜಗುಳು-ಸರಿದು ಹೋಗು
ಜಘನ-ಜಘನ ಸ್ಥಳ
ಜಟಾ–ಜಡೆ
ಜಠರ-ಹೊಟ್ಟೆ
ಜಡ-ದಡ್ಡ (ನೀರು ಜಡನಿಧಿ)
ಜನಜನಿತ- ಪ್ರಸಿದ್ಧ
ಜರೆ-ಮುಪ್ಪು
ಜಲಭರ, ಜಲಧ, ಜಲಭೃತ } ಮೇಘ
ಜಲ್ಪಿತ–ಹೇಳಿದ್ದು
ಜವ–ಯುವು
ಜಸ–ಯಶ, ಮಾನು, ಕೀರ್ತಿ
ಜಾತ–ಹುಟ್ಟಿದ್ದು, ಜನಿತ
ಜಾನ–ಧ್ಯಾನ, ಜಾನಿಸು
ಜಾನು–ಮೊಣಕಾಲು
ಜಾಹ್ನವಿ–ಗಂಗೆ
ಜಾಮಾತ–ಅಳಿಯ
ಜಾಲ–ಬಲೆ
ಜಾಲಕ–ಸಮೂಹ
ಜಾವಳ–ಸಾಮಾನ್ಯದವನು
ಜೀನು–ದೊಡ್ಡವರಿಗೆ ಅನ್ನುವ ಸಂಬುದ್ಧಿ
ಜಿಷ್ಣು–ಇಂದ್ರ
ಜೀವನ–ನೀರು
ಜುಣುಗು–ಪೂಸು
ಜ್ಯೊನ್ನ–ಬೆಳುದಿಂಗಳು
ಜೇಷ್ಠ–ಉತ್ತಮ

ಝ

ಝುಡತಿ–ಬೇಗ
ಝೊಂಬಿಸ–ಸಾಗರ ಬೀಳು
ಝೊಮ್ಮು–ಸ್ಮೃತಿ ತಪ್ಪೋಣ

ಡ

ಡಿಂಡಿಮ–ಭೇರಿ
ಡೊಕ್ಕರಿಸು–ಬಿಗಿಹಿಡಿಯು

ತ

ತಂಬಿಸು–ಇನಿಸು, ತಬಿಸು
ತಂಬೆಲರು–ತಂಗಾಳಿ
ತಕ್ರ–ಮಜ್ಜಿಗೆ
ತಗಹು–ಮುಚ್ಚು
ತಗುಳು–ದೊಬ್ಬು
ತಟಾಕ-ಕೆರೆ
ತಟಿತ್ತು-ಮಿಂಚು
ತಡಿಕೆನಲೆ-ಬಲೆ
ತಣಿ–ತೃಪ್ತಿಯಾಗು
ತನಯ–ಮಗ
ತನಿ–ಸಂಪೂರ್ಣವಾದದ್ದು
ತನು–ದೇಹ

ತಪೋಧನ–ತಪವುಳ್ಳವನು, ತಾಪಸನು
ತಪ್ತ–ಕಾದದ್ದು
ತಪ್ಪಲು–ಗುಡ್ಡದ ಕಡೆ
ತಮ–ಕತ್ತಲೆ (ತಮಸ್ಸು)
ತರಂಗಿಣಿ–(ತರಂಗ) ಕೆರೆ, ನದಿ
ತರಣಿ–ಹಡಗು, ಸೂರ್ಯ
ತರಳೆ–ತರಳಾಕ್ಷಿ, ಹುಡುಗಿ
ತರು–ಗಿಡ
ತರುಣ–ಯವದು, (ಹುಡುಗ)
ತರುಣಿ–ಹುಡುಗಿ
ತರ್ಪಣ–ತೃಪ್ತಿಪಡಿಸೋಣ
ತಲೋದರಿ–ಸ್ತ್ರೀ
ತಲ್ಪ–ಹಾಸಿಗೆ
ತವಕ–ಅವಸರ
ತವಿಸು–ತಾಳು, ಕಳೆಯು
ತವೆ–ನೆಟ್ಟಗೆ, ಮತ್ತು
ತಸ್ಕರ–ಕಳ್ಳ
ತಳಪಟ–ಅಚವಿ
ತಳರು–ಹೊರಡು (ತರ್ಳ್)
ತಳಿ–ಚಿಗುರು
ತಳಿರ್ವಸೆ–ತಳಿರುಗಳ ಹಾಸಿಗೆ
ತಳು–ತಳುಹು,ತಳುವು, ತಡಮಾಡು
ತಳೆ–ಧರಿಸು, ಹೊಂದು
ತಳ್ಕು–ಅಪ್ಪು
ತಕ್ಷಕ–ಸರ್ಪ
ತಾಟಕಿತನ–ಜಗಳಾಡೋಣ
ತಾಮರಸ–ಕಮಲ
ತಾರಕ, ತಾರಕೆ, ತಾರಗೆ, ತಾರೆ – ನಕ್ಷತ್ರ
ತಾರ್ಕ್ಷ್ಯ–ಗರುಡ
ತಾಳಿಗೆ–ಗಂಟಲು, ಬೇಲಿ
ತಿಂಥಿಣಿ–ಸಮುದಾಯ
ತಿಗ್ಮ–(ಸೆಕೆ) ಸೆಬೆ
ತಿಗ್ಮಾಂಶು–ಸೂರ್ಯ
ತಿದಿ–ಚರ್ಮ(ತಿದಿಮುಗಿವ)
ತಿಮಿರ–ಕತ್ತಲೆ
ತಿರಿ–ಕೊಯ್
ತೀರು–ಹಲ್ಲಿನ ಹುರಿ (ತಿರು ?)
ತಿರ್ಯಕ್ಕು–ಬಾಗಿಕೊಂಡು ಹೋಗುವದು, ಜೀವಿ
ತೀ–ಸುಡು, ಮುಗಿ
ತೀವು–ತುಂಬು
ತುಂಗ–ಉದ್ದ, ದೊಡ್ಡದು
ತುಂಬಿ–ತುಂಬೆ, ಭ್ರಮರ
ತುರಗ, ತುಹಗ – ಕುದುರೆ
ತುರುಬು–ಇಡು
ತುಷಾರ–ಸಣ್ಣಮಳೆ, ಮಬ್ಬು
ತುಷ್ಟ–ಸಂತೋಷಪಟ್ಟದ್ದು, ತುಷ್ಟಿ
ತೂರ್ಯ–ವಾದ್ಯ ಮಾಡುವ ಸಾಮಾನು
ತೂಲ–ಅರಳೆ
ತೂಳು–ಓಡು
ತೆಕ್ಕನೆ–ಬಿಗಿಯಾಗಿ
ತೆರೆ–ನಿರಿಗಿ (ನೆರಿಗೆ)
ತೆವರು–ಸುಲ್ಲುಕೋಳು
ತೊಕ್ಕು–ತೋಫೆ, ತ್ವಕ್
ತೊಟ್ಟನೆ–ಬೇಗ
ತೊಡ–ತೊಡವು, ಆಭರಣ
ತೊಡರ್ಚು–ಧರಿಸಿಕೊಳ್ಳು
ತೊಡಹು–ತೊಟ್ಟದ್ದು
ತೊಡೆ–ಬೊಳೆ
ತೊರೆ–ನದಿ, ಬಿಡು
ತೊಲೆ–ಸರಿ
ತೊವಲು–ತೊಗಲು
ತೊಳಗು–ಪ್ರಕಾಶಿಸು
ತೊಳವು–ಹೊಳೆಯು
ತೋಟೆ–ಯುದ್ಧ
ತೋಮರ–ಒಂದು ಆಯುಧ
ತೋಯ–ನೀರು
ತೋಷ–ಸಂತೋಷ
ತೋಹು–ಮೃಗರೆಯುವ ಧ್ವನಿ
ತ್ರಿದಶ–ದೇವತೆಗಳ
ತ್ರಿದಂಡಿ–ಮೂರು ಕೋಲುಳ್ಳವನು

ಥ

ಥಟ್ಟು–ಗುಂಪು
ಥಟ್ಟುಗೆಡೆ–ಗುಂಪಾಗಿ ಬೀಳು

ದ

ದಂಡ–ಕೋಲು
ದಂಡಿ–ದೊಡ್ಡದು, ನಾಶ
ದಂತಪ್ಪದ–ತುಟಿ (ಹಲ್ಲಿನ ಎಲೆ)
ದಂತಾವಳ–ದಂತ ಉಳ್ಳವನು, ಹಲ್ಲುವುಳ್ಳವನು
ದಂತಿ–ಆನೆ
ದಂದುಗ–ಹಾಸ್ಯ
ದಂಷ್ಟ್ರ–ಕೋರೆ, ದಂಶ, ಕಚ್ಚು
ದಟ್ಟೈಸು–ಗದರಿಸು
ದಡ್ಡೆ–ದಡಿ, ದುಃಖ, ಮರೆಮಾಡುವದು
ದಧಿ–ಮೊಸರು
ದರಿ–ಗವಿ, ದಂಡೆ
ದರ್ಪ–ಸೊಕ್ಕು
ದರ್ಭೆ–ಹುಲ್ಲು (ದರ್ಭಾಸನ)
ದರ್ವೀಸರ–ಸರ್ಪ (ದರ್ವಿ_ಹೆಡೆ)
ದಲ್ಲಣ–ನಾಶಮಾಡುವವನು
ದವಾಗ್ನಿ–ದವಾನಲ, ಕಾಡುಂಗಿಚ್ಚು
ದಶನ–ಹಲ್ಲು
ದಳ–ಹೂವಿನ ಎಲೆ
ದಳ್ಳಿಸು–ದಳ್ಳಿರಿಸು, ಮುತ್ತುವದು
ದಳ್ಳುರಿ–ದೊಡ್ಡಬೆಂಕಿ
ದಾಡಿಮಾ–ದಾಳಿಂಬೆ
ದಾಮ–ದಂಡೆ, ಹಗ್ಗ
ದಾಮ–ಬಾಧ್ಯ
ದಾರುಣ–ಭಯಂಕರ
ದಾಸ್ಯ–ದಾಸತ್ವ
ದಾಹ–ನೀರಡಿಕೆ (ದಹ–ಉರಿ)
ದಿಂಡುರುಳು–ಹತವಾಗು
ದಿನ–ಆಕಾಶ, ಹಗಲು
ದಿವಾಕರ–ಹಗಲು ಮಾಡುವವನು, ಸೂರ್ಯ
ದಿಶೆ } ದಿಕ್ಕು
ದಿಶೆ
ದಿಶಾಪಟಮಲ್ಲ–ದಿಕ್ಕಾಪಾಲು ಮಾಡುವ ಮಲ್ಲನು
ದೀಂಟು–ದಿನ್ನೆ
ದೀಧಿತಿ–ಪ್ರಕಾಶ
ದೀಪನ–ಹಸಿವೆ, ಜೀರ್ಣ
ದುಂದುಭಿ–ಭೇರಿ
ದುಮ್ಮಾನ–ಚಿಂತೆ
ದುರ್ಧರ–ಸೈರಿಸಲಾರದ
ದುಹಿತೆ–ಮಗಳು
ದೂರ್ವೆ–ಗರಿಕೆ ಹುಲ್ಲು
ದೆಖ್ಖಾಳ–ದೊಡ್ಡ ಗದ್ದಲ
ದೆಶೆ–ದೆಸೆ, ದಿಕ್ಕು, ಗತಿ
ದೇಶಿ–ದೇಶಸ್ಥ, ಬ್ರಾಹ್ಮಣ
ದೇಶಿಕ–ದೇಶಿಗ, ತಿರುಗುವವನು, ಗುರು
ದೊಂದುಳಿ–ದೊಂದಣ, ಗುಂಪು
ದೊದ್ದೆ–ಗುಂಪು, ದಂಡು
ದೋಸ್–ಭುಜ
ದ್ಯು–ಆಕಾಶ, ಹಗಲು
ದ್ಯುತಿ–ಪ್ರಕಾಶ
ದ್ಯೂತ–ಜೂಜು
ದ್ರವ–ರಸ, ಒದ್ದೆ
ದ್ರುಮ–ಗಿಡ
ದ್ವಂದ್ವ–ಎರಡು
ದ್ವದೂ–ಎರಡು
ದ್ವಾರ–ಬಾಗಿಲು (ದ್ವಾರಪಾಲಕ)
ದ್ವಿಜ–ಎರಡು ಸರ್ತಿ ಹುಟ್ಟಿದವನು, ಬ್ರಾಹ್ಮಣ, ಪಕ್ಷಿ
ದ್ವಿತಿಯ–ಎರಡು

ಧ

ಧನು—ಧನಸ್ಸು, ಬಿಲ್ಲು
ಧನ್ಯ—ಧನ ಉಳ್ಳವನು
ಧರ್—ಲೆ, ಗುಡ್ಡ
ಧರಣಿ—ಭೂಮಿ
ಧರೆ—ಭೂಮಿ (ಧರಾಧರ_ಗುಡ್ಡ)
ಧವಳ—ಬಿಳುಪು, (ಧವಳಿತಾ)
ಧಾತು—ಧಾತೃ, ಧಾತನು, ಬ್ರಹ್ಮ
ಧಾತ್ರ—ಸೇವಕನು
ಧಾತ್ರಿ—ಭೂಮಿ, ಸಾಕುತಾನು
ಧಾರುಣಿ—ಭೂಮಿ
ಧಾರೆ—ಕತ್ತಿಯ ಬಾಯಿ ಹನಿ
ಧುರ—ಯುದ್ಧ, ಹೊರೆ
ಧುರಂದರ—ಧುರೀಣ
ಧುರ್ಯ—ಹೊರೆ ಹೊತ್ತ, ಧುರಂಧರತೆ
ಧೂಮ—ಹೊಗೆ
ಧೂರ್ತ—ಮೋಸಗಾರ (ಧೂರ್ತಿ)
ಧೃತ—ಹಿಡಿಯಲ್ಪಟ್ಟ

ಧೇನು—ಆಕಳು
ಧೇನುಕ—ಆಕಳ
ಧೌತ—ಒಗೆದ, ತೊಳೆದ, (ಧೌತಾಂಬರ)
ಧ್ರುವ—ನಿಶ್ಚಯ (ಅಧ್ರುವ–ಅಸ್ಥಿರ)
ಧ್ವಂಸ—ನಷ್ಟ
ಧ್ವಜ—ನಿಶಾನಿ
ಧ್ವಾನ—ಧ್ವನಿ

ನ

ನಂದನ—ಮಗನು, ತೋಟ
ನಂದು—ಆರು
ನಂದ್ಯಾವರ್ತ—ಸತವು
ನನ್ನಿ—ಪತಿ, ಸತ್ಯ
ನಕ್ರ—ಮೊಸಳಿ
ನಖ—ಉಗುರು
ನಗ—ಹೊನ್ನದ್ದು [ಹೊನ್ನಿನದು]
ನಗ್ನ—ನಗ್ನಕ, ಬತ್ತಲೆ
ನಟಿಸು—ಕುಣಿ
ನಟ—ಕುಣಿಯುವವನು
ನಡ—ಅಪ್ಪು
ನಡುಕ—ನಡುಗುವಿಕೆ
ನಡೆ—ಚಂದಾಗಿ [ಚನ್ನಾಗಿ]
ನದ—ಬಿಗಿದ, ಅನತ
ನದುಳ—ಅಪಹಾಸ್ಯ
ನಸೆ—ಮೊಳಿಕೆ
ನಭ—ನಭಸ್ಸು, ಆಕಾಶ
ನಮಿಸು—ನಮಸ್ಕಾರ ಮಾಡುವದು
ನಮೆ—ಸವದು ಹೋಗು
ನಯನ—ಕಣ್ಣು
ನರು—ನರುಗಂಪು, ಸುಗಂಧ
ನರೇಶ್ವರ—ಒಡೆಯ, ಅರಸನು
(ನರ + ಈಶ್ವರ)
ನಲ್—ಚಂದ, (ನಲ್ನುಡಿ)
ನಲಿ—ಮೆಚ್ಚು
ನಲ್ಲ—ಪ್ರಿಯ
ನವ—ನವಕ, ಹೊಸತು, ಒಂಭತ್ತು.
ನವನೀತ—ಬೆಣ್ಣೆ
ನವೀನ—ಹೊಸ
ನಶಿ—ನಾಶವಾಗು, ನಶಿಸು
ನಸು—ಸ್ವಲ್ಪ, ಸಣ್ಣ

ನಳನಳಿಕ—ನಳನಳಿನ
ನಳಿ—ನುಣ್ಣಗೆ
ನಳಿನ—ಕಮಲ (ನಳಿನ–ನಳಿನಿ)
ನಾಂದು—ತೊಯ್ದು.
ನಾಕ—ಆಕಾಶ
ನಾಗ—ಸರ್ಪ, ಆನೆ
ನಾಟಕ—ಆಟ
ನಾಡೆ—ಚನ್ನಾಗಿ
ನಾಣ್—ನಾಚಿಕೆ
ನಾನ್—ನಾನು, ನೆನೆ
ನಾರಿಕೇಳ—ನಾರಿಳ, ತೆಂಗಿನಗಿಡ
ನಾಳ—ಕಮಲದ ದಂಟು, ಕೊಳವಿ.
ನಾಳೀ—ಬಾಣಭೇದ, ಕಮಲ
ನಾಳೀಕ—ಕಮಲ, ಕಮಲದ ದಂಟು
ನಿಕಟ—ಸಮೀಪ
ನಿಕರ—ಸಮೂಹ
ನಿಕಾಮ—ಸಮೂಹ
ನಿಕುರುಂಬ—ಸಮುದಾಯ
ನಿಖಿಲ—ಎಲ್ಲಾ
ನಿಗಮ—ವೇದ
ನಿಗಳ—ಬೇಡಿ
ನಿಗ್ರಹ—ಶಿಕ್ಷೆ
ನಿಚ್ಚಟ—ನಿಜ, ಶುದ್ಧ
ನಿಟಿಲ—ಹಣೆ
ನಿಡು—ನಿಡಿದು, ನಿಡಿ, ಉದ್ದ
ನಿತಂಬ—ಕುಂಡೆ (ನಿತಂಬಿನಿ)
ನಿತ್ತರಿಸು—ತಾಳು
ನಿದಾಘ—ಬೇಸಗೆ
ನಿಧಾನ—ಸಮಾಧಾನ, ಹುಗಿದ ದ್ರವ್ಯ
ನಿಧಿ—ಹುಗಿದ ದ್ರವ್ಯ
ನಿನದ—ಶಬ್ದ, ನಿನಾದ
ನಿಪತ್ತು—ಆಪತ್ತು
ನಿಭ—ಹೋಲ್ಕೆಕೆ
ನಿಮಿರು—ನಿಮುರು, ಚಾಚು
ನಿಯುತ—ನಿಯಮದಿಂದ ನಡೆಯುವದು
ನಿಯುಕ್ತ—ಕೂಡಿದ್ದು
ನಿಯೋಗ—ಅಪ್ಪಣೆ
ನಿರ್—ನಿಶ್ಚಯ, ಇಲ್ಲ, ಹೊರಗೆ ಎಂಬರ್ಥದ ಉಪಸರ್ಗ

ನಿರಂಜನ—ದೋಷವಿಲ್ಲದವನು, ದೇವರು
ನಿರಯ – ನರಕ
ನಿರವದ್ಯ—(ನಿರ್ + ಅವದ್ಯ) ಉತ್ತಮ
(ಅವದ್ಯ ನೀಚ)
ನಿರವಿಸು—ಆಜ್ಞೆಮಾಡು
ನಿರವಧಿ—ಮೇರೆಯಿಲ್ಲದ್ದು
ನಿರುತ—ನಿಶ್ಚಯ
ನಿರೋಧ—ಬಂಧನ
ನಿರ್ಗಮ—ಹೊರಡೋಣ
ನಿರ್ಜರ—ಮುಪ್ಪಿಲ್ಲದ, ದೇವತೆ
ನಿರ್ನೀತ—ನ್ಯಾಯದಿಂದ ನಡೆಯುವದು.
ನಿರ್ದಾಯ—ಅನಾಯಾಸ
ನಿರ್ದಾಟಿಸು—ಹೊರಗೆಹಾಕು
ನಿರ್ಭರ—ಬಹಳ
ನಿರ್ಮೋಕ—ಹಾವಿನಪರೆ
ನಿರ್ಯಾಸ—ಗಿಡದಿಂದ ಬರುವ ಜಿಗಿ
ನಿರ್ಯೋಗ—ಯೋಗ
ನಿರ್ವಾಣ—ಆಶಿದ್ದು, ಮೋಕ್ಷ
ನಿರ್ವಾಹ—ನಿರ್ವಾಹಕ, ನಡಸುವದು, ಬಲ.
ನಿರ್ವಿಣ್ಣ—ಚಿಂತಾಕ್ರಾಂತ
ನಿರ್ವರ್ತನೆ—ಮುಗಿಸೋಣ, ಬಿಡೋಣ,
ನಿವಹ—ಸಮೂಹ
ನಿವಾಸ—ಮನೆ (ನಿವಾಸಿ)
ನಿವೇದನ—ಅರ್ಪಣೆ
ನಿವೇದಿಸು—ಅರ್ಪಿಸು
ನಿವೇಶನ—ಸ್ಥಳ, ಮನೆ
ನಿಶಿತ—ಮಸೆದದ್ದು.
ನಿಶೆ—ರಾತ್ರಿ
ನಿಶಾಚರ, ನಿಶಾಟ } ರಾಕ್ಷಸ
ನಿಶ್ಚಲ—ಸ್ಥಿರ
ನಿಶ್ರೇಯಸ—ಮೋಕ್ಷ
ನಿಶ್ಶೇಷ—ಎಲ್ಲ ಬಾಕಿ ಇಲ್ಲದ್ದು
ನಿಷ್ಕ—ಒಂದು ತೂಕ
ನಿಷ್ಪೀಡನ—ಹಿಂಡುವದು
ನಿಸ್ಸಾಲ(ಳ)—ದೊಡ್ಡಭೇರಿ (ನಿಸ್ಸಾಳು
ನಿಸ್ಸಾಳಯ)
ನಿಹಿತ—ಕೊಟ್ಟಿದ್ದು, ಇಟ್ಟಿದ್ದು
ನಿಳಯ—ಮನೆ
ನಿಕ್ಷಿಪ್ತ—ಇಟ್ಟ

ನೀಡುಂ—ಬಹಳ ದೊಡ್ಡದು
ನೀರಳ್ಕೆ—ನೀರಡಿಕೆ
ನೀರ್ಪಡಿಸು—ತೊಳೆ
ನೀಳು—ಉದ್ದವಾಗಿಬೆಳೆ
ನುಣ್ಗರೆ—ಮೆಲ್ಲನೆ ಕರೆ
ನುತ—ಸ್ತೋತ್ರಮಾಡಿಸಿ ಕೊಂಡದ್ದು
ನುತಿ—ಸ್ತೋತ್ರ
ನುಗ್ಗು—ವಶಮಾಡು (ನುಗ್ಗು)
ನೂನ—ಕಡಿಮೆ
ನೂಪುರ—ಕಾಲಿನ ಆಭರಣ
ನೃ—ಮನುಷ್ಯ
ನೆಗಳು—ಆರಂಭಿಸು, ಮೊಸಳೆ
ನೆಗೆ—ಮೂಡು
ನೆಗ್ರೋಧ—ಆಲದಗಿಡ
ನೆರವಿ – ಸಮುದಾಯ
ನೆರಹು—ಪದರು, ನಿರಿಗೆ
ನೆರೆ – ಪೂರ್ಣವಾಗಿ
ನೆಮ್ಮು—ನಂಬು, ಹೊಂದು
ನೆಲಸು—ನೆಲೆಮಾಡು
ನೇಣೆ—ನೇಣು, ಹಗ್ಗ
ನೇವರಿಸು—ನೆಟ್ಟಗೆಮಾಡು. ತಿದ್ದು
ನೇಸರು—ಸೂರ್ಯ
ನೈಪಥ್ಯ—ಆಭರಣ
ನೊಣೆ—ನುಂಗು, ಕುಡಿ

ಪ

ಪಂಕ—ಕೆಸರು
ಪಂಕಜ—ಕಮಲ
ಪಂಕಲ—ಕೆಸರು
ಪಂಚಾನನ—ಶಿವ, ಸಿಂಹ, ಪಂಚ, ವಿಸ್ತಾರ, ಆನನ
ಪನ್ನಗ—ಸರ್ಪ
ಪಕ್ಕೆ—ಹಕ್ಕಿ, ಜಾಗ, ನಿದ್ರೆಮಾಡುವ ಕೋಣೆ
ಪಟ—ಅರಿವೆ (ಅರಿವಿ)
ಪಟಃ—ಭೇರಿ
ಪಟು—ತಕ್ಷಣ
ಪಟ್ಟು—ಹಟಸ್ಥಳ
ಪಡಲ್ಪಡು—ದಣಿಯು
ಪಡಿತಳಿಸು—ಶೂರತ್ವಮಾಡು

ಪಡು—ಪಡುವು, ಬೀಳು
ಪಡೆ—ದಂಡು
ಪಣ್ಯ—ಮಾರುವಂಥಾದ್ದು
ಪತಂಗ—ಸೂರ್ಯ
ಪತಗ—ಪತತ್ರು, ಪಕ್ಷಿ
ಪತಾಕಿ—ನಿಶಾನಿ
ಪತಿಕರಿಸು—ಕಿರಿಗಿಮಾಡು
ಪತಿತ—ಬಿದ್ದ, ಕೆಟ್ಟ
ಪತ್ರ—ಎಲೆ, ರೆಕ್ಕೆ
ಪಥ—ದಾರಿ
ಪಥಿಕ—ಮಾರ್ಗಸ್ಥ
ಪದಕ—ಮುಖ್ಯ
ಪದಪು—ಚಂದ
ಪದುಳ—ಸೌಖ್ಯ
ಪಯ—ಪಯಸ್ಸ, ನೀರು
ಪಯೋದ—ಮೇಘ, ನೀರುಕೊಡುವಂಥಾದ್ದು
ಪಯೋಧಿ—ಸಮುದ್ರ
ಪಯೋಧರ—ಮೇಘ, ಮೊಲೆ
ಪರ—ಬೇರೆ, ಹೆಚ್ಚು
ಪರಂತಪ—ವೈರಿಯ ಗೆದಿಯುವವನು
ಪರತ್ರ—ಮುಂದಿನ ಲೋಕ
ಪರದ—ಹರದ, ಜೈನರೊಳಗೆ ವ್ಯಾಪಾರ ಮಾಡುವವನು
ಪರಪುಟ್ಟ—ಕೋಗಿಲೆ
ಪರಮೇಷ್ಠ—ಬ್ರಹ್ಮ
ಪರಾಯಣ—ಆಸಕ್ತ
ಪರಿ—ಸುತ್ತ ಎಂಬರ್ಥದ ಉಪಸರ್ಗ, ಪರಿಸರ ಪರಿಕರ್ಮ ಇತ್ಯಾದಿ
ಪರಿವಾರ—ಸಮೂಹ
ಪರಿಕಿಸು—ಪರೀಕ್ಷಿಸು
ಪರಿಸರ—ಹೊಂದಂಥಾದ್ದು
ಪರಿಘ—ಅಗಳತ, ಪರಿಕೆ
ಪರಿಣತೆ—ಜಾಣತನ
ಪರಿತಾಪ—ಬಹಳ ದುಃಖ
ಪರಿಪಾಕ—ಬಹಳ ಪಕ್ವವಾದದ್ದು
ಪರಿಪಟ್ಟು—ನಷ್ಟ
ಪರಿಭವ—ತಿರಸ್ಕಾರ (ಸಂಭವಿಸು)
ಪರಿಭ್ರಂಶ—ಪರಿಬ್ರಾಂತಿ, ಪರಿಭ್ರಮಣ, ತಿರುಗಾಟ
ಪರಿಯುತ—ಸುತ್ತಲ್ಪಟ್ಟ
ಪರಿವಿಡಿ—ಕ್ರಮ
ಪರಿವೃತ—ಸುತ್ತಲ್ಪಟ್ಟಿದ್ದು
ಪರಿವೇಷ—ಸುತ್ತುವುದು
ಪರುಠವಣೆ—ಸಿದ್ಧಮಾಡುವದು
ಪರ್ಣ—ಎಲೆ
ಪರ್ಬು—ಹಬ್ಬು
ಪಲಾಶ—ಎಲೆ, ಒಂದುಗಿಡ
ಪಲ್ಲವ—ಚಿಗುರು
ಪವನ—ಗಾಳಿ
ಪವಿ—ವಜ್ರ
ಪಳಿಯಿಸು—ಜಾಡಿಸು
ಪಸುಗೆ—ಹಸುಗೆ, ಪಾಲು
ಪಸುಳೆ—ಹುಡುಗ
ಪಳಂಚನೆ—ಮಿಂಚಿನಂತೆ, ತೀವ್ರ
ಪಳಂಚು—ಮೈಮೇಲೆ ಬೀಳು,
ಪಾಂಗು—ರೀತಿ
ಪಾಂಥ—ದಾರಿಕಾರ
ಪಾಚಿಸು—ಅಡುಗೆಮಾಡು
ಪಾಣಿಗ್ರಹಣ—ಕೈ ಹಿಡಿಯೋಣ, ಮದುವೆ
ಪಾಣ್ಬೆ—ಸೂಳೆ
ಪಾಣ್ಬ—ಪಟಿಂಗ
ಪಾತ—ಬೀಳುವದು
ಪಾಥೇಯ—ಬುತ್ತಿ
ಪಾದ್ಯ—ಪಾದತೊಳಿಯುವ ನೀರು
ಪಾರಣೆ—ಉಪವಾಸದ ಮರುದಿವಸದ ಊಟ
ಪಾರಾಯಣ—ನೇಮದಿಂದ ಓದುವದು
ಪಾರಾವಾರ—ಸಮುದ್ರ
ಪಾರುಂಬಳೆ—ಚಕ್ರ
ಪಾವಕ—ಬೆಂಕಿ
ಪಾವನ—ಶುದ್ಧ
ಪಾಸಟಿ—ಸಮಾನ
ಪಿಂಗಳ—ಕೆಂಪು
ಪಿಂಡಿವಾಳ—ಒಂದು ಆಯುಧ
ಪಿಕ—ಕೋಗಿಲೆ
ಪಿಟಕ—ಸಣ್ಣ ಕರುವು
ಪಿಡಿ—ಹೆಣ್ಣಾನೆ
ಪಿನಾಕಿ—ಪಿನಾಕಿಬಿಲ್ಲ ಹಿಡಿದವನು, ಶಿವ
ಪಿಪಾಸೆ—ನೀರಡಿಕೆ
ಪಿಪೀಲಿಕ—ಇರವಿ (ಇರ)
ಪಿಸುಣ—ಚಾಡಿ ಹೇಳುವವ

ಪೀತ—ಹಳದಿ
ಪೀನ—ಸೊಕ್ಕಿದ್ದು
ಪೀಲಿ—ನವಿಲಿನ ಗರಿ
ಪುಂಖ—ಬಾಣದ ಗರಿಯ ತುದಿ
ಪುಂಗವ—ಎತ್ತು, ಶ್ರೇಷ್ಠ
ಪುಂಡರೀಕ—ಬಿಳಿಯ ಕಮಲ
ಪುಂಡ್ರ—ಹಣೆಯಲ್ಲಿ ವಿಭೂತಿ ಹಚ್ಚುವ ಗೆರೆ
ಪುಗು—ಹೊಗು
ಪುಟ—ಬೊಗಸೆ (ಕರಪುಟ)
ಪುಟ್ಟ—ಸಣ್ಣದು(ಪರ ಪುಟ್ಟ-ಅನ್ಯನಮಗನು)
ಪುತ್ರಿ—ಪುತ್ರಿಕೆ, ಬೊಂಬೆ
ಪುದಿ—ಅಡಗಿಸು
ಪುದು—ಹುಟ್ಟು
ಪುದ್ಗಲ—ದೇಹ
ಪುನರುಕ್ತಿ—ತಿರುಗಿ ಹೇಳೋಣ
ಪುನೀತ—ಶುದ್ಧ
ಪುಯಲು—ಕೂಗು, ಯುದ್ಧ
ಪುರ—ಕೆರೆ, ತಾವು
ಪುರಂಧ್ರಿ—ಗಂಡನು ಮಕ್ಕಳು ಇದ್ದ ಸ್ತ್ರೀ
ಪುರ್ಬು—ಹುಬ್ಬು
ಪುಲಕ, ಪುಲಕಾಂಕುರ, ಪುಲರೋದ್ಗನು } ರೋಮೋದ್ಗಮನ. ಪುಳಕ
ಪುಷ್ಕರ—ವಿಮಾನ
ಪುಷ್ಪವತಿ—ಮುಟ್ಟಾದಾಕೆ
ಪುಳಿಂದ—ಕಾಡುಜನ
ಪುಂಗ—ಸಮೂಹ, ಅಡಿಕೆ
ಪೂಗಣೆಯ, ಪೂಗೋಲ } ಹೂವಿನ ಬಾಣದವನು, ಕಾಮ
ಪೂಜನೀಯ— ಪೂಜ್ಯ
ಪೂಣು—ಮಾಡು
ಪೂನು—ಇರಿರಾರು, ಹೊಡೆ
ಪೂತಿಗಂಧ-ನಾರೋಣ
ಪೂರ್ವಾಪರ-ಪೂರ್ವಪಶ್ಚಿಮ, ಭೂತಭವಿಷ್ಯ
ಪೃಥುರೋಮ-ಮೀನು
ಪೃಥೆ-ಕೃಂತಿ
ಪೃಷ್ಟ-ಬೆನ್ನು
ಪೆಂಪು-ಪ್ರಸಿದ್ಧಿ, ಹೆಚ್ಚುಗೆ
ಪೆರೆ-ಚಂದ್ರ
ಪೆರ್ಚು-ಹೆಚ್ಚು

ಪೆಳರು-ಅಂಜು
ಪೆರ್-ದೊಡ್ಡದು
ಪೆರ್ಮೆ-ದಯ, ಕೀರ್ತಿ
ಪೇರ್ವಿಡಿಯು-ಲಕ್ಷಿಸು
ಪೊಂಗು-ಉಕ್ಕು, ಉಬ್ಬು
ಪೊಂಬಟ್ಟೆ-ಬಂಗಾರದ ತಗಡು
ಪೊಚ್ಚ-ಪೊಚ್ಚೆ, ನದಿ
ಪೊಡರು-ಹೊಡೆ
ಪೊಡವಿ-ಭೂಮಿ
ಪೊಣರು-ಯುದ್ಧಮಾಡು
ಪೊಣ್ಮು-ಹೊರಡು
ಪೋತ-ದ್ರವ್ಯ
ಪೊದಳು-ಹೊರಡು
ಪೊದ್ದು-ಸಮೀಪಿಸು (ಪೊರ್ದು)
ಪೊನಲು-ಹರಿಯುವ ನೀರು
ಪೊರಮಡು-ಹೊರಡು
ಪೊರಮಡಿಸು-ಹೊರವಡಿಸು
ಪೊರೆ-ಸಂತೋಷ, ಸಂರಕ್ಷಣೆ, ಸಂರಕ್ಷಿಸು, ಹೊರೆ
ಪೊಲಬು-ವರ್ತಮಾನ
ಪೊಳಲು-ಊರು
ಪೋಕ-ಪಟಿಂಗ
ಪ್ರ-ಮುಂದೆ, ಹೆಚ್ಚಿಗೆ ಎಂಬರ್ಥದ ಉಪಸರ್ಗ
ಪ್ರವೀರ-ದೊಡ್ಡವೀರ
ಪ್ರವಾಹ-ಮುಂದೆ ಹರಿಯುವುದು
ಪ್ರಕರ-ಸಮುದಾಯ (ಸಮುದಯ ಎಂದಿದೆ)
ಪ್ರಚಯ-ಸಮೂಹ
ಪ್ರಚ್ಛನ್ನ-ಮುಚ್ಚಿದ್ದು
ಪ್ರತತಿ-ವಿಸ್ತಾರ, ಸಮುದಾಯ
ಪ್ರತಾಪ-ಉತ್ಕೃಷ್ಟತಾಪ, ಶೂರತ್ವ
ಪ್ರತಿ-ಬೇರೆಬೇರೆ, ಇದಿರು, ಬದಲು ಎಂಬರ್ಥದ ಉಪಸರ್ಗ
ಪ್ರತಿಮೆ-ಮೂರ್ತಿ (ಅಪ್ರತಿಮ-ಸರಿಯಿಲ್ಲದವನು)
ಪ್ರತ್ಯಯ-ಯುದ್ಧ, ಅಡ್ಡಿ, ಪ್ರದೇಶ, ಸ್ಥಳ
ಪ್ರತಾಪ-ನದಿಯದಂಡೆ
ಪ್ರಬಂಧ-ಬಂಧನ
ಪ್ರಭಂಜನ-ಗಾಳಿ
ಪ್ರಭಾವ-ಅಧಿಕಾರ
ಪ್ರಭಾನತೆ-ಹೆಚ್ಚಿಗೆ

ಪ್ರಭೃತಿ-ರೀತಿ, ಇತ್ಯಾದಿ
ಪ್ರಭೆ-ಪ್ರಕಾಶ
ಪ್ರಭಂ-ಪ್ರಕಾಶಉಳ್ಳವನು
ಪ್ರವರ-ಸಂತತಿ, ಉತ್ಕೃಷ್ಟ
ಪ್ರವರ್ತಕ-ನಡಸುವವನು
ಪ್ರವರ್ತನ-ನಡಸೋಣ
ಪ್ರವೀಣ-ಜಾಣ
ಪ್ರಶಕ್ತ-ಉತ್ತಮ
ಪ್ರಸಭ-ಬಲತ್ಕಾರ
ಪ್ರಸರ-ವಿಸ್ತಾರ, ಸಮುದಾಯ
ಪ್ರಸೂನ-ಹೂವು
ಪ್ರಸ್ತುತ-ಸಿದ್ಧ, ಪ್ರಸಿದ್ಧ
ಪ್ರಸ್ಥಾನ-ಹೊರಡು
ಪ್ರಕ್ಷಾಳನ-ತೊಳೆಯೋಣ
ಪ್ರಕ್ಷಾಳಿಸು-ತೊಳೆ
ಪ್ರಾಶನ-ಉಣ್ಣುವುದು
ಪ್ರಾಸಾದ-ಉಪ್ಪರಿಗೆ, ಅರಮನೆ
ಪ್ರೇರಿಸು-ನಡೆಸು
ಪ್ರೋಕ್ತ-ಮುಂಚೆ ಹೇಳಿದ್ದು

ಫ

ಫಣೆ-(ಫಣ-ಹೆಡೆ) ಮುಳ್ಳಾದ್ದು, ಸರ್ಪ
ಫಲವತ್-ಫಲವುಳ್ಳದ್ದು
ಬಂಧುರ-ಮನೋಹರ
ಬನ್ನ-ಕಷ್ಟ
ಬಂಬಲು-ಸಮುದಾಯ
ಬಟ್ಟೆ-ದಾರಿ
ಬಡಿಶ-ಮೀನು ಹಿಡಿಯುವ ಗಾಳ
ಬಣಗು-ನೀಚ
ಬದ್ಧ-ಕಟ್ಟಿದ್ದು
ಬಧಿರ-ಕಿವುಡ
ಬಬ್ಬುಳಿ-ಮುಳ್ಳಿನಗಿಡ
ಬಲವು-ಬಲುಹ, ಭಾರ, ದೊಡ್ಡದು
ಬಲು-ಬಲ್ಮೆ, ಬಲ
ಬಲ್ಲಹ-ಒಡೆಯ
ಬಸವಳಿ-ಜೀನಲಳಿಯು (ವುದು)
ಬಹಿ-ಹೊರಗೆ (ಬಹಿ:ಪ್ರದೇಶ)
ಬಹುಳ-ಅನೇಕ, ಬ್ರಾಹ್ಮಣ
ಬಳಚು-ಕಡಿದುಬಿಡು
ಬಳಬೆ-ಬಳನೆ, ಬಣನಿ
ಬಳ್ಕು-ಬಾಗು, ಅಲ್ಲಾಡು
ಬಾನ್-ಆಕಾಶ
ಬಾಂಗೆರೆ-ಬಾಂಬೊಳೆ, ಆಕಾಶಗಂಗೆ, ಬಾಂದೊರೆ
ಬಾಂದಳ-ಆಕಾಶ
ಬಾಣಸಿಗ-(ಬಾಣಸ-ಅಡಿಗೆ, ಅಡಿಗೆ ಮಾಡುವವನು)
ಬಾಣಾದ-ತೂತು
ಬಾಷ್ಪ-ಕಣ್ಣೀರು
ಬಾಸಣಿಸು-ಹಾಕಿಕೊಳ್ಳು, ಬಾಹತ್ತರ
ಬಾಹಿರ-ಹೊರಗಾದವನು
ಬಾಹು-ತೋಳು
ಬಾಹೆ-ಊರಿನ ಮುಂದಣ ಸ್ಥಳ
ಬಾಹ್ಯ-ಹೊರಗೆ
ಬಾಳು-ಕತ್ತಿ
ಬಿನ್ನಣ-ಚಂದ
ಬಿನ್ನಾಣ-ಪರಾಮರಿಕೆ
ಬಿಕ್ಕಳ-ಬಿಕ್ಕುವುದು
ಬಿಜಯಂಗೈ-ಮಾಡು, ಹೋಗಿಬಾ, (ಬರು)
ಬಿಜ್ಜಣ-ಬೀಸಣಿಗೆ
ಬಿಡಾಲ-ಬೆಕ್ಕು
ಬಿಡಿಬೀಸರ-ಅಲಕ್ಷ್ಯ
ಬಿಣ್ಪು-ಗಡಸುತರ, ಗಡುತರ
ಬಿತ್ತರ-ವಿಸ್ತಾರ
ಬಿತ್ತು-ಬೀಜ
ಬಿದಿರು-ಅಲ್ಲಾಡು, ಜಾಡಿಸು, ಅಂಜು
ಬಿನದ-ಲೀಲೆ
ಬಿರಯ-ಅಗಲಿರೋಣ
ಬಿರಯಿ-ಅಗಲಿ ಇರುವವನು, ನಿರಹಿ
ಬಿಲ-ತೂತು
ಬಿಸ-ನೀರು, ವಿಷ
ಬಿಸಜ-ಕನುಲಿ
ಸುಯ್ಯು-ನರಳು
ಬೀಳ್ತು-ಬೀಜ
ಬೀಡು-ವಸತಿ
ಬೀಡುಕಾಣಿಕೆ-ಪ್ರಜಾಕಾಣಿಕೆ
ಬೀಯ-ಖರ್ಚು
ಬೀಳ್-ಅಪ್ಪಣೆ, ಬೀಳ್ಕೊಡು, ಬೀಳ್ಕೊಳ್ಳು
ಬೂತು-ಅಂಜಿಕೆ, ಬೂತುಗೆಡು
ಬೆಂಗಾವಲು-ಕಾಯುವವರು
ಬೆಗಡು-ಅಂಜಿಕೆ, ಅಂಜು

ಬೆಚ್ಚು-ಅಂಜಿಕೆ
ಬೆಟ್ಟಿತು-ಕಠಿಣು
ಬೆಬ್ಬುಲಿ-ದೊಡ್ಡ ಹುಲಿ
ಬೆಸ-ಬೆಸಂ
ಬೆಸನಂ-ಆಜ್ಞೆ
ಬೆಸನ ವ್ಯಸನ
ಬೆಸಲು-ಪಡೆಯುವುದು
ಬೆಸುಗೆ-ಕಿವಿಯುಮ ಇಲ
ಬೇರ್ವರಿಯು-ಬೇರುಕೀಳು
ಬೈನಸ-ಬೆಂಕೆ (ಬೆಂಕಿ)
ಬೇಹ-ಮುಖ್ಯ
ಬೇಹು-ನಾಳಲೆ, ಕೆಲಸ
ಬೇಳಂಬ-ಗಾಢಾಲೋಚನೆ
ಬೇಳು-ಅರ್ಪಣೆಮಾಡುವುದು
ಬೇಳುವೆ-ದಡ್ಡತನ
ಬೈಚು-ಬಚ್ಚಿಡು
ಬೈತರಿಸು-ಬೈತಿರಿಸು, ಅಡಗಿಸು
ಬೋಳೈಸು-ಕೈಆಡಿಸಿ ರಮಿಸು

ಭ

ಭಂಗ-ತೆರೆ, ಕುಂದು
ಭಂಗಿ-ರೀತಿ, ಮೋಸ
ಭಂಜನ-ಮುರಿಯೋಣ, ಭಂಜಿಸು
ಭಂಗಣ-ನಕ್ಷತ್ರ
ಭಜನೆ-ಪೂಜೆ, (ಭಜಿಸು, ಭಜಕ)
ಭಟ-ಯುದ್ಧಮಾಡುವವನು
ಭದ್ರಾಸ್ತರಣ-ಮೆಲ್ಹಾಳಿಗೆ
ಭರ್ಗ-ಪ್ರಕಾಶ, ಶಿವ
ಭರ್ತ-ಭರ್ತಾರ, ಗಂಡ
ಭಲ್ಲೂಕ-ಕರಡಿ
ಭವನ-ಮನೆ
ಭವ್ಯ-ಚಂದ
ಭಾಂಡ-ಗಡಿಗೆ
ಭಾಜನ-ಪಾತ್ರೆ
ಭಾನು-ಸೂರ್ಯ
ಭಾಮೆ-ಭಾಮನಿ, ಸ್ತ್ರೀ
ಭಾರಂಕ-ಭಾರಣೆ, ಬಲದಬಿರುದು
ಭಾವೆ-ಸ್ತ್ರೀ
ಭಾಸ-ಕಾಂತಿ
ಭಾಸುರ-ಶೋಭನವುಳ್ಳದ್ದು
ಭಾಳ-ಹಣೆ
ಭಿತ್ತಿ-ಗೋಡೆ
ಭೀಷಣ-ಭೀಷ್ಮ, ಭೀತಿ
ಭುಜಂಗ-ಭುಜಂಗನು, ಭುಜಗ, ಸರ್ಪ
ಭುಲ್ಲನಿಸು-ಸಂತೋಷಪಡು, ಸಂತೋಷಪಡಿಸು
ಭುವನ-ಲೋಕ
ಭೂ-ಭೂಮಿ
ಭೃತ್ಯ-ಸೇವಕನು (ಭೃತಿ-ಸಂಬಳ)
ಭೈತ್ರ-ಹಡಗು
ಭೋಕ್ತೃನ್ಯ-ಭೋಗಿಸತಕ್ಕದ್ದು
ಭ್ರಮಣಕ-ಭ್ರಮಣೆ, ತಿರುಗೋಣ
ಭ್ರಾಜಿತ-ಒಪ್ಪಲ್ಪಟ್ಟದ್ದು

ಮ

ಮಂಜುಳ-ಮನೋಹರ
ಮಂಡನ-ಅಲಂಕಾರ
ಮಂಡಲಿಸು-ಸುತ್ತುಗಟ್ಟು
ಮಂಡೂಕ-ಕಪ್ಪೆ
ಮಂಡೆ-ತಲೆ
ಮಂತ್ರಿ-ಪ್ರಧಾನಿ
ಮಂದಾರ-ಪಾರಿಜಾತಪುಷ್ಪ
ಮಂದಿರ-ಮನೆ
ಮನ್ನೆಯರು-ಪಾಳೆಯಗಾರರು
ಮಕರ-ಮೊಸಳೆ
ಮಖ-ಯಜ್ಞ
ಮುಗುಳು-ಮುತ್ತು, ತಿರಸು
ಮಗ್ನ-ಮುಳ(ಣ)ಗಿದ್ದು
ಮಡಗು-ಅಡಗಿಸು, ಇಡು
ಮಡಲು-ಹಬ್ಬು
ಮದನ-ಮನ್ಮಥ
ಮದಿರೆ-ಹೆಂಡ
ಮಧು-ಸಾರಾಯ, ಜೇನು, ವಸತಕಾಲ
ಮಯೂಖ-ಕಿರಣ
ಮರುಂದ-ಪುಷ್ಪದೊಳಗಣಧೂಳು (ಮಕರಂದ ?)
ಮರಕತ-ಪಚ್ಚೆ, ರತ್ನ
ಮರಲು-ಮರಳು, ತಿರುಗು
ಮರಾಳ-ಮರಾಳಿ, ಹಂಸ
ಮರೀಚಿ-ಮರೀಚಿಕೆ, ಬಿಸಿಲುಗುದುರೆ
ಮರುತ್ತು-ಗಾಳಿ, ದೇವತೆ

ಮರುಮೊನೆ-ಪೆಟ್ಟುಗಾಯ
ಮರ್ದನ-ತಿಕ್ಕು, ಮರ್ಧಿಸು
ಮರ್ಬುರ್-ಕತ್ತಲೆ
ಮಲಯರುಹ-ಶ್ರೀಗಂಧದ ಗಿಡ
ಮಸಕ-ಹೆಬ್ಬು, ಸಿಟ್ಟು
ಮಸಗು-ರೌದ್ರವಾಗು, ಹೆಚ್ಚು
ಮಸುಳು-ಕಳೆಗುಂದು (ಮಸುಳಿಸು)
ಮಸ್ತ-ಮಸ್ತಕ, ತಲೆ
ಮಹಿ-ಭೂಮಿ
ಮಹಿಪ-ಕೋಣ
ಮಹಿಷಿ-ಎಮ್ಮೆ
ಮಹಿಳೆ-ಸ್ತ್ರೀ
ಮಹೀಂದ್ರ-ಗುಡ್ಡ
ಮಕ್ಷಿ-ಮಕ್ಷಿಕ, ನೊಣ
ಮಾಂಜರ-ಬೆಕ್ಕು (ಮಾರ್ಜಾಲ?)
ಮಾತಂಗ-ಆನೆ
ಮಾನಿಷ-ಮನುಷ್ಯ
ಮಾಯಾವಿ-ಮಾಯೆಯಾಮಾಡುವವನು
ಮಾರ-ಮನ್ಮಥ
ಮಾರಣ-ಕಲ್ಲೋಣ
ಮಾರಾನು-ಇದಿರಾಗು
ಮಾರುತ-ಗಾಳಿ
ಮಾರ್ತಾಂಡ-ಸೂರ್ಯ
ಮಾರ್ದನಿ-ದೊಡ್ಡಶಬ್ದ (ಗುಡುಗು ?)
ಮಿಥುನ-ಜೋಡಿ
ಮಿರಸು-ಪ್ರಕಾಶಿಸು
ಮಿಸುಗು–ಪ್ರಕಾಶಿಸು
ಮಿಸುಗ್ಗ-ಪ್ರಕಾಶಿಸು
ಮಿಸುಪ-ಪ್ರಕಾಶಿಸು
ಮಿಸುನಿ-ಬಂಗಾರ
ಮಿಳತ್-ಕೂಡುವ
ಮುಂಡನ-ಕ್ಷೌರಮಾಡಿಕೊಳ್ಳೋಣ
ಮುಕುರ-ಕನ್ನಡಿ
ಮುಕುಳ-ಮೊಗೆ (ಹೂವು?)
ಮುಕುಳಿತ-ಮುಗಿದ
ಮುಕ್ತಾ-ಬಿಟ್ಟಂಥಾದ್ದು
ಮುಗ್ಧ-ದಡ್ಡ
ಮುಗ್ಧೆ-ದಡ್ಡಾಕಿ
ಮುಡಿ-ತಲೆ
ಮುಡುಹ-ಹೆಗಲು, ತಲೆ
ಮುದ್ರಿತ-ಮುದ್ರೆಹಾಕಿಕೊಂಡದ್ದು
ಮುಮುಕ್ಷಾ-ಮೋಕ್ಷಾಪೇಕ್ಷಿ
ಮುರುಟು-ಸಣ್ಣದಾಗು
ಮುಡಿಸು-ಕುಡಿಚಿವಟಿಸು
ಮುರ್ಚು-ಮುಚ್ಚು
ಮುರವು-ಮುರುಹುಬೀದಿ, ಬಡಿವಾರ
ಮುಸಲ-ವನಕೆ
ಮುಸುಡು-ಮುಸುಡಿ, ಮೋರೆ
ಮೂದಲಿಸು-ಹಂಗಿಸು
ಮೂರ್ಧ್ನಿ-ತಲೆ
ಮೂಷಕ-ಇಲಿ
ಮೃಗ-ಹುಡುಕೋಣ
ಮೃಗಯಾ-ಬೇಟೆ
ಮೃಗತೃಷ್ಣೆ-ಬಿಸಲ್ಗುದುರೆ (ತೃಷ್ಣೆ-ನೀರಡಿಕೆ)
ಮೃಡ-ಶಿವ
ಮೃಣಾಳ-ಕಮಲದ ದಂಟು
ಮೃತ್ತಿಕೆ-ಮೃತ್ತು, ಮಣ್ಣು
ಮೃಷ-ಸುಳ್ಳು, ವೃಷೆ
ಮೆಳೆ-ಪೊದೆ
ಮೇಣ್-ಮತ್ತು, ಹೆಚ್ಚಿಗೆ
ಮೇದಿನಿ-ಭೂಮಿ
ಮೇಧ್ಯ-ಶುದ್ಧ
ಮೇಲ್ಸೆರೆ-ಮೇಲೆಎಳಕೊಳ್ಳುವನರ
ಮೊರಸು-ಸಿದ್ಧಮಾಡು
ಮೊಗಿ-ಮೊಗೆ, ನೀರುತುಂಬು
ಮೊತ್ತ-ಸಮುದಾಯ
ಮೊರೆಯು-ಸಪ್ಪಳ
ಮೊಳಗು-ಸಪ್ಪಳವಾಗು
ಮೋದ-ಸಂತೋಷ
ಮೋದು-ಬಿಡಿ
ಮೌಳಿ-ತಲೆ, ಕಿರೀಟ

ಯ

ಯಮಳ—ಜೋಡು, ಅವಳಿ–ಜವಳಿ
ಯಶಸ್ಸು—ಯಶ, ಕೀರ್ತಿ
ಯಷ್ಟಿ—ಕೋಲು
ಯಕ್ಷ್ಮ—ಒಂದು ಕ್ಷಯ ರೋಗ
ಯಾಗ—ಯಜ್ಞ
ಯುಗ—ಯುಗಳ
ಯುಗ್ಮ—ಜೋಡು, ಎರಡು

ಯುತ—ಕೂಡಿದ್ದು
ಯುಧ—ಸಮೂಹ
ಯೋಜನ—ನಾಲ್ಕು ಹರಿದಾರಿಯ ಹಾದಿ

ರ

ರಂಗ—ಬಣ್ಣ, ಸ್ಥಳ
ರಂಜಕ—ಮನೋಹರ
ರಂಜಿಸು—ಮನೋಹರವಾಗು
ರಂಧ್ರ—ತೂತು
ರಜ—ರಜಸ್ಸು, ಧೂಳು
ರಜಕ—ಅಗಸ
ರಜನಿ—ರಾತ್ರಿ (ರಜನೀಚರ-ರಾಕ್ಷಸ)
ರಜತ—ಬೆಳ್ಳಿ, ಬಿಳುಪು
ರಜ್ಜು—ಹಗ್ಗ
ರತ್ನಾಕರ—ಸಮುದ್ರ (ರತ್ನಇದ್ದದ್ದು)
ರಥಾಂಗ—ಗಾಲಿ, ಚಕ್ರವಾಕಪಕ್ಷಿ
ರದ—ರದನ, ಹಲ್ಲು
ರಪಣ—ಒಂದು ಆಯುಧ
ರಭಸ—ತೀವ್ರ
ರಮಣ—ಗಂಡ
ರಮಣಿ—ಹೆಂಡತಿ
ರಮಣೀಯ—ರಮ್ಯ
ರಮೆ—ಸ್ತ್ರೀ
ರಯ—ತೀವ್ರ
ರಶ್ಮಿ—ಕಿರಣ
ರಸನೆ—ನಾಲಿಗೆ
ರಸಾಲ—ಮಾವಿನಗಿಡ
ರಸೆ—ಭೂಮಿ
ರಹ—ಹಂಚಿಕೆ (ರಹಿ)
ರಾಕೆ—ಹುಣ್ಣಿಮೆ
ರಾಗ—ಸಂತೋಷ, ಬಣ್ಣ
ರಾಜ—ಚಂದ್ರ
ರಾಜಿ—ಸಾಲು
ರಾಜಿತ—ಒಪ್ಪುವಂಥಾ (ರಾಜಿಸು)
ರಾಜೀವ—ಕಮಲ
ರಾವ—ಶಬ್ದ
ರಿಪು—ವೈರಿ
ರುಂದ್ರ—ವೀರ್ಯ
ರುಚಿ—ಕಿರಣ. ಪ್ರಕಾಶ
ರುಚಿರ—ಮನೋಹರ
ರುಜೆ—ರೋಗ
ರುಧಿರ—ರಕ್ತ
ರುಹ—ಬೆಳೆಯುವ. ಏರುವ
ರೇಣು—ಧೂಳಿ
ರೇತಸ್ಸು—ರೇತ, ವಿರ್ಯ
ರೋಚಾಡು—ತಿರಸ್ಕಾರವಮಾಡು
ರೌರವ—ನರಕ
ರೌಪ್ಯ—ಬೆಳ್ಳಿ

ಲ

ಲಂಬಿತ—ಉದ್ದವಾದದ್ದು
(ಆಲಂಬಿಸು—ಜೋಲುಬಿದ್ದದ್ದು)
ಲತೆ—ಬಳ್ಳಿ (ಲತಾಂಗಿ–ಸ್ತ್ರೀ)
ಲಪನ—ಬಾಯಿ, ಮಾತನಾಡೋಣ
ಲಲನೆ—ಸ್ತ್ರೀ
ಲಲಾಮ—ಗುರುತು, ಶ್ರೇಷ್ಠ
ಲಲಿತ—ಒಪ್ಪುವಂಥಾ
ಲಲ್ಲೆ — ಮೋಹದ ಮಾತು
ಲವ—ಸ್ವಲ್ಪ
ಲಸತ್ ಒಪ್ಪುವಂಥಾ, ಪ್ರಕಾಶವುಳ್ಳಂಥಾದ್ದು
ಲಾಂಛನ—ಗುರುತು
ಲಾಲನ—ಲಾಲನೆ, ಮಮತೆ, ಲಾಲಿಸು
ಲಾವಣ್ಯ—ಚಲ್ವಿಕೆ
ಲಾಸ್ಯ—ನೃತ್ಯ
ಲಾಕ್ಷ—ಅರಗು
ಲುಬ್ಧ—ಲೋಭಿ
ಲೋಗರ—ಅನ್ಯ
ಲೋಚನ—ಕಣ್ಣು
ಲೋಲ—ನಡಸುವಂಥಾ, ಆಶೆಯುಳ್ಳಂಥಾ
ಲೋಷ್ಟ—ಮಣ್ಣಿನ ಮುದ್ದೆ

ವ

ವಂಕ — ಬಾಗಿಲು
ಮಂದಿ — ಅರಸನನ್ನು ಹೊಗಳುವವರು
ವಂಧ್ಯೆ–ವಂಧ್ಯ, ಬಂಜೆ
ವಸ್ತ್ರ–ಬಾಯಿ. ಮೋರೆ
ವಟ — ಆಲದಗಿಡ
ವಟು — ವಟುಕ. ಹುಡುಗ
ವದನ — ಬಾಯಿ
ವನಿತೆ — ಸ್ತ್ರೀ

ವನ್ಹಿ—ಚಿತ
ವಪು—ವಪಸ್ಸು, ದೇಹ
ವರಿಸು—ಅಪೇಕ್ಷಿಸು, ಆರಿಸು
ವರೂಥ—ರಥ
ವರ್ತುಲ (ಳಿ)—ದುಂಡು
ವರ್ಧಿಸು—ಹೆಚ್ಚು
ವಲಯ—ವಳೆಯ, ಸುತ್ತುವಂಥಾದ್ದು, ಮೊರೆ, ಸಮೂಹ
ವಲ್ಮೀಕ—ಗಂಡ
ವಲ್ಲಭ—ಗಂಡ } ಸ್ನೇಹಿತ (ತೆ)
ವಲಭಿ—ಹೆಂಡತಿ } ಸ್ನೇಹಿತ (ತೆ)
ವಲ್ಲಿ—ಬಲ್ಲಿ, ಬಳ್ಳಿ
ವಸತಿ—ಮನೆ
ವಸು—ಐಶ್ವರ್ಯ, ವಸುಂಧರೆ ಭೂಮಿ ಕಿರಣ
ವಹಿತ—ತೀವ್ರ
ವಳಿತ—ಕಪ್ಪ
ವಾಘೆ—ಕಡಿವಾಣ
ವಾಜಿ—ಕುದುರೆ
ವಾನರ—ಮಂಗ
ವಾಮ—ಎಡ, ಸೊಂಟ
ವಾಯು—ಸುಳ್ಳು
ವಾರಣ—ಆನೆ, ಅಡಿ, ವಾರಣಿಸು
ವಾರ್—ವಾರಿ, ನೀರು
ವಾರಾಶಿ—ಸಮುದ್ರ
ವಾರ್ಧಿ—ಸಮುದ್ರ
ವಾಲುಕ—ಉಸುಕು (ಗು)
ವಾಸರ—ದಿವಸ
ವಾಸಸ್ಸು—ವಾಸ, ಅಸಿವಿ (ವೆ)
ವಾಸು—ವಿಷ್ಣು
ವಾಸುಕಿ—ಸರ್ಪರಾಜ
ವಾಹಕ—ಹೊರುವವನು
ವಾಹಿನಿ—ದಂಡು
ವಿ—ದೂರ, (ಪ್ರತ್ಯೇಕಾರ್ಥದ ಉಪಸರ್ಗ)
ವಿಕಟತೆ—ಭಯಂಕರ, ವಿಕಟ
ವಿಕಲ (ಳ)—ಕಡಿಮೆ, ಗಲಿಬಿಲಿಯಾದ
ವಿಕಲ್ಪ—ಅನುಮಾನ
ವಿಕಾಸ—ಅರಳುವದು
ವಿಟಪಿ—ಗಿಡ
ವಿತತ—ವಿಸ್ತಾರ
ವಿತವಿ—ಸಮೂಹ
ವಿತರಣ—ದಾನ
ವಿತಾನ—ಸಮೂಹ, ಕೊಡೆ
ವಿತ್ತ—ಐಶ್ವರ್ಯ
ವಿತ್ತಪ—ಕುಬೇರ
ವಿದ—ತಿಳಿಯುವಂಥಾ
ವಿದಿತ—ತಿಳಿದಂಥಾ
ವಿದ್ಯುತ್ತು—ಮಿಂಚು
ವಿದ್ರುಮ—ಹವಳ
ವಿಧಾನ—ರೀತಿ
ವಿಧಿ—ಬ್ರಹ್ಮ
ವಿಧು—ಚಂದ್ರ
ವಿಧುಂತುದ—ರಾಹು
ವಿನಿಯೋಗ—ಪಾಲು ಕೊಡುವುದು, ವಿನಿಯೋಗಿಸು
ವಿಪಕ್ಷ—ವೈರಿ
ವಿಪಿನ—ಅಡವಿ
ವಿಪುಲ(ಳ)—ದೊಡ್ಡದು
ವಿಬುಧ—ಪಂಡಿತ, ದೇವತೆ
ವಿಭಾಡಿಸು—ಸಂಹರಿಸು
ವಿಭ್ರಾಜಿಸು—ಪ್ರಕಾಶಿಸು
ವಿಯತ್ತು—ಆಕಾಶ
ವಿಯೋಗ—ಅಗಲೋಣ
ವಿರತಿ—ಪ್ರೀತಿಯಿಲ್ಲದ್ದು
ವಿರಳ—ಅಪರೂಪ
ವಿರಾಜಿಸು—ಒಪ್ಪು
ವಿರೂಪ—ವಿಕಾರ
ವಿಲಯ—ಲಯ
ವಿಲಸನ—ಪ್ರಕಾಶಿಸು, ವಿಲಸಿಸು
ವಿಶದ—ನಿರ್ಮಲ
ವಿಶಾರದ—ಬಲ್ಲವನು
ವಿಶಾಲ—ವಿಸ್ತಾರ
ವಿಶ್ರುತ—ಪ್ರಸಿದ್ಧ
ವಿಷ—ವಿಷ
ವಿಷಯ—ದೇಶ
ವಿಷ್ಟರ—ಗದ್ದಿಗೆ
ವಿಸರ—ಸಮುದಾಯ
ವಿಸಟಂಬರೆ—ಸುತ್ತುಹರಿ
ವಿಸ್ಫುರಿತ—ಪ್ರಕಾಶಿಸಲ್ಪಟ್ಟ
ವಿಹಂಗವು—ಪಕ್ಷಿ (ವಿಹಂಗ—ವಿಹಗ)
ವಿಹಾಯಸ—ಆಕಾಶ

ವಿಹಾರ–ಸಂಚಾರ, ವಿಹರಿಸು
ವಿಹೀನ–ಹೀನ
ವಿಹ್ವಲ–ಗಲಭಿಯಾದ
ವೃಂದ–ಸಮುದಾಯ
ವೃಂದಾರಕ–ದೇವತೆಗಳು
ವೃತ–ಮುಚ್ಚಿದ್ದು, ಆಶಿಸು
ವೃತ್ತ–ದುಂಡು, ನಡೆ
ವೃತ್ತಿ–ಉಪಜೀವನ, ಭಾವ
ವೃಥಾ–ಸುಮ್ಮನೆ
ವೃದ್ಧಿ–ಬೆಳೆಯುವುದು
ವೃಶ್ಚಿಕ–ಚೇಳು
ವೃಷ–ಎತ್ತು
ವೃಷ್ಣಿ–ಯಾದವಕುಲ
ವೇದನೆ–ನೋವು, ದುಃಖ
ವೇದಿ–ಬ್ರಹ್ಮ
ವೇದಿ–ವೇದಿಕೆ, ಕಟ್ಟೆ
ವೇದನೆ–ವೇಧೆ, ಗಾಯ ಮಾಡೋಣ, ಉಪದ್ರ
ವೇಷ್ಟನ–ಸುತ್ತೋಣ, ವೇಷ್ಟಿಸು
ವೈದುಷಿ–ವೈದುಷ್ಯ, ವಿದ್ಯೆ
ವೈಶ್ರವಣ–ಕುಬೇರ
ವ್ಯಕ್ತ–ಸ್ಪಷ್ಟ, ಪ್ರತ್ಯೇಕ
ವ್ಯಯ–ಖರ್ಚು
ವ್ಯಾಕೀರ್ಣ–ವಿಸ್ತಾರ
ವ್ಯಾಕುಲ–ಚಿಂತೆ, ವ್ಯಾಕುಳಿತ
ವ್ಯಾಘ್ರ–ಹುಲಿ
ವ್ಯಾಜ–ನೆಪ
ವ್ಯಾಧ–ಬೇಡ
ವ್ಯಾಳ–ಸರ್ಪ
ವ್ಯೂಹ–ಸಮುದಾಯ, ದಂಡು ನಿಲ್ಲುವ ರೀತಿ
ವಜ್ರ } ಹಟ್ಟಿ, ಸಮುದಾಯ
ವ್ರಾತ }

ಶ

ಶಂಕೆ–ಸಂಶಯ, ಶಂಕಿಸು
ಶಂದನ–ರಥ
ಶಕಟ–ಬಂಡಿ
ಶಕಲ–ಚೂರು
ಶಕ್ರ–ಇಂದ್ರ
ಶಫಲ–ಒಂದು (ಜಾತಿ) ಮೀನು
ಶಬರ–ಕಾಡುಜನರು, ಬೇಡರು
ಶಯ್ಯೆ–ಹಾಸಿಗೆ
ಶರ–ಬಾಣ, ನೀರು,ಸರ
ಶರಾಸನ–ಬಿಲ್ಲು
ಶರ್ವರಿ–ಶಾರ್ವರಿ, ರಾತ್ರಿ
ಶಲಭ–ದೀಪದ ಹುಳು
ಶಲ್ಯ–ಯಲವು, ಈಟಿ
ಶಶಿ–ಮೊಲಯಿದ್ದವನು, ಚಂದ್ರ
ಶಶಿರ–ಚಳಿಗಾಲ, ಶಿಶಿರ
ಶಾಂಭವಿ–ಪಾರ್ವತಿ
ಶಾಕ–ಕಾಯಿಪಲ್ಯ
ಶಾಖೆ–ಕೊಂಬೆ
ಶಾತಕುಂಭ–ಬಂಗಾರ
ಶಾಖಿ–(ಶಾಬಕ) ಮರಿ, (ಶಾವಕ)
ಶಿಖಿ–ನವಿರು, ಜಿಂಕೆ
ಶಿಖೆ–ಉರಿ, ತುದಿ
ಶಿಬಿಕೆ–ಪಾಲಕ (ಪಲ್ಲಕ್ಕಿ)
ಶಿರ–ನರ
ಶುಶ್ರೂಷೆ–ಸೇವಕಾವೃತಿ, ಶೀಘ್ರ, ಬೇಗ
ಶುಂಡಾಲ–ಆನೆ
ಶುಕ–ಗಿಳಿ
ಶೃಗಾಲ–ನರಿ, ಸೃಗಾಲ
ಶೈಲ–ಗುಡ್ಡ
ಶೈಶವ–ಚಿಕ್ಕತನ
ಶೋಕ–ದುಃಖ
ಶ್ಯಾನ–ಕಪ್ಪು
ಶ್ರದ್ಧೆ–ವಿಶ್ವಾಸ
ಶ್ರೇಡಿ–ಮೂಲೆ
ಶ್ರೋತ್ರ–ಕಿವಿ
ಶ್ರೋತ್ರಿ–ಕಿವಿಮುಳ್ಳಿಕೆ
ಶ್ಲೋಕ–ಕೀರ್ತಿ
ಶ್ವಪಚ–ಹೊಲೆಯ
ಶ್ವಸನ–ಗಾಳಿ
ಶ್ವೇತ–ಬಿಳುಪು

ಷ

ಷಂಡ–ನಪುಂಸಕ

ಸ

ಸ, ಸಮ್–ಕೂಡ, ಹೆಚ್ಚು ಎಂಬರ್ಥದ ಉಪಸರ್ಗ
ಸಂಕೀರ್ಣ–ಬೆರಕೆಯಾದದ್ದು
ಸಂಕುಲ–ಕೂಡಿದ್ದು, ಗಲಿಬಿಲಿ
ಸಂಗರ–ಯುದ್ಧ
ಸಂಗ್ರಾಮ–ಯುದ್ಧ
ಸಂಘ–ಸಮೂಹ
ಸಂಘಾತ–ಸಮೂಹ, ಗುಂಪು
ಸಂಚಯ–ಸಮೂಹ
ಸಂಚಾಳ–ಅಲ್ಲಾಡುವಂಥಾದ್ದು
ಸಂಛಾದಿತ–ಮುಚ್ಚಿದ್ದು
ಸಂಜಾತ–ಜನ್ಮ
ಸಂಜ್ವರ–ಬಹಳ ಜ್ವರ ತಾಪ
ಸಂತವಿಡು–ಸಂತೈಸು, ಸಮಾದಾನ ಮಾಡು
ಸಂತಸ–ಸಂತೋಷ
ಸಂದಿಗ–ಸಂದೇಗ, ಸಂದೇಹ
ಸಂದೋಹ–ಸಮೂಹ
ಸಂಧ್ಯೆ–ಸಂಜೆ (ಸಂಧ್ಯಾವಂದನೆ)
ಸನ್ನಹ, ಸನ್ನಯ, ಸನ್ನಾಹ } ಸಿದ್ಧ ಮಾಡುವುದು, ಆಯುಧ
ಸನ್ನದ–ಸಿದ್ಧಮಾಡು
ಸನ್ನಿವೇಶ–ಸಮೀಪ
ಸಂಪರ್ಕ–ಕೂಡುವುದು
ಸಂಪ್ರತಿ–ಈಗ
ಸಮ್ಮುದ–ಸಂತೋಷ
ಸಮುದಿತ–ಸಂತೋಷಿಸಲ್ಪಟ್ಟ
ಸಮ್ಮೇಳನ–ಕೂಡುವುದು
ಸಮ್ಮೇಳ–ಏಕತ್ವ
ಸಮ್ಮೋದ–ಸಂತೋಷ
ಸಂವರಣೆ–ಸಿದ್ಧಮಾಡುವುದು
ಸಂವರಿಸು–ಸವರಿಸು
ಸಂಸರಣ–ಜನ್ಮ
ಸಂಸರ್ಗ–ಐಕ್ಯ, ಬಳಕೆ
ಸಗ್ಗಳೆ–ಚರ್ಮ, ಚಕ್ಕಳ
ಸಘಾಟ–ರೀತಿ
ಸಚಿವ—ಪ್ರಧಾನಿ
ಸಜರಸ—ಸರ್ಜರಸ
ಸಜ್ಜೆ—ಮಲಗುವ ಕೋಣೆ
ಸತ್—ಒಳ್ಳೇದೆಂಬರ್ಥದ ಶಬ್ದ
ಸತತ—ನಿತ್ಯ
ಸತ್ಯಸಂಧ, ಸತ್ಯಸಂಗರ } ಸತ್ಯ ಹೇಳುವವನು
ಸತ್ರ—ಯಜ್ಞ
ಸದನ—ಮನೆ
ಸದರ—ಅಲಕ್ಷ್ಯ
ಸದಿ—ಸದೆ, ಬಡಿ
ಸದೃಕ್ಕ—ಸದೃಶ, ಸಮಾನ (ಅಸದೃಶ)
ಸದ್ಮ—ಮನೆ
ಸದ್ಯಃ—ಕ್ಷಣಕ್ಕೆ, ಈಗಲೇ
ಸನ್ನತ—ಬಾಗಿದ್ದು, ವಡಂಬಡಿಕೆ
ಸಬಳ (ಲ)—ಸಬಲಿ, ಈಟಿ
ಸಭಾಜನ—ಉಪಚಾರ
ಸಮಂತು—ಹಾಗೆ
ಸಮನಿಸು—ದೊರೆಯು
ಸಮರ—ಯುದ್ಧ
ಸಮನ್ವಿತ—ಹೊಂದಿದ್ದು
ಸಮಿತಿ—ಸಮೂಹ
ಸಮಿಧೆ—ಒಂದು ತರದ ಕಟ್ಟಿಗೆ
ಸಮೀಕ—ಯುದ್ಧ
ಸಮಾರ, ಸಮಾರಣ } ಗಾಳಿ
ಸಮುದ್ಧರಣ—ಸಮುದ್ಧೃತಿ, ಬೇರು ಕಿಳೋಣ (ಹೃ + ಸಮ್ + ಉತ್ = ಹೊರಗೆ ತೆಗೆ)
ಸಮೃದ್ಧಿ—ಹೆಚ್ಚುವದು
ಸಮೇತ—ಹತ್ತಿರ
ಸಮ್ಯಕ್ಕು—ತಕ್ಕದ್ದು, ಎಲ್ಲಾ, ಸಮ್ಯತ್ವ
ಸರ—ಕೆರೆ
ಸರಸರಿಸು—ಬೇಗ ಮಾಡು
ಸರಸ್ಸು—ಸರಸಿ, ಸರೋವರ
ಸರಳು (ಳ್) (ಲು)—ಬಾಣ
ಸರಿ—ಮಳೆ
ಸರಿತ್ತು—ಹೊಳೆ
ಸರೋಜ, ಸರೋರುಹ } ಕಮಲ
ಸರ್ಗ—ಸೃಷ್ಟಿ, ಭಾವ
ಸಲಿಲ—ನೀರು

ಸಲಿಲಜ—ಕಮಲ
ಸಲೆ—ಚೆನ್ನಾಗಿ
ಸವ—ಹೂವಿನ ರಸ, ಅರ್ಪಣೆ
ಸವ್ಯ—ಎಡ
ಸಸಿನ—ದುಃಖ
ಸಹ—ತಾಳಿಕೊಳ್ಳೋಣ
ಸಾಂದ್ರ—ಗಡುತರ, ಬಹಳ
ಸಾಪತ್ನ—ವೈರಿ
ಸಾಮಂತ—ಪಾಳೆಗಾರ, ನೆರೆಯವರು
ಸಾಮಜ—ಆನೆ
ಸಾಯುಜ—ಕಷ್ಟ
ಸಾರಸ—ಕಮಲ
ಸಾರಾಯ—ಅಭಿಪ್ರಾಯ
ಸಾಸ—ಬಲ
ಸಾಸಿ—ಬಲವುಳ್ಳವನು, ಸಾಸಿಗನು
ಸಿಂಧು—ಸಮುದ್ರ, ಒಂದು ಹೊಳೆ
ಸಿಂಧುರ—ಆನೆ
ಸಿಕತ—ಉಸುಕಿನ ನೆಲ
ಸಿತ—ಬಿಳುಪು
ಸೀ…ಸುಡು
ಸೀತ್ಕಾರ—ಚಳಿಯಲ್ಲಿ, ಉದೋಡಿ
ಸು—ಒಳ್ಳೆಯದೆಂಬರ್ಥದ ಉಪಸರ್ಗ
ಸುಂಟಿಗೆ—ಕೊರಳು, ಮಾಂಸ
ಸುಮ್ಮಾನ—ಸಂತೋಷ
ಸುಕಲ—ತ್ಯಾಗ ಉಳ್ಳವನು, ವೀರ್ಯ
ಸುತ—ಮಗನು
ಸುತೆ—ಮಗಳು
ಸುತಿ—ಸ್ಮೃತಿ, ಶ್ರುತಿ
ಸುದತಿ—ಸ್ತ್ರೀ
ಸುಧೆ—ಅಮೃತ
ಸುರ್ಪಣ—ಗರುಡ
ಸುಭಗ—ಮನೋಹರ
ಸುಮನ—ಸುಮನಸ್ಸು, ದೇವತೆ
ಸುಯಿದಾನ—ಎಚ್ಚರ
ಸುಯ್ಯು—ನರಳಾಡು
ಸುರತರು—ಕಲ್ಪವೃಕ್ಷ
ಸುರಭಿ—ಕಾಮಧೇನು, ಸುಗಂಧ
ಸುರಾಚ—ಸೌಖ್ಯ
ಸುರೆ—ಮದ್ಯ
ಸುಷುಮ್ನ—ಒಂದು ನಾಡಿ
ಸುಹಿರ—ಸುಸಿರ, ತೂತು

ಸೂತ—ಸಾರಥಿ
ಸೂತಿ—ಪಡೆಯೋಣ
ಸೂಜ—ಅಡಿಗೆ ಮಾಡುವವನು,
ಕೊಲ್ಲುವವನು (ಸೂದನ)
ಸೂನು—ಮಗನು
ಸೂನ್ನತ—ಸತ್ಯ
ಸೂಪ—ತೋವೆ, ಸೂಪದಂಶಕ
ಸೂರುಳು—ಅಪಜಯ
ಸೂಳು—ಸರ್ತಿ
ಸೃಜಿಸು—ಸೃಷ್ಟಿಸು
ಸೆಳೆ—ಕೊಳಲು, ಬೆತ್ತ
ಸೇವಿಸು—ತಿನ್ನು ಕುಡಿಯು
ಸೈನ್ಯ—ತಕ್ಕೊಳ್ಳತಕ್ಕದ್ದು
ಸೈಗರೆ—ಘೋಷಿಸು
ಸೈಪಿಡು—ಸಮಾಧಾನ ಮಾಡು
ಸೈವೆರಗು—ಬಹಳ ಆಶ್ಚರ್ಯ
ಸೈಳೇಂದ್—ತೊತ್ತು
ಸೊಂಪು—ಮನೋಹರ
ಸೊಮ್ಮು—ಭಾಗ್ಯ
ಸೊರ್ಕು—ಸೊಕ್ಕು
ಸೋಗೆ— ಗಂಡು ನವಿಲು
ಸೋಮ—ಚಂದ್ರ, ಒಂದು ಬಳ್ಳಿ
ಸೋವು—ಚೆದರಿಸಿಬಿಡು
ಸೌಧ—ಉಪ್ಪರಿಗೆ
ಸೌಮ್ಯ—ಮನೋಹರವಾದ
ಸೌರಭ—ಪರಿಮಳ
ಸ್ತಂಭಿಸು—ನಿಲ್ಲಿಸು
ಸ್ತನಿತು—ಗುಡುಗು
ಸ್ತೋಕ—ಸಣ್ಣ
ಸ್ತೋಮ—ಸಮೂಹ
ಸ್ಥಾಯಿ—ಸ್ಥಿರ
ಸ್ನಪನ—ಸ್ನಾನ
ಸ್ಪರ್ಧೆ—ಹುರುಡು
ಸ್ಫುಟ ಅರದದ್ದು
ಸ್ಫುರತ್—ಪ್ರಕಾಶಿಸುವಂತಾದ್ದು
ಸ್ಫುಲಿಂಗ—ಕಿಡಿ
ಸ್ಮರ—ಕಾಮ
ಸ್ರುಕ್ಕು— ಸ್ರುಜವು, ದಂಡೆ
ಸ್ವನ—ಧ್ವನಿ

ಹ

ಹಮ್ಮೈಸು—ಬವಳಿನೂಗು
ಹಂಸ—ಸೂರ್ಯ, ಹಂಸೆ
ಹಣಿದವಾಡು—ಬಡಿದಾಡು
ಹಣಿಸು—ಯತ್ನಮಾಡು, ಹೆಣಗು
ಹದನ—ರೀತಿ, ಉಪಾಯ
ಹದರು—ಕೈ ಹದಡು
ಹಸುಳು—ಸೌಖ್ಯ
ಹನನ—ಸಂಹಾರ
ಹನು—ಕುದುರೆ
ಹರಣ—ಹಸುಕೊಳ್ಳೋಣ, ಪ್ರಾಣ
ಹರಿ—ಸೂರ್ಯ, ಗಾಳಿ
ಹರಿತರು—ಬರು
ಹರಿತ್ತು—ದಿಕ್ಕು
ಹರುವು—ಉಪಾಯ
ಹರ್ಮ್ಯ—ಉಪ್ಪರಿಗೆ
ಹಲಸಿಗ—ಹಾಸ್ಯಗಾರ, ವೈದ್ಯ
ಹನಿ—ಚಿಂತೆ
ಹವಿಸು—ಹವಿಷ್ಯ, ಅರ್ಪಿಸಿದ್ದು
ಹಸುಗೆ—ಪಾಲು
ಹಸ್ತಿ—ಆನೆ
ಹಾತಕವಾರು—ಪುಟೋಣ
ಹಾರಿ—ಚಂದ
ಹಾಳೆ—ಕಿಪಕು
ಹಿಮಗು—ಚಂದ್ರ
ಹಿಳಿ—ಹಿಂಡು, ಹಿಳಿ
ಹುತವಹ—ಆಹುತಿ ವಯ್ಯುಪವನು, ಬೆಂಕಿ
ಹೃಷೀಕ—ಇಂದ್ರಿಯ
ಹೃಷ್ಟ—ಸಂತೋಷವಾದಂಥ
ಹೆಕ್ಕಳ—ಉತ್ಕೃಷ್ಟ (ಹೆಕ್ಕಳಿಸು)
ಹೆಟ್ಟುಗೆ—ಸ್ತ್ರೀ
ಹೇನು—ಬಂಗಾರ
ಹೇರಾಳ—ದೊಡ್ಡದು
ಹೈಮ—ಹಿಮಕ್ಕೆ ಸಂಬಂಧವಾದದ್ದು
ಹೈಹಸಾದ—ಸಮ್ಮತಾರ್ಥವನಿಪಾತ
ಹೊಮ್ಮರಿ—ಹೊನ್ನಿನಮರಿ
ಹೊದಕುಳಿಗುಟ್ಟು—ಗೋಳು, ಚಿಂತಿಸು
ಹೊಯಿಲು—ಸಪ್ಪಳ, ಪೊಯಿಲು
ಹೊರೆ—ಸಂರಕ್ಷಿಸು
ಹೊರಗೆ—ಹೊರೆಯು, ಸಾವಿರಾಪ್ಯ
ಹೊಲಹು—ತಪ್ಪು
ಹೊಳಹು—ಪ್ರಕಾಶಿಸು
ಹೋರಿಗಾಸು—ಮಧ್ಯಸ್ಥನು
ಹ್ರದ—ಮಡುವು

ಕ್ಷ

ಕ್ಷತ—ಗಾಯ
ಕ್ಷಮೆ—ತಾಳ್ಮೆ, ಭೂಮಿ
ಕ್ಷಾರ—ಉಪ್ಪು
ಕ್ಷಾಳನ—ತೊಳೆಯೋಣ
ಕ್ಷಿತಿ—ಭೂಮಿ
ಕ್ಷಿಪ್ರ—ಶೀಘ್ರ
ಕ್ಷುತ್ತು—ಕ್ಷುಧೆ, ಹಸಿವೆ
ಕ್ಷುದ್ರ—ಚುದ್ರ, ಸಣ್ಣ, ನೀಚ, ಚೌಡ
ಕ್ಷೇತ್ರ—ಹೊಲ
ಕ್ಷೋಭೆ—ಕ್ಷೋಭ, ತಲ್ಲಣ
ಕ್ಷ್ಮಾ—ಭೂಮಿ

ಪಠ್ಯಪುಸ್ತಕಗಳು : ಸೃಜನಾತ್ಮಕ ಸಂಪಾದನೆ

ಅಂದನೂರು ಶೋಭ

ಶಿಕ್ಷಣದ ಅತ್ಯಂತ ಮಹತ್ವದ ಸಾಧನವೆಂದರೆ ಪಠ್ಯಪುಸ್ತಕಗಳು. ಮಕ್ಕಳ ಕಲಿಕೆಯ ಮೊದಲಕ್ಷರದ ಪಾಠದಿಂದ ಉನ್ನತ ಶಿಕ್ಷಣದವರೆಗೂ ಪಠ್ಯಪುಸ್ತಕಗಳನ್ನು ಬಹಳ ಕಲಾತ್ಮಕವಾಗಿ, ಸೃಜನಾತ್ಮಕವಾಗಿ ಯೋಜಿಸಲಾಗಿದೆ. ಇಂದು ಕಲಿಯುವಿಕೆಯಲ್ಲಿ ನಡೆಯುತ್ತಿರುವ ಸಂಶೋಧನೆಯಿಂದಾಗಿ ಹಾಗೂ ಮುದ್ರಣದ ಹೊಸ ವಿಧಾನಗಳ ಆವಿಷ್ಕಾರದ ಮುನ್ನಡೆಯಿಂದಾಗಿ ಪಠ್ಯಪುಸ್ತಕಗಳ ಉದ್ದೇಶ, ಸ್ವರೂಪ ಹಾಗೂ ಉಪಯೋಗಗಳಲ್ಲಿ ಪರಿಣಾಮಕಾರಿಯಾದ ಬದಲಾವಣೆಗಳಾಗುತ್ತ ಬಂದಿವೆ.

ಪಠ್ಯಪುಸ್ತಕಗಳ ಸ್ವರೂಪ, ರಚನೆ, ಸಂಪಾದನೆಯ ಇತರೆ ಕೃತಿಗಳಿಗಿಂತ ಭಿನ್ನವಾಗಿರುತ್ತವೆ; ವಿದ್ಯಾರ್ಥಿಗಳ ಉಪಯೋಗಕ್ಕಾಗಿಯೇ ಸಿದ್ಧಪಡಿಸಿದವುಗಳಾಗಿವೆ. ಆದರೆ ಪಠ್ಯಪುಸ್ತಕದಲ್ಲಿ ನಿರೂಪಿಸಲಾದ ವಿಷಯ ಸಾಮಾನ್ಯ ವಿದ್ಯಾರ್ಥಿಯ ಮಟ್ಟಕ್ಕಿಂತಲೂ ಹೆಚ್ಚಿನದ್ದಾಗಿದ್ದು, ವಿಷಯ ಗ್ರಹಣಕ್ಕೆ ಅನುಕೂಲವಾಗಲೆಂದು ಅದರಲ್ಲಿ ಪ್ರಯೋಗ ಸಾಧನಗಳು, ಚಿತ್ರಗಳು, ಅಭ್ಯಾಸಗಳು, ಪ್ರಶ್ನೆಗಳು, ಹೆಚ್ಚಿನ ಜ್ಞಾನಾರ್ಜನೆಗಾಗಿ ಅವಶ್ಯಕವಾದ ಪೂರಕ ಪುಸ್ತಕಗಳ ಸೂಚನಾ ಪಟ್ಟಿ ಮುಂತಾದವುಗಳಿರುತ್ತವೆ.

ಪ್ರಜಾಪ್ರಭುತ್ವದ ಹಿರಿಮೆಯಿಂದಾಗಿ ದೇಶದಲ್ಲಿ ಸಾಕ್ಷರತೆಯನ್ನು ಹೆಚ್ಚಿಸುವ ಉದ್ದೇಶದಿಂದ ಹಾಗೂ ಅನಕ್ಷರತೆಯನ್ನು ನಿರ್ಮೂಲನ ಮಾಡುವುದಕ್ಕಾಗಿ ಕಡ್ಡಾಯ ಶಿಕ್ಷಣ ಜಾರಿಯಲ್ಲಿರುವುದರಿಂದ; ಶಾಲೆಗೆ ಬರುವ ಮಕ್ಕಳ ಸಂಖ್ಯೆಯೂ ಹಂತ ಹಂತವಾಗಿ ಹೆಚ್ಚುತ್ತಿದೆ. ಇದರಿಂದಾಗಿ ಪ್ರತಿಯೊಬ್ಬ ವಿದ್ಯಾರ್ಥಿಗೆ ವೈಯಕ್ತಿಕ ಮಾರ್ಗದರ್ಶನ ಅಸಾಧ್ಯವಾಗಿರುವುದರಿಂದ ವಿದ್ಯಾರ್ಥಿಗಳೇ ನೇರವಾಗಿ ತಾವೇ ಓದಿಕೊಂಡು ತಮ್ಮ ಶಿಕ್ಷಣದಲ್ಲಿ ಸ್ವಾವಲಂಬಿಯನ್ನಾಗಿ ಮಾಡಲು ಉದ್ದೇಶಿಸಲಾಗಿದೆ. ಈಗಾಗಲೇ ಶಿಕ್ಷಕರ ನೆರವಿಲ್ಲದೆ ವಿದ್ಯಾರ್ಥಿಗಳು ತಾವೇ ಓದಿಕೊಂಡು, ಪರೀಕ್ಷಿಸಿಕೊಂಡು ಮುಂದೆ ಹೋಗಲು ಪಾಶ್ಚಾತ್ಯ ದೇಶಗಳಲ್ಲಿ "ಪ್ರೋಗ್ರಾಂ ಇನ್‌ಸ್ಟ್ರಕ್ಷನ್"ನಂತಹ ಪುಸ್ತಕಗಳು ಪ್ರಕಟವಾಗುತ್ತಿವೆ. ನಮ್ಮ ದೇಶದಲ್ಲೂ, ಈ ರೀತಿಯ ಪುಸ್ತಕಗಳು ಹಾಗೂ ಬೇರೆ ರೀತಿಯ ಪರೀಕ್ಷೆಗಳಿಗೆ ಮಾನ್ಯತೆ ನೀಡುವಂತೆ ಇನ್ನೂ ಕ್ರಮಕೈಗೊಳ್ಳಬೇಕಾಗಿದೆ.

ಜಗತ್ತಿನಲ್ಲೆಲ್ಲಾ ಪಠ್ಯಪುಸ್ತಕಗಳ ರಚನೆಯಲ್ಲಿ, ಕೆಳಗೆ ಸೂಚಿಸಿರುವಂತೆ ನಾಲ್ಕು ವಿಧಾನಗಳನ್ನು ಅನುಸರಿಸುತ್ತಿದ್ದಾರೆ.

1) ಒಬ್ಬ ವ್ಯಕ್ತಿ ಇಲ್ಲವೆ ಹೆಚ್ಚು ಜನರನ್ನು ಒಳಗೊಂಡ ಸಂಪಾದಕ ಸಮಿತಿಯ ಮೂಲಕ ಪಠ್ಯಪುಸ್ತಕಗಳ ಕರಡನ್ನು ಸಿದ್ಧಪಡಿಸಿ, ಒಂದು ಹೊರಗಿನ ಪರಿಶೀಲನಾ ಸಮಿತಿಗೆ ಕಳುಹಿಸಿ, ಪರಿಷ್ಕರಿಸಿದ ನಂತರ ತಿದ್ದುಪಡಿ ಮಾಡಿ ಪ್ರಕಟಿಸುವುದು.

2) ಸ್ಪರ್ಧೆಯ ಮೂಲಕ ಉತ್ತಮ ಕೃತಿಯ ಆಯ್ಕೆಗಾಗಿ ಒಂದಕ್ಕಿಂತ ಹೆಚ್ಚು ಸಮಿತಿಗಳನ್ನು ಒಂದೇ ಪಠ್ಯಪುಸ್ತಕವನ್ನು ಬರೆಯಲು ನಿಯಮಿಸಿ ನಂತರ ಒಂದನ್ನು ಆಯ್ಕೆ ಮಾಡಿ ಪ್ರಕಟಿಸುವುದು.

3) ಬರಹಗಾರರಿಂದ ಕರಡು ಪ್ರತಿಗಳನ್ನು ಆಹ್ವಾನಿಸಿ ಅತ್ಯುತ್ತಮವಾದವುಗಳನ್ನು ಆಯ್ಕೆ ಮಾಡುವುದು.

4) ಪಠ್ಯಪುಸ್ತಕಗಳಿಗಾಗಿಯೇ ರಚಿಸಿದ ಸಮಿತಿಗಳು ಸಿದ್ಧಪಡಿಸಿದ ಪಠ್ಯ ಪುಸ್ತಕಗಳ ಕೆಲವು ಪ್ರತಿಗಳನ್ನು ಶಾಲೆಗಳಲ್ಲಿ ಒಂದೆರಡು ವರ್ಷ ಪ್ರಯೋಗ ಮಾಡುವುದು. ಅನಂತರ ಪ್ರಾಯೋಗಿಕ ಶಾಲೆಗಳ ಶಿಕ್ಷಕರ ಸಲಹೆಗಳನ್ನು ಸ್ವೀಕರಿಸಿ ಅದರಂತೆ ಪಠ್ಯಪುಸ್ತಕಗಳನ್ನು ಪರಿಷ್ಕರಿಸಿ, ಎಲ್ಲಾ ಶಾಲೆಗಳಿಗಾಗಿ ಪ್ರಕಟಿಸುವುದು.

ಈ ಮೇಲಿನ ಎಲ್ಲಾ ವಿಧಾನಗಳು ರಷ್ಯಾದಲ್ಲಿ, ನಾಲ್ಕನೆಯ ವಿಧಾನವು ಅಮೆರಿಕೆಯಲ್ಲಿ ಕಾರ್ಯರೂಪದಲ್ಲಿವೆ. ಅಮೆರಿಕೆಯಲ್ಲಿ ಪಠ್ಯಪುಸ್ತಕವು ಅನುಭವಿ ಶಿಕ್ಷಕನ ಅಥವಾ ಶಿಕ್ಷಣ ಸಂಶೋಧಕನ ವಿಚಾರವಾಗಿ ಹುಟ್ಟಿ, ನುರಿತ ಶಿಕ್ಷಕ-ಬರಹಗಾರರ ಮೂಲಕ ಕರಡು ಪ್ರತಿಯಾಗಿ ರೂಪ ತಾಳುತ್ತದೆ. ಅನಂತರ ಸಂಪಾದಕ ಮಂಡಳಿಯ ವಿಮರ್ಶೆಗೆ ಒಳಪಟ್ಟು ಪರಿಷ್ಕರಣ ಹೊಂದಿ ಪ್ರಾಯೋಗಿಕ ಪಠ್ಯಪುಸ್ತಕವಾಗುತ್ತದೆ. ಅಲ್ಲಿಂದ ಮುಂದೆ ಹಲವು ಶಾಲೆಗಳಲ್ಲಿ ಪ್ರಾಯೋಗಿಕವಾಗಿ ಉಪಯೋಗಿಸಿ, ಒಂದೆರಡು ವರ್ಷಗಳ ನಂತರ ಪುನಃ ಸಂಪಾದಕರ ಕೈಸೇರುತ್ತದೆ. ಸಂಪಾದಕ ಮಂಡಲಿಯ ಸಲಹೆಯಂತೆ ಸುಧಾರಣೆ ಹೊಂದಿ ಕೊನೆಯದಾಗಿ ಸಿದ್ಧ ಪಠ್ಯಪುಸ್ತಕವಾಗಿ ಪೇಟೆಗೆ ಬರುತ್ತದೆ. ಅಂದರೆ ಇಲ್ಲಿ ಸಂಪಾದಕ ಅಥವಾ ಸಂಪಾದಕ ಮಂಡಲಿಯ ಪಾತ್ರ ಎಷ್ಟು ಜವಾಬ್ದಾರಿಯುತವಾದದ್ದೆಂಬುದನ್ನು ಗಮನಿಸಬೇಕು.

ರಷ್ಯಾದಲ್ಲಿ ಮೇಲಿನ ನಾಲ್ಕು ವಿಧಾನಗಳು ಕಾರ್ಯರೂಪದಲ್ಲಿದ್ದು ಪ್ರತಿಯೊಂದು ಹಸ್ತಪ್ರತಿಯ ಕರಡು, ಸರ್ಕಾರ ನಿಯಮಿಸಿದ 'ಕರಡು ಪರೀಕ್ಷಾ ಸಮಿತಿ' ಮತ್ತು 'ಪರಿಣತರ ಮಂಡಲಿ' ಎಂಬೆರಡು ಸಮಿತಿಗಳ ಪರೀಶಿಲನೆಗೆ ಒಳಪಡುತ್ತದೆ.

ನಮ್ಮ ದೇಶದಲ್ಲಿ ಪಠ್ಯಪುಸ್ತಕಗಳ ರಚನಾ ವಿಧಾನವು ಇತರ ರಾಷ್ಟ್ರಗಳಿಗಿಂತ ಭಿನ್ನವಾಗಿದೆ. ಶಿಕ್ಷಣವು ರಾಜ್ಯ ಸರ್ಕಾರಗಳ ನಿಯಂತ್ರಣದಲ್ಲಿರುವುದರಿಂದ ಪಠ್ಯ ಪುಸ್ತಕಗಳ ರಚನೆಯ ಬಗ್ಗೆಯೂ ಸರ್ಕಾರವೇ ನಿರ್ಧಾರ ಕೈಗೊಳ್ಳುತ್ತದೆ. ಅಂತೆಯೇ ಹಿಂದೆ ಸೂಚಿಸಿರುವ ನಾಲ್ಕು ವಿಧಾನಗಳಲ್ಲಿ ಮೊದಲನೆಯ ವಿಧಾನವನ್ನೇ ಅನುಸರಿಸಲಾಗುತ್ತಿದೆ. ವಿಶ್ವವಿದ್ಯಾಲಯಗಳು ಹಾಗೂ ಸರ್ಕಾರ ನಿಯಮಿಸುವ ಪಠ್ಯ ಕ್ರಮಕ್ಕೆ ಅನುಸಾರವಾಗಿ ಸಂಬಂಧಪಟ್ಟ ಪಠ್ಯ ನಿಯಾಮಕ ಮಂಡಳಿಯ ಸೂಚನೆಯ ಮೇರೆಗೆ ಪ್ರಕಾಶಕರು ಪಠ್ಯಪುಸ್ತಕಗಳನ್ನು ಸಿದ್ಧಪಡಿಸಿ ಪರಿಶೀಲನೆಗೆ ಒಪ್ಪಿಸುತ್ತಾರೆ. ಇಲ್ಲೆಲ್ಲಾ ಸಂಪಾದಕ ಮಂಡಲಿ ಇಲ್ಲವೇ ಸಂಪಾದಕರು ಹಾಗೂ ಬರಹಗಾರರು ಬಹಳ ಮುಖ್ಯವಾದ ಪಾತ್ರ ವಹಿಸುತ್ತಾರೆ. ಆದರೆ ಇವರಿಗೆ ಖಾಸಗಿ ಪ್ರಕಾಶಕರು ಪ್ರಕಟಿಸುವ ಪುಸ್ತಕಗಳ ಸಂಪಾದಕರಿಗಿರುವ ಪೂರ್ಣ ಸ್ವಾತಂತ್ರ್ಯ ಇರುವುದಿಲ್ಲ. ಒಂದು ರೀತಿಯ ಮಿತಿಗೆ ಒಳಪಟ್ಟಿರುತ್ತಾರೆ. ಕೆಲವೊಂದು ಅಪವಾದಗಳನ್ನು ಬಿಟ್ಟರೆ ಖಾಸಗಿಯವರು ಪ್ರಕಾಶಿಸುವ ಕೃತಿಗಳು ಶ್ರೇಷ್ಠ ಮಟ್ಟದ್ದಾಗಿರುತ್ತವೆಂದರೆ ತಪ್ಪಾಗಲಾರದು. ಅಂತೆಯೇ ಇತರ ಪಠ್ಯಪುಸ್ತಕಗಳಿಗೆ ವಿದ್ಯಾರ್ಥಿಗಳಿಂದ ಹಾಗೂ ಅಭಿವೃದ್ಧಿಶೀಲ ದೇಶಗಳಿಂದಲೂ ಬೇಡಿಕೆ ದಿನೇ ದಿನೇ ಹೆಚ್ಚುತ್ತಿರುವುದೇ ಸಾಕ್ಷಿಯಾಗಿದೆ.

ಸೃಜನಾತ್ಮಕ ಸಂಪಾದನಾ ಕಾರ್ಯ

ಸರ್ಕಾರದವರು, ವಿಶ್ವವಿದ್ಯಾಲಯಗಳು ಪ್ರಕಟಿಸುವ ಕೃತಿಗಳ ಸಂಪಾದಕರಿಗೂ ಹಾಗೂ ಖಾಸಗಿ ಪ್ರಕಾಶಕರ ಸಂಪಾದಕರ ಕಾರ್ಯ ವೈಖರಿಯಲ್ಲಿ ಬಹಳ ವ್ಯತ್ಯಾಸವಿರುತ್ತದೆ. ಅದರಲ್ಲಿಯೂ ನಿಯಮಿತ ಪಠ್ಯಪುಸ್ತಕಗಳ ಸೃಜನಾತ್ಮಕ ಸಂಪಾದನಾ ಕಾರ್ಯದಲ್ಲಿ ಸಂಪಾದಕ ಒಂದು ಚೌಕಟ್ಟನ್ನು ಬಿಟ್ಟು ಸ್ವತಂತ್ರವಾಗಿ, ವೈಯಕ್ತಿಕವಾಗಿ ಏನನ್ನು ಮಾಡಲು ಸಾಧ್ಯವಿಲ್ಲ. ಒಂದು ರೀತಿಯ ಸೂತ್ರದೊಳಗೆ [Formula] ತನ್ನ ಸಂಪಾದನ ಕಾರ್ಯದ ಕುಸುರಿ ಕೆಲಸವನ್ನು ಬಹಳ ಅಚ್ಚುಕಟ್ಟಾಗಿ ನಿರ್ವಹಿಸಬೇಕಾಗಿದೆ, ಸಮೂಹ ಮಾಧ್ಯಮಕ್ಕೆ ಸಂಪಾದನೆಯೆಂಬುದು ಆಸ್ತಿಯಿದ್ದ ಹಾಗೆ.

ಪಠ್ಯ ಪುಸ್ತಕಗಳ ಸಂಪಾದನಾಕಾರ್ಯ ಒಂದು ತಂತ್ರವೂ ಕಲೆಯೂ ಆಗಿರುವುದರಿಂದ ನುರಿತ ಬರಹಗಾರರು ರಚಿಸಿದ ಹಸ್ತಪ್ರತಿಯನ್ನು ಬಹಳ ಎಚ್ಚರದಿಂದ ಪರಿಷ್ಕರಿಸಬೇಕು. ಸಂಪಾದಕ, ಸಂಶೋಧಕನಿಗಿಂತಲೂ ಹೆಚ್ಚಾಗಿ ಜಗತ್ತಿನಾದ್ಯಂತ ನಡೆಯುತ್ತಿರುವ ಸಂಶೋಧನೆಗಳ ಅಧ್ಯಯನದಿಂದ ತನ್ನ ಜ್ಞಾನವನ್ನು ವೃದ್ಧಿಸಿಕೊಳ್ಳುತ್ತಿರಬೇಕು. ಈತ ಇತರರ ಕೆಲಸಗಳನ್ನು ಪರಿಷ್ಕರಿಸಿ ಇಲ್ಲವೇ ಇನ್ನೂ

ಉತ್ತಮಪಡಿಸುವಂತಿರಬೇಕು ; ಅಂದರೆ ಇತರರ ಕೆಲಸಕ್ಕೆ ಸತ್ವವನ್ನು ತರುತ್ತಾನೆ; ಸೂಕ್ತ ತಿದ್ದುಪಡಿಯಿಂದಾಗಿ ಹೆಚ್ಚಿನ ಮಹತ್ತ್ವಕ್ಕೂ ಕಾರಣನಾಗುತ್ತಾನೆ. ಭಾಷೆ, ಶೈಲಿ, ದಾಟಿಯಲ್ಲಿ ಪ್ರಭುತ್ವವುಳ್ಳವನಾಗಿರುತ್ತಾನೆ.

ಇತರರ ಕೆಲಸಗಳನ್ನು ಮೆಚ್ಚುವಂತಿರಬೇಕು. ಹಾಗೂ ವಾಕ್ಯರಚನೆ, ಕಾಗುಣಿತ, ಶೈಲಿ ಹಾಗೂ ಸಂಬಂಧಪಟ್ಟ ವಿಷಯವನ್ನು ಕುರಿತು ಒಂದು ಪಕ್ಷ ತಪ್ಪಾಗಿ ನಮೂದಿಸಿದ್ದರೂ ಅವುಗಳನ್ನೆಲ್ಲ ಸರಿಪಡಿಸಬೇಕು. ಭಾಷಾಜ್ಞಾನ, ವ್ಯಾಕರಣದ ಅಪಾರ ಜ್ಞಾನವಿರಬೇಕು. ವಿಷಯ ನಿರೂಪಣೆಯಲ್ಲಿ ಆದಷ್ಟು ಕ್ಲಿಷ್ಟವಿಲ್ಲದಂತೆ ಸರಳೀಕರಿಸಬೇಕು ; ವಿಷಯದಲ್ಲಿ ಬದಲಾವಣೆ ಮಾಡಲೇಬೇಕೆಂಬುದು ಅನಿವಾರ್ಯವಾದಾಗ ಸಂಬಂಧಪಟ್ಟವರೊಂದಿಗೆ ಮುಕ್ತ ಚರ್ಚೆನಡೆಸಿ ಅಂತಿಮ ನಿರ್ಣಯ ಕೈಗೊಳ್ಳಬೇಕು. ಒಂದೇ ವಿಷಯ ಪುನರಾವರ್ತನೆಯಾಗದಂತೆ ಆಸ್ಥೆವಹಿಸಬೇಕು ; ಭಾಷೆಯ ಬಗೆಗೆ ಎಚ್ಚರಿಕೆಯಿರುವುದಲ್ಲದೆ, ಎಲ್ಲವನ್ನು ವಿಚಾರಮಾಡುವಂತಹ ತೆರೆದ ಮನಸ್ಸು ಇರಬೇಕು ; ಸಾಮಾನ್ಯ ಜ್ಞಾನದ ಬಗ್ಗೆ ಹೆಚ್ಚಿನ ಅರಿವು, ಎಲ್ಲದರಲ್ಲಿಯೂ ಪರಿಪೂರ್ಣತೆ ಇರಬೇಕೆಂಬ ಅಭಿಲಾಷೆಯುಳ್ಳವನಾಗಿರಬೇಕು ; ಹಲವೊಮ್ಮೆ ಉದ್ಧರಣೆಗಳನ್ನು ಬಳಸಿದಾಗ ಅಂದರೆ ನೇರವಾಗಿ ಬಳಸಿದಾಗ ತೊಂದರೆಗೆ ಸಿಲುಕುವ ಸಾಧ್ಯತೆಯಿರುತ್ತದೆ. ಒಮ್ಮೊಮ್ಮೆ ಅವಶ್ಯಕತೆಗೆ ಅನುಗುಣವಾಗಿ ಬಳಸಿದರೆ ಹೆಚ್ಚಿನ ಮೌಲ್ಯ ದೊರಕುತ್ತದೆ. ಹಲವೊಮ್ಮೆ ನೀಡುವ ಮಾಹಿತಿಗೆ ಹೆಚ್ಚಿನ ಬೆಳಕನ್ನು ನೀಡುತ್ತವೆ. ಒಳ್ಳೆಯ ಸಂಪಾದಕ ಸ್ಪಷ್ಟವಾಗಿಲ್ಲದ ಉದ್ಧರಣೆಗಳನ್ನು ತೆಗೆದು ಹಾಕುತ್ತಾನೆ. ಹಾಗೆಯೇ ಹಲವೊಮ್ಮೆ ಉದ್ದುದ್ದನೆಯ ವಾಕ್ಯಗಳನ್ನು ಬದಲಿಸಿ ಪುಟ್ಟ ಪುಟ್ಟವಾಕ್ಯಗಳನ್ನಾಗಿ ಪರಿವರ್ತಿಸುತ್ತಾನೆ. ಅಂದರೆ ಕಡ್ಡಾಯವಾಗಿ ಹೀಗೆ ಮಾಡಲೇಬೇಕೆಂದಿಲ್ಲ ಆದರೆ ಸಾಮಾನ್ಯವಾದ ಪುಟ್ಟವಾಕ್ಯಗಳಿಂದಲೂ ಮಹತ್ತರವಾದ ಅಭಿಪ್ರಾಯಗಳನ್ನು ವಿಷಯಗಳನ್ನು ನಿರೂಪಿಸಬಹುದು.

ಇನ್ನು ವಿಜ್ಞಾನದ ಪುಸ್ತಕ, ವಿಜ್ಞಾನವಲ್ಲದ ಪುಸ್ತಕಗಳ ಸಂಪಾದನೆಯಲ್ಲಿಯೂ ವ್ಯತ್ಯಾಸವಿದೆ, ಜೊತೆಗೆ ಲೇಖನಗಳ, ಕವಿತೆಗಳ, ಕತೆಗಳ ಸಂಕಲನಗಳ ಸಂಪಾದಕರುಗಳಿಗೆ ಅವುಗಳ ಆಯ್ಕೆಯಲ್ಲಿ ಜೋಡಿಸುವ ಅನುಕ್ರಮದಲ್ಲಿ ಹಾಗೂ ಅವುಗಳನ್ನು ವಿಮರ್ಶಿಸುವಲ್ಲಿ ಟಿಪ್ಪಣಿಯ ಕಾರ್ಯದಲ್ಲಿ ತಮ್ಮ ಜಾಣ್ಮೆಯನ್ನು ಮೆರೆಸಬಹುದಷ್ಟೆ. ಇನ್ನು ಉಪಲಬ್ಧವಿರುವ ಪಾಠಾಂತರಗಳಿಂದ ಪರಿಷ್ಕರಿಸಿ ಸಿದ್ಧಪಡಿಸುವ ಗ್ರಂಥ ಕಾರ್ಯ ಇವುಗಳಿಗಿಂತ ಭಿನ್ನವಾಗಿರುತ್ತದೆ. ಹಾಗೆಯೇ ಸಂಪಾದಕ ತನ್ನ ಪಾಂಡಿತ್ಯದಿಂದ ವಿದ್ಯಾರ್ಥಿ ಹಾಗೂ ಶಿಕ್ಷಕರಿಗೆ ಚಿಂತಿಸಲು ಅವಕಾಶವಿಲ್ಲದಂತೆ ಜಾಣ್ಮೆಯನ್ನು ತೋರಬಹುದು.

ಇಂದು ವಿದ್ಯಾರ್ಥಿ ಕೇವಲ ಒಂದು ವಿಷಯದಲ್ಲಿ ಮಾತ್ರ ಅಧ್ಯಯನ ನಡಸದೆ, ಅನ್ಯಜ್ಞಾನ ಶಿಸ್ತುಗಳ ಅಧ್ಯಯನದಿಂದಾಗಿ ಇತರ ವಿಷಯಗಳನ್ನು ಅಭ್ಯಾಸ ಮಾಡ ಬೇಕಾಗಿರುವುದರಿಂದ ಸಂಪಾದಕರು ಸಹ ಎಲ್ಲಾ ವಿಷಯಗಳ ಕಡೆಗೂ ಗಮನ ಹರಿಸಬೇಕಾಗಿದೆ, ತನ್ನ ಮನವನ್ನು ಜ್ಞಾನದ ಎಲ್ಲಾ ಕಿಟಕಿಗಳಿಗೆ ಸದಾ ತೆರೆದಿಟ್ಟಿರ ಬೇಕು. ಯಾವ ಮಟ್ಟದ ವಿದ್ಯಾರ್ಥಿಗಳಿಗೆ ಪಠ್ಯ ನಿಯಮಿಸುತ್ತಾರೋ ಆ ಮಟ್ಟದ ವಿದ್ಯಾರ್ಥಿಯ ಕಲಿಕೆಯ ಮಟ್ಟವನ್ನು ಆ ಹೊತ್ತಿಗಾಗಲೇ ಅವನು ಏನೆಲ್ಲವನ್ನು ಓದಿರುತ್ತಾನೆಂಬುದನ್ನು ಗಮನದಲ್ಲಿಟುಕೊಂಡು ವಿಷಯ ನಿರೂಪಣೆ, ಭಾಷೆ, ವಾಕ್ಯ ರಚನೆಯಲ್ಲಿ ಪರಿವರ್ತನೆ ತರಬೇಕು. ಅಂದರೆ ಸಂಪಾದಕರಿಗೆ ಹೆಚ್ಚಿನ ಜವಾಬ್ದಾರಿ ಗಳುಂಟು.

ಆದ್ದರಿಂದ ಸಂಪಾದಕ/ರಿಗೆ ಜಗತ್ತಿನಾದ್ಯಂತ ನಡೆಯುತ್ತಿರುವ ಸಂಶೋಧನೆಗಳ ಬಗ್ಗೆ ಆಸಕ್ತಿ. ಜೊತೆಗೆ ತಾನು ಸಂಪಾದಿಸುವ ವಿಷಯಗಳ ಬಗೆಗೆ ಈಗಾಗಲೇ ಪ್ರಕಟವಾಗಿರುವ ಕೃತಿಗಳ ಅಧ್ಯಯನ ಹಾಗೂ ವಿಷಯ ನಿರೂಪಣೆಯ ಶೈಲಿ ಇತ್ಯಾದಿಗಳನ್ನು ಸಂಪಾದಕ/ಳು ತೀವ್ರವಾಗಿ ಗಮನಿಸಬೇಕು. ಎಂತಹ ಕ್ಲಿಷ್ಟ ವಿಷಯ ಗಳನ್ನೇ ಆಗಲಿ ಸಂಪಾದಕ ತನ್ನ ಕುಸುರಿಗೆಲಸದಿಂದ ವಿದ್ಯಾರ್ಥಿಗಳಿಗೆ ಮನಮುಟ್ಟು ವಂತೆ ನಿರೂಪಿಸುವ ಶೈಲಿಯಿರಬೇಕು, ಜೊತೆಗೆ ಮುದ್ರಣ ಕಲೆಯ ಜ್ಞಾನವೂ ಇದ್ದರೆ, ಹಲವೊಮ್ಮೆ ಪುಸ್ತಕಗಳನ್ನು ಕೊಳ್ಳಬೇಕೆನ್ನುವ ಅಭಿಲಾಷಿಗಳನ್ನು ಪರೋಕ್ಷ ವಾಗಿ ಪ್ರಚೋದಿಸಬಹುದು. ಕೆಲವು ಸಂಪಾದಕರುಗಳಿಂದ ಹಲವೊಂದು ಪ್ರಕಾಶನ ಸಂಸ್ಥೆಗಳಿಗೆ ಜನಾದರಣೀಯತೆ ಗೌರವ ಸಂದಿದೆ. ಹಾಗೆಯೇ ಕೀರ್ತಿ, ಮನ್ನಣೆ ದೊರಕಿವೆ. ಅಂತಹ ಸಂಸ್ಥೆಗಳ ಪುಸ್ತಕಗಳನ್ನು ವಿದ್ಯಾರ್ಥಿಗಳು ಯೋಚಿಸದೆ ಕೊಂಡುಕೊಳ್ಳುತ್ತಿದ್ದಾರೆ. ಒಳ್ಳೆಯ ಪ್ರಕಾಶಕರಿಗೆ ಲೇಖಕ, ಸಂಪಾದಕರು, ಒಳ್ಳೆಯ ಮುದ್ರಕ ಬಹಳ ಮುಖ್ಯವಾದ ಅಂಗವಿದ್ದಂತೆ.

ಈ ಸಂಚಿಕೆಯ ಲೇಖಕರು

ದೊಡ್ಡರಂಗೇಗೌಡ	ಉನ್ನತ ಶ್ರೇಣಿ ಕನ್ನಡ ಅಧ್ಯಾಪಕರು ಶ್ರೀ ಲ. ನ. ಕಲೆ, ವಿಜ್ಞಾನ, ವಾಣಿಜ್ಯ ಮಹಾವಿದ್ಯಾಲಯ, ಕೋಟೆ, ಬೆಂಗಳೂರು–560 002
ಡಾ॥ ಬಸವರಾಜ, ಎಸ್. ನಾಯ್ಕರ್	ಇಂಗ್ಲೀಷ್ ರೀಡರ್ ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ–585 106
ಡಾ॥ ಕೆ. ಆರ್. ದುರ್ಗಾದಾಸ್	ರೀಡರ್, ಕನ್ನಡ ವಿಭಾಗ ಕರ್ನಾಟಕ ವಿಶ್ವವಿದ್ಯಾಲಯ, ಬೆಳಗಾವಿ
ಪ್ರೊ. ಶ್ರೀಮತಿ ಶಕುಂತಲಾ ಸಿಂಧೂರ	ಕೆ. ಎಲ್. ಇ. ಸಂಸ್ಥೆಯ ಮಹಿಳಾ ಮಹಾವಿದ್ಯಾಲಯ, ಗದಗ. ಧಾರವಾಡ ಜಿಲ್ಲೆ
ಡಾ॥ ಚನ್ನಬಸವ ಹಿರೇಮಠ	ಕನ್ನಡ ಉಪನ್ಯಾಸಕ ಎಲ್. ವಿ. ಡಿ. ಕಾಲೇಜು, ರಾಯಚೂರು–584 101
ಡಾ॥ ಕೆ. ಎಂ. ಮೈತ್ರಿ	ಸಮಾಜಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು–6
ಡಾ॥ ವಿಜಯ ಕುಮಾರ ಮಹಾನುಭಾವಿಗಳು	ಜಗದ್ಗುರು ಪ್ರಭುದೇವ ಧರ್ಮಪೀಠ ಜೋಗ್‌ಫಾಲ್ಸ್ ಜೋಗ್‌ಮಠ ಮಾವಿನಗುಂಡಿ ಅಂಚೆ, ಸಿದ್ದಾಪುರ ತಾ. ಕಾರವಾರ ಜಿಲ್ಲೆ–587 355
ಡಾ॥ ಮೃತ್ಯುಂಜಯ ರುಮಾಲೆ	ಕನ್ನಡ ಉಪನ್ಯಾಸಕರು ವಿಜಯನಗರ ಕಾಲೇಜು ಹೊಸಪೇಟೆ–583 201

ನಾರಾಯಣಸ್ವಾಮಿ

ಕಾವಲ್ಲಮ್ಮ	ಸಂಶೋಧನಾ ವಿದ್ಯಾರ್ಥಿನಿ ಇತಿಹಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು–560 056
ದೊಡ್ಡರಂಗೇಗೌಡ	ಉನ್ನತ ಶ್ರೇಣಿ ಕನ್ನಡ ಅಧ್ಯಾಪಕರು ಎಸ್. ಎಲ್. ಎನ್. ಕಾಲೇಜು ಕೋಟೆ, ಬೆಂಗಳೂರು–560 002
ಡಾ॥ ಟಿ. ಬಿ. ಬಸವರಾಜು	ಅಧ್ಯಾಪಕರು, ತತ್ತ್ವಶಾಸ್ತ್ರ ಅಧ್ಯಯನ ವಿಭಾಗ ಬೆಂಗಳೂರು ವಿಶ್ವವಿದ್ಯಾಲಯ ಜ್ಞಾನಭಾರತಿ, ಬೆಂಗಳೂರು–560 056
ಸಾಸಲು ಜೆ. ವಿಶ್ವನಾಥ್	ಎಂ. ಫಿಲ್. ವಿದಾರ್ಥಿ, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ, ಬೆಂಗಳೂರು-560 056
ಜಿ. ಎ. ಶಿವಲಿಂಗಯ್ಯ	370/1, ಡಿ. ಸುಬ್ಬಯ್ಯ ರಸ್ತೆ, ಮೈಸೂರು–570 024
ಅಂದನೂರು ಶೋಭ	ಕೋ-ಆರ್ಡಿನೇಟರ್, ಅಂಚೆ ತೆರಪಿನ ಶಿಕ್ಷಣ ನಿರ್ದೇಶನಾಲಯ ಸೆಂಟ್ರಲ್ ಕಾಲೇಜು ಆವರಣ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು-560 001

ವಿವರಗಳಿಗೆ ವ್ಯವಹರಿಸಿ :

ನಿರ್ದೇಶಕರು
ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು 560 056